“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತನಾಲ್ಕನೆಯ ಅಧಿವೇಶನ**

**17ನೇ ಡಿಸೆಂಬರ್ 2024**
**ಮಂಗಳವಾರ**

## ವಿಷಯಾನುಕ್ರಮಣಿಕೆ (INDEX)


01. ಸಂತಾಪ ಸೂಚನೆ

**ಪದ್ಮಶ್ರೀ ಪುರಸ್ಕೃತ ವೃಕ್ಷ ಮಾತೆ ತುಳಸಿಗೌಡರವರ ನಿಧನದ ಬಗ್ಗೆ.**

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)
ಶ್ರೀ ಛಲವಾದಿ ಟಿ ನಾಯಾರಣಸ್ವಾಮಿ(ವಿರೋಧ ಪಕ್ಷದ ನಾಯಕರು)

02. ಪ್ರಕಟಣೆ

**ವಿಧಾನಸಭೆಯಿಂದ ಅಂಗೀಕೃತಗೊಂಡ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಬಗ್ಗೆ.**

03. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**906- ಕೆ.ಐ.ಎ.ಡಿ.ಬಿ. ವತಿಯಿಂದ ಸಿ.ಎ. ನಿವೇಶನ ಹಂಚಿಕೆಯಲ್ಲಿನ ಅಕ್ರಮದ ಬಗ್ಗೆ**

ಶ್ರೀ ಸಿ.ಟಿ.ರವಿ
ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

**953- ಗಣಿ ಕೈಗಾರಿಕೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ರಾಜಧನದ ಬಗ್ಗೆ.**

ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

**890- ಬೆಂಗಳೂರಿನಲ್ಲಿ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕುರಿತು.**

ಶ್ರೀ ಟಿ.ಎನ್.ಜವರಾಯಿ
ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

**961- ಮಂಡ್ಯ ಮೈಶುಗರ್ ಸಕ್ಕರೆ ಕಾರ್ಖಾನೆ ಅಭಿವೃದ್ಧಿ ಕುರಿತು.**

ಶ್ರೀ ಕೆ.ವಿವೇಕಾನಂದ
ಶ್ರೀ ಶಿವಾನಂದ ಎಸ್.ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

**905- ಕೆ.ಐ.ಎ.ಡಿ.ಬಿ.ಯು ರೈತರಿಂದ ಭೂಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ.**

ಶ್ರೀಮತಿ ಭಾರತಿ ಶೆಟ್ಟಿ
ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

**938- ಕೆ.ಟಿ.ಸಿ.ಪಿ. ತಿದ್ದುಪಡಿ ಕಾಯ್ದೆ 2021ರ ಅನುಷ್ಠಾನದ ಕುರಿತು.**

ಶ್ರೀ ಟಿ.ಎ.ಶರವಣ
ಶ್ರೀ ಸುರೇಶ್ ಬಿ.ಎಸ್. (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**936- ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಆಸ್ತಿ ವಿತರಣೆಯ ಬಗ್ಗೆ.**

ಶ್ರೀ ಚಿದಾನಂದ್ ಎಂ.ಗೌಡ
ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

**942- ಸಕ್ಕರೆ ಕಾರ್ಖಾನೆಗಳ ಬಾಕಿ ಕುರಿತು.**

ಶ್ರೀ ಎನ್.ರವಿಕುಮಾರ್
ಶ್ರೀ ಶಿವಾನಂದ ಎಸ್.ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

**993- ಭದ್ರಾವತಿಯ ಎಂ.ಪಿ.ಎಂ. ಕಾರ್ಖಾನೆ ಕುರಿತು.**

ಶ್ರೀಮತಿ ಬಲ್ಕೀಸ್ ಬಾನು
ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**04. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸರ್ಕಾರ ಸಕಾಲದಲ್ಲಿ ಉತ್ತರಗಳನ್ನು ಒದಗಿಸದಿರುವ ಬಗ್ಗೆ**

ಶ್ರೀ ಸಿ.ಟಿ.ರವಿ
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
ಶ್ರೀ ಎಸ್.ಎಲ್.ಭೋಜೇಗೌಡ

## ೦5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

**ಅ) ಪಶ್ಚಿಮ ಘಟ್ಟಪ್ರದೇಶದಲ್ಲಿರುವ ಖಾನಾಪುರ ತಾಲ್ಲೂಕಿನ ಬಹುತೇಕ ಜನರು ಮೂಲಭೂತ ಸೌಕರ್ಯದಿಂದ ವಂಚಿತರಾಗಿರುವ ಕುರಿತು.**

ಶ್ರೀ ಕೇಶವ ಪ್ರಸಾದ್ ಎಸ್.
ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಆ) ಸರ್ಕಾರಿ ಜಾಗಗಳನ್ನು ಮೀಸಲು ಅರಣ್ಯ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಹೊರಡಿಸಿರುವ ೩ ಆದೇಶಗಳನ್ನು ಹಿಂಪಡೆಯುವ ಕುರಿತು.**

ಶ್ರೀ ಎಂ.ಪಿ.ಸುಜಾ ಕುಶಾಲಪ್ಪ
ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಇ) ಶಾಲೆಗಳಲ್ಲಿ ವಿದ್ಯುತ್ ಸಂಪರ್ಕ, ಶಾಲಾ ಕಟ್ಟಡಗಳ ದುರಸ್ತಿ ಕಾರ್ಯ ಸೇರಿದಂತೆ ಮೂಲಭೂತ ಸೌಕರ್ಯವನ್ನು ಕಲ್ಪಿಸುವ ಬಗ್ಗೆ.**

ಡಾ: ಧನಂಜಯ ಸರ್ಜಿ
ಶ್ರೀ ಹೆಚ್.ಎಸ್. ಗೋಪಿನಾಥ್
ಶ್ರೀ ಎಂ. ನಾಗರಾಜು
ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು)

**ಈ) ಬಂಜಾರ ಮಲೆಕುಡಿಯು ಸಮುದಾಯ ಕುಟುಂಬಗಳಿಗೆ ಮಂಜೂರಾಗಿರುವ ಜಮೀನಿನ ವಿರುದ್ಧ ದಾಖಲಿಸಿರುವ ರಿಟ್ ಅರ್ಜಿಯನ್ನು ಹಿಂಪಡೆಯುವ ಬಗ್ಗೆ.**

ಶ್ರೀ ಬಿ.ಕೆ. ಹರಿಪ್ರಸಾದ್
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಪ್ರಾಥಮಿಕ ಹಂತದಲ್ಲಿಯೇ ಶಾಲಾ ಮಕ್ಕಳಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ನೀಡುವ ಬಗ್ಗೆ ಸೂಕ್ತ ಕ್ರಮವಹಿಸುವ ಕುರಿತು.**

ಶ್ರೀಮತಿ ಹೇಮಲತಾ ನಾಯಕ
ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು)

**ಊ) ಗೆಜೆಟೆಟ್ ಪ್ರೊಬೆಷನರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ದೋಷಕ್ಕೆ ಕಾರಣರಾದವರನ್ನು ಕಂಡು ಹಿಡಿಯದಿರುವ ಬಗ್ಗೆ.**

ಶ್ರೀ ಹಣಮಂತ ರುದ್ರಪ್ಪ ನಿರಾಣಿ
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಋ) ಮಲೆನಾಡು ಗಿಡ್ಡ ತಳಿ ಸಂಶೋಧನೆಗಾಗಿ ಮಾಹಿತಿ ಕೇಂದ್ರವನ್ನು ಪುನರಾರಂಭಿಸಿ, ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವ ಕುರಿತು.**

ಶ್ರೀ ಡಿ.ಎಸ್.ಅರುಣ್
ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು)

**ಎ) ಬಿ.ಬಿ.ಎಂ.ಪಿ. ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಬಡಾವಣೆಗಳ ಇ-ಖಾತೆ ಸಂಬಂಧ ರಿಲಿಕ್ವಿಂಶ್ ಡೀಡ್‌ಗೆ ಅವಕಾಶ ಕಲ್ಪಿಸದಿರುವ ಕುರಿತು.**

ಶ್ರೀ ಟಿ.ಎ.ಶರವಣ
ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

## 06. ಪ್ರಕಟಣೆ

**ಕರ್ನಾಟಕ ಸುವರ್ಣ ಸಂಭ್ರಮದ ಸವಿನೆನಪಿಗಾಗಿ ವಿಧಾನ ಪರಿಷತ್ತಿನ ಶಾಸಕರುಗಳಿಗೆ ಅಪರಾಧಿಕ ಕಾನೂನುಗಳ ಕೈಪಿಡಿ ಹಾಗೂ ಭಾರತ ಸಂವಿಧಾನದ ಕೈಪಿಡಿ ಪುಸ್ತಕ ನೀಡುವ ಬಗ್ಗೆ.**

## 07. ಕಾರ್ಯದರ್ಶಿಯವರ ವರದಿ

**ವಿಧಾನಸಭೆಯಿಂದ ಅಂಗೀಕೃತವಾದ ವಿಧೇಯಕಗಳ ಮಂಡನೆ.**

## 08. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರಿಂದ ಹೇಳಿಕೆಗಳು

**ಅ) ಅರಣ್ಯಾಧಿಕಾರಿಗಳ ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವ ಬಗ್ಗೆ.**

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)

**ಆ) ನಂದಿಕೂರು-ಕಾಸರಗೋಡು ವಿದ್ಯುತ್ ಲೈನ್‌ಗೆ ಪರ್ಯಾಯ ಯೋಜನೆ ರೂಪಿಸುವ ಬಗ್ಗೆ.**

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಇಂಧನ ಸಚಿವರ ಪರವಾಗಿ)

**ಇ) ರಾಜ್ಯದ ವಿಶ್ವವಿದ್ಯಾಲಯಗಳು ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಕಳೆದ ಮೂರು ವರ್ಷಗಳಿಂದ ಅಂಕಪಟ್ಟಿ ನೀಡದಿರುವ ಕುರಿತು.**

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಈ) ಪೊಲೀಸ್ ಇಲಾಖೆಯ ಕಾನ್‌ಸ್ಟೇಬಲ್‌ಗಳ ವರ್ಗಾವಣೆಯಲ್ಲಿ ಪತಿ-ಪತ್ನಿ ಪ್ರಕರಣಗಳಿಗೆ ಮುಕ್ತ ಅವಕಾಶ ನೀಡುವ ಬಗ್ಗೆ.**

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಗೃಹ ಸಚಿವರ ಪರವಾಗಿ)

## 09. ವಿತ್ತೀಯ ಕಾರ್ಯಕಲಾಪ

ಪೂರಕ ಅಂದಾಜುಗಳನ್ನೊಪ್ಪಿಸುವುದು.

## 10. ಸಚಿವರ ಹೇಳಿಕೆ

**ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು.**

ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಸಿ.ಟಿ.ರವಿ
ಶ್ರೀಮತಿ ಭಾರತಿ ಶೆಟ್ಟಿ
ಶ್ರೀಮತಿ ಹೇಮಲತಾ ನಾಯಕ್
ಶ್ರೀ ರವಿಕುಮಾರ್ ಎನ್.
ಶ್ರೀ ಕೆ.ಎಸ್.ನವೀನ್
ಶ್ರೀ ಶರವಣ ಟಿ.ಎ.
ಡಾ: ಧನಂಜಯ ಸರ್ಜಿ
ಶ್ರೀ ಗೋವಿಂದರಾಜು
ಶ್ರೀ ಪಿ.ಹೆಚ್.ಪೂಜಾರ್
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಡಾ: ಚಿದಾನಂದ ಎಂ. ಗೌಡ
ಶ್ರೀ ಎಸ್. ಕೇಶವ ಪ್ರಸಾದ್
ಶ್ರೀ ಕಿಶೋರ್ ಕುಮಾರ್ ಪುತ್ತೂರ್
ಶ್ರೀ ಶಶೀಲ್ ಜಿ.ನಮೋಶಿ
ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ
ಶ್ರೀ ಐವನ್ ಡಿ'ಸೋಜಾ
ಶ್ರೀಮತಿ ಉಮಾಶ್ರೀ
ಶ್ರೀ ಎಸ್.ರವಿ
ಡಾ: ಎಂ.ಆರ್.ಸೀತಾರಾಂ

## 11. ವರದಿಯನ್ನೊಪ್ಪಿಸುವುದು

**2023-24ನೇ ಹಾಗೂ 2024-25ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ 39, 40, 41 ಹಾಗೂ 42ನೇ ವರದಿ.**

## 12. ಶಾಸನ ರಚನೆ

**ಅ) ವಿಧೇಯಕವನ್ನು ಹಿಂಪಡೆಯುವುದು**

ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕ, 2024

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**(ವಿಧೇಯಕವನ್ನು ಹಿಂಪಡೆಯಲಾಯಿತು)**

**ಆ) ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024**

ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಕೆ.ಎಸ್.ನವೀನ್
ಶ್ರೀ ಟಿ.ಎ.ಶರವಣ
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಎಸ್. ಕೇಶವ ಪ್ರಸಾದ್
ಶ್ರೀ ಹೆಚ್.ಎಸ್.ಗೋಪಿನಾಥ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2024**

ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)
ಶ್ರೀ ಪಿ.ಹೆಚ್.ಪೂಜಾರ್
ಶ್ರೀ ಟಿ.ಎ.ಶರವಣ
ಶ್ರೀ ಎಸ್.ಕೇಶವ ಪ್ರಸಾದ್
ಶ್ರೀ ಕೆ.ಎಸ್.ನವೀನ್
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಡಿ.ಎಸ್.ಅರುಣ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024**

ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)
ಡಾ: ತಳವಾರ್ ಸಾಬಣ್ಣ
ಶ್ರೀ ಎಸ್.ಕೇಶವ ಪ್ರಸಾದ್
ಶ್ರೀಮತಿ ಹೇಮಲತಾ ನಾಯಕ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024**

ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)
ಶ್ರೀ ಬಿ.ಕೆ.ಹರಿಪ್ರಸಾದ್
ಶ್ರೀ ಸಿ.ಟಿ.ರವಿ
ಡಾ: ತಳವಾರ ಸಾಬಣ್ಣ
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಐವನ್ ಡಿ'ಸೋಜಾ
ಶ್ರೀ ನಸೀರ್ ಅಹ್ಮದ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಉ) ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2024**

ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಶ್ರೀ ಗೋವಿಂದ ರಾಜು

ಡಾ: ಧನಂಜಯ ಸರ್ಜಿ

ಶ್ರೀ ಕೆ.ಎಸ್.ನವೀನ್

ಶ್ರೀ ಸಿ.ಟಿ.ರವಿ

ಶ್ರೀ ಎನ್.ರವಿಕುಮಾರ್

ಶ್ರೀ ಐವನ್ ಡಿ'ಸೋಜಾ

ಶ್ರೀಮತಿ ಉಮಾಶ್ರೀ

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

<><><>

(897) 17.12.2024/10.10/ಎಂ.ಎಂ-ಬಿ.ಎನ್.ಎಸ್

# ಕರ್ನಾಟಕ ವಿಧಾನ ಪರಿಷತ್ತು

ಮಂಗಳವಾರ, ದಿನಾಂಕ 17ನೇ ಡಿಸೆಂಬರ್ 2024

ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು.

(ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಾದರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 01. ಸಂತಾಪ ಸೂಚನೆ

### ವಿಷಯ:- ಪದ್ಮಶ್ರೀ ಪುರಸ್ಕೃತ ವೃಕ್ಷ ಮಾತೆ ತುಳಸಿಗೌಡ ಅವರ ನಿಧನದ ಬಗ್ಗೆ.

- - - -

**ಸಭಾಪತಿಯವರು:-** ಪದ್ಮಶ್ರೀ ಪುರಸ್ಕೃತ ವೃಕ್ಷ ಮಾತೆ ತುಳಸಿಗೌಡ ಅವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಪದ್ಮಶ್ರೀ ಪುರಸ್ಕೃತ ವೃಕ್ಷ ಮಾತೆ ತುಳಸಿಗೌಡ ಅವರು ದಿನಾಂಕ 16.12.2024ರಂದು ನಿಧನ ಹೊಂದಿರುತ್ತಾರೆ.

1944ರ ಡಿಸೆಂಬರ್ 16ರಂದು ಅಂಕೋಲ ತಾಲ್ಲೂಕಿನ ಹೊನ್ನಳ್ಳಿ ಗ್ರಾಮದ ಹಾಲಕ್ಕಿ ಬುಡಕಟ್ಟು ಕುಟುಂಬದಲ್ಲಿ ಜನಿಸಿದ್ದ ಶ್ರೀಯುತರು 'ಪರಿಸರವೇ ನನ್ನ ಉಸಿರು' ಎಂದು ತಮ್ಮ ಜೀವನದುದ್ದಕ್ಕೂ ಲಕ್ಷಾಂತರ ಮರಗಳನ್ನು ಬೆಳೆಸಿ ಪಾಲನೆ ಪೋಷಣೆ ಮಾಡುವ ಮೂಲಕ 'ವೃಕ್ಷ ಮಾತೆ' ಎಂದು ಕರೆಯಲ್ಪಡುತ್ತಿದ್ದರು. ಯಾವುದೇ ಔಪಚಾರಿಕ ಶಿಕ್ಷಣವಿಲ್ಲದಿದ್ದರೂ ಶಾಲಾ ಮಕ್ಕಳಿಗೆ ಗಿಡಗಳನ್ನು ಬೆಳೆಸುವ ತರಬೇತಿ ನೀಡುತ್ತಿದ್ದರು. ಪ್ರತಿ ವರ್ಷ 30 ಸಾವಿರ ಸಸಿಗಳನ್ನು ಪೋಷಿಸಿದ ಕೀರ್ತಿಗೆ ಭಾಜನರಾಗಿದ್ದರು. ಶ್ರೀಯುತರಿಗೆ ಅರಣ್ಯ ತಿಳುವಳಿಕೆ ಅಪಾರವಾಗಿತ್ತು. ಸಾಗುವಾನಿಯನ್ನೇ ಹೆಚ್ಚಾಗಿ ಬೆಳೆಸುತ್ತಿದ್ದ ಇವರು ಇದರ ಹೊರತಾಗಿ ಎಳ್ಳು, ನಂದಿ, ಪೀಫುಲ್, ಫಿಕಸ್, ಬಿದಿರು, ರಾಟನ್ ಜಮುನ್, ಗೋಡಂಬಿ, ಮತ್ತಿ ಮುಂತಾದ ಮರಗಳ ಎಲ್ಲಾ ಮಾಹಿತಿಗಳ ಅರಿವನ್ನು ಹೊಂದಿದ್ದರು. ಪರಿಸರದ ಮೇಲಿನ ಈಕೆಯ ಪ್ರೀತಿಯನ್ನು ಕಂಡು ಅಂದಿನ ಅರಣ್ಯಾಧಿಕಾರಿಯವರು ಅರಣ್ಯದಲ್ಲಿ ಬೀಜಗಳನ್ನು ಶೇಖರಣೆ ಮಾಡಿ ಸಸಿಗಳನ್ನಾಗಿ ಮಾಡಿಕೊಡುವ ಹಾಗೂ ಪೋಷಿಸುವ ದಿನಗೂಲಿ ನೌಕರಿಯನ್ನು ನೀಡಿದ್ದರು. ಕಾಡಿನಿಂದ ಅಪರೂಪದ ಬೀಜ ಸಂಗ್ರಹಿಸಿ, ಸಸಿಗಳನ್ನು ಬೆಳಸಿ ಅದೇ ಸಸಿಗಳನ್ನು ಅರಣ್ಯದಲ್ಲಿ, ಸರ್ಕಾರಿ ಕಛೇರಿ, ಶಾಲಾ ಆವರಣ, ರಸ್ತೆಯ ಪಕ್ಕದಲ್ಲಿ ಬೆಳೆಸಿದ ಕೀರ್ತಿ ಇವರದ್ದಾಗಿದೆ. ಯಾವ ಯಾವ ಮರದಿಂದ ಏನೇನು ಪ್ರಯೋಜನ, ಯಾವ ಜಾತಿಯ ಸಸಿಗಳಿಗೆ ಎಷ್ಟು ನೀರಿನ ಅವಶ್ಯಕತೆ ಇದೆ ಮುಂತಾದ ಹಲವಾರು ಮಾಹಿತಿಗಳ ಕಣಜವಾಗಿದ್ದ ಶ್ರೀಯುತರು 'ಅರಣ್ಯದ ವಿಶ್ವಕೋಶ' ಎಂದೇ ಜನಜನಿತರಾಗಿದ್ದರು.

ಶ್ರೀಯುತರ ಪರಿಸರ ಕಾಯಕಕ್ಕೆ ಕೇಂದ್ರ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ, ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿಗಳಲ್ಲದೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೂ ಸಹ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯ ಹಾಗೂ ರಾಷ್ಟ್ರವು ಒಬ್ಬ ಶ್ರೇಷ್ಠ ಪರಿಸರ 'ವೃಕ್ಷ ಮಾತೆ'ಯೊಬ್ಬರನ್ನು ಕಳೆದುಕೊಂಡಂತಾಗಿದೆ.

(ಮುಂದು)

(898) 17.12.2024 10.20 ಹೆಚ್‌ವಿ. ಕೆಎಸ್

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾತೆ ತುಳಸಿ ಗೌಡರವರು ಬಡತನ ಹಾಗೂ ಹಾಲಕ್ಕಿ ಬುಡಕಟ್ಟು ಜನಾಂಗದಲ್ಲಿ ಜನಿಸಿ, ಕಳೆದ ಅನೇಕ ವರ್ಷಗಳಿಂದ ಪರಿಸರ ಪ್ರೇಮಿಯಾಗಿರುವ ಮಹಿಳೆಯಾಗಿದ್ದಾರೆ. ಲಕ್ಷಾಂತರ ಸಸಿಗಳನ್ನು ನೆಟ್ಟಿದ್ದಾರೆ. ಆದ್ದರಿಂದ ಅವರು "ಮರಗಳ ವಿಜ್ಞಾನಿ" ಎಂದು ಉತ್ತರ ಕನ್ನಡ ಭಾಗದಲ್ಲಿ ಹೆಸರುವಾಸಿಯಾಗಿದ್ದರು. ಅಲ್ಲಿ ನೆಟ್ಟಿರುವ ಕೆಲವು ಮರಗಳನ್ನು ಕಡಿದಾಗ, ಮಾತೆ ತುಳಸಿ ಗೌಡರು ಆ ಮರಗಳನ್ನು ಅಪ್ಪಿಕೊಂಡು "ಅಪ್ಪಿಕೋ" ಚಳುವಳಿಯ ಮೂಲಕ ಮರಗಳನ್ನು ಕಡಿಯದಂತೆ ರಕ್ಷಿಸಿರುವ ಉದಾಹರಣೆಗಳು ಬಹಳಷ್ಟಿವೆ. ವಯೋನಿವೃತ್ತಿ ಹೊಂದಿದ ಮೇಲೂ ಲಕ್ಷಾಂತರ ಸಸಿಗಳನ್ನು ನೆಡುವುದರ ಮೂಲಕ ಅವರು ತಮ್ಮ ಪರಿಸರ ಪ್ರೇಮವನ್ನು ಪ್ರದರ್ಶಿಸಿದ್ದಾರೆ. ಒಂದೇ ಒಂದು ವರ್ಷದಲ್ಲಿ ಸುಮಾರು ಇಪ್ಪತ್ತು ಸಾವಿರ ಸಸಿಗಳನ್ನು ನೆಟ್ಟು; ಅರಣ್ಯ ಇಲಾಖೆಯವರು ಹಣವನ್ನು ನೀಡದಿದ್ದರೂ ಸಹ ಅವುಗಳನ್ನು ರಕ್ಷಣೆ ಮಾಡಿರುವಂತಹ ಮಹಿಳೆಯಾಗಿದ್ದಾರೆ. ಅನೇಕ ಕಾಡು ಮರಗಳ ಬಗ್ಗೆ ಮಾಹಿತಿಯನ್ನು ಹೊಂದಿದ್ದ ಈಕೆ, "ಸಸ್ಯ ವಿಜ್ಞಾನಿ" ಎಂದು ಪ್ರಸಿದ್ಧವಾಗಿದ್ದರು. ಮಾತೆ ತುಳಸಿ ಗೌಡರವರು "ಅರಣ್ಯದ ವಿಶ್ವ ಕೋಶ" ಮತ್ತು "ವೃಕ್ಷ ಜೀವಿ" ಎನ್ನುವ ಖ್ಯಾತಿಯನ್ನು ಸಹ ಹೊಂದಿದ್ದರು.. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಹಾಗೂ ಪದ್ಮಶ್ರೀ ಪ್ರಶಸ್ತಿಗಳನ್ನು ನೀಡಿ ಅವರನ್ನು ಗೌರವಿಸಲಾಗಿದೆ. ಇಂತಹ ವ್ಯಕ್ತಿ ಮೃತ ಹೊಂದಿರುವುದರಿಂದ ಅವರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ಕರುಣಿಸಲಿ ಎಂದು ಹೇಳುತ್ತಾ, ತಾವು ತಂದಿರುವಂತಹ ಸಂತಾಪ ಸೂಚನೆಯ ಪ್ರಸ್ತಾವವನ್ನು ಅನುಮೋದಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಪದ್ಮಶ್ರೀ ಪುರಸ್ಕೃತ "ವೃಕ್ಷ ಮಾತೆ" ತುಳಸಿಗೌಡರ ಅಗಲಿಕೆಯ ಈ ಸಂದರ್ಭದಲ್ಲಿ ತಾವು ತಂದಿರುವಂತಹ ಸಂತಾಪಸೂಚನೆಯ ಪ್ರಸ್ತಾವವನ್ನು ಅನುಮೋದಿಸುತ್ತಿದ್ದೇನೆ.

ಮಾತೆ ತುಳಸಿಗೌಡ ಇವರು ಹಲವಾರು ತಳಿಗಳ ವೃಕ್ಷಗಳನ್ನು ನಾಟಿ ಮಾಡುವುದರ ಮೂಲಕ ಪರಿಸರಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಅತೀ ಬಡತನ ಕುಟುಂಬದಲ್ಲಿ ಅರಣ್ಯದಲ್ಲಿಯೇ ಹುಟ್ಟಿದ ಈಕೆ, ಬಡತನದಲ್ಲಿಯೂ ಕೂಡ ಪರಿಸರಕ್ಕೆ ಏನಾದರೂ ಕೊಡುಗೆಯನ್ನು ಕೊಡಬೇಕೆಂದು ಸಾವಿರಾರು ಸಸಿಗಳನ್ನು ನೆಟ್ಟು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅನೇಕ ಅಪರೂಪದ ಬೀಜಗಳನ್ನು ಸಂಗ್ರಹಿಸುತ್ತಿದ್ದ ಇವರು ಅವುಗಳನ್ನು ಎಲ್ಲಿ ಬಿತ್ತಬೇಕು; ಆ ಸಸಿಗಳಿಗೆ ಎಷ್ಟು ನೀರಿನ ಅವಶ್ಯಕತೆ ಇದೆ ಎನ್ನುವ ತಿಳುವಳಿಕೆಯನ್ನು ಹೊಂದಿದ್ದರು. ಶ್ರೀಯುತರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಹಾಗೂ ಪದ್ಮಶ್ರೀ ಪ್ರಶಸ್ತಿಗಳನ್ನು ನೀಡಿ ಅವರನ್ನು ಗೌರವಿಸಲಾಗಿದೆ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಶ್ರೇಷ್ಠ ಜೀವನವನ್ನು ಜೀವಿಸಿದ ಆ ಮಹಾನ್ ಚೇತನಕ್ಕೆ ಈ ಸದನವೂ ಕೂಡ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತಿದೆ. ವೃಕ್ಷ ಮಾತೆಯ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ಅವರ ಕುಟುಂಬಕ್ಕೆ ನೀಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಶಾಸಕರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**೦2. ಪ್ರಕಟಣೆ**

**ಸಭಾಪತಿಯವರು:-** ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ;

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮಾವಳಿಗಳ ನಿಯಮ 304ರ ಮೇರೆಗೆ ವಿಧಾನಸಭೆಯು ದಿನಾಂಕ: 16.12.2024ರಂದು ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024ನ್ನು ತಿದ್ದುಪಡಿಗಳೊಂದಿಗೆ ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಿತ್ತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024
2. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೆಯ ತಿದ್ದುಪಡಿ) ವಿಧೇಯಕ, 2024
3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೆಯ ತಿದ್ದುಪಡಿ) ವಿಧೇಯಕ, 2024
4. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024
5. ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ. 2024
6. ಕರ್ನಾಟಕ ಅಂತರ್ಜಲ( ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2024

## ೦೩. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: ೨೦೬**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ನಾನು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದಾರೆ. "ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯಿಂದ ಎಷ್ಟು ಸಿ.ಎ., ನಿವೇಶನಗಳನ್ನು ಯಾವ ಸಂಸ್ಥೆಗೆ; ಯಾವ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿದೆ" ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸಂಸ್ಥೆವಾರು ವಿವರವನ್ನು ಕೊಟ್ಟಿದ್ದಾರೆ. ಸಿ.ಎ., ನಿವೇಶನಗಳನ್ನು ಹಂಚಿಕೆ ಮಾಡಲು ಇರುವಂತಹ ನಿಯಮಗಳು ಮತ್ತು ಮಾನದಂಡಗಳೇನು ಎನ್ನುವ ನನ್ನ ಪ್ರಶ್ನೆಗೆ, "ಹಂಚಿಕೆಗೆ ಇರುವಂತಹ ಮಾನದಂಡಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು(ಸಿ.ಇ.ಒ. ಮತ್ತು ಇ.ಎಂ.,) ಕೆ.ಐ.ಎ.ಡಿ.ಬಿ.,ಯವರು ನಿಗದಿಪಡಿಸಬೇಕು" ಎನ್ನುವ ಉತ್ತರವನ್ನು ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಸಿ.ಎ., ನಿವೇಶನಗಳನ್ನು ಹಂಚಿಕೆ ಮಾಡಲು ಇರುವಂತಹ ನಿಯಮ ಕಾಲಕಾಲಕ್ಕೆ ಬದಲಾವಣೆ ಆಗುತ್ತದೆಯೇ; ಸಂಸ್ಥೆ ಅಥವಾ ವ್ಯಕ್ತಿಗೆ ಅನುಗುಣವಾಗಿ ನಿಯಮ ಬದಲಾವಣೆಯಾಗುತ್ತದೆಯೇ ಅಥವಾ ನಿರ್ದಿಷ್ಟವಾಗಿರುವ ನಿಯಮ ಮೊದಲೇ ಇರುತ್ತದೆಯೇ ಎನ್ನುವುದು ನನ್ನ ಉಪ ಪ್ರಶ್ನೆಗಳಾಗಿವೆ.

ಸನ್ಮಾನ್ಯ ಸಭಾಪತಿಯವರೇ, ಆಂಗ್ಲ ಮತ್ತು ಕನ್ನಡದ ಕನಿಷ್ಠ ಎರಡು ದಿನಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಲಾಗಿದೆಯೆಂದು ಅವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ ತಿಳಿಸಿದ್ದಾರೆ. ಯಾವ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಲಾಗಿದೆ ಎನ್ನುವ ಮಾಹಿತಿಯನ್ನು ಮಾನ್ಯ ಸಚಿವರಿಂದ ಬಯಸುತ್ತಿದ್ದೇನೆ. ಕೆಲವೊಮ್ಮೆ ಹೆಚ್ಚು ಪ್ರಚಲಿತವಲ್ಲದ ಪತ್ರಿಕೆಗಳಲ್ಲಿ ಜಾಹೀರಾತನ್ನು ಕೊಟ್ಟು, ಜಾಹೀರಾತು ಕೊಟ್ಟಿದ್ದೇವೆಂದು ತಿಳಿಸಲಾಗುತ್ತದೆ. ಅಂದರೆ, ಹೆಚ್ಚು ಪ್ರಸರಣ ಇರುವಂತಹ ಪ್ರಮುಖ ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗುತ್ತದೆಯೋ ಅಥವಾ ನಿಯಮವನ್ನು ಪಾಲಿಸಿದ್ದೇವೆಂದು ಜನರ ಕಣ್ಣಿಗೆ ಮರೆಮಾಚುವುದಕ್ಕೆ ಜಾಹೀರಾತನ್ನು ನೀಡಲಾಗಿದೆಯೇ ಎನ್ನುವುದನ್ನು ಸ್ಪಷ್ಟಪಡಿಸುವುದರ ಜೊತೆಗೆ ಯಾವ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಲಾಗಿದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನನಗಿರುವ ಮಾಹಿತಿಯ ಪ್ರಕಾರ ಸಿ.ಎ., ಲ್ಯಾಂಡ್‌ನಲ್ಲಿ ಆಸ್ಪತ್ರೆಯನ್ನು, ಶಾಲೆಯನ್ನು ಸಮುದಾಯ ಭವನವನ್ನು ಕಟ್ಟಬೇಕು. ಅಂದರೇ, ಸಾರ್ವಜನಿಕ ಉಪಯೋಗಕ್ಕೆ ಬರುವಂತಹ ಕಟ್ಟಡಗಳನ್ನು ಕಟ್ಟಬೇಕಾಗುತ್ತದೆ. ಹೋಟೆಲ್ ಎನ್ನುವುದು ಕಮರ್ಷಿಯಲ್ ಆಗುತ್ತದೆ. ಅದೇ ರೀತಿಯಲ್ಲಿ ಅಪಾರ್ಟ್‌ಮೆಂಟ್ ಎನ್ನುವುದು ವಸತಿಗೆ ಬರುತ್ತದೆ. ಇವರು ಸಿ.ಎ., ಲ್ಯಾಂಡ್ ಅನ್ನು ಹೋಟೆಲ್ ಮತ್ತು

ಅಪಾರ್ಟ್‌ಮೆಂಟ್ ಕಟ್ಟುವುದಕ್ಕೆ ಹಂಚಿಕೆ ಮಾಡಿದ್ದಾರೆ. ಇವು ಕೈಗಾರಿಕಾ ಸಿ.ಎ., ನಿವೇಶನದ ಹಂಚಿಕೆಯ ನಿಯಮಗಳ ವ್ಯಾಪ್ತಿಯೊಳಗೆ ಬರುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಒಬ್ಬರಿಗೆ ಕನಿಷ್ಠ ಎಷ್ಟು ಮತ್ತು ಗರಿಷ್ಠ ಎಷ್ಟು ಸಿ.ಎ., ಲ್ಯಾಂಡ್ ಕೊಡಬಹುದು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ.

**ಶ್ರೀ ಎಂ.ಬಿ.ಪಾಟೀಲ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವಯಾವ ಉದ್ದೇಶಗಳಗಾಗಿ ಸಿ.ಎ., ನಿವೇಶನಗಳನ್ನು ಕೊಡಬಹುದು ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ದಿನಾಂಕ:10.11.2023ರ ಅಧಿಸೂಚನೆಗೂ ಮೊದಲು 1991ರಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದರಲ್ಲಿ R & D centers; Innovation-Centre of Excellence; Technical Institutes Skill Development/Training Institutes/Educational Institutions; Government/PSU offices; Banks; Hospitals/dispensaries; Hotels; ICD; Air cargo Complex; Weigh Bridges; Petrol/Gas Station; Canteens; Housing Tenements/apartments/Dormitories for the employees of Industries ಗಳಿಗೆ ಕೊಡಬಹುದೆಂದು ಇದೆ. ಮಾನ್ಯ ಸದಸ್ಯರು ಅಲ್ಲಿ ಹೋಟೆಲ್‌ಗೆ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ.

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಹೋಟೆಲ್, ರೆಸ್ಟೋರೆಂಟ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೂ ಕೊಟ್ಟಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಟ್ಟ ಮೇಲೆ ಅವರು ಪ್ರಶ್ನೆಯನ್ನು ಕೇಳಲಿ. ಅವರ ಎಲ್ಲ ಪ್ರಶ್ನೆಗಳಿಗೂ ನಾನು ಸಂಪೂರ್ಣವಾಗಿ ಉತ್ತರವನ್ನು ಕೊಡುತ್ತೇನೆ. ಕೈಗಾರಿಕಾ ಲೇಔಟ್‌ಗಳಲ್ಲಿ ಹೋಟೆಲ್‌ಗಳು ಮತ್ತು ಅಪಾರ್ಟ್‌ಮೆಂಟ್‌ಗಳು ಹಾಗೂ Petrol Gas Stations ಇರಬೇಕಾಗುತ್ತದೆ.

(ಮುಂದು)

(899) 17.12.2024 10.30 ಪಿಕೆ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ್ (ಮುಂದು):-**

ಈ ಮಾನದಂಡಗಳನ್ನು ನಾವು ಸೃಷ್ಟಿ ಮಾಡಿರುವಂಥದ್ದಲ್ಲ. ಮಾನ್ಯ ಸದಸ್ಯರು, ತರಾತುರಿಯಲ್ಲಿ ಯಾವುದೋ ಒಂದು ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಿರಬಹುದು ಎಂದು ಹೇಳಿದರು. ವಿಜಯವಾಣಿ, ಪ್ರಜಾವಾಣಿ, Times of India, The Indian Express ಇಂತಹ ದಿನ ಪತ್ರಿಕೆಗಳಲ್ಲಿ ಜಾಹೀರಾತು ಕೊಡಲಾಗುತ್ತದೆ. 193 ಸೈಟ್‌ಗಳಲ್ಲಿ ನಾವು ಜಾಹೀರಾತು ಕೊಟ್ಟಿದ್ದೇವೆ. The total extent of land is 377 acres. The total number of

applications received is 283. ನಾವು 41 ಅರ್ಜಿಗಳನ್ನು ಅಪ್ರೂವ್ ಮಾಡಿದ್ದೇವೆ ಹಾಗೂ ಅದರ total extent 96.59 ಎಕರೆ. ಒಂದೊಂದು ಉದ್ದೇಶಕ್ಕೆ ಒಬ್ಬೊಬ್ಬರೇ ಅಪ್ಲೆ ಮಾಡಿರುವಂಥದ್ದನ್ನು ಸಮಿತಿಯಲ್ಲಿ ರಿಜೆಕ್ಟ್ ಮಾಡಲಾಗಿದೆ. In order to be more transparent, we have rejected single applicants. ಅವರಿಗೆ ಇನ್ನೊಂದು ಸಲ ಕಾಲವಾಶವನ್ನು ಕೊಡುತ್ತೇವೆ. ಇದೇನು ಟೆಂಡರ್ ಅಲ್ಲ ಅಥವಾ ಕ್ಯಾನ್ಸಲ್ ಮಾಡುವ ಅವಶ್ಯಕತೆಯೂ ಇರಲಿಲ್ಲ. ಆದರೂ ಕೂಡ ಇದು ಪಾರದರ್ಶಕವಾಗಿರಲಿ, ಇನ್ನಷ್ಟು participants ಜಾಸ್ತಿಯಾಗಲಿ ಎನ್ನುವ ಉದ್ದೇಶದಿಂದ single application signatory ಅನ್ನು reject ಮಾಡಿದ್ದೇವೆ. 2 ಅಪ್ಲಿಕೇಷನ್‌ಗಳು surrender ಆಗಿವೆ. ಮಾನ್ಯ ಸದಸ್ಯರು ಮಾತನಾಡುತ್ತಾ, ಮಾನದಂಡಗಳೇನು, ಅವು ಕಾಲ ಕಾಲಕ್ಕೆ ಬದಲಾಗುತ್ತವೆಯೇ ಎನ್ನುವ ಪ್ರಶ್ನೆಯನ್ನು ಕೇಳಿದರು. ಒಳ್ಳೆಯದಕ್ಕಾಗಿ ಬದಲಾವಣೆ ಮಾಡಿದ್ದೇವೆ. ಹಿಂದೆ, CEO & EM (Chief Executive Officer and Executive Member), KIADB ಯ ಮಂಡಳಿಯಿಂದ ಬಂದಿರುವುದನ್ನು ಮಂತ್ರಿಗಳು ಅಂತಿಮಗೊಳಿಸುತ್ತಿದ್ದರು. ಈಗ, ಈ ಕೆಲಸವನ್ನು ಒಬ್ಬರೆ ಮಾಡಬಾರದು, collective ಆಗಿರಲಿ ಎನ್ನುವ ಉದ್ದೇಶದಿಂದ SLSWCC (State Level Single Window Clearance Committee) ನಲ್ಲಿ ಇಟ್ಟು ಕ್ಲಿಯರ್ ಮಾಡುತ್ತೇವೆ. This is for a better system. ಇದರಲ್ಲಿ Development Commissioner ಹಾಗೂ ಎಲ್ಲರೂ ಬರುತ್ತಾರೆ. ಅಲ್ಲಿಂದಲೇ ಇದು ಅಪ್ರೂವ್ ಆಗಬೇಕು ಎನ್ನುವ ಒಳ್ಳೆಯ ಉದ್ದೇಶದ ಹಿನ್ನೆಲೆಯಲ್ಲಿ ಹೀಗೆ ಮಾಡಿದ್ದೇವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ಒಬ್ಬರಿಗೆ ಎಷ್ಟು ಸಿ.ಎ. ನಿವೇಶನಗಳನ್ನು ಕೊಡಬಹುದು ಎಂದು ಕೇಳಿದ್ದೆ. ಅದರ extent of land ಏನಾದರೂ ಮಿತಿ ಇದೆಯೇ? ನೀವು ಕೊಟ್ಟಿರುವ ಉತ್ತರದಲ್ಲಿ ಒಬ್ಬರಿಗೆ 10 ಎಕರೆ, ಇನ್ನೊಬ್ಬರಿಗೆ 7 ಎಕರೆ ಕೊಟ್ಟಿರುವುದು ಇದೆ. ಅಂದರೆ ಸಿ.ಎ. ನಿವೇಶನವೆಂದು ಎಷ್ಟು ಬೇಕಾದರೂ ಕೊಡಬಹುದೇ? ಅಥವಾ ಅದಕ್ಕೆ ಏನಾದರೂ ಮಿತಿ ಇದೆಯೇ? ಸಿ.ಎ.ನಿವೇಶನಗಳನ್ನು ನಮ್ಮ ರಾಜ್ಯದವರಿಗೆ ಮಾತ್ರ ಕೊಡಲಾಗುತ್ತದೆಯೋ ಅಥವಾ ಹೊರ ರಾಜ್ಯದವರಿಗೂ ಕೊಡಬಹುದೇ? ನಮ್ಮ ರಾಜ್ಯದ ಭೂಮಿಯನ್ನು ಸಿ.ಎ.ಗಾಗಿ ಹೊರ ರಾಜ್ಯದವರಿಗೂ ಕೊಡಬಹುದೇ? ನಂ.22, ಕೆ.ಹೆಚ್.ಬಿ.ಕಾಲೋನಿ, ಸೋಲಾಪುರ, ವಿಜಯಪುರ ಇದಕ್ಕೆ 4 ಪ್ಲಾಟ್‌ಗಳನ್ನು ಕೊಟ್ಟಿದ್ದೀರಿ. ಈ ರೀತಿ ಒಂದೇ ಅಡ್ರೆಸ್ ಇರುವಂಥದ್ದಕ್ಕೆ 4 ಪ್ಲಾಟ್‌ಗಳನ್ನು ಕೊಟ್ಟಿದ್ದೀರಿ. ಇನ್ನೊಂದು, ADU Infra Private Limited ಎನ್ನುವ ಒಂದೇ ಕಂಪನಿಗೆ 3 ಪ್ಲಾಟ್‌ಗಳನ್ನು ಕೊಟ್ಟಿದ್ದೀರಿ. ಅಂದರೆ ಇದಕ್ಕೆ ಮಿತಿ ಇದೆಯೋ ಅಥವಾ ಮನಸೋ ಇಚ್ಛೆ ಕೊಡಬಹುದೇ?

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಗಳೆ, ಸಿ.ಎ. ನಿವೇಶನವನ್ನು ಈ ರಾಜ್ಯದವರಿಗೆ ಮಾತ್ರ ಕೊಡಬೇಕು ಬೇರೆ ರಾಜ್ಯದವರಿಗೆ ಕೊಡಬಾರದು ಎಂದಿಲ್ಲ. ಹೊರ ರಾಜ್ಯದವರು ಆಸ್ಪತ್ರೆ ಕಟ್ಟಿಸುತ್ತೇವೆ ಎಂದು ಬಂದಾಗ ಅವರಿಗೆ ಜಾಗ ಕೊಡಬೇಕಾಗುತ್ತದೆ. Applicants ಗಳಿಗೆ ಏನು ಮಾನದಂಡಗಳಿವೆ ಹಾಗೂ ತಾವು ಯಾವ ಉದ್ದೇಶದಿಂದ ಜಾಗವನ್ನು ಕೇಳುತ್ತಿದ್ದಾರೋ ಅದನ್ನು ಪರಿಗಣಿಸಿ ನಿವೇಶನವನ್ನು ನೀಡಲಾಗುತ್ತದೆ. ಒಬ್ಬರಿಗೆ ಒಂದೇ ನಿವೇಶನ ಕೊಡಬೇಕು ಎನ್ನುವ ನಿಯಮವೂ ಇಲ್ಲ. ಇಷ್ಟಾದರೂ ಕೂಡ ಒಟ್ಟು 193 ನಿವೇಶನಗಳಿದ್ದರೂ ಕೇವಲ 41 ಅರ್ಜಿಗಳು

ಮಾತ್ರ ಬಂದಿವೆ. ಅಂದರೆ ಇನ್ನೂ 152 ನಿವೇಶನಗಳು ಉಳಿಯುತ್ತವೆ. ಇವುಗಳನ್ನು ಹೊರ ರಾಜ್ಯದವರಿಗೆ ಕೊಡಬಾರದು ಎಂದೇನಿಲ್ಲ ಅಥವಾ ಒಬ್ಬರಿಗೆ ಒಂದೇ ನಿವೇಶನ ಕೊಡಬೇಕು ಎನ್ನುವುದೂ ಇಲ್ಲ. ಕೊಡಬಹುದು; ಅದರಲ್ಲಿ ತಪ್ಪೇನೂ ಇಲ್ಲ. ಅಲ್ಲದೇ ಇವು civic amenity sites ಆಗಿವೆ. ಇವುಗಳನ್ನು educational institutions and hospitals ಗಳಿಗೆ ಕೊಡಬಹುದು. ಹಿಂದೆ Aerospace and Defence Park ನಲ್ಲಿ ನೂರಾರು ಎಕರೆಯನ್ನು ಒಂದು ಶಿಕ್ಷಣ ಸಂಸ್ಥೆಗೆ ಕೊಟ್ಟಿರುವುದಿದೆ. Educational Institutions are not industrial entities. Civic amenity sites ನಲ್ಲಿ ನಾವು hospitals and hotels ಗಳಿಗೆ ಅವಕಾಶ ಕೊಡಬಹುದು. Aerospace and Defence Park ನಲ್ಲಿ ಶಿಕ್ಷಣ ಸಂಸ್ಥೆಗೆ ಕೊಡುತ್ತೇವೆ, ಯುನಿವರ್ಸಿಟಿಗೆ ಕೊಡುತ್ತೇವೆ. ಇಷ್ಟೇ ಅಲ್ಲದೇ ಎರಡೂವರೆ ಕೋಟಿ ಬೆಲೆ ಬಾಳುವ ಜಾಗವನ್ನು, concession ಎಂದು, ರೂ. 50 ಲಕ್ಷಕ್ಕೆ ಕೊಟ್ಟಿದ್ದೇವೆ. ನಾವು ಯಾರಿಗೆ incentives ಗಳನ್ನು ಕೊಡುತ್ತೇವೆ? Industry ಗಳಿಗೆ ಕೊಡುತ್ತೇವೆ. ನಾವು Foxconn ನವರಿಗೆ ಕೊಟ್ಟಿದ್ದೇವೆ. ಈ ರೀತಿ ಸರ್ಕಾರಕ್ಕೆ ಸುಮಾರು ರೂ. 135 ಕೋಟಿ ಹಾನಿ ಮಾಡಿಕೊಂಡು ಕೊಟ್ಟಿರುವ ಉದಾಹರಣೆಗಳು ಇವೆ. ಇಂಥದ್ದು ಹೇಳುವುದು ಬಹಳಷ್ಟಿದೆ. ರಾಜಕೀಯ ಮಾಡುವುದಕ್ಕೆ ಹೋದರೆ ನಾನು ಬಹಳಷ್ಟು ಮಾತನಾಡಬಹುದು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ನಾನು ಮಾನ್ಯ ಸಚಿವರಿಂದ ಉತ್ತರ ಬಯಸುತ್ತಿದ್ದೇನೆ. ಮಾನ್ಯ ಸಚಿವರು ಉತ್ತರ ಕೊಡುವಾಗ ಗಾಬರಿಯಾಗುತ್ತಿದ್ದಾರೆ. ನೀವು ಏಕೆ ಗಾಬರಿಯಗುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಎಂ.ಬಿ.ಪಾಟೀಲ:-** ನೀವು ಬೇರೆ ಯಾವುದೋ ಅರ್ಥದಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ.

**ಶ್ರೀ ಸಿ.ಟಿ.ರವಿ:-** ನೀವು ಗಾಬರಿ ಆಗುತ್ತಿರುವುದನ್ನು ನೋಡಿದರೆ ಇಲ್ಲಿ ನಿಯಮಗಳು ಉಲ್ಲಂಘನೆಯಾಗಿವೆ ಎಂದೆನಿಸುತ್ತಿದೆ. ಸರ್ಕಾರಕ್ಕೆ ವಿಶೇಷವಾಗಿ ಪ್ರಾತಿನಿಧ್ಯ ಕೊಡುವುದಕ್ಕೆ ಅವಕಾಶಗಳಿವೆ. ಅಂತಹ ಸಂದರ್ಭಗಳಲ್ಲಿ ಇಂತಹ ವಿಷಯಗಳನ್ನು ಕ್ಯಾಬಿನೆಟ್ ಮುಂದೆ ತಂದು ರಿಯಾಯಿತಿ ಕೊಡುತ್ತಾರೆ. ಒಬ್ಬರಿಗೆ ನಾಲ್ಕಾರು ನಿವೇಶನಗಳನ್ನು ಕೊಡಬೇಕಾದರೆ ಅದನ್ನು ಕ್ಯಾಬಿನೆಟ್ ಮುಂದೆ ತಂದು ವಿಶೇಷ ಪ್ರಾತಿನಿಧ್ಯವನ್ನೇನಾದರೂ ಕೊಟ್ಟಿದ್ದೀರಾ? ನಿಯಮಗಳನ್ನು ಬದಲಾಯಿಸಿದ್ದೀರಾ?

**ಶ್ರೀ ಎಂ.ಬಿ.ಪಾಟೀಲ:-** ಇನ್ನೂ ಬಹಳ ನಿವೇಶಗಳು ಖಾಲಿ ಇವೆ. ನೀವು ಅಪ್ಲೆ ಮಾಡಿ, ನಿಮಗೂ ಕೊಡುತ್ತೇವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, enterprises ಗಳಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಕೊಡಬೇಕು. ಹೆಚ್ಚು ಜಾಹೀರಾತುಗಳನ್ನು ಕೊಟ್ಟರೆ ಹೆಚ್ಚಿನ ಜನ ಬರುತ್ತಾರೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಗಳೆ, ಪ್ರಜಾವಾಣಿ, ವಿಜಯ ಕರ್ನಾಟಕ, Times of India ಇಂತಹ ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟಿದ್ದೇವೆ. ಮೊದಲು ಕೇವಲ ಪತ್ರಿಕೆಗಳಲ್ಲಿ ಅಷ್ಟೇ ಜಾಹಿರಾತು ಕೊಡುತ್ತಿದ್ದರು. ಈಗ ನಾನು ಬಂದ ಮೇಲೆ ವೆಬ್‌ಸೈಟ್‌ಗೆ ಹಾಕಿ ಆನ್‌ಲೈನ್ ಕೂಡ ಮಾಡಿದ್ದೇನೆ. ಮೊದಲು ಮಂತ್ರಿಗಳು ಅಪ್ರೂವ್ ಮಾಡುತ್ತಿದ್ದರು. Now we are approving it in the Committee. ಇದು civic amenity sites ಆಗಿವೆ. ಇದು ಸಾರ್ವಜನಿಕರ ಉಪಯೋಗಕ್ಕಾಗಿ ಇರುತ್ತವೆ. ಎಷ್ಟೋ ಕಡೆ Aerospace and Defence Park

ನಲ್ಲಿ educational institutions and universities ಗಳಿಗೆ ಜಾಗ ಕೊಟ್ಟಿದ್ದೇವೆ. ಕ್ಯಾಬಿನೆಟ್‌ನಲ್ಲಿ ಒಂದು ನಿರ್ಣಯ ಮಾಡಿ, ರೂ. 135 ಕೋಟಿಯಷ್ಟು ಹಣದ ಭಾರವನ್ನು ಸರ್ಕಾರದ ಮೇಲೆ ಹಾಕಿರುವ ಉದಾಹರಣೆ ಕೂಡ ಇದೆ. ಮಾನ್ಯ ಸಭಾಪತಿಗಳೆ, KIADB functions on no profit-no loss basis. ನಾವು Foxconn ಗೂ ಇನ್‌ಸೆಂಟಿವ್ ಕೊಡುತ್ತೇವೆ. ನಾವು land ಅನ್ನು concession ನಲ್ಲಿ ಕೊಟ್ಟರೆ ಅದರ reimburse ಆಗಬೇಕಾಗುತ್ತದೆ. ಆ ರೀತಿ ಹಿಂದೆ reimburse ಮಾಡಿಲ್ಲ. ಇಂತಹ ಅನೇಕ ಉದಾಹರಣೆಗಳಿವೆ.

**ಶ್ರೀ ಸಿ.ಟಿ.ರವಿ:-** ಇಂತಹ ಉದಾಹರಣೆಗಳಿದ್ದರೆ ಇನ್ನೊಂದು ಸಲ ಆ ಕುರಿತು ಚರ್ಚೆ ಮಾಡೋಣ. ಆದರೆ ಈಗ ನನ್ನ ಪ್ರಶ್ನೆಗೆ ಉತ್ತರ ಕೊಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರೊಬ್ಬರು ಒಂದು ಪ್ರಶ್ನೆಯನ್ನು ಕೇಳಿದಾಗ, ಹಿಂದೆ ಅದನ್ನು ಯಾರೋ ಮಾಡಿದರು, ಇನ್ನೊಂದನ್ನು ಮಾಡಿದರು ಎಂದು ಹೇಳುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ಸರ್ಕಾರ ಆ ರೀತಿ ಹೇಳಿ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಈ ಕುರಿತ ಪ್ರಕ್ರಿಯೆಯನ್ನು ಕಾನೂನುಬದ್ಧವಾಗಿ ಮಾಡಲಾಗಿದೆಯೇ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ. ಅದಕ್ಕೆ ಉತ್ತರ ಕೊಡಿ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಗಳೆ, ನಾನು ಉತ್ತರ ಕೊಟ್ಟಿದ್ದೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಈ ಹಿಂದೆ ಯಾವರೀತಿ ಪದ್ಧತಿ ಇತ್ತು, ಈಗ ಏನು ಸುಧಾರಣೆ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, guidelines ಪ್ರಕಾರ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರೆ ಸಾಕಾಗಿತ್ತು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಮಗೆ ಇಷ್ಟ ಬಂದ ಹಾಗೆ ಕೊಟ್ಟಿದ್ದೇವೆ ಎನ್ನುವ ಅರ್ಥದಲ್ಲಿ ಹೇಳಬಾರದು.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸದಸ್ಯರು ಪ್ರಶ್ನೆ ಕೇಳದ ಧಾಟಿ ಹೇಗಿತ್ತು? ಪ್ರಶ್ನೆ ಕೇಳುವುದಕ್ಕೆ ಒಂದು ರೀತಿ ಇರುತ್ತದೆ ಅಲ್ಲವೇ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಹಿಂದೆ ಅವರು ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ ಈ ಪ್ರಶ್ನೆ ಮಾನ್ಯ ರವಿ ಅವರದ್ದು. ನೀವೇಕೆ ಮಧ್ಯದಲ್ಲಿ ಎದ್ದು ನಿಂತು ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ನಾನು ಈ ಸದನದ ಸದಸ್ಯನಾಗಿದ್ದೇನೆ. ಒಬ್ಬ ಸದಸ್ಯನಿಗೆ hurt ಮಾಡಿದರೆ....

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು, ನೀವು ಪ್ರಶ್ನೆ ಕೇಳದ ಧಾಟಿ ಬೇರೆ ರೀತಿ ಇತ್ತು ಎಂದು ಹೇಳದರು. ನಾವು ಪ್ರಶ್ನೆಯನ್ನು ಪ್ರಶ್ನೆಯ ರೀತಿಯಲ್ಲಿ ಕೇಳದೆ ವಿನಂತಿ ಮಾಡಿಕೊಳ್ಳಬೇಕೇ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಮಂತ್ರಿಗಳು ಲಕ್ಷ್ಮಣ ರೇಖೆ ದಾಟಿ ಮಾತನಾಡಿದ್ದರಿಂದ ನಾವೂ ಕೂಡ ಮಾತನಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ನನಗೆ ಉತ್ತರ ಕೊಡಿಸುವ ಜವಾಬ್ದಾರಿ ನಿಮ್ಮದಾಗಿದೆ.

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು ನಡೆಸಬೇಕು ಎನ್ನುತ್ತೀರೋ, ಬೇಡ ಎನ್ನುತ್ತೀರೋ?

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಹೊರ ರಾಜ್ಯದವರಿಗೆ, Haritha Logistics and Warehousing Private Limited ನವರಿಗೆ ಏಕೆ ಕೊಡುತ್ತೀರಿ? ಇದು ರಿಯಲ್ ಎಸ್ಟೇಟ್ ಆಗಿದೆ. ರಿಯಲ್ ಎಸ್ಟೇಟ್‌ಗೋಸ್ಕರ ಹೊರ ರಾಜ್ಯದವರಿಗೆ ಬೇಕಾಬಿಟ್ಟಿಯಾಗಿ ಕೊಡಬಹುದೇ?

**(ಗೊಂದಲ)**

(ಮುಂದು)

**ಸಭಾಪತಿಯವರು:-** ಇದು ಯಾವುದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಮಾನ್ಯ ಎಂ.ಬಿ.ಪಾಟೀಲ್‌ರವರೇ, ಏತಕ್ಕೆ ಮಾತನಾಡುತ್ತೀರಿ, ಸುಮ್ಮನೆ ಕುಳಿತುಕೊಳ್ಳಿ. ಈ ಸದನದಲ್ಲಿ ಕೆಲವು ನಿಯಮಗಳಿರುತ್ತವೆ. ನಿಯಮ ಬಿಟ್ಟು ಮಾತನಾಡಬೇಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಈ ರೀತಿ ಬೇರೆ ಬೇರೆ ವಿಚಾರಗಳನ್ನು ಮಾತನಾಡುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು 10 ಎಕರೆ, 15 ಎಕರೆ ಪ್ರದೇಶವನ್ನು ಬೇರೆ ಬೇರೆಯವರಿಗೆ ಕೊಡುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲು ಎಸ್‌ಸಿ-ಎಸ್‌ಟಿ ಗೆ ಸಹ ಇರಲಿಲ್ಲ. ನಾನು ಸಿಎ ಸೈಟ್‌ನಲ್ಲಿ SC-ST ಗೆ introduce ಮಾಡಿದ್ದು. (ಗೊಂದಲ)

**ಶ್ರೀ ಸಿ.ಟಿ.ರವಿ:-** ಸಿಎ ಸೈಟ್ ಅನ್ನು concession ನಲ್ಲಿ ತಾನೇ ಕೊಡುವುದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು judicial enquiry ಗೆ ಕೊಡಬೇಕು. ಇಲ್ಲಿ ಸ್ವಜನ ಪಕ್ಷಪಾತ ಕೂಡ ಆಗಿದೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಿ.ಎ. ನಿವೇಶನದಲ್ಲಿ ಏನೂ concession ಇಲ್ಲ. ಕಡತಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ. ಸಿ.ಎ. ನಿವೇಶನ ಬೆಲೆ ನಿಗದಿಯನ್ನು ನಾನು ಮಾಡಿರುವುದಿಲ್ಲ. ಹಿಂದಿನ ಸರ್ಕಾರದಲ್ಲಿ ಮಾಡಿರುವಂಥದ್ದು. ನಾನು ತಪ್ಪು ಎಂದು ಹೇಳುತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ತಪ್ಪು ಮಾಡಿದ್ದಾರೆ, ನಾವು ತಪ್ಪು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಅವರು ತಪ್ಪು ಮಾಡಿದ್ದರೆ, ತಪ್ಪು ಎಂದು ಹೇಳಿ.

**ಸಭಾಪತಿಯವರು:-** ನಿಮಗೆಲ್ಲರಿಗೂ ಉತರ ಕೊಟ್ಟಿರುವುದು ಸರಿಯಿಲ್ಲ ಎಂದು ಅನಿಸಿದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತೇನೆ. ಅದರಲ್ಲಿ ಚರ್ಚೆ ಮಾಡಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಸೇರಿಸಿ ನ್ಯಾಯಾಂಗ ತನಿಖೆಗೆ ಕೊಡಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸ್ವಜನ ಪಕ್ಷಪಾತವಾಗಿದೆ, ಇದನ್ನು ನ್ಯಾಯಾಂಗ ತನಿಖೆಗೆ ಕೊಡಲಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನನ್ನ ಮಾತನ್ನು ಕೇಳಿ. ಇದು ಪ್ರಶ್ನೋತ್ತರ ವೇಳೆಯಾಗಿರುವುದರಿಂದ ಇದನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳೋಣ. ನೀವೆಲ್ಲರೂ ಹೇಳಿದ ಹಾಗೆ ಕೇಳುವುದಕ್ಕೆ ನಾನು ಇಲ್ಲಿ ಕುಳಿತಿಲ್ಲ. ಈ ವಿಷಯವನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ನೋಟೀಸ್ ಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ವೇಳೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಏನು ಬೇಕಾದರೂ ಉತ್ತರ ಕೊಟ್ಟರೆ ನಾವು ಒಪ್ಪಿಕೊಳ್ಳಬೇಕೇ?

**ಸಭಾಪತಿಯವರು:-** ಬೇರೆ ರೂಪದಲ್ಲಿ ನೋಟೀಸ್ ಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಷಯ ಇವತ್ತೇ ಚರ್ಚೆಯಾಗಬೇಕು.

**ಸಭಾಪತಿಯವರು:-** ನೋಟೀಸ್ ಕೊಡಿ, ಅವಕಾಶ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ: 953**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಭಾರತದ ಸರ್ವೋಚ್ಛ ನ್ಯಾಯಾಲಯ ದಿನಾಂಕ 25.07.2024 ಮತ್ತು 14.08.2024ರ ಮಹತ್ವದ ತೀರ್ಪಿನಲ್ಲಿ ರಾಜ್ಯ ಸರ್ಕಾರಕ್ಕೆ ಖನಿಜ ಹಕ್ಕುಗಳ ಮೇಲೆ ಮತ್ತು ಗಣಿ ಪ್ರದೇಶಗಳ ಮೇಲೆ ತೆರಿಗೆ ವಿಧಿಸುವಂತಹ ಅಧಿಕಾರವನ್ನು ಕೊಟ್ಟಿದೆ. ಆ ಪ್ರಕಾರವಾಗಿ "Royalty is not a Tax" ಎಂದು ಕೂಡ ಹೇಳುತ್ತದೆ. ಇಂತಹ ಮಹತ್ವದ ತೀರ್ಪಿನಿಂದ ರಾಜ್ಯ ಸರ್ಕಾರವು ಸುಮಾರು 4,700 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ತನ್ನ ಖಜಾನೆಗೆ ಭರ್ತಿ ಮಾಡಿಕೊಳ್ಳುವಂತಹ ಅವಕಾಶ ಬಂದಿದೆ. ಈ ವಿಷಯದಲ್ಲಿ 2-3 ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತಿದ್ದೇನೆ. ದಿನಾಂಕ 01.4.2005ರ ನಂತರ ತೆರಿಗೆಯನ್ನು ಹಾಕುವುದಕ್ಕೆ ನಮಗೆ ಅವಕಾಶ ಕೊಟ್ಟಿದ್ದಾರೆ. ಆದರೆ, ಸರ್ವೋಚ್ಛ ನ್ಯಾಯಾಲಯದಲ್ಲಿ 1989-1990ನೇ ಇಸವಿಯಲ್ಲೂ ಕೂಡ ಪ್ರಕರಣಗಳು ಇತ್ತು. ಇದನ್ನು ವಿರೋಧಿಸಿ ಆಂಧ್ರಪ್ರದೇಶ ಮತ್ತು ಬಿಹಾರ್ ರಾಜ್ಯಗಳು ಕೂಡ retrospective ಆಗಿ ತೆರಿಗೆ ಹಾಕುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ನಮ್ಮ ರಾಜ್ಯದವರು ಕೂಡ ಆ ರೀತಿ ಕೇಳುತ್ತಿದ್ದಾರೆಯೇ? ಏಕೆಂದರೆ ಸರ್ಕಾರದ ಬೊಕ್ಕಸ ತುಂಬಾ ಖಾಲಿಯಾಗಿದೆ. ಆದ್ದರಿಂದ ಹೆಚ್ಚಿನ ತೆರಿಗೆ ತರುವುದಕ್ಕೋಸ್ಕರ ಏನಾದರೂ ಪ್ರಾವಿಜನ್ ಮಾಡುತ್ತಿದ್ದಾರೆಯೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ದಿನಾಂಕ 01.04.2006 ರಿಂದ 12 ವರ್ಷಗಳ ಕಾಲಾವಧಿಯಲ್ಲಿ ತೆರಿಗೆಯನ್ನು ಸಂಗ್ರಹ ಮಾಡುವಂತಹ ಅವಕಾಶವನ್ನು ಕಲ್ಪಿಸಿದ್ದಾರೆ. ನನ್ನ ಎರಡನೇ ಪ್ರಶ್ನೆ ಏನೆಂದರೆ, ಈ ರೀತಿ ಬರತಕ್ಕಂಥ ತೆರಿಗೆ ಏನಿದೆ, ಇದನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ಹೋಗುತ್ತದೆಯೇ ಅಥವಾ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆಯೇ? ಏಕೆಂದರೆ, ಎಲ್ಲಿ ಬಾಧಿತ ಗಣಿ ಪ್ರದೇಶವಿದೆ ಅಲ್ಲಿ ಖರ್ಚು ಮಾಡತಕ್ಕಂಥ ಅವಶ್ಯಕತೆ ಇದೆ. ಅದನ್ನು ಮಾನ್ಯ ಸಚಿವರು ಸ್ಪಷ್ಟೀಕರಿಸಬೇಕು. ಕೊನೆಯದಾಗಿ, ಹಲವಾರು ದಶಕಗಳಿಂದ ಅನಧಿಕೃತವಾಗಿ ಖನಿಜ ಗಣಿಗಾರಿಕೆ ನಡೆಯುತ್ತಿದೆ ಆ ಪ್ರದೇಶಗಳನ್ನು ಕೂಡ ಈ ಕಾಯ್ದೆಯೊಳಗೆ ತರುವಂತಹ ವ್ಯವಸ್ಥೆಯನ್ನು ಯಾವ ರೀತಿ ಮಾಡುತ್ತಿದ್ದಾರೆ, ಅದಕ್ಕೇನಾದರೂ ಒಂದು ಬಾರಿ ಯೋಜನೆಯಡಿಯಲ್ಲಿ ರೂಪಿಸಿ ಅವರನ್ನು ಈ ಕಾಯ್ದೆಯೊಳಗೆ ತರುವಂತಹ ವ್ಯವಸ್ಥೆಯನ್ನು ಮಾಡುತ್ತಾರೆಯೇ ಎಂದು ನಾನು ಕೇಳಬಯಸುತ್ತಿದ್ದೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯಲ್ಲಿ ಬಹಳ ಮುಖ್ಯವಾಗಿದೆ. ಮುಖ್ಯವಾಗಿ ನಮ್ಮಲ್ಲಿ ಐದು ವಿಧವಾದ ಗಣಿಗಾರಿಕೆ ಇದೆ. Auction route ನಲ್ಲಿ 2015 ಕ್ಕಿಂತ ಹಿಂದೆ ಒಳಪಟ್ಟಿರುವಂಥವು. Central and

State PSU (Public Sector Undertakings) ನಿಂದ 50 ವರ್ಷಕ್ಕೆ ಅವರಿಗೆ lease grant ಅನ್ನು ಕೊಟ್ಟಿರುವಂಥದ್ದು. 50 ವರ್ಷ ಆದಂತಹ ಲೀಸ್‌ಗಳು. ಅದೇ ರೀತಿ ಕೇಂದ್ರ ಸರ್ಕಾರದ ಅನುದಾನದಲ್ಲಿ 2015 ರಿಂದ ಈಚೆಗೆ lease grant ಆಗಿದೆ. ಇವೆಲ್ಲದಕ್ಕೂ equal ಆಗಿ ತೆರಿಗೆ ಬರಲಿ ಎಂದು ಸರ್ವೋಚ್ಛ ನ್ಯಾಯಾಲಯದ ಜಡ್ಜ್‌ಮೆಂಟ್ ಆಗಿದೆ. ಮುಖ್ಯವಾಗಿ ಹೇಳುವುದೇನೆಂದರೆ, 2015 ಕ್ಕಿಂತ ಮುಂಚೆ ಕೊಟ್ಟಂಥ ಗಣಿಗಾರಿಕೆಯಲ್ಲಿ ಶೇಕಡ 45 ರಷ್ಟು ತೆರಿಗೆ ಇತ್ತು. ಮತ್ತೊಂದರಲ್ಲೂ 2015ಕ್ಕಿಂತ ಮುಂಚೆ ಅದಕ್ಕೂ ಶೇಕಡ 45 ರಷ್ಟು ತೆರಿಗೆ ಇತ್ತು. ಒಂದರಲ್ಲಿ ಮಾತ್ರ ಶೇಕಡ 1 ರಷ್ಟು ಇದೆ, ಮತ್ತು ಶೇಕಡ ಇಪ್ಪತ್ತೆರಡೂವರೆಯಷ್ಟು ಇದೆ. ಈಗ ಹೊಸದಾಗಿ ಆಗಿರುವಂತಹ auction blocks ಏನಿವೆ ಅವು ಶೇಕಡ ನೂರುರಷ್ಟು ಮೇಲ್ಪಟ್ಟು ಹೋಗಿವೆ. ಅದಕ್ಕೆಲ್ಲಾ equal ಆಗಲಿ ಎಂದು ನಾವು ಈಗ ಒಂದು ನಿರ್ಧಾರ ತೆಗೆದುಕೊಂಡು ಎಲ್ಲರಿಗೂ ಒಂದೇ ರೀತಿಯ ತೆರಿಗೆಯನ್ನು ಹಾಕಿ ನಮ್ಮ ಬೊಕ್ಕಸಕ್ಕೆ ಹೆಚ್ಚಿನ ವರಮಾನ 4,750 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ನಮ್ಮ ಸರ್ಕಾರಕ್ಕೆ ಇಲಾಖೆಯ ಮುಖಾಂತರ ಬರುತ್ತದೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, District Mineral Fund ಹೋಗುತ್ತದೆಯೇ ಅಥವಾ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆಯೇ ಎಂಬುದನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತಿದ್ದೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೇ, ಮೊದಲು District Mineral Fund ಗೆ ಹೋಗುತ್ತದೆ. ಹಣ ನಮ್ಮ ಇಲಾಖೆಗೆ ಹೋಗುತ್ತದೆ. ಆಮೇಲೆ ಆರ್ಥಿಕ ಇಲಾಖೆಗೂ ವರ್ಗಾವಣೆ ಮಾಡಬಹುದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅನಧಿಕೃತ ಖನಿಜ ಗಣಿಗಾರಿಕೆ ಬಗ್ಗೆ ಏನು ಮಾಡುತ್ತಾರೆ ಎಂಬುದನ್ನು ತಿಳಿಸಬೇಕು.

(ಮುಂದು)

(901) 17/12/2024 10:50 ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಮುಂಚೆ "ಸಿ" ವರ್ಗದ ಸಾಕಷ್ಟು ಅನಧಿಕೃವಾದ ಗಣಿಗಾರಿಕೆ ಇತ್ತು. ಸರ್ವೋಚ್ಛ ನ್ಯಾಯಾಲಯದ ತೀರ್ಪು ಬಂದ ನಂತರ ಸಾಕಷ್ಟು ಗಣಿಗಾರಿಕೆಗಳು ಸೀಜ್ ಆದವು. ಈ ಬಗ್ಗೆ ಸಾಕಷ್ಟು ವಿಚಾರಗಳನ್ನು ದಿನಪತ್ರಿಕೆಗಳಲ್ಲಿ ನೋಡಲಾಗುತ್ತಿದೆ. ಆದರೆ, ಈಗ ನಮಗೆ ತಿಳಿದಿರುವ ಮಟ್ಟಿಗೆ ಶೇಕಡಾ 99 ರಷ್ಟು ಅನಧಿಕೃತ ಗಣಿಗಾರಿಕೆಗಳು ಸ್ಥಗಿತಗೊಂಡಿವೆ. ಈಗ ಎಲ್ಲವೂ ಕಾನೂನು ರೀತಿಯಲ್ಲಿದ್ದು, ಗಣಕೀಕೃತಗೊಂಡಿವೆ. ಇವತ್ತಿನ ದಿವಸ ಖಾತೆಗಳ ಮುಖಾಂತರವೇ ಪ್ರತಿಯೊಂದು ಇಲಾಖೆಗೆ ವರಮಾನ ಬರುತ್ತಿದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಾಗುವ ಗಣಿಗಾರಿಕೆಗೆ ಸಂಬಂಧಪಟ್ಟಂತೆ ಇಲಾಖೆಯಲ್ಲಿ ವಾಚ್ ಅಂಡ್ ವಾರ್ಡ್ ವ್ಯವಸ್ಥೆಯೂ ಸಹ ಇದೆ. ಬಹಳ ಶಿಸ್ತಿನಿಂದ ನಡೆಯುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಸದಸ್ಯರು ಕೋರಿರುವ ಮತ್ತೊಂದು ಮಾಹಿತಿಗೆ ಸಂಬಂಧಪಟ್ಟಂತೆ,

ಇದರಲ್ಲಿ ಮುಖ್ಯವಾಗಿ ಮಿನರಲ್ಸ್ ಫಂಡ್ ಸಮವಾಗಿಲ್ಲದೇ ಇರುವುದರಿಂದ ಇವುಗಳೆಲ್ಲವನ್ನೂ ಸರಿ ಸಮಾನವಾಗಿ ಮಾಡಲಾಗಿದೆ. ಎಲ್ಲಾ ರೂಪದಲ್ಲಿನ ತೆರಿಗೆಯೂ ಸಹ ಒಂದೇ ತೆರನಾಗಿರಬೇಕು ಎಂಬ ಕಾರಣದಿಂದ ಇದನ್ನು ಮಾಡಲಾಗಿದೆ. ಏಕೆಂದರೆ, ಒಬ್ಬೊಬ್ಬರು ಗಣಿಗಾರಿಕೆಯನ್ನು ಎಂಜಾಯ್ ಮಾಡುತ್ತಿದ್ದಾರೆ. ಇದರ ಸ್ಪರ್ಧೆಯಲ್ಲಿ ಕೆಲವೊಬ್ಬರಿಗೆ ವರಮಾನ ಕಡಿಮೆ ಇದೆ. ಈ ನಿಟ್ಟಿನಲ್ಲಿ ಎಲ್ಲರಿಗೂ ಸರಿ ಸಮಾನವಾಗಿರಬೇಕು ಎಂಬ ಉದ್ದೇಶದ ನಿಟ್ಟಿನಲ್ಲಿ ಇವತ್ತಿನ ದಿವಸ ಈ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

**ಪ್ರಶ್ನೆ ಸಂಖ್ಯೆ: ೮೨೦**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜಧಾನಿ ಬೆಂಗಳೂರಿಗೆ ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಎಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೇಳಿದ್ದೆನೆ. ಈ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವ ಕಾರ್ಯವನ್ನು ಐಡೆಕ್ ಸಂಸ್ಥೆಗೆ – IDeCK (Infrastructure Development Corporation (Karnataka) Ltd ವಹಿಸಲಾಗಿರುತ್ತದೆ ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಈ ಯೋಜನೆಗೆ 2,000 ಎಕರೆಗಳಷ್ಟು ವಿಸ್ತೀರ್ಣದ ಜಮೀನು ಬೇಕಾಗುತ್ತದೆ; ಇದರಲ್ಲಿ ಎಷ್ಟು ಸರ್ಕಾರಿ ಜಮೀನು ಇದೆ ಎಂಬುದರ ಬಗ್ಗೆ ನಾನು ಮಾಹಿತಿಯನ್ನು ಕೇಳಿದ್ದೆನು. ಇದಕ್ಕೆ ಪ್ರತ್ಯುತ್ತರವಾಗಿ ಸರ್ಕಾರವು ಕೆಲವು ಮಾನದಂಡಗಳ ಮಾಹಿತಿಯನ್ನು ತಿಳಿಸಿದೆ. ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮಾಡಲು ಏನು ಮಾನದಂಡವಿರಬೇಕು ಎಂಬ ಬಗ್ಗೆ ಸರ್ಕಾರವು ತಿಳಿಸಿದೆ. ಈ ಕುರಿತಾಗಿ ಸರ್ಕಾರವು ನಿಖರವಾದ ಮಾಹಿತಿಯನ್ನು ನೀಡಿಲ್ಲ. ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಎಲ್ಲಿ ಮಾಡಲಾಗುತ್ತದೆ; ಅಲ್ಲಿ ಎಷ್ಟು ಪ್ರಮಾಣದ ಸರ್ಕಾರಿ ಜಾಗ ಇದೆ ಎಂಬ ಅಂಶಗಳ ಕುರಿತಾಗಿ ನಾನು ವಿವರವಾದ ಮಾಹಿತಿಯನ್ನು ಕೇಳಿದ್ದೆನು. ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಅವರು ನಿಗದಿಪಡಿಸಿದ ಮಾನದಂಡದಲ್ಲಿ ನೆಲಮಂಗಲದಿಂದ ಕುಣಿಗಲ್ ವರೆಗಿನ ರಸ್ತೆಯಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಎರಡು ರೈಲ್ವೆ ಮಾರ್ಗಗಳು ಬರುತ್ತವೆ. ಈ ಪ್ರದೇಶದಲ್ಲಿ ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸಿದರೆ ಸೂಕ್ತವೆಂದು ನನ್ನ ಭಾವನೆಯಾಗಿದೆ. ಈ ಬಗ್ಗೆ ಸಚಿವರು ಗಮನಹರಿಸಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಎಲ್ಲಿ ನಿರ್ಮಿಸಲಾಗುತ್ತದೆ ಎಂಬ ಪ್ರಶ್ನೆಯನ್ನು ಸದಸ್ಯರು ಕೇಳಿದ್ದಾರೆ. ಈ ಕುರಿತಾಗಿ ನಾವು ಈಗಾಗಲೇ ಮೂರ್ನಾಲ್ಕು ಸ್ಥಳಗಳನ್ನು ಆಯ್ಕೆ ಮಾಡಿದ್ದು, ಈ ವಿಚಾರದಲ್ಲಿ ನಮಗೆ ಕೆಲವೊಂದು ಸಂದೇಹಗಳಿದ್ದ ಕಾರಣ ಅವುಗಳ ಬಗ್ಗೆ ಸ್ಪಷ್ಟೀಕರಣವನ್ನು ಪಡೆಯುವ ನಿಟ್ಟಿನಲ್ಲಿ ಆಂತರಿಕ ಅಧ್ಯಯನ ಮಾಡುವ ಸಂಬಂಧ ಐಡೆಕ್ ಸಂಸ್ಥೆಗೆ ವಹಿಸಲಾಗಿದೆ. ಈ ಸಂಬಂಧ ಈಗಾಗಲೇ ಮೂರ್ನಾಲ್ಕು ಸಭೆಗಳನ್ನು ನಡೆಸಲಾಗಿದೆ. ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಎಲ್ಲಿ ಮಾಡುತ್ತೇವೆ ಎಂದು ಹೇಳುವುದಕ್ಕಿಂತ ಕರ್ನಾಟಕ ರಾಜ್ಯಕ್ಕೆ ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರಕ್ಕೆ ಮತ್ತು ಬೆಂಗಳೂರು ನಗರದ ಜನತೆಗೆ ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರದ ಉದ್ಯಮಿಗಳಿಗೆ ಎಲ್ಲಾ ರೀತಿಯಿಂದಲೂ ಒಳ್ಳೆಯದಾಗುವ ರೀತಿಯಲ್ಲಿ ಮೆರಿಟ್ ಆಧಾರದ ಮೇಲೆ ನಾವು ಮಾಡುತ್ತಿದ್ದೇವೆ. ಇಂತಹುದೇ ನಿರ್ದಿಷ್ಟ ಸ್ಥಳ ಎಂದು ನಾನು ನಿರ್ಧಾರ ಮಾಡುವುದಿಲ್ಲ. ಈಗಾಗಲೇ ಗುರ್ತಿಸಿರುವ ಮೂರ್ನಾಲ್ಕು ಸ್ಥಳಗಳಲ್ಲಿ ಎಲ್ಲಿ ಪ್ರಯಾಣಿಕರ ಹೆಚ್ಚಿನ ಸಂದಣಿ ಆಗುತ್ತದೆ ಹಾಗೂ ಪ್ರಸ್ತುತ ಇರುವ ಪ್ರಯಾಣಿಕರ ಸಂದಣಿ ಎಷ್ಟು ಎನ್ನುವ ಅಂಶಗಳ ಬಗ್ಗೆ ಐಡೆಕ್ ಸಂಸ್ಥೆಯವರು ವರದಿಯನ್ನು

ನೀಡಬೇಕು. ಮುಂದುವರೆದು, ವಿಮಾನ ನಿಲ್ದಾಣಕ್ಕಾಗಿ ಆಯ್ಕೆ ಮಾಡುವ ಸ್ಥಳಗಳಲ್ಲಿ ಫ್ಲೈಯಿಂಗ್ ಝೋನ್ ಬರುತ್ತದೆ ಹಾಗೂ ಪರಿಸರ ಇಲಾಖೆಯಿಂದ ನಿರಕ್ಷೇಪಣಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಇಂತಹ ಮಾನದಂಡಗಳನ್ನಿಟ್ಟುಕೊಂಡು ಯೋಜನೆಯನ್ನು ಅನುಷ್ಠಾನಗೊಳಸಲಾಗುತ್ತಿದೆ. ಈ ವಿಚಾರದಲ್ಲಿ ಒಂದು ಅಂಶದ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. 2033 ನೇ ಇಸವಿಗೆ ಬೆಂಗಳೂರು ಅಂತರಾಷ್ಟ್ರೀಯ ಪ್ರಾಧಿಕಾರ ನಿಯಮಿತ ಇವರ exclusivity clause ಅವಧಿ ಪೂರ್ಣಗೊಳ್ಳುತ್ತದೆ. ಆ ಕಾರಣಕ್ಕಾಗಿಯೇ ನಾವು ಪೂರ್ವಭಾವಿಯಾಗಿ ಈ ಪ್ರಕ್ರಿಯೆಗಳನ್ನೆಲ್ಲಾ ಆರಂಭಿಸಿದ್ದೇವೆ. ಈಗಿನಿಂದಲೇ ಪ್ರಾರಂಭಿಸಿದರೆ, ಅಲ್ಲಿಯವರೆಗೆ ಕೆಲಸಗಳಾಗುತ್ತವೆ ಎನ್ನುವ ಕಾರಣಕ್ಕಾಗಿ ನಾವು ಮಾಡುತ್ತಿದ್ದೇವೆ. ಈ ಹಂತದಲ್ಲಿ ನಿರ್ದಿಷ್ಟವಾದ ಸ್ಥಳವನ್ನು ನನಗೆ ಹೇಳಲು ಆಗುವುದಿಲ್ಲ. ಮೆರಿಟ್ ಆಧಾರದ ಮೇಲೆ ಸ್ಥಳ ನಿಗದಿಪಡಿಸಲಾಗುವುದು ಎಂಬ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಮಾಡಲಚ್ಛಿಸುತ್ತೇನೆ. ಬಹಳ ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಲಾಗುವುದು. ಇದರಿಂದ ಬೆಂಗಳೂರಿನ ಜನತೆಗೆ ಹಾಗೂ ಉದ್ಯಮಿಗಳಿಗೆ ಎಲ್ಲಾ ರೀತಿಯಿಂದಲೂ ಒಳ್ಳೆಯದಾಗಬೇಕೆಂಬ ನಿರ್ಣಯಗಳನ್ನು ನಾವು ಮೆರಿಟ್ ಆಧಾರದ ಮೇಲೆ ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದನ್ನು ಎಷ್ಟು ದಿವಸದಲ್ಲಿ ಮಾಡಲಾಗುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಸಚಿವರು ನೀಡಬೇಕು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮುಂದಿನ 8-10 ದಿನಗಳಲ್ಲಿ ಈ ಬಗೆಗಿನ ಫೀಡ್ ಬ್ಯಾಕ್ ನಮಗೆ ಬರುತ್ತದೆ. ಪ್ರಸ್ತುತ ಇದು ಮೌಖಿಕವಾಗಿ ಸ್ವೀಕೃತಗೊಂಡಿದ್ದು, ಲಿಖಿತವಾಗಿರುವುದನ್ನು ನಿರೀಕ್ಷಿಸುತ್ತಿದ್ದು, ಇದು ಬಂದ ತಕ್ಷಣವೇ ಪ್ರಸ್ತಾವನೆಯನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗುವುದು.

**ಶ್ರೀ ಟಿ.ಎನ್.ಜವರಾಯಿಗೌಡ:–** ಮಾನ್ಯ ಸಭಾಪತಿಯವರೆ, ರಾಜ್ಯ ಸರ್ಕಾರವು ಯೋಜನೆಗೆ ಸಂಬಂಧಪಟ್ಟಂತೆ ಈಗಾಗಲೇ ಏಳು ಕಡೆಗಳಲ್ಲಿ ಜಮೀನನ್ನು ಗುರ್ತಿಸಿರುವುದಾಗಿ ಹೇಳುತ್ತಿದೆ. 2023 ಇಸವಿಯ ಅಕ್ಟೋಬರ್ ಮಾಹೆಯ 1 ನೇ ತಾರೀಖಿನಿಂದ ಸ್ಥಿರ ಸ್ವತ್ತಿನ ಮಾರುಕಟ್ಟೆಯ ಮೌಲ್ಯವು ಪರಿಷ್ಕರಣೆಯಾಗಿದೆ. ಮುಂದಿನ ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಯೋಜನೆಯನ್ನು ಪ್ರಾರಂಭಿಸಲಾಗುವುದು. ಸರ್ಕಾರಕ್ಕೆ ರಾಜಧನ ಬೇಕು; ಆಗ ವರಮಾನದ ಉದ್ದೇಶದಿಂದ ಮಾರುಕಟ್ಟೆಯ ಬೆಲೆಯನ್ನು ಮತ್ತೊಮ್ಮೆ ಪರಿಷ್ಕರಣೆ ಮಾಡುತ್ತದೆ. ಹೀಗೆ ಪರಿಷ್ಕರಣೆ ಮಾಡಿದಾಗ, ಪುನಃ ಜಮೀನಿನ ಬೆಲೆಯು ದುಪ್ಪಟ್ಟು ಆಗುತ್ತದೆ. ಹೀಗಾಗಿ ಸರ್ಕಾರವು ಯೋಜನೆಗೆ ಸಂಬಂಧಪಟ್ಟಂತೆ ಭೂ ಸ್ವಾಧೀನ ಪಡಿಸಿಕೊಂಡು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸದಿದ್ದರೆ ಕಷ್ಟವಾಗುತ್ತದೆ. ಇದು ಸದ್ಯಕ್ಕೆ ಆಗದಿರುವ ಕೆಲಸವಾಗಿದೆ. ಕೂಡಲೇ ಸಚಿವರು ಅನುಕೂಲಕ್ಕೆ ತಕ್ಕಂತೆ ಸ್ಥಳವನ್ನು ನಿಗದಿಪಡಿಸಿ, ಮೊದಲು ಹಾಲಿ ಇರುವ ಮಾರುಕಟ್ಟೆ ಬೆಲೆಗನುಗುಣವಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಸಬೇಕು. ಇನ್ನು ಒಂದು ವರ್ಷ ಕಳೆದರೆ, ಸ್ಥಿರ ಸ್ವತ್ತಿನ ಮಾರುಕಟ್ಟೆ ಬೆಲೆಯು ಪುನಃ ಪರಿಷ್ಕರಣೆಗೊಳ್ಳುತ್ತದೆ. ಆಗ ಯೋಜನೆಯ ಅಧಿಕ ವೆಚ್ಚವು ಸರ್ಕಾರದ ಮೇಲೆ ಬೀಳುತ್ತದೆ. ಈ ಕಾರಣಗಳಗಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಯಿಂದ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಸ್ಥಳವನ್ನು ಗುರ್ತಿಸಿದ ನಂತರವಷ್ಟೇ ಭೂ ಸ್ವಾಧೀನ ಪ್ರಕ್ರಿಯೆಯ ಪ್ರಶ್ನೆ ಬರುತ್ತದೆ. ನಾವು ಅಧಿಸೂಚನೆಯನ್ನು ಹೊರಡಿಸಿದ ನಂತರ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸುವ ಸಂದರ್ಭದಲ್ಲಿ ಇಂತಿಂತಹ ಸ್ಥಳಗಳನ್ನು ಗುರ್ತಿಸಿದ್ದೇವೆ ಎಂಬುದಾಗಿ ತಿಳಿಸಲಾಗುತ್ತದೆ. ಆಗ ಪ್ರಾಧಿಕಾರದವರು ಬಂದು ಸ್ಥಳ ಪರಿಶೀಲನೆ ಮಾಡಿ ಅನುಮೋದಿಸಿದ ನಂತರವಷ್ಟೇ ನಾವು ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸುವ ಪ್ರಶ್ನೆಯು ಬರುತ್ತದೆ. ಹೊರತು, ಈಗಲೇ ಭೂ ಸ್ವಾಧೀನ ಪಡಿಸಿಕೊಳ್ಳಲಾಗುವುದಿಲ್ಲ. ಪ್ರಸ್ತುತ ಮೂರ್ನಾಲ್ಕು ಕಡೆಗಳಲ್ಲಿ ಸ್ಥಳ ಗುರ್ತಿಸಿದ್ದು, ಎಲ್ಲಾ ಕಡೆಗಳಲ್ಲೂ ಭೂ ಸ್ವಾಧೀನಪಡಿಸಿಕೊಳ್ಳಲಾಗುವುದಿಲ್ಲ. ಪ್ರಾಧಿಕಾರವು ಅಂತಿಮಗೊಳಿಸಿದ್ದನ್ನು ಸಚಿವ ಸಂಪುಟದಲ್ಲಿ ಮಂಡಿಸಿ, ಈ ಬಗ್ಗೆ ಚರ್ಚಿಸಿದ ನಂತರ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸುವ ಮೊದಲು ಜಮೀನನ್ನು ಗುರ್ತಿಸಲಾಗುತ್ತದೆ. ಆಗ ಜಮೀನಿನ ಮ್ಯಾಪ್, ಸರ್ವೆ ನಂಬರಿನ ಮಾಹಿತಿಗಳನ್ನೂ ಸಹ ನೀಡಲಾಗುತ್ತದೆ. ಆ ನಂತರದಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗುತ್ತದೆ.

**ಪ್ರಶ್ನೆ ಸಂಖ್ಯೆ: 961**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರಿಸಿದೆ. ಸರ್ಕಾರವು ಒಂದು ಟನ್ ಕಬ್ಬಿಗೆ ರೈತರಿಗೆ 3,150/- ರೂಪಾಯಿಗಳನ್ನು ನಿಗದಿಪಡಿಸಿದ್ದು, ಇದು ಬಹಳ ಕಡಿಮೆ ಮೊತ್ತವಾಗಿದೆ. ರಾಜ್ಯದಲ್ಲಿ ಕಬ್ಬು ಬೆಳೆಯುವ ರೈತರು ಸುಮಾರು ಒಂದು ಟನ್ ಕಬ್ಬನ್ನು ಬೆಳೆಯಲು ಸುಮಾರು 1,500/- ರೂಪಾಯಿಗಳ ವೆಚ್ಚವಾಗುತ್ತದೆ. ಕಬ್ಬು ಕಡಿದು ಅದನ್ನು ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಲು ಸುಮಾರು 800/- ರೂಪಾಯಿಗಳಷ್ಟು ಹಣ ಖರ್ಚಾಗುತ್ತಿದೆ. ಅಂದರೆ ಒಂದು ಟನ್ ಕಬ್ಬಿಗೆ 2,300/- ರಿಂದ 2,500/- ರೂಪಾಯಿಗಳಷ್ಟು ಹಣ ಖರ್ಚಾಗುತ್ತಿದೆ. ದೇಶದ ಗುಜರಾತ್ ಮತ್ತು ಪಂಜಾಬ್ ರಾಜ್ಯಗಳಲ್ಲಿ ಒಂದು ಟನ್ ಕಬ್ಬಿಗೆ 4,500/- ರಿಂದ 4,700/- ರೂಪಾಯಿಗಳನ್ನು ನೀಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿಯೇ ಮಾತ್ರವೇ ಬಹಳಷ್ಟು ಕಡಿಮೆ ಮೊತ್ತವನ್ನು ಸರ್ಕಾರವು ನೀಡುತ್ತಿದೆ. ಹೀಗಾಗಿ ರಾಜ್ಯ ಸರ್ಕಾರವು ಈ ಕೂಡಲೇ ರೈತರಿಗೆ ಒಂದು ಟನ್ ಕಬ್ಬಿಗೆ 4,500/- ರಿಂದ 5,000/- ರೂಪಾಯಿಗಳವರೆಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಕೇವಲ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ಉದಾಹರಣೆಯನ್ನು ಮಾತ್ರವೇ ನೀಡಿದ್ದಾರೆ. ದೇಶದ ದಕ್ಷಿಣ ಭಾಗದಲ್ಲಿಯೇ ಹೆಚ್ಚಿನ ಸಕ್ಕರೆ ಕಾರ್ಖಾನೆಗಳಿವೆ. ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯ ಹಾಗೂ ಮಹಾರಾಷ್ಟ್ರಗಳಲ್ಲಿಯೇ ಹೆಚ್ಚಿನ ಸಕ್ಕರೆ ಕಾರ್ಖಾನೆಗಳಿವೆ. ಇದನ್ನು ಹೊರತುಪಡಿಸಿ, ಉತ್ತರ ಪ್ರದೇಶ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಸಕ್ಕರೆ ಕಾರ್ಖಾನೆಗಳಿವೆ. ಉತ್ತರ ಭಾರತದ ಭಾಗಗಳಲ್ಲಿ ಅವರಿಗೆ ಸಾಗಾಣಿಕೆ ವೆಚ್ಚವು ಉಳಿಯುತ್ತದೆ. ಆದರೆ, ನಮಗೆ ಸಾಗಾಣಿಕೆ ವೆಚ್ಚವೇ ಜಾಸ್ತಿಯಾಗುತ್ತದೆ. ದಕ್ಷಿಣ ಭಾಗದಿಂದ ಉತ್ತರ ಭಾಗಕ್ಕೆ ಸಾಗಾಣಿಕೆ ಮಾಡಬೇಕಾದರೆ ಸಾಗಾಣಿಕೆ ವೆಚ್ಚವೇ ಜಾಸ್ತಿಯಾಗುತ್ತದೆ. ಅಲ್ಲಿನ ರಾಜ್ಯಗಳಲ್ಲಿ ರೈತರಿಗೆ ಹೆಚ್ಚಿನ ಮೊತ್ತವನ್ನು ಕೊಡುವ ಉದ್ದೇಶವೇನೆಂದರೆ, ಅಲ್ಲಿ recovery percentage ಮೇಲೆ ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಕಬ್ಬಿನಿಂದ ಎಷ್ಟು ಪ್ರಮಾಣದಲ್ಲಿ ಸಕ್ಕರೆ ಬರುತ್ತದೆ ಎನ್ನುವ recovery percentage ಆಧಾರದ ಮೇಲೆ ರೈತರಿಗೆ ಹೆಚ್ಚಿಗೆ ಹಣ ಪಾವತಿಸಲಾಗುತ್ತದೆ.

(ಮುಂದು)

(902)17-12-2024/11-00/bkp-ak (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಾನಂದ ಎಸ್.ಪಾಟೀಲ್(ಮುಂದು)**

ಈಗಾಗಲೇ ನಮ್ಮಲ್ಲಿಯೂ ಕೂಡ ಅನೇಕ ಕಾರ್ಖಾನೆಗಳು 12%ಕ್ಕಿಂತಲೂ ಜಾಸ್ತಿ ಯಾರು ಕೂಡ ರಿಕವರಿ ಮಾಡುತ್ತಾರೆ, ಆ ರೈತರಿಗೆ ಹೆಚ್ಚಿನ ಕಬ್ಬಿನ ದರ ಸಿಗುತ್ತದೆ. ಇಲ್ಲಿ ನಿಮ್ಮ ದಕ್ಷಿಣ ಭಾಗದಲ್ಲಿ ಅದರಲ್ಲೂ ಮಂಡ್ಯ

ಭಾಗದಲ್ಲಿ 9% ಗಿಂತ ಜಾಸ್ತಿ ಒಬ್ಬರು ಸಹ ಹೋಗುವುದಿಲ್ಲ. ಇದು ಒಂದನೆಯ ಕಾರಣ. ಮತ್ತೆ, ದರವನ್ನು ನಾವು ನಿಗದಿಪಡಿಸುವುದಿಲ್ಲ. C.A.C.P. (Commission for Agricultural Costs & Prices) ಯವರು ಅಂದರೆ ಕೇಂದ್ರ ಸರ್ಕಾರದವರು F.R.P. (Fair and Remunerative Price) ಯನ್ನು prefer ಮಾಡುತ್ತಾರೆ. ಅವರು prescribe ಮಾಡಿದ price ಅನ್ನು ನಾವು ಕೊಡಿಸಬೇಕಾಗುತ್ತದೆ. ಅದನ್ನು ಸಂಪೂರ್ಣವಾಗಿ ಕೊಡಿಸಿದ್ದೇವೆ. ಜೊತೆಗೆ ನಿಮಗೆಲ್ಲಾ ಗೊತ್ತಿರುವಂತೆ ಮೈಶುಗರ್ ಕಂಪನಿ ಬಹಳ ವರ್ಷಗಳಿಂದ ಬಂದ್ ಆಗಿತ್ತು. ಪುನಃ ಕಳೆದ ವರ್ಷ 2023-24 ಮತ್ತು 2024-25 ಈ ಎರಡು ವರ್ಷಗಳಲ್ಲಿ ಈಗಾಗಲೇ ಪ್ರತಿ ವರ್ಷ ಎರಡೆರಡು ಲಕ್ಷ ಟನ್‌ಗಳ ಕಬ್ಬನ್ನು ಅರೆದಿದ್ದೇವೆ. ಅದನ್ನು ರಿವೈವ್ ಮಾಡತಕ್ಕಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ತಾವು ಸರ್ಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸಬೇಕು. ನಿಜವಾಗಿಯೂ ಕೂಡ ಬಹಳ ದಿವಸಗಳಿಂದ ಅವ್ಯವಹಾರವಾಗಿ ಆ ಕಾರ್ಖಾನೆ ನಿಂತು ಹೋಗಿದ್ದು, ತಮಗೂ ಗೊತ್ತಿದೆ. ಇದು ಒಂದು ಬಾರಿ ರಿವೈವ್ ಆಗಿ ಕೋ-ಜನರೇಷನ್ ಕೂಡ ಇರಲಿಲ್ಲ. ಈ ವಿಷಯ ನಿಮಗೆ ಗೊತ್ತಿದೆ. Captive power ಕೂಡ ಅವರು ಜನರೇಟ್ ಮಾಡಿಕೊಳ್ಳುತ್ತಿರಲಿಲ್ಲ. ಪವರ್ ಅನ್ನು ಕೂಡ ಆಮದು ಮಾಡಿಕೊಳ್ಳುತ್ತಿದ್ದರು. ಯಾವುದೇ ಕಾರ್ಖಾನೆ ಪವರ್ ಅನ್ನು ಆಮದು ಮಾಡಿಕೊಳ್ಳುತ್ತಿರಲಿಲ್ಲ. ದುರ್ದೈವವಶಾತ್ ಈ ಕಾರ್ಖಾನೆಯಲ್ಲಿ ಅಂತಹ ಘಟನೆ ಘಟಿಸಿತ್ತು. ಅದನ್ನೆಲ್ಲಾ ಈಗ ಸರಿ ಮಾಡಿ ಬರತಕ್ಕಂತಹ ದಿನಮಾನಗಳಲ್ಲಿ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಉತ್ಪಾದನೆ ಆಗುವಂತಹ ಕಬ್ಬು ತಳಿಗಳನ್ನು ಅಲ್ಲಿ introduce ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

**ಶ್ರೀ ಕೆ.ವಿವೇಕಾನಂದ:-** ಮಾನ್ಯ ಸಚಿವರೆ, ನಾವುಗಳೆಲ್ಲರೂ ಇವತ್ತು ಅನ್ನದಾತನ ಹೆಸರಿನಲ್ಲಿ ನಾವು ಪ್ರಮಾಣವಚನವನ್ನು ತೆಗೆದುಕೊಳ್ಳುತ್ತೇವೆ. **"ಅನ್ನತೋ ಪ್ರಾಣ:, ಪ್ರಾಣತೋ ಪರಬ್ರಹ್ಮ, ಅನ್ನದಾತೋ ಸುಖೀಭವ!"** ಎಂದು ಅನ್ನದಾತನಿಗೆ ಎರಡೂವರೆ ಸಾವಿರ ರೂಪಾಯಿಗಳು ಖರ್ಚಾಗಿ 651 ರೂಪಾಯಿಗಳನ್ನು ತೆಗೆದುಕೊಂಡರೆ ಏನು ವ್ಯವಸಾಯವನ್ನು ಮಾಡುತ್ತಾರೆ? ಇವತ್ತಿನ ಕೂಲಿ ಒಬ್ಬ ಲೇಬರ್‌ಗೆ 650 -700 ರೂಪಾಯಿಗಳನ್ನು ಕೊಡಬೇಕು. ರೈತ ಏನು ಮಾಡುತ್ತಾನೆ? ದಯಮಾಡಿ, ನಿಗದಿತ ಬೆಲೆಯನ್ನು ನಿಗದಿ ಮಾಡಿ ರೈತರಿಗೆ ಬೆಲೆ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಶಿವಾನಂದ ಎಸ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ರೈತರಿಗೆ ಹಣ ಕೊಡುವ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಕರ್ನಾಟಕದಲ್ಲಿಯೇ ಕೆಲವು ಕಾರ್ಖಾನೆಯವರು ಹಣ ಕೊಡುತ್ತಿದ್ದಾರೆ. ಇಲ್ಲಿನ ಸೋಮೇಶ್ವರ ಸಕ್ಕರೆ ಕಾರ್ಖಾನೆಯವರದ್ದು 12% ರಿಕವರಿ ಇದೆ. ವಿಶೇಷವಾಗಿ ಮೈಶುಗರ್ ಕಾರ್ಖಾನೆಗೆ ಹೋದರೆ 7% ರಿಂದ 8% ತನಕ ರಿಕವರಿ ಇರುವುದಿಲ್ಲ. ಕರ್ನಾಟಕದಲ್ಲಿಯೇ ಎಲ್ಲಾ ಕಡೆ ರಿಕವರಿ ಕೊಡಲಾಗುತ್ತಿದೆ. ಅದಕ್ಕೆ ನಾನು ದಯಮಾಡಿ ಹೇಳುವುದೇನೆಂದರೆ ಅಲ್ಲಿ ಏನು ಸ್ಥಗಿತವಾಗಿರುವಂತಹ ಕಾರ್ಖಾನೆ ಏನಿದೆ, ಇದನ್ನು ರಿವೈವ್ ಮಾಡಿರುವುದೇ ಬಹಳ ದೊಡ್ಡ ಸಾಹಸ. ಮತ್ತು cogeneration ಸಹ ಇರಲಿಲ್ಲ. ನಿಮಗೆ ಗೊತ್ತಿದೆ. 1,57,000 ಸಾವಿರ ಯೂನಿಟ್ ಅನ್ನು ಈ ಬಾರಿ export ಮಾಡಿದ್ದೇವೆ. ಖಂಡಿತವಾಗಿಯೂ ಇಲ್ಲಿಯೂ

ಪ್ರಯತ್ನ ಮಾಡೋಣ. ಇದಕ್ಕೆ ನಿಮ್ಮ ಸಹಕಾರ ಬೇಕು. ರೂ. 4 ಕೋಟಿ ಮಾತ್ರ ಬಾಕಿ ಕೊಟ್ಟರೆ ಮುಗಿದು ಹೋಗುತ್ತದೆ.

**ಪ್ರಶ್ನೆ ಸಂಖ್ಯೆ 905**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಭೂಸ್ವಾಧೀನ ಪ್ರಕ್ರಿಯೆಯ ಬಗ್ಗೆ ಅನುಬಂಧದಲ್ಲಿ ಕೊಟ್ಟಿದ್ದಾರೆ. ಮತ್ತೆ ನಾನು ಏನು ಮತ್ತೊಂದು ಪ್ರಶ್ನೆಯನ್ನು ಕೇಳಿದ್ದೇನೆಂದರೆ, ಮಧ್ಯವರ್ತಿಗಳು ಲಾಭ ಮಾಡಿಕೊಳ್ಳುವುದು ಸರ್ಕಾರದ ಗಮನದಲ್ಲಿದೆಯೇ ಎಂದು ಕೇಳಿರುವುದಕ್ಕೆ ಅವರ ಉತ್ತರದಲ್ಲಿ RTGS ಮೂಲಕ ರೈತರಿಗೆ ಹಣವನ್ನು ಪಾವತಿ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ನೀವು RTGS ಮೂಲಕ ರೈತರಿಗೆ ಪಾವತಿ ಮಾಡುವ ಮೊದಲು ಅಲ್ಲಿ ಮಧ್ಯವರ್ತಿಗಳ ಧಾಳಿಯಾಗಿರುತ್ತದೆ. ಇವತ್ತು, ಈ ಪ್ರಕ್ರಿಯೆ ನಡೆಯುವುದು ರೈತ ಮತ್ತು ಸರ್ಕಾರ ಮತ್ತು ಕೈಗಾರಿಕಾ ಉದ್ಯಮಿಗಳ ಜೊತೆಯಲ್ಲಿ ನಡೆಯುತ್ತದೆ. ಆದರೆ, ಈ ಮೂರು ಜನರ ಮಧ್ಯದಿಂದ ಒಬ್ಬರು ಮಧ್ಯವರ್ತಿಯಾಗಿ ಬರುತ್ತಾರೆ. ಇವತ್ತು ಈ ವಿಚಾರದಲ್ಲಿ ಅಧಿಕಾರಿಗಳೇ ಏನು ಹೇಳುತ್ತಾರೆಂದರೆ ರೈತನ ಒಂದು ಲಕ್ಷ ಜಮೀನಿಗೆ ಮಧ್ಯವರ್ತಿ ಒಂದೂವರೆ-ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದು ಅಲ್ಲಿಯೇ ಕರಾರು ಮಾಡಿಕೊಂಡು ಹೋಗುತ್ತಾರೆ. ನಂತರ, ಸರ್ಕಾರ ಆ ಜಮೀನಿಗೆ 10 ಲಕ್ಷವೋ 20 ಲಕ್ಷವೋ ಎಂದು ಹೇಳಿ ಅದನ್ನು ಭೂಸ್ವಾಧೀನ ಮಾಡಿಕೊಳ್ಳುತ್ತದೆ. ಆಗ ಮಧ್ಯವರ್ತಿ ಲಾಭ ಮಾಡಿಕೊಳ್ಳುತ್ತಾನೆ. ಆಗ ಸರ್ಕಾರ ಆ ಜಮೀನನ್ನು ಅಭಿವೃದ್ಧಿ ಮಾಡಿಕೊಡುವಂತಹದ್ದು ಆಗುತ್ತದೆ. ಇದರಿಂದ, ಅಂಗೈ ಹುಣ್ಣಿಗೆ ಕನ್ನಡಿ ಬೇಡ. ಈ ಎಲ್ಲಾ ಪ್ರಕ್ರಿಯೆ ಇವತ್ತು ರೈತನ ಗಮನಕ್ಕೆ ಬಾರದೇ ಮಧ್ಯವರ್ತಿಗಳೇ ಇದರಲ್ಲಿ ಹೆಚ್ಚು ಲಾಭವನ್ನು ಪಡೆಯುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವರು):-** ತಮಗೆ ಏನಾಗಬೇಕೆಂದು ಹೇಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ರೈತರಿಗೆ ಪರಿಹಾರ ಕೊಡುವ ನಿಟ್ಟಿನಲ್ಲಿ ಏನು ಮಾಡುತ್ತೀರಿ? ಎಂದು ಕೇಳಿರುವುದಕ್ಕೆ ಇವರು ಏನು ಹೇಳಿದ್ದಾರೆಂದರೆ, ರೈತರನ್ನು ಅವರ ಜಮೀನಿನಲ್ಲಿ ಸ್ಥಾಪಿತವಾದ ಕೈಗಾರಿಕೆಗಳಲ್ಲಿ ಸಹಭಾಗಿತ್ವ ನೀಡಲು ಅವಕಾಶವಿರುವುದಿಲ್ಲ ಎಂದು ಹೇಳಿದ್ದೀರಿ. ಇನ್ನೊಂದರಲ್ಲಿ ನೀವು "ರೈತರಿಗೆ ನಾವು ಜಮೀನನ್ನು 10,781 ಚದುರಡಿ ಅಭಿವೃದ್ಧಿ ಪಡಿಸಿದ ಜಮೀನನ್ನು ಕೊಡುತ್ತೇವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ನೀವು ಈ ಜಮೀನು ಕೊಟ್ಟಿದ್ದರಲ್ಲಿ ಇವತ್ತು ರೈತ ಅದನ್ನು ಪಡೆದುಕೊಂಡರೆ ಅವನಿಗೆ ಹಣ ಸಿಗುತ್ತದೆ. ಈ ಚದುರಡಿ ಜಮೀನಿನಲ್ಲಿ ಅವನು ಪುನಃ ಉಳುಮೆ ಮಾಡಲಿಕ್ಕೆ ಆಗುವುದಿಲ್ಲ. ಅವನು ಏನು ಮಾಡಬೇಕು? ಅವನು ಅದನ್ನು ಮಾರಾಟ ಮಾಡಬೇಕು. ಮಾರಾಟ ಮಾಡಿ ಬಂದ ಹಣವನ್ನು ತೆಗೆದುಕೊಂಡು, ಆ ಹಣ ಖಾಲಿ ಮಾಡಿಕೊಂಡಿರುವ ಎಷ್ಟೋ ರೈತರನ್ನು ನೋಡಿದ್ದೇನೆ. ಆ ರೈತರು ಕಣ್ಣೀರು ಹಾಕಿ ಬೀದಿಗೆ ಬಿದ್ದಿದ್ದಾರೆ. ನನಗೆ ಇವತ್ತಿಗೂ ನೆನಪು ಇದೆ. ಶ್ರೀಮಾನ್ ಎಸ್.ಎಂ. ಕೃಷ್ಣ ರವರ ನೇತೃತ್ವದಲ್ಲಿನ ಸರ್ಕಾರದಲ್ಲಿ ಶ್ರೀಮಾನ್ ಹೆಚ್.ಕೆ. ಪಾಟೀಲ್‌ರವರು

ಜಲಸಂಪನ್ಮೂಲ ಸಚಿವರಾಗಿ ಕೆಲಸ ನಿರ್ವಹಿಸುತ್ತಿದ್ದರು. ಆಗ ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸದ ಸಂದರ್ಭದಲ್ಲಿ ಆಂಧ್ರದಿಂದ ಬಂದು, ಅಂದರೆ, ಹೊರ ರಾಜ್ಯದಿಂದ ಬಂದು ಅಲ್ಲಿ ಇರತಕ್ಕಂತಹ ಜಮೀನನ್ನು ರೈತರ ಕೈಯಿಂದ 1 ಲಕ್ಷ ಬೆಲೆ ಬಾಳುವ ಜಮೀನನ್ನು 2 ಲಕ್ಷ ರೂಪಾಯಿಗಳಷ್ಟು ಬೆಲೆಗೆ ಖರೀದಿ ಮಾಡಿಕೊಂಡು ಅವರುಗಳು ಹಣವನ್ನು ಮಾಡಿಕೊಂಡರು. ಆಗ ಅವರು ಆದೇಶ ಕೊಡುವಂತಹ ಕೆಲಸವನ್ನು ಒಂದು ಸಮಿತಿಯನ್ನು ರಚನೆಯನ್ನು ಮಾಡುವುದರ ಮೂಲಕ ಮಾಡಿದರು. ನಾನು ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತೇನೆ. ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ ಒಂದು ನೀವು ರೈತರಿಗೆ ಉದ್ಯಮದಲ್ಲಿ ಲಾಭಾಂಶದಲ್ಲಿ 5 ರಿಂದ 10% ಹಣವನ್ನು ಕೊಡುವಂತಹದ್ದು ಕೈಗಾರಿಕೆಯಿಂದ ಆಗುತ್ತದೆಯೇ? ನಾವು joint venture ಎಂದು ಮಾಡುತ್ತೇವೆ. joint venture ನಲ್ಲಿ ಭೂಮಿ ಇದ್ದವನಿಗೆ ಏನು ನಷ್ಟವಾಗುವುದಿಲ್ಲ. ಭೂಮಿಯಲ್ಲಿ ಏನಾಗುತ್ತದೆ ಎಂದರೆ ಅವರಿಗೆ ಇಂತಿಷ್ಟು ಹಣವೆಂದು ಕೊಡುತ್ತಾರೆ. ಇಂತಿಷ್ಟು ಜಮೀನಿನಲ್ಲಿ ಇಂತಿಷ್ಟು ಅಂದರೆ 50%, 40%, 30% ಈ ರೀತಿಯಲ್ಲಿ joint venture ನಲ್ಲಿ construction ಮಾಡುವಾಗ ನಡೆಯುತ್ತದೆ. ನಂತರ goodwill ಎಂದು ಕೊಡುತ್ತಾರೆ. ಆದರೆ, ರೈತನಿಗೆ ಏನೂ ಇರುವುದಿಲ್ಲ. ಇವತ್ತು ಕೋಲಾರದ ಹತ್ತಿರ ಈ ಜಮೀನಿಗೆ ಬೆಲೆ ಇದೆ, ತುಮಕೂರಿಗೆ ಬಂದರೆ ಬಲೆ ಇದೆ, ಪೀಣ್ಯಕ್ಕೆ ಬಂದರೆ ರೈತನಿಗೆ ಬಲೆ ಸಿಗುತ್ತದೆ. ಇದೇ ಜಮೀನಿನ ವಿಚಾರದಲ್ಲಿ ಬಾಗಲಕೋಟೆಗೆ ಹೋದರೆ ಅಲ್ಲಿ ಅವನು ತನ್ನ ಜಮೀನನ್ನು ಮಾರಲೇಬೇಕು, ಮಾರಾಟದಿಂದ ಬಂದಂತಹ ಹಣವನ್ನು ನೋಡಿದರೆ ಆ ಭಾಗದಲ್ಲಿ ಕಡಿಮೆ ಹಣ ಬರುತ್ತದೆ. ಈ ಭಾಗದವರಿಗೆ ಹಣ ಜಾಸ್ತಿ ಸಿಗುತ್ತದೆ. ಕೈಗಾರಿಕೋದ್ಯಮದಲ್ಲಿ ನೀವು ಅವರಿಗೆ ಸಹಭಾಗಿತ್ವ ಕೊಡುವುದಿಲ್ಲವೆಂದರೆ ಮತ್ತು ಎರಡನೆಯದಾಗಿ, ಅವನಿಗೂ ಸಹ ಒಂದು ಇಂಡಸ್ಟ್ರಿಯನ್ನು ಮಾಡಲಿಕ್ಕೆ ಅವಕಾಶವನ್ನು ಕೊಡಿ. ನೀವು ಅವನಿಗೆ ಸಬ್ಸೀಡಿ ಕೊಡಿ.

ಮಾನ್ಯ ಸಭಾಪತಿಯವರೆ, ಈಗ ಏನು ಉದ್ಯಮಿ ಇಂಡಸ್ಟ್ರಿಯನ್ನು ಮಾಡುತ್ತಾನೆ, ಅವನು 100% ಹಣವನ್ನು ಕೈಗಾರಿಕೆಗೆ ಹಾಕುವುದಿಲ್ಲ. ಅವನು ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಾನೆ, ಅದಕ್ಕೆ ಅವನಿಗೆ ಸರ್ಕಾರದಿಂದ ಸಬ್ಸಿಡಿ ಬರುತ್ತದೆ. ಅದೇ ರೀತಿ ರೈತನಿಗೆ ಸಬ್ಸಿಡಿ ಕೊಡಬೇಕು, 10 ವರ್ಷದವರೆಗೆ ಶೂನ್ಯದರದ ಬಡ್ಡಿಯಲ್ಲಿ ಸಾಲವನ್ನು ಕೊಡಿ. ಅವನು ಸಹ ಒಂದು ಸಣ್ಣ ಉದ್ಯಮ ಮಾಡಿಕೊಂಡು ಬದುಕುವಂತಾಗುತ್ತದೆ. ಇಲ್ಲದಿದ್ದರೆ, ಅವರು ಬೀದಿಗೆ ಬೀಳುವಂತಹದ್ದು ಆಗುತ್ತದೆ. ಇನ್ನೊಂದು 5, 10, 15 ಎಕರೆ ಜಮೀನನ್ನು ನೀವು ಭೂಸ್ವಾಧೀನ ಪಡಿಸಿಕೊಳ್ಳುತ್ತೀರಿ. ಅವನಿಂದ ಜಮೀನನ್ನು ಕಿತ್ತುಕೊಳ್ಳುತ್ತೀರಿ. ಜಮೀನನ್ನು ಕಿತ್ತುಕೊಂಡು ಈ KIADB ನವರು ಅದನ್ನು ಏನೂ ಅಭಿವೃದ್ಧಿ ಮಾಡುವುದಿಲ್ಲ. ಅದನ್ನು ದೊಡ್ಡ ದೊಡ್ಡ ಕಾರ್ಖಾನೆಗೆ ಯಾವ ರೀತಿಯಲ್ಲಿ ಜಮೀನು ಇರುತ್ತದೋ ಅದೇ ರೀತಿಯಲ್ಲಿ 5, 10 ಎಕರೆ ಜಮೀನನ್ನು ಕೊಡುತ್ತಾರೆ. ಹೀಗಾಗಿ, ಜಮೀನು ಕೊಟ್ಟವನಿಗೆ ಏನು ಲಾಭವಿದೆ? ನಾನು ನೋಡಿರುವಂತೆ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಮಾಡುವಾಗ ನೀವು ಏನು ಮಾಡುತ್ತೀರಿ ಎಂದರೆ ರಸ್ತೆ ಮತ್ತು ಕಂಬಗಳನ್ನು ಹಾಕಿ ಕೊಡಬಹುದು ಅಷ್ಟೆ. ಬಾಕಿ ಕೆಲಸವನ್ನು ನೀವು ಮಾಡಿಕೊಡುವುದಿಲ್ಲ. ಎಲ್ಲವನ್ನೂ ಅವರೇ ಮಾಡಿಕೊಡುತ್ತಾರೆ. ಆ ಸಂದರ್ಭದಲ್ಲಿ

ರೈತರನ್ನು ಮತ್ತು ಉದ್ಯಮಿಗಳನ್ನು ಖುದ್ದಾಗಿ ಕೂರಿಸಿಕೊಂಡು ನೀವು ಆ ಜಾಗದ ದರವನ್ನು ನಿಗದಿಪಡಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಈಗ ಒಂದು ಏನು ಅವರಿಗೆ joint venture ಮಾಡಲಿಕ್ಕೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. Joint venture ಗೆ ಅವಕಾಶ ಇರುವುದಿಲ್ಲ. ಆದರೆ, ತಾವು ಕೇಳಿರುವುದರಲ್ಲಿ ಒಂದು ಇದೆ. ಈಗ ಹೇಗೆ 60 x 40 ಉಳಿದ ಡೆವಲಪ್‌ಮೆಂಟ್ ಏರಿಯಾಗಳಲ್ಲಿ ಏನು ಆಗುತ್ತಿದೆ, ಆ ರೀತಿಯಲ್ಲಿ ನಮ್ಮಲ್ಲಿಯೂ ಕೂಡ ರೈತ ನಮಗೆ ಪರಿಹಾರ ಬೇಡ, ನಮಗೆ developed land ನ್ನು ಕೊಡಿ ಎಂದರೆ, ಒಂದು ಎಕರೆಗೆ 10,781 ಚದುರ ಅಡಿ ಅಭಿವೃದ್ಧಿ ಪಡಿಸಿದ ವಿಸ್ತೀರ್ಣವನ್ನು ನಾವು ಅವನಿಗೆ ಇವತ್ತಿನ ದಿವಸ ಕೊಡುತ್ತೇವೆ. ಹೀಗಾಗಿ, ಆ ಪ್ರಾವಿಷನ್ ನಮ್ಮ ಹತ್ತಿರ ಇದೆ. ಆದರೆ, ತಾವು joint venture ಮಾಡುವಂತಹ ಕಾನೂನಿನ ಪ್ರಕಾರ ನಮ್ಮ ಆಕ್ಟ್‌ನಲ್ಲಿ ಅವಕಾಶ ಇರುವುದಿಲ್ಲ. ಜೊತೆಗೆ ಅದು ಅಷ್ಟೊಂದು ಸರಳವು ಕೂಡ ಇರುವುದಿಲ್ಲ. ಏಕೆಂದರೆ, ತಾವು ನೋಡುತ್ತೀರಿ, ಎಷ್ಟೋ ಇಂಡಸ್ಟ್ರಿಗಳವರು ನಾಳೆ joint venture ಮಾಡಿದರೆ ಅವನು ಯಾವ ರೀತಿಯಲ್ಲಿ ನಡೆಸುತ್ತಾನೋ ಅವನು ಏನು ಮಾಡುತ್ತಾನೋ... ಎಲ್ಲಾ ಇಂಡಸ್ಟ್ರಿಗಳು ಬಹಳ ಲಾಭವನ್ನು ತೆಗೆದುಕೊಳ್ಳುತ್ತಿವೆ ಎಂದು ಏನು ಹೇಳುತ್ತಾರೆ, ಈ ವಿಚಾರವಾಗಿ ಹೇಳುವುದಾದರೆ, ನಾವು 100 ಇಂಡಸ್ಟ್ರಿಗಳನ್ನು ನೋಡುತ್ತೇವೆ, 100 ರಲ್ಲಿ 10 ಇಂಡಸ್ಟ್ರಿಗಳು ಯಶಸ್ವಿಯಾಗಿರುತ್ತವೆ. 90% ಇಂಡಸ್ಟ್ರಿಗಳು ಯಶಸ್ವಿಯಾಗಿರುವುದಿಲ್ಲ. ಹೀಗಾಗಿ, ಅಲ್ಲಿ ಇವನು ತೊಂದರೆಗೆ ಒಳಗಾಗಿರುತ್ತಾನೆ. ಹೀಗಾಗಿ, ನಮ್ಮಲ್ಲಿ ಪ್ರಾವಿಷನ್ ಕೊಡುವುದು ಒಂದು ಪರಿಹಾರವನ್ನು ಕೊಡುವುದು, ಎರಡನೆಯದಾಗಿ, ಅಭಿವೃದ್ಧಿ ಪಡಿಸಿದಂತಹ ಭೂಮಿಯನ್ನು ಪ್ರತಿ ಎಕರೆಗೆ 10,781 ಚದುರ ಅಡಿಯನ್ನು ಕೊಡುವಂತಹದ್ದು ಅವಕಾಶ ಇದೆ. ಮತ್ತೆ, ನಾವು ನೇರವಾಗಿ ಅವರಿಗೆ RTGS ಮೂಲಕ ಕೊಡುತ್ತೇವೆ. ಇದಾಗಿಯೂ ಕೂಡ ಇವರು ಯಾರು Power of Attorney ಅನ್ನು ಮಾಡಿಕೊಂಡಿದ್ದಾರೆ, ಅವರು ಅವರಿಗೆ ಹೋಗುತ್ತದೆ. ಅಂದರೆ, ಅದು ರೈತರಿಗೆಯೇ ಹೋಗುತ್ತದೆ. ಆದರೆ, ಅದು ಆದರೂ ಕೂಡ ಇದರ ಬಗ್ಗೆ ಬಹಳಷ್ಟು ಜನರು ದೂರುಗಳನ್ನು ಹೇಳುತ್ತಾರೆ. ಮೊದಲೇ ಖರೀದಿ ಮಾಡಿರುತ್ತಾರೆ,

**ಶ್ರೀಮತಿ ಭಾರತಿ ಶೆಟ್ಟಿ:-** ಬಹಳಷ್ಟು ಜನರಲ್ಲ, ಎಲ್ಲಾ ಜನರು ಹೇಳುತ್ತಾರೆ.

**ಶ್ರೀ ಶಿವಾನಂದ ಎಸ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಇಲ್ಲಿ ನಮಗೆ ಅದ್ಯಾವುದನ್ನು ಕೂಡ ಮಾಡಲಿಕ್ಕೆ ಆಗುವುದಿಲ್ಲ. ನಾವು ರೈತನಿಗೆ ಪರಿಹಾರವನ್ನು ಕೊಡುತ್ತೇವೆ. ಮತ್ತು Power of Attorney ಮತ್ತು ಇನ್ನಿತರದ್ದಕ್ಕೆ ನಾವು ಮಾನ್ಯತೆಯನ್ನು ಕೊಡುವುದಿಲ್ಲ.

(ಮುಂದು)

(903) 17.12.2024 11.10 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ರೈತರಿಗೆ ಅಭಿವೃದ್ಧಿ ಹೊಂದಿರುವ ಭೂಮಿಯಲ್ಲಿ 10781 ಚದರ ಅಡಿಗಳನ್ನು ಕೊಡುತ್ತೇವೆಂದು ಹೇಳಿದರು. ಕೋಲಾರದಲ್ಲಿ ಬೆಲೆ ಜಾಸ್ತಿಯಿರುತ್ತದೆ. ರೈತ ಇದರಲ್ಲಿ ದುಡಿಮೆಯನ್ನು ಮಾಡುವುದಿಲ್ಲ. ಅವನು ಕೃಷಿ ಮಾಡಲಿಕ್ಕಾಗುವುದಿಲ್ಲ. ಅವನು ಮಾರಬೇಕು ಅಥವಾ ಏನಾದರೂ ಮಾಡಬೇಕು. ಮಾರುವಾಗ ಕೋಲಾರದ ರೈತನಿಗೆ ಒಂದು ದರ ಸಿಗುತ್ತಭದೆ. ಬಾಗಲಕೋಟೆ, ವಿಜಯಪುರ ಅಲ್ಲಿ ಒಂದು ದರ ಸಿಗುತ್ತದೆ. ಅನೇಕ ರೈತರು ನನ್ನ ಬಳಿ ಬಂದು ನಮಗೂ ಅವಕಾಶ ಮಾಡಿಕೊಡಿ ಎಂದು ಕೇಳಿದರು. ನಾವು ತುಳಿತಕ್ಕೆ ಒಳಗಾದ ಜನಾಂಗದವರನ್ನು ಮೇಲಕ್ಕೆ ಎತ್ತಿದಂತೆ ರೈತರೂ ಕೂಡ ತುಳಿತಕ್ಕೆ ಒಳಗಾಗಿದ್ದು, ಅವರನ್ನು ಮೇಲೆತ್ತಲಿಕ್ಕೆ ಏಕೆ ನಾವು ಅವರಿಗೆ ಸಬ್ಸಿಡಿ ನೀಡಿ 0% ಬಡ್ಡಿದರದಲ್ಲಿ 10 ವರ್ಷಗಳ ಕಾಲ ಸಾಲ ಸೌಲಭ್ಯವನ್ನು ಕೊಡಬಾರದು? ಒಬ್ಬ ರೈತ ಏಕೆ industrialist ಆಗಬಾರದು? ಅವನು ಪ್ರಯತ್ನ ಪಡಲಿ. ಕೈಯಲ್ಲಿ ಕೊಟ್ಟ ದುಡ್ಡು ಕೂಡ ಖರ್ಚಾಗಿ ತಿನ್ನಲಿಕ್ಕೆ ಇಲ್ಲದೆ ಒದ್ದಾಡುತ್ತಿದ್ದಾರೆ. ಸರ್ಕಾರ ಅವರಿಂದ ಸ್ವಾಧೀನ ಪಡಿಸಿಕೊಂಡ ಭೂಮಿಗೆ ನೀಡಿದಂಥ ಹಣವು ಖರ್ಚಾಗಿ ಬಡ ರೈತರು ಬೀದಿಗೆ ಬಿದ್ದಿದ್ದಾರೆ. ಆದ್ದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ವಿಜಯಪುರಕ್ಕೆ ಒಂದು ದರ, ಮಂಗಳೂರಿಗೆ ಒಂದು ದರ ಎಂದು ಹೇಳುತ್ತಿದ್ದರು. ಅಲ್ಲಿನ Guidance Value ಮೇಲೆ ಇರುತ್ತದೆ. ಅಲ್ಲಿನ ದರ ಇಲ್ಲಿಗೆ ಕೊಡುವುದಕ್ಕೆ ಆಗುವುದಿಲ್ಲ. Land Acquisition Act, 2013 ಮೇಲೆ Guidance Value ಇದ್ದು, ಅದರ ಪ್ರಕಾರ ಪರಿಹಾರ ಹೋಗುತ್ತದೆ. ನಾವು developed land ಕೊಡುತ್ತೇವೆ. ಕೆಲವು ಕಡೆ ಅದು ಉಪಯೋಗವಾಗದೆ ಇರಬಹುದು. ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಯಾವ ರೀತಿಯಲ್ಲಿ ನಾವು incorporate ಮಾಡಬಹುದು ಎಂದು ನೋಡಬೇಕು. ಏಕೆಂದರೆ ಇದು MSME (Micro, Small and Medium Enterprises) ಗೂ ಬರುತ್ತದೆ. ಅವರು industry set up ಮಾಡಬೇಕಾದರೆ small scale industry, medium scale industry ಮಾಡಿಕೊಳ್ಳುತ್ತಾರೆ. ಹಾಗೆ ಭೂಮಿ ಕಳೆದುಕೊಂಡವರಿಗೆ ನಾವೇನಾದರೂ ಮಾಡಲಿಕ್ಕೆ ಸಾಧ್ಯವೆ ಎಂಬುದನ್ನು ಗಂಭೀರವಾಗಿ ನಾನು ಪರಿಶೀಲನೆ ಮಾಡುತ್ತೇನೆ. ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರಿಂದ ಸ್ವಲ್ಪ ಸಮಾಧಾನ ಕೂಡ ಆಗುತ್ತದೆ. ಆ ವಿಚಾರದಲ್ಲಿ ನಿಶ್ಚಿತವಾಗಿ ನಾನು ಕ್ರಮ ಕೈಗೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ ೨೩೮**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರದ ಆಡಳಿತ ಭಾಷೆ ಕನ್ನಡ. ಕನ್ನಡ ಭಾಷೆಯಲ್ಲಿ ಎಲ್ಲರಿಗೂ ಆದ್ಯತೆಯನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ. ಆದರೆ ಮಾನ್ಯ ಸಚಿವರಷ್ಟು ನಾನು ಇಂಗ್ಲಿಷ್ ಓದಿಲ್ಲ. ಇಂಗ್ಲಿಷ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ.. ಏತಕ್ಕೆ ಹೀಗೆ ಮಾಡಿದ್ದೀರಿ. ನಿಮ್ಮ ಅಧಿಕಾರಿಗಳಿಗೆ ಕನ್ನಡ ಬರುವುದಿಲ್ಲವೆ? ಎರಡನೆಯ ಉತ್ತರದಲ್ಲಿ ಕೇವಲ ಇಂಗ್ಲಿಷ್ ಮಾತ್ರ ಇದೆ. ಮಾನ್ಯ ಸಚಿವರಷ್ಟು ನಾನು ಇಂಗ್ಲಿಷ್ ಓದಿಲ್ಲ. ಅದಕ್ಕೆ ಮಾನ್ಯ ಸಚಿವರು ಅದೇನು ಉತ್ತರ ಕೊಡುತ್ತಾರೆಯೋ ಕೊಡಲಿ.

ಮಾನ್ಯ ಸಭಾಪತಿಯವರೆ, ಇವತ್ತು ನಾನು ಕೇಳಿರುವ ಪ್ರಶ್ನೆಯಲ್ಲಿ KTCP (Karnataka Town and Country Planning) ಕಾಯಿದೆಯಡಿಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಬರುವ ಅಭ್ಯರ್ಥಿಗಳ ಅನುಮೋದನೆಯನ್ನು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅದು ಯಾವ ಥರ ಮಾಡಬೇಕೆಂದು ಸರ್ಕಾರ ಒಂದು notification ತಂದಿದೆ. 2021ರಲ್ಲಿ notification ಅನ್ನು ತಂದಿದ್ದಾರೆ. ಅದನ್ನು ತಂದು ಮೂರು ವರ್ಷಗಳಾಗಿದೆ. ಅದಕ್ಕೆ ಇನ್ನೂ rules frame ಮಾಡದೆ ಅಧಿಕಾರಿಗಳು ಮನಸ್ಸು ಬಂದಂತೆ local body ಗಳಲ್ಲಿ, town planning ನಲ್ಲಿ ಅವರ ಇಚ್ಛಾನುಸಾರ ಒಂದು ದಂಧೆ ಮಾಡುವುದಕ್ಕೆ ಸರ್ಕಾರ ಅನುವು ಮಾಡಿಕೊಟ್ಟಿದೆ. ನಾನು ಕೇಳಿರುವ ಪ್ರಶ್ನೆಗೆ ಉತ್ತರದಲ್ಲಿ rules frame ಮಾಡಲಿಕ್ಕೆ ಆರ್ಥಿಕ ಇಲಾಖೆಯ ಅಭಿಪ್ರಾಯ ಬೇಕೆಂದು ಹೇಳುತ್ತಾರೆ. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಿಶೋಧನೆ ಮಾಡಬೇಕೆಂದು ಹೇಳುತ್ತಾರೆ. ಈ ನೋಟಿಫಿಕೇಷನ್ ಆಗಿ ಮೂರು ವರ್ಷಗಳಾಗಿವೆ. Rules frame ಮಾಡಲಿಕ್ಕೆ ಈ ರೀತಿಯ ನೆಪಗಳನ್ನು ಮಾಡಿ ಅಧಿಕಾರಿಗಳು ಹೇಗೆಂದರೆ ಹಾಗೆ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರು ಸಣ್ಣದೊಂದು plan sanction ಗಾಗಿ ಎಷ್ಟು ಪರದಾಡುವಂತಹ ಪರಿಸ್ಥಿತಿ ಇದೆ. ಸಣ್ಣದಾಗಿ 20x30 ನಿವೇಶನದಲ್ಲಿ ಮನೆಯನ್ನು ಕಟ್ಟಬೇಕಾದರೆ ಅಧಿಕಾರಿಗಳು ಎಷ್ಟು ತೊಂದರೆಯನ್ನು ಕೊಡುತ್ತಾರೆ ಎಂಬುದು ತಮಗೆ ತಿಳಿದಿದೆಯೇ? ಅವರಿಗೆ ಬಿಸಿ ಮುಟ್ಟಿಸುವವರೆವಿಗೂ ಏನೂ ಕೆಲಸವಾಗುವುದಿಲ್ಲ. ಸಚಿವರು ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಟ್ಟಂತಾಗಿದೆ. ನೀವು ಬಂದು ಒಂದೂವರೆ ವರ್ಷವಾಗಿದ್ದರೂ ಏಕೆ ನೀವು ಮಾಡಿಲ್ಲ? ನೋಟಿಫಿಕೇಷನ್ ಆಗಿರುವುದು ನಿಮ್ಮ ಗಮನಕ್ಕೂ ಬಂದಿದೆ ಎಂದು ಹೇಳಿದ್ದೀರಿ. ಹಾಗಾದರೆ rules frame ಮಾಡಲಿಕ್ಕೆ ನಿಮಗೇನು ಕಷ್ಟ? ಏಕೆ ಮಾಡುತ್ತಿಲ್ಲ? ಆ ಇಲಾಖೆ, ಈ ಇಲಾಖೆ ಎಂದು ಸುಮ್ಮನೆ ನೆಪವೊಡ್ಡುತ್ತಿದ್ದೀರಿ. ನಿಮಗೆ ಅಧಿಕಾರದ ಪರಮಾವಧಿ ಇದೆ. ಕೂಡಲೇ rules frame ಮಾಡಿ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಕೆಲಸ ಮಾಡಬೇಕು. ಅದಕ್ಕೆ ಒಂದು time bound ಅನ್ನು ಹಾಕಿ ಈ ಸದನದಲ್ಲಿ ನನಗೆ ಉತ್ತರವನ್ನು ಕೊಡಬೇಕೆಂದು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, time bound ಹಾಕಿ ಉತ್ತರ ಕೊಡಿ.

**ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೆ, 2021ರಲ್ಲಿ KTCP Act ಗೆ amendment ಅನ್ನು ತರಲಾಗಿದೆ. ಹೊಸ ಕಲಂಗಳನ್ನು ಅದಕ್ಕೆ ಸೇರಿಸಿದ್ದೇವೆ. ಹೊಸ rules and regulations ಮಾಡಿದ್ದೇವೆ. I will read Section 4-K of the Act which is as follows:-

"**4-K Development of land in an area other than the local planning area.**

(1) Any person intending to carry out development on any land in an area other than the local planning area as notified under Section 4-A, shall make an application in writing to the local authority for permission in such form and containing such particulars and with such documents as may be specified in the regulations."

ಯಾರಿಗೆ plan ನ ಅವಶ್ಯಕತೆ ಇದೆಯೋ ಅವರು form ಅನ್ನು ಭರ್ತಿ ಮಾಡಿ local authorities ಗೆ ಕೊಡುವುದು ಈಗ ನಡೆಯುತ್ತಿದೆ. ಈಗಾಗಲೇ ಸಹಾಯಕ ನಿರ್ದೇಶಕರು plan sanction ಕೊಡುತ್ತಿದ್ದಾರೆ. ಅದರಲ್ಲಿ ಏನು ತೊಡಕಿಲ್ಲ. Plan sanction ಕೊಡುತ್ತಿದ್ದಾರೆ. Rules frame ಮಾಡಲಿಕ್ಕೆ ಹೊಸ KTCP Act ಗೆ amendment ತಂದಿರುವುದರಿಂದ ಕರಡು ನಿಯಮಾವಳಿಗಳನ್ನು ಈಗಾಗಲೇ ರೂಪಿಸಿದ್ದೇವೆ. ಅದಕ್ಕೆ permanent rules ಮಾಡಬೇಕೆಂದು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಕಾನೂನು ಇಲಾಖೆಗೂ ಕಳುಹಿಸಿದ್ದೇವೆ. ಎಲ್ಲಾ finalize ಆಗುತ್ತಿದ್ದು, ಇನ್ನೊಂದು ತಿಂಗಳೊಳಗಾಗಿ final rules ಅನ್ನು amendment ಮಾಡಿ, ಅವರ ಅಭಿಪ್ರಾಯವನ್ನು ಪಡೆದು ಇದರ ಅಂತಿಮ ಅಧಿಸೂಚನೆಯನ್ನು ಹೊರಡಿಸುತ್ತೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರೆ, ಕಾನೂನು ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಳ್ಳಲು ಎಷ್ಟು ವರ್ಷ ಬೇಕು? ನೀವು ಉತ್ತರದಲ್ಲಿ ಇಂಗ್ಲಿಷ್‌ನಲ್ಲಿರುವುದನ್ನು ಓದುತ್ತಿದ್ದೀರಿ. ಅದು ನನಗೆ ಬೇಕಿಲ್ಲ. ನಿಮ್ಮ ಸಮಯವನ್ನು ವ್ಯರ್ಥ ಮಾಡಲು ನಾನು ಇಷ್ಟ ಪಡುವುದಿಲ್ಲ. ನನ್ನ ನೇರ ಪ್ರಶ್ನೆಯೆಂದರೆ ADTP [Additional Director (Town Planning)] ಗಳು ಎಲ್ಲೆಲ್ಲಿ ಇರುತ್ತಾರೆಯೋ ಅವರು ಒಬ್ಬೊಬ್ಬರು ಒಂದೊಂದು ಕಾನೂನನ್ನು ತರುತ್ತಾರೆ. ಪಬ್ಲಿಕ್ ಅನ್ನು ಮನಬಂದಂತೆ ತಿರುಗಿಸುತ್ತಾರೆ. ಈ ರೀತಿ ನನಗೆ ತುಂಬಾ ದೂರುಗಳು ಬಂದಿವೆ. ಅದಕ್ಕಾಗಿ ನಾನು ಈ ಪ್ರಶ್ನೆ ಕೇಳಿದ್ದೇನೆ. ಎಷ್ಟು ದಿನದ ಒಳಗೆ rules frame ಆಗುತ್ತದೆ. ಇದು ಆನ್‌ಲೈನ್ ಆಗಬೇಕು. ಏಕೆಂದರೆ ಬೆಂಗಳೂರು ನಗರದಲ್ಲಿ ಇವತ್ತು ನಾವು ನೋಡುತ್ತಿದ್ದೇವೆ. Plan sanction ಅನ್ನು ಆನ್‌ಲೈನ್ ಮಾಡಿ successful ಆಗಿ ನಡೆಯುತ್ತಿದೆ.

(ಮುಂದು)

**ಶ್ರೀ ಟಿ.ಎ.ಶರವಣ (ಮುಂದು):-**

ಅದೇರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಸಹ Town Planning ಅನ್ನು Online ಮಾಡಿ. ಯಾರು ಎಲ್ಲಿಗೂ ಹೋಗುವುದು ಬೇಡ. ಅಧಿಕಾರಿಗಳಿಗೆ ಕೈ ಬಿಸಿ ಮಾಡುವುದು ಬೇಡ. Online ನಲ್ಲಿ Public Notification ಏನು ಮಾಡಲಾಗಿದೆ, ಅದೇರೀತಿಯಲ್ಲಿ rules ಅನ್ನು frame ಮಾಡಬೇಕು. ಕಾನೂನು ಇಲಾಖೆಯ ಸಲಹೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದು ಈಗಾಗಲೇ ವಿಳಂಬವಾಗಿದೆ. ಇದನ್ನು ಹೀಗೆ ಇನ್ನು ಎಷ್ಟು ದಿವಸ ಮುಂದುವರೆಸುತ್ತಾರೆ? ಅದಕ್ಕೆ ಮಾನ್ಯ ಸಚಿವರು ಇದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೇವೆಂದು ಒಂದು time bound ಅನ್ನು ಹೇಳಬೇಕು. ಮಾನ್ಯ ಸಚಿವರು ಈಗ ನನಗೆ ಭರವಸೆಯನ್ನು ಕೊಡಬೇಕು. ಮಾನ್ಯ ಸಚಿವರು ಇಷ್ಟು ದಿವಸಗಳ ಒಳಗೆ ಇದನ್ನು ಜಾರಿಗೆ ತರುತ್ತೇವೆ ಎಂದು ಹೇಳಬೇಕು. Town Planning ಅನ್ನು Online upload ಮಾಡುವುದಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೇವೆಂದು ಒಂದು ಭರವಸೆಯನ್ನು ಮಾನ್ಯ ಸಚಿವರು ನೀಡಬೇಕು.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ನಾವು ಈಗ ಹೊಸ rules ಅನ್ನು frame ಮಾಡಿದ್ದೇವೆ. Civic Amenities ಗೆ, Parks ಗೆ Civic Amenity Sites ಗೆ ಎಲ್ಲದಕ್ಕೂ ಜಾಗವನ್ನು ಬಿಡಬೇಕಾಗುತ್ತದೆ. ಇದನ್ನು earmark ಮಾಡುವುದಕ್ಕೆ ಸ್ವಲ್ಪ ಟೈಮ್ ತೆಗೆದುಕೊಳ್ಳುತ್ತದೆ. ಮಾನ್ಯ ಸದಸ್ಯರು ಹೇಳಿರುವುದು ಸತ್ಯ ಇದೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಕೇಳಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಟಿ.ಎ.ಶರವಣರವರೇ, ತಾವು ಸ್ವಲ್ಪ ಸುಮ್ಮನಿರಿ. ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳುವವರೆಗೂ ಮಾನ್ಯ ಸದಸ್ಯರು ಕಾಯಬೇಕು. ಮಾನ್ಯ ಸದಸ್ಯರು ಏಕೋ ಸ್ವಲ್ಪ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಆಕ್ರೋಶ ವ್ಯಕ್ತಪಡಿಸುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಟಿ.ಎ.ಶರವಣರವರೇ, ತಾವು ಸ್ವಲ್ಪ ಸುಮ್ಮನಿರಿ. ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ನಾನು ಆಗಿನಿಂದ ಸಮಧಾನವಾಗಿ ಉತ್ತರ ಹೇಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಇನ್ನ ಮೇಲೆ ಪ್ರಶ್ನೆ ಕೇಳಬಾರದು ಎಂದು decide ಮಾಡಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಟಿ.ಎ.ಶರವಣರವರೇ, ತಾವು ಅದನ್ನು ಆಮೇಲೆ ಮಾಡಿ. ತಾವೀಗ ಮಾನ್ಯ ಸಚಿವರ ಉತ್ತರವನ್ನು ಕೇಳಿ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏಕೆ ಇಷ್ಟು ಕೋಪ ಮಾಡಿಕೊಳ್ಳುತ್ತಾರೆಂದು ಗೊತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಟಿ.ಎ.ಶರವಣರವರು ಹಾಗೆ, ಮಾನ್ಯ ಸಚಿವರೇ, ತಾವು ಮಾತನಾಡಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, last time ಕೈಯಿಂದ ಒಡೆಯುವ ತರಹ ಬಂದರು..,

**(ಗೊಂದಲ)**

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು cool ಆಗಿಬಿಟ್ಟಿದ್ದೇನೆ. ಅವರು ಈಗಲೂ ಸಹ ಅದೇ ಲೈನ್‌ನಲ್ಲಿದ್ದಾರೆ. ಈಗ ನಾನು cool ಆಗಿದ್ದೇನೆ. ಮಾನ್ಯ ಸದಸ್ಯರು rise ಆಗಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಆಯಿತು ಬಿಡಿ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ನಾವಿಬ್ಬರೂ ಸಹ 2012 ರಲ್ಲಿ ಈ ಸದನದಕ್ಕೆ ಜೊತೆಯಲ್ಲಿ ಬಂದೇವು. ಅದಕ್ಕೆ ಸ್ವಲ್ಪ love and war ಇದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಮ್ಮ ಮತ್ತು ಮಾನ್ಯ ಸದಸ್ಯರ ವಿಷಯ ನನಗೆ ಗೊತ್ತಿದಷ್ಟು ಬೇರೆಯವರಿಗೆ ಗೊತ್ತಿಲ್ಲ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ನಾನು conclude ಮಾಡುತ್ತಿದ್ದೇನೆ. ಇನ್ನು ಒಂದು ತಿಂಗಳಲ್ಲಿ rules ಅನ್ನು frame ಮಾಡಿಕೊಡುತ್ತೇನೆ. We will do it within a month.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು within a month ಎಂದು ಹೇಳಿದ್ದಾರೆ. ಮಾನ್ಯ ಸಚಿವರು ದಯಮಾಡಿ ಅದನ್ನು ಅನುಷ್ಠಾನಕ್ಕೆ ತರಲಿ ಎಂದು ಮತ್ತೊಮ್ಮೆ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಆಯಿತು.

**ಪ್ರಶ್ನೆ ಸಂಖ್ಯೆ: 987**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನ ಸಿದ್ದಿರವರೇ., ತಮ್ಮ ಪ್ರಶ್ನೆ ಸಂಖ್ಯೆ 987 ಅನ್ನು ಅರಣ್ಯ ಇಲಾಖೆಗೆ transfer ಆಗಿದೆ.

**ಪ್ರಶ್ನೆ ಸಂಖ್ಯೆ 936**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಚಿವರಿಂದ ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರ ಬಂದಿಲ್ಲ. ನಾನು ಮಾನ್ಯ ಸಚಿವರಿಗೆ e-khatha, A-Khatha, B-Khatha, ಇ-ಸ್ವತ್ತು ಈ ವಿಚಾರಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಕೇಳಿದ್ದೆ. ಸರ್ಕಾರ ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು digitalization ಮಾಡಬೇಕೆಂದು ಹೊರಡಿಸಿರುವಂತಹ ಒಂದು ಕಾನೂನು, ನಿಯಮ, ಇವತ್ತು ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಸಾಕಷ್ಟು ಗೊಂದಲಗಳನ್ನು ಸೃಷ್ಟಿ ಮಾಡಿದೆ. e-khatha ಅಥವಾ ಇ-ಸ್ವತ್ತು ಮಾಡಿಸಲು ಜನರು ನಿರಂತರವಾಗಿ ನಗರಸಭೆ ಕಛೇರಿಗಳಿಗೆ ಮತ್ತು ಪುರಸಭೆ ಕಛೇರಿಗಳಿಗೆ ಅಲೆಯುವಂತಹದ್ದು ಆಗಿದೆ. ನಗರಸಭೆಗಳಲ್ಲಿ ಯಾವ ಒಂದು ನೀತಿ ನಿಯಮಗಳನ್ನು ಸಹ ಪಾಲನೆ ಮಾಡುತ್ತಿಲ್ಲ. ಇತ್ತೀಚೆಗೆ 'ವಿಜಯವಾಣಿ' ದಿನಪತ್ರಿಕೆಯಲ್ಲಿ ಈ ಬಗ್ಗೆ ಒಂದು ಸಂಪೂರ್ಣವಾದ ವರದಿ ಪ್ರಕಟಣೆಗೊಂಡಿದ್ದು, ಅದು ಈ ರೀತಿ ಇದೆ. ಸ್ಥಿರಾಸ್ತಿ ದಸ್ತಾವೇಜಿನ ನೋಂದಣಿ ಸ್ಥಗಿತ, ಬಿಡಿಎ ಸೈಟಿಗೂ ಕಂಟಕ, ಇ-ಖಾತಾ ಇಲ್ಲದೇ ಪರದಾಟ ಎಂದು ಬಂದಿರುತ್ತದೆ. ಇ-ಖಾತಾ ಆಗದೇ ಯಾವುದೇ ಒಂದು ಸೈಟ್‌ನ್ನು ಸಹ ನೋಂದಣಿ ಮಾಡುವುದಕ್ಕೆ ಆಗುತ್ತಿಲ್ಲ. ಯಾವುದೇ ಒಂದು ನಿವೇಶನ ಇರಬಹುದು ಅಥವಾ ಜಮೀನುಗಳನ್ನು ಸಹ ಮಾಡುವುದಕ್ಕೆ ಆಗುತ್ತಿಲ್ಲ. ಬೆಂಗಳೂರಿನಲ್ಲಿ A-Khatha ಮತ್ತು B-Khatha ಎನ್ನುವ ಎರಡು ಪದ್ಧತಿಗಳು ಇವೆ. ಇದನ್ನು ಗ್ರಾಮಾಂತರ ಪ್ರದೇಶಕ್ಕೆ ಹಾಗೂ ನಗರಸಭೆ, ಪುರಸಭೆ ವ್ಯಾಪ್ತಿಗೂ ವಿಸ್ತರಣೆ ಮಾಡುತ್ತಾರೆಯೇ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರಿಂದ ಸಮರ್ಪಕವಾದ ಉತ್ತರ ಬಂದಿಲ್ಲ.

ಮಾನ್ಯ ಸಭಾಪತಿಯವರೇ, ಇವತ್ತು ಕನಿಷ್ಟ ಎಂದರೆ, ಸುಮಾರು 15,000 ದಿಂದ 20,000 ರೂಪಾಯಿಗಳು, 30,000 ರೂಪಾಯಿಗಳು, 40,000 ರೂಪಾಯಿಗಳು ಒಂದು ಇ-ಖಾತೆ ಮಾಡುವುದಕ್ಕೆ ನಗರಸಭೆಯಲ್ಲಿ ಲಂಚ ತೆಗೆದುಕೊಳ್ಳುವಂತಹ ಒಂದು ಲಂಚವಾತಾರ ನಡೆಯುತ್ತಿದೆ. ನಾನು ಕಳೆದ ಅಧಿವೇಶನದಲ್ಲಿಯೂ ಸಹ ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಶಿರಾ ನಗರಸಭೆಯಲ್ಲಿ ಒಂದು ದೊಡ್ಡ ಅವ್ಯವಹಾರಗಳು ನಡೆಯುತ್ತಿವೆ .ತಾವು ಬಂದು ಅಲ್ಲಿ ಒಂದು ಸಭೆಯನ್ನು ಮಾಡಿ ಎಂದು ಕೇಳಿದಾಗ, ಮಾನ್ಯ ಸಚಿವರು ನಾನು ಅಲ್ಲಿಗೆ ಬಂದು ಕೂಲಂಕುಷವಾಗಿ ಪರಿಶೀಲನೆ ಮಾಡುತ್ತೇನೆಂಬ ಮಾತನ್ನು ಕೊಟ್ಟಿದ್ದರು. ಆದರೆ, ಇಲ್ಲಿಯವರೆಗೂ ಆ ಕೆಲಸ ಆಗಿಲ್ಲ. ಅದರ ಜೊತೆಗೆ ಎಷ್ಟು ರಾಜಾರೋಷವಾಗಿ ಎಂದರೆ, ಸುಮಾರು 15 ರಿಂದ 20 ಸಾವಿರ ರೂಪಾಯಿಗಳನ್ನು ಕೊಡದೇ ಅವರು ಇ-ಖಾತೆ ಮಾಡುವುದಕ್ಕೆ chance ಇಲ್ಲ. ಹಾಗಾಗಿ, ಮಾನ್ಯ ಸಚಿವರು ಇದಕ್ಕೆ ಸಮಜಾಯಿಸಿಯನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, Form No.3, e-Khatha ಬಗ್ಗೆ ಸರ್ಕಾರರಿಂದ clear cut ಆದೇಶ ಇದೆ. ಅದು 7 ದಿವಸಗಳಲ್ಲಿ clearance ಆಗಬೇಕು. Bill

Collector ರವರಿಗೆ, Revenue Officer ರವರಿಗೆ ಮತ್ತು Junior Engineer ರವರಿಗೆ ಎರಡು ದಿವಸ ಟೈಮ್ ಕೊಟ್ಟಿದ್ದಾರೆ. ಕೊನೆಗೆ ಒಂದು ದಿವಸ ನಮ್ಮ Commissioner ರವರಿಗಾಗಲಿ ಅಥವಾ Chief Officer ರವರಿಗೆ ಟೈಮ್ ಕೊಟ್ಟಿದ್ದಾರೆ. ಆದರೂ ಸಹ ನಮ್ಮ ಮಾಹಿತಿ ಪ್ರಕಾರ ಸುಮಾರು ಸೈಟುಗಳು without approval, non-agricultural ಆಗಲಿ, ಮತ್ತೆ ಯಾವುದೇ Planning Authority ಯಿಂದ ಅದು clearance ಇಲ್ಲ. ಅದರ ಸಲುವಾಗಿ Form No.3 ಗೆ delay ಆಗಿದೆ. ಮಾನ್ಯ ಸದಸ್ಯರು ಶಿರಾ ನಗರಸಭೆ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ನಾನು ಅದರ ಬಗ್ಗೆ immediate action ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಎರಡನೆಯದಾಗಿ, BBMP Model ತರಹ ಇಡೀ Karnataka State ಗೆ A-Khatha and B-Khatha ಅದರ ಬಗ್ಗೆ ಸರ್ಕಾರದ ಗಮನಕ್ಕೆ ಇದೆಯೇ ಎಂಬುದಾಗಿ ಕೇಳಿದ್ದಾರೆ. ಇದು ಈಗಾಗಲೇ already process ನಲ್ಲಿ 90% complete ಆಗಿದೆ. ಅದು Assembly ನಲ್ಲಿ pass ಆಗಿದೆ. Gazette ಆಗಿದೆ. ಈಗ within one month ನಲ್ಲಿ objection call for ಮಾಡಿ, A-Khatha and B-Khatha ದಿಂದ ನಮ್ಮ ರಾಜ್ಯಕ್ಕೆ ಬಹಳ ಅನುಕೂಲವಾಗುತ್ತದೆ. ಅದನ್ನು ನಾನು ಒಂದು ತಿಂಗಳ ಒಳಗೆ 100% ಮಾಡುತೇನೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು 'ವಿಜಯವಾಣಿ' ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡಿದ್ದೆ. ಅದಾದ ನಂತರ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುತ್ತದೆ. ಅದು ಈ ರೀತಿ ಇದೆ. ರಾಜ್ಯದಲ್ಲಿ ಎಲ್ಲಡೆ ಸಮಸ್ಯೆ. ಮೈಸೂರು, ಹುಬ್ಬಳ್ಳಿ, ಕಲ್ಬುರ್ಗಿ, ದಾವಣಗೆರೆ ಮತ್ತು ಮಂಗಳೂರಿನಲ್ಲಿ ಇ-ಖಾತೆ ಸಮಸ್ಯೆ, ರಾಜಧಾನಿ ಬೆಂಗಳೂರಿನಲ್ಲಿ ಅಷ್ಟೇ ಅಲ್ಲ. ಮೈಸೂರು, ಹುಬ್ಬಳ್ಳಿ, ಧಾರವಾಡ ಮತ್ತು ಮಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇದೆ. ಗ್ರಾಮೀಣಾ ಭಾಗದಲ್ಲಿ ಜನರು ಇ-ಸ್ವಂತು ಮಾಡಿಸಲು ಜನರು ಪರದಾಡುತ್ತಿದ್ದಾರೆ. ಇದರಿಂದಾಗಿ ಆಸ್ತಿಗಳ ಖರೀದಿ ಮಾರಾಟ ಮತ್ತು ನೋಂದಣಿ ಆಗುತ್ತಿಲ್ಲ. ಆಸ್ತಿಗಳ ಮಾಲೀಕರು ಕಛೇರಿಗೆ ಅಲೆದಾಡುತ್ತಿದ್ದಾರೆ. ಮಾಲೀಕರ ಬಳಿ ಅಗತ್ಯವಾಗಿ ಬೇಕಾಗಿರುವಂತಹ ದಾಖಲೆಗಳು ಇಲ್ಲದಿರುವುದು ಒಂದು ಸಮಸ್ಯೆಯಾದರೆ, Server and Internet ಸಮಸ್ಯೆ ಬಾಧಿಸುತ್ತಿದೆ. ಇ-ಖಾತೆ ಮಾಡಿಸಿಕೊಡಲು ಮಧ್ಯವರ್ತಿಗಳು ಹುಟ್ಟಿಕೊಂಡಿದ್ದಾರೆ. ಅಧಿಕಾರಿಗಳು ಸಹ ನಿವೇಶನದ ಅಳತೆಗೆ ತಕ್ಕಂತೆ 15 ಸಾವಿರ ರೂಪಾಯಿಗಳಿಂದ ದಿಂದ 30 ಸಾವಿರ ರೂಪಾಯಿಗಳ ಲಂಚಕ್ಕೆ ಬೇಡಿಕೆ. ನಾನು ಇದನ್ನು ಹೇಳುತ್ತಿಲ್ಲ. ಇದು 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುತ್ತದೆ. ಹಾಗಾಗಿ, ಇದು ಯಾರೋ ಒಬ್ಬರ ಪ್ರತಿಷ್ಠೆ ಪ್ರಶ್ನೆ ಆಗುವುದಿಲ್ಲ. ಇದನ್ನು ಅಧಿಕಾರಿಗಳು misuse ಮಾಡಿಕೊಳ್ಳುತ್ತಿದ್ದಾರೆ. ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು digitalization ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಆದರೆ, ಇವತ್ತು ಇದರ ಒಂದು advantage ಅನ್ನು ತೆಗೆದುಕೊಂಡು ಅನವಶ್ಯಕವಾಗಿ harassment ಆಗುತ್ತಿದೆ. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ. ಇ-ಖಾತೆ ಮಾಡಲು 7 ದಿವಸಗಳ ಕಾಲವಕಾಶವನ್ನು ಸರ್ಕಾರ ನೀಡಿದೆ. ಸರ್ಕಾರ ನಿಯಮವನ್ನು ರೂಪಿಸಿದೆ. ಆದರೆ, ಅಧಿಕಾರಿಗಳಿಗೆ ಬೇರೆ ಬೇರೆ ದಾರಿಗಳು ಇರುತ್ತವೆ. ಅಧಿಕಾರಿಗಳು ಅವರ ಒಂದು ವಾಮಮಾರ್ಗದ ಮುಖಾಂತರ ಅವರಿಗೆ ಯಾವ ರೀತಿ ಬೇಕೋ ಆ ರೀತಿ ಬೆಳೆಸಿಕೊಳ್ಳುತ್ತಾರೆ. ಆದರೆ, ಸುಮಾರು

15,000 ದಿಂದ 30,000 ರೂಪಾಯಿಗಳಲ್ಲಿ ಒಂದೇ ದಿವಸಕ್ಕೆ ಇ-ಖಾತೆಯನ್ನು ಮಾಡಿಕೊಡುತ್ತಾರೆ. ಯಾರೋ ಒಬ್ಬರು ಯಾವುದಕ್ಕೂ ಬೇಕಾದರೂ ನಗರಸಭೆಯಲ್ಲಿ ಇ-ಖಾತೆಯನ್ನು ಮಾಡಿಕೊಡುತ್ತಾರೆಂದು ಹೇಳುತ್ತಿದ್ದರು. ಅದು ಯಾವುದಕ್ಕಾದರೂ ಬೇಕಾದರೂ ಆಗುತ್ತದೆ ಎಂದು ಹೇಳುತ್ತಿದ್ದರು. ಈ ರೀತಿಯ ಒಂದು ಅವಕಾಶಗಳ ಸರ್ಕಾರ ಮಾಡುತ್ತಿರುವಂತಹ ಸದ್ದುದೇಶದ ನಿಯಮಗಳು ದುರ್ಬಳಕೆಯಾಗುತ್ತಿವೆ. ನಾನು ಶಿರಾ ನಗರಸಭೆ ಬಗ್ಗೆ ಮಾತ್ರ ಹೇಳುತ್ತಿಲ್ಲ. ನಮ್ಮ ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಅದರಲ್ಲೂ ವಿಶೇಷವಾಗಿ ಶಿರಾ ನನ್ನ ಸ್ವಂತ ಊರು ಮತ್ತು ನನ್ನ ಕ್ಷೇತ್ರವಾಗಿರುವುದರಿಂದ ಅದರ ಕಡೆಗೆ ಗಮನವನ್ನು ನೀಡಿ ಹೇಳುತ್ತಿದ್ದೇನೆ. ದಯಮಾಡಿ, ಮಾನ್ಯ ಸಚಿವರು ನನಗೆ ಒಂದು ಭರವಸೆ ಕೊಡಬೇಕು. ಮಾನ್ಯ ಸಚಿವರು ಶಿರಾಗೆ ಯಾವಾಗ ಭೇಟಿ ಕೊಟ್ಟು ನಗರಸಭೆಯಲ್ಲಿ ಅಧಿಕಾರಿಗಳ ಜೊತೆಗೆ ಸಭೆಯನ್ನು ಮಾಡುತ್ತಾರೆ ಎಂಬುದನ್ನು ಹೇಳಬೇಕು.

ಮಾನ್ಯ ಸಭಾಪತಿಯವರೇ, ನಾನು ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ನಿವೇಶನಗಳ ಅಳತೆ ಮತ್ತು ಗಡಿ ಗುರುತಿಸುವ ಜವಾಬ್ದಾರಿಯನ್ನು ಯಾವ ಅಧಿಕಾರಿಗಳಿಗೆ ನೀಡಲಾಗಿರುತ್ತದೆ. ಅದಕ್ಕೆ ಅನುಸರಿಸುವ ವಿಧಾನ ಯಾವುದು ಎಂಬುದಾಗಿ 4ನೇ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಅಧಿಕಾರಿ ಗಳು ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ನಿವೇಶನಗಳ ಅಳತೆ ಮತ್ತು ಗಡಿ ಗುರುತಿಸುವ ಜವಾಬ್ದಾರಿ ಅನುಮೋದಿತ ನಕ್ಷೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ನಕ್ಷೆಯನ್ನು ಪರಿಶೀಲಿಸಿ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೇ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳುವುದು ಎಂದು ಅಧಿಕಾರಿಗಳು ಬೇಜವಾಬ್ದಾರಿತನದ ಉತ್ತರವನ್ನು ನೀಡಿದ್ದಾರೆ. ಅಧಿಕಾರಿಗಳು ಎಂದರೆ, ಯಾರು? ಅದನ್ನು Revenue Officer ರವರು ಮಾಡುತ್ತಾರೆಯೇ? ಇವತ್ತು ಯಾವುದೇ ಒಂದು ಸೈಟ್‌ಗೂ ಸಹ agricultural land or revenue land ಆದರೆ, Revenue Inspector ರವರು ಇರುತ್ತಾರೆ ಅವರು ಬಂದು ಅಳತೆ ಮಾಡಿಕೊಡುತ್ತಾರೆ. ಆದರೆ, ನಿವೇಶನದ ಅಳತೆ ಬೇರೆ ಇರುತ್ತದೆ. ಆದರೆ, ಅಲ್ಲಿನ ವಸ್ತುಸ್ಥಿತಿ ಬೇರೆ ಇರುತ್ತದೆ. ಹಾಗಾಗಿ, ಬಹಳ ಜ್ವಲಂತವಾದ ಸಮಸ್ಯೆ ಇದೆ. ಮಾನ್ಯ ಸಚಿವರು ಇದಕ್ಕೆ particular ಅಧಿಕಾರಿಗಳು ಯಾರು ಎಂಬ ಮಾಹಿತಿಯನ್ನು ನೀಡಬೇಕು.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶಿರಾ ನಗರಸಭೆಯಲ್ಲಿ ಒಂದು ಸಭೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಈ ಅಧಿವೇಶನ ಮುಗಿದ ಮೇಲೆ ನಾನು ಒಂದು ಸಭೆಯನ್ನು ಮಾಡಿಸುತ್ತೇನೆ. ಆಮೇಲೆ ಮಾನ್ಯ ಸಚಿವರು Plots identification ಅನ್ನು point out ಯಾರು ಮಾಡುತ್ತಾರೆ ಎಂಬ ವಿಷಯವನ್ನು ಕೇಳಿದ್ದಾರೆ. ಏಕೆಂದರೆ, through District Commissioner and Planning Department ನಿಂದ confirm ಆಗಿ ನಮ್ಮ ಇಲಾಖೆಗೆ ಬರುತ್ತದೆ.

(ಮುಂದು)

(905) 17.12.2024 11.30 ಎಂವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ರಹೀಂ ಖಾನ್ (ಮುಂದು):-

ಅಲ್ಲಿ ನಮ್ಮ Commissioner ಆಗಲಿ, Revenue Officer ಆಗಲಿ...

**(ಗೊಂದಲ)**

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, revenue site ಮತ್ತು ಗ್ರಾಮಠಾಣಾ ಸೈಟ್‌ಗಳಿಗೆ ಯಾವುದೇ ಪ್ಲ್ಯಾನ್ ಅಪ್ರೂವಲ್ ಆಗಿರುವುದಿಲ್ಲ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಅದು ಆಗಬೇಕು. ಯಾವುದೂ without plan ಆಗಿಲ್ಲವೆಂದರೆ...

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಮುಕ್ಕಾಲು ಭಾಗ revenue site ಗಳಿವೆ. ಈಗ ಬಡವರಿಗೆ ಬಿ.ಬಿ.ಎಂ.ಪಿ.ಯಲ್ಲಿ ಸೈಟ್‌ಗಳನ್ನು ಕೊಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಚಿದಾನಂದ್ ಎಂ. ಗೌಡರವರೆ, ತಾವು ಮೊದಲು ಮಾನ್ಯ ಸಚಿವರು ಹೇಳುವುದನ್ನು ಕೇಳಿ.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಈಗ 'ಎ' ಖಾತಾ ಮತ್ತು 'ಬಿ' ಖಾತಾ ಎಂದು ಏನು ಮಾಡಿದ್ದಾರೆ, ಅದು illegal ಇದೆ. ಅದನ್ನು correct ಮಾಡಬೇಕೆಂದು, ಅದಕ್ಕೆ permission ಕೊಟ್ಟಿದ್ದಾರೆ. ಅದು within one-month ಆದಮೇಲೆ definitely finalize ಆಗುತ್ತದೆ. ಅದರ ಮೇಲೆ ನಾವು final ಮಾಡುತ್ತೇವೆ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ದಯಮಾಡಿ ಮಾನ್ಯ ಸಚಿವರು ಅಧಿಕಾರಗಳ ಜೊತೆಯಲ್ಲಿ ಚರ್ಚೆ ಮಾಡಲಿ. ಈ ರೀತಿಯಲ್ಲಿ ನಿಜವಾದ ಸಮಸ್ಯೆ ಇದೆ. ಅಲ್ಲಿನ ಅಧಿಕಾರಿಗಳಿಗೆ ಮಾಹಿತಿ ಕೊಟ್ಟಿಲ್ಲವೆಂದು ಹೇಳುತ್ತಾರೆ. ಆ ಕಾರಣಕ್ಕಾಗಿ ಪೆಂಡಿಂಗ್ ಇಟ್ಟುಕೊಂಡು, ಅವರು ದುಡ್ಡು ಕೊಟ್ಟಂತಹವರಿಗೆ ಮಾಡಿಕೊಡುತ್ತಿದ್ದಾರೆ. ಅದಕ್ಕೆ ಏನಾದರೂ ಒಂದು ನಿಯಮಾವಳಿಯನ್ನು ರೂಪಿಸಲಿ. ಆ ರೀತಿ ಎಲ್ಲವನ್ನೂ ಕೂಡ one-time ಎನ್ನುವ ರೀತಿಯಲ್ಲಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಲಿ.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಿಳಿಸಿದಂತೆ, ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ಆ ದಿವಸ ಮಾನ್ಯ ಸದಸ್ಯರನ್ನು ಸಹ ಕರೆಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರನ್ನು ಸಹ ಕರೆಯಿಸಿ.

**ಪ್ರಶ್ನೆ ಸಂಖ್ಯೆ.942**

**(ಉತ್ತರ ಲಗತ್ತಿಸಿದೆ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾದ ಉತ್ತರವನ್ನು ನೀಡಿದ್ದಾರೆ. ನಾನು ಏನು ಪ್ರಶ್ನೆ ಕೇಳಿದ್ದೆ ಎಂದರೆ, ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಯುವ ರೈತರಿಗೆ ನೀಡಬೇಕಾದ ಬಾಕಿ ಮೊತ್ತ ಎಷ್ಟು ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಮೂರು ಕಾರ್ಖಾನೆಗಳನ್ನು ಬಿಟ್ಟು, ಬೇರೆ ಯಾವುದೂ ಸಹ ಬಾಕಿ ಇಲ್ಲವೆಂದು ಹೇಳಿದ್ದಾರೆ. ಈ ಹಿಂದೆ ಇದಕ್ಕೆ ಸಂಬಂಧಪಟ್ಟಂತೆ ಬಹಳ ದೊಡ್ಡ strike ಗಳು ಆಗುತ್ತಿದ್ದವು. ಅಂದರೆ, ರೈತರ ಹಣ ಬಾಕಿ ಇದೆ ಎಂದು. ಆದರೆ, ಈಗ ಬಾಕಿ ಇಲ್ಲವೆಂದು ಹೇಳಿರುವಂಥದ್ದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆಮೇಲೆ ಬೇರೆ ಬೇರೆ ಇಳುವರಿಗೆ ತಕ್ಕಂತೆ ಬೇರೆ ಬೇರೆ supportive price ಅನ್ನು ಸರ್ಕಾರ ಕೊಡುತ್ತಿದೆ. ನಾನು ಇದನ್ನು ಕೇವಲ ಮಾಹಿತಿ ಸಲುವಾಗಿ ಹೇಳುತ್ತಿದ್ದೇನೆ. ಇದಕ್ಕಿಂತ ಹೆಚ್ಚಿನ ಬೆಂಬಲ ಬೆಲೆಯನ್ನು ಬೇರೆ ಯಾವುದಾದರೂ ರಾಜ್ಯದಲ್ಲಿ ಕೊಡುತ್ತಿದ್ದರೆ, ಆ ದರವನ್ನು ನಮ್ಮ ರೈತರಿಗೆ ಕೊಡಬಹುದೇ ಎಂಬ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಪ್ರಥಮವಾಗಿ ಮಾನ್ಯ ಸದಸ್ಯರಾದ ಶ್ರೀ ಎನ್. ರವಿಕುಮಾರ್ ರವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಅವರು ಸ್ವಲ್ಪಮಟ್ಟಿಗೆ appreciation ಅನ್ನು ಕೂಡ ಮಾಡಿದ್ದಾರೆ. ಇದು ಅವರಿಗೆಲ್ಲಾ ಗೊತ್ತಿದೆ. ಇವತ್ತು ಕರ್ನಾಟಕ ರಾಜ್ಯ ಸಕ್ಕರೆ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದ್ದೇವೆ. ಅದರಲ್ಲಿ ಮೊದಲನೆಯದು ಉತ್ತರ ಪ್ರದೇಶ ರಾಜ್ಯ, ಎರಡನೆಯದು ಮಹಾರಾಷ್ಟ್ರ ರಾಜ್ಯ, ಮೂರನೆ ಸ್ಥಾನದಲ್ಲಿ ಕರ್ನಾಟಕವಿದೆ. 2019ರಲ್ಲಿ ಹತ್ತೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಕಬ್ಬು ಬೆಳೆಯನ್ನು ಬೆಳೆಯುತ್ತಿದ್ದೆವು. 2020ರಲ್ಲಿ ಅದು ಹದಿಮೂರು ಸಾವಿರ ಕೋಟಿ ರೂಪಾಯಿಗಳನ್ನು ದಾಟುತ್ತದೆ. 2022ರಲ್ಲಿ ಹತ್ತೊಂಬತ್ತು ಸಾವಿರ ಕೋಟಿ ರೂಪಾಯಿಗಳನ್ನು ದಾಟುತ್ತದೆ. 2023-24ರಲ್ಲಿ ಹತ್ತೊಂಬತ್ತು ಸಾವಿರದಿಂದ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಿಗೆ ತಲುಪಿದ್ದೇವೆ. ವಿಶೇಷವಾಗಿ ಕಬ್ಬು ಉತ್ಪಾದನೆ ಮಾಡುವಂತಹ ಕ್ಷೇತ್ರ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಒಂದು ಕಾಲದಲ್ಲಿ ಕೇವಲ ಅರವತ್ತು ಕಾರ್ಖಾನೆಗಳಿದ್ದವು. ಆದರೆ, ಇವತ್ತಿನ ದಿವಸ ಹೆಚ್ಚು ಕಡಿಮೆ ಎಂಬತ್ತು ಕಾರ್ಖಾನೆಗಳಿವೆ. ಆಗಲೇ ಮಾನ್ಯ ಸದಸ್ಯರಾದ ಶ್ರೀ ಕೆ.ವಿವೇಕಾನಂದರವರು ಕೇಳಿದ್ದರು. ನಮ್ಮಲ್ಲಿ ಒಂದು ಆಶ್ಚರ್ಯದ ಘಟನೆ ಇದೆ. ಅದು ಏನೆಂದರೆ, ಬೆಳಗಾವಿ ಜಿಲ್ಲೆಯಲ್ಲಿ ಸೋಮೇಶ್ವರ್ ಶುಗರ್ಸ್ ಎಂದು ಇದೆ. ಆ ಕಾರ್ಖಾನೆಯಲ್ಲಿ ಕೋ-ಜನರೇಶನ್, ಎಥೆನಾಲ್ ಮತ್ತು ಡಿಸ್ಟಿಲರಿ ಉತ್ಪಾದನೆ ಇಲ್ಲ. ಆದರೂ ಕೂಡ ಅವರು ಒಂದು ಟನ್ ಕಬ್ಬಿಗೆ ಸುಮಾರು 3,998/- ರೂಪಾಯಿಗಳನ್ನು ನೀಡಿದ್ದಾರೆ. ಅದಕ್ಕೆ ಕಾರಣ recovery. ಇದು ಸಹಕಾರಿ ಸಕ್ಕರೆ ಕಾರ್ಖಾನೆಯಾಗಿದೆ. ನಾನು private ನವರ ಬಗ್ಗೆ ಹೇಳುತ್ತಿಲ್ಲ. ಈಗ private ನವರು ಬಹಳ ವಿಚಿತ್ರವಿರುತ್ತಾರೆ. ಆದರೆ, ಸಹಕಾರಿ ರಂಗದಲ್ಲಿ ಈ ಕಾರ್ಖಾನೆಗೆ ನಿಜವಾಗಿಯೂ ಕೃತಜ್ಞತೆಯನ್ನು ಸಲ್ಲಿಸಬೇಕು. ಅದು ಕೇವಲ ಎರಡೂವರೆ TCD (Thermal Conductivity Detector) Plant ಮತ್ತೆ ಅದು ಏನೂ ದೊಡ್ಡ ಕಾರ್ಖಾನೆಯಲ್ಲ. ಈ ರೀತಿಯ

ಕಾರ್ಖಾನೆಗಳು ಸಹ ನಮ್ಮಲ್ಲಿ ಇವೆ. ಅದೇ ರೀತಿ ಸಿರಗುಪ್ಪಿ ಶುಗರ್ಸ್ ನಲ್ಲೂ ಕೂಡ ಒಂದು ಟನ್ ಕಬ್ಬಿಗೆ 3,948/- ರೂಪಾಯಿಗಳನ್ನು ನೀಡಿದ್ದಾರೆ. ನಾನು ಇದನ್ನು ಆಗಲೇ ಹೇಳಬೇಕಾಗಿತ್ತು. ಆದರೆ, ಇನ್ನೂ ಎರಡು ಕಾರ್ಖಾನೆಗಳು ಒಂದು ಟನ್ ಕಬ್ಬಿಗೆ 3,900/- ರೂಪಾಯಿಗಿಂತ ಹೆಚ್ಚಿಗೆ ನೀಡಿದ್ದಾರೆ. E.I.D Parry (India) Limited ದವರು Venkateshwara Powers ಎಂದು ಇದೆ. ನಮ್ಮ ರಾಜ್ಯದಲ್ಲಿ ಕಬ್ಬಿಗೆ ಹೆಚ್ಚಿನ ಬೆಲೆ ಕೊಡುವಂತಹವರು ಬರುತ್ತಿಲ್ಲ. ಇನ್ನು ಕೆಲವರು ಅಲ್ಲಿ, ಇಲ್ಲಿ ಯಾರಾದರೂ ಮೋಸ ಮಾಡುತ್ತಿದ್ದರೆ, ಅಂತಹವರನ್ನು ಹಿಡಿಯಬೇಕು ಎನ್ನುವಂತಹ ಪ್ರಯತ್ನವನ್ನು ಸಹ ಪ್ರಾರಂಭ ಮಾಡಿದ್ದೇವೆ. ಈಗಾಗಲೇ Nijalingappa Institute ನಿಂದ watch and ward ಇಡಬೇಕು ಎಂಬ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮತ್ತೊಂದು ಆಶ್ಚರ್ಯದ ಸಂಗತಿ ಏನೆಂದರೆ, ಈಗ 20,000/- ಕೋಟಿ ರೂಪಾಯಿಗಳಲ್ಲಿ ಕೇವಲ 4,500/- ಕೋಟಿ ರೂಪಾಯಿಗಳ ಬಾಕಿ ಮಾತ್ರ ಉಳಿದಿರುವುದು. ಅದೂ 2019ರ ಸಾಲಿನಲ್ಲಿ. ಅದು ನಾನು ಬರುವುದಕ್ಕಿಂತ ಪೂರ್ವದಲ್ಲಿ ಇದ್ದಂಥದ್ದು. ಆ 4,500/- ಕೋಟಿ ರೂಪಾಯಿಗಳನ್ನು ಕೂಡ ತೀವ್ರವಾಗಿ ಕೊಡಿಸುವಂತಹ ಪ್ರಯತ್ನವನ್ನು ಮಾಡಿಸುತ್ತೇವೆ.

**ಪ್ರಶ್ನೆ ಸಂಖ್ಯೆ.೨೨೩**

**(ಉತ್ತರ ಲಗತ್ತಿಸಿದೆ)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಈ ಪ್ರಶ್ನೆಯನ್ನು ಹಿಂದಿನ ಅಧಿವೇಶನದಲ್ಲೂ ಸಹ ಕೇಳಿದ್ದೆ. ನನಗೆ ಇದರಲ್ಲಿ ಒಂದು development ಕಾಣಿಸುತ್ತಿರುವುದು ಏನೆಂದರೆ, ಇಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಯಾವ ರೀತಿ ಕಾಣಿಸುತ್ತಿದೆ ಎಂದರೆ, 2015-16ರಲ್ಲಿ 1,541.54 ಕೋಟಿ ರೂಪಾಯಿ ನಷ್ಟವಾಗುತ್ತಿರುತ್ತದೆ ಎಂದು. ಮತ್ತೆ ಎರಡನೆ ಉತ್ತರದಲ್ಲಿ ಸರ್ಕಾರ ಈ ಕಾರ್ಖಾನೆಯನ್ನು ಪುನರ್ ಪ್ರಾರಂಭಿಸುವ ತೀರ್ಮಾನವನ್ನು ಸದ್ಯಕ್ಕೆ ಸ್ಥಗಿತಗೊಳಿಸಿ, ಖಾಸಗಿಯವರಿಗೆ ಕೊಡುವುದಕ್ಕೆ ಟೆಂಡರ್ ಕರೆಯಬೇಕೆಂದು ಹೇಳಿದ್ದಾರೆ. ನಾನು ಇದರ ಬಗ್ಗೆ ಈ ಹಿಂದೆಯೂ ಸಹ ಹೇಳಿದ್ದೆ. ಅಂದರೆ, ಇದು ಸರ್ಕಾರದಿಂದ ಆಗದೇ ಇದ್ದರೆ, ಖಾಸಗಿಯವರಿಗಾದರೂ ಟೆಂಡರ್ ಮೂಲಕ ಮಾಡಿಕೊಡಿ ಎಂದು. ಆರ್.ಎಫ್.ಕ್ಯೂ. ಅನ್ನು ಏಪ್ರಿಲ್ 2017, ಆಗಸ್ಟ್ 2018 ಹಾಗೂ ಮಾರ್ಚ್ 2019ರಲ್ಲಿ ಮೂರು ಬಾರಿ ಪ್ರಕಟಣೆಯಾದರೂ ಸಹ ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲವೆಂದು ಹೇಳಿದ್ದಾರೆ. ಇದರಲ್ಲಿ ಅಧಿಕಾರಿಗಳ ಸಂಚಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಎಂ.ಪಿ.ಎಂ. ಕಾರ್ಖಾನೆ ಇಡೀ ಏಷಿಯಾ ಖಂಡಕ್ಕೆ ಬಹಳ ಹೆಸರುವಾಸಿಯಾಗಿರುವಂತಹ ಕಾರ್ಖಾನೆ. ಈ ಕಾರ್ಖಾನೆಯ ಪೇಪರ್ ಏನಿತ್ತು, quality of that paper ಇಡೀ ಏಷಿಯಾ ಖಂಡದಲ್ಲಿ Number One ಸ್ಥಾನದಲ್ಲಿತ್ತು. ಆ ಪೇಪರ್ ಅನ್ನು ಎಲ್ಲಾ ಶಾಲಾ-ಕಾಲೇಜುಗಳಿಗೆ ಸರ್ಕಾರ ಖರೀದಿ ಮಾಡುತ್ತಿತ್ತು. ಮತ್ತೆ ಮಾಧ್ಯಮ ಮತ್ತು ಸಣ್ಣ ನ್ಯೂಸ್ ಪ್ರಿಂಟರ್ಸ್‌ಗಳಿಗೆ ಉಚಿತವಾಗಿ ಕೊಡುತ್ತಿದ್ದರು. ಅಲ್ಲಿನ ಪೇಪರ್ ಅನ್ನು ಸರ್ಕಾರ ಕೂಡ ತೆಗೆದುಕೊಳ್ಳುತ್ತಿತ್ತು. ಅಂತಹ ಒಂದು ದೊಡ್ಡ ಮಟ್ಟದಲ್ಲಿ ಹೆಸರುವಾಸಿಯಾಗಿದ್ದಂತಹ ಮತ್ತು ಲಾಭದಲ್ಲಿದ್ದಂತಹ ಎಂ.ಪಿ.ಎಂ. ಕಾರ್ಖಾನೆಯನ್ನು ನಷ್ಟಕ್ಕೆ ತರುವುದಕ್ಕೆ ಆಗಿನ ಕಾಲದಲ್ಲಿ ಇದ್ದಂತಹ ಅಧಿಕಾರಿಗಳೇ ನೇರವಾಗಿ ಕಾರಣವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇಲ್ಲಿಯವರೆವಿಗೂ ಪದೇಪದೇ ಇಡೀ ಜಿಲ್ಲೆಯಲ್ಲಿ ಅಂದರೆ, ಭದ್ರಾವತಿ ತಾಲ್ಲೂಕು, ಸಾಗರ, ಶಿವಮೊಗ್ಗ, ತೀರ್ಥಹಳ್ಳಿ ಮತ್ತೆ ಹೊರ ಜಿಲ್ಲೆಯಾದ ದಾವಣಗೆರೆ ಜಿಲ್ಲೆಗಳಿಂದ ಬಹಳಷ್ಟು Employees ಮತ್ತು Association ನವರು ಹಾಗೂ ಎಲ್ಲಾ ಸಂಘ-ಸಂಸ್ಥೆಯವರು ದಿನನಿತ್ಯ ಅಲ್ಲಿ ಪ್ರತಿಭಟನೆ ಮಾಡುತ್ತಲೇ ಇದ್ದಾರೆ. ಏಕೆಂದರೆ, ವಿ.ಐ.ಎಸ್.ಎಲ್. ಮತ್ತು ಎಂ.ಪಿ.ಎಂ. ಈ ಎರಡೂ ಕಾರ್ಖಾನೆಗಳು ಶಿವಮೊಗ್ಗ ಮತ್ತು ಭದ್ರಾವತಿಯ ಎರಡು ಕಣ್ಣುಗಳು ಇದ್ದ ಹಾಗೆ ಇದ್ದವು. ಈ ಎರಡೂ ಕೈಗಾರಿಕೆಗಳನ್ನು ಸ್ಥಗಿತಗೊಳಿಸಿ, ನಮ್ಮ ಇಡೀ ಜಿಲ್ಲೆಯಲ್ಲಿ unemployment problem ಯಾವ ರೀತಿ create ಆಗಿದೆ ಎಂದರೆ, ಎಲ್ಲರೂ ಬೇರೆ ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿ, ಎಲ್ಲಿಯಾದರೂ ಭೂಮಿ ಸಿಕ್ಕಿದರೆ ನಾವು ಬದುಕಬಹುದು ಎಂಬ ನಿರ್ಧಾರವನ್ನು ತೆಗೆದುಕೊಂಡಿರುವಂಥದ್ದು. ಹಾಗಾಗಿ, ನಾನು ಸನ್ಮಾನ್ಯ ಸಚಿವರಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಅಧಿಕಾರಿಗಳ ಮಾತನ್ನು ಗಮನಕ್ಕೆ ತೆಗೆದುಕೊಳ್ಳುವುದು ಬೇಡ. ಏಕೆಂದರೆ, ಈಗಾಗಲೇ ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ನೀಡಿ, ಲಾಭದಲ್ಲಿದ್ದಂತಹ ಕೈಗಾರಿಕೆಯನ್ನು ನಷ್ಟವಾಗುತ್ತಿದೆ ಎಂದು ಅದನ್ನು ಮುಚ್ಚಿಹಾಕುವುದಕ್ಕೆ ಪ್ರಯತ್ನದ ಸಂಚನ್ನು ನಡೆಸಿರತಕ್ಕಂಥದ್ದು. ಈಗ ಮಾನ್ಯ ಸಚಿವರು ಪ್ರಯತ್ನವನ್ನು

ಮಾಡಿರತಕ್ಕಂಥದ್ದು, ಮತ್ತೆ ಮಾನ್ಯ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ನನಗೆ ಎಲ್ಲೋ ಒಂದು ಕಡೆ ಆಶಾದಾಯಕ ಉತ್ತರ ಕಂಡು ಬಂದಿರುವಂಥದ್ದು. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಕಾರ್ಖಾನೆ ಪುನರ್ ಪ್ರಾರಂಭ ಮಾಡುವುದಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆಂದು ಹೇಳುತ್ತಾರೆ. ಈಗ ಸುಮಾರು ಏಳು ಸಾವಿರ ಎಕರೆ standing crop ಇದೆ. ಅದನ್ನು rite ಮಾಡದೆ, dead and fallen trees ಗಳನ್ನು ಸಾರ್ವಜನಿಕರು ತೆಗೆದುಕೊಂಡು ಹೋಗಿ, ಅದನ್ನು ತಮ್ಮ ಒಲೆಗಳಿಗೆ ಇಡುತ್ತಿದ್ದಾರೆ. ಅಲ್ಲಿರುವಂತಹ ಎಂ.ಪಿ.ಎಂ. ಕಾರ್ಖಾನೆಯ ಅಧಿಕಾರಿಗಳು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ಸರ್ಕಾರಕ್ಕೆ ಸರಿಯಾದ ರೀತಿಯ ಮಾಹಿತಿಯನ್ನು ಕೊಡದೇ ಇರುವುದರಿಂದ, ಆ ಕಾರ್ಖಾನೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ರೀತಿ ಯಾರು ತಪ್ಪು ಮಾಹಿತಿಯನ್ನು ಕೊಡುತ್ತಾರೆ, ಅವರ ವಿರುದ್ಧ ಕಠಿಣ ರೀತಿಯ ಕ್ರಮವನ್ನು ಸಹ ತೆಗೆದುಕೊಳ್ಳಬೇಕು. ಮಾನ್ಯ ಸಚಿವರಿಗೆ ಮತ್ತೊಂದು ಮನವಿ ಏನೆಂದರೆ, ಅಲ್ಲಿರುವಂತಹ ಶಾಸಕರ ಜೊತೆ ಒಂದು ಸಭೆಯನ್ನು ಕರೆದರೆ ಅನುಕೂಲವಾಗುತ್ತದೆ. ಏಕೆಂದರೆ, ನಾವು ಅಲ್ಲಿಗೆ ಹೋದರೆ ಅಲ್ಲಿನ ಬಹಳಷ್ಟು ಜನ, ಸಂಘ-ಸಂಸ್ಥೆಯವರು ಮತ್ತು ರೈತರು ಎಂ.ಪಿ.ಎಂ. ಕಾರ್ಖಾನೆಯ ಬಗ್ಗೆ ಏನಾಯಿತು ಮತ್ತೆ ಏನಾದರೂ ಆಗುತ್ತಿದೆಯೇ ಎಂದು ಬಹಳ ಆತಂಕದಲ್ಲಿ ಬಂದು ನಮ್ಮನ್ನು ಸಂಪರ್ಕ ಮಾಡುತ್ತಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಇದರ ಬಗ್ಗೆ ಬಹಳ ಬೇಗ ಇದನ್ನು ಖಾಸಗಿಯವರಿಗಾದರೂ ಕೊಡಲಿ, ಸರ್ಕಾರದಿಂದಾರೂ ಆಗಲಿ, ಒಟ್ಟಿನಲ್ಲಿ ಈ ಎಂ.ಪಿ.ಎಂ. ಕಾರ್ಖಾನೆ ಪುನರ್ ಪ್ರಾರಂಭವಾಗಬೇಕು.

(ಮುಂದು)

(906) 17.12.2024 11.40 LL-VK (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಬಲ್ಕೀಸ್ ಬಾನು (ಮುಂದು):-**

ಅದನ್ನು ತಾವು ಮಾಡುತ್ತಿದ್ದೀರಿ ಎಂದು ಕೂಡ ನಾನು ಹೇಳಿದ್ದೆನು. ಆದಷ್ಟು ಬೇಗ ಅದನ್ನು ಪುನಃ ಪ್ರಾರಂಭ ಮಾಡಬೇಕು. ಮುಂದಿನ ಸಭೆಗೆ ನಮಗೂ ಕೂಡ ಆಹ್ವಾನ ಕೊಡಬೇಕು. ಏಕೆಂದರೆ, ಯಾವ ಅಧಿಕಾರಿಗಳು ಈ ವಿಷಯದ ಬಗ್ಗೆ ಸರ್ಕಾರಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆಂಬುದು ನಮಗೂ ಸಹ ಗೊತ್ತಾಗಬೇಕಾಗಿದೆ. MPM (Mysore Paper Mills) Limited ನಲ್ಲಿ ಇರತಕ್ಕಂತಹ ಒಂದಿಬ್ಬರು ಅಧಿಕಾರಿಯವರೇ, ಈ ವಿಷಯದ ಬಗ್ಗೆ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, 2015-16ರಲ್ಲಿ ಈ ಎಂಪಿಎಂ ಕಾರ್ಖಾನೆಯನ್ನು ಪುನರುಜ್ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ, ಈ ಕಾರ್ಖಾನೆಯನ್ನು ಬಂದ್ ಮಾಡಲಾಯಿತು. ಆಗ ಒಟ್ಟಾರೆ ವೆಚ್ಚ 15,400/- ರೂಪಾಯಿ ಮೊದಲಿಂದಲೂ ಬಂದಂತಹ losses ಅದು. ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಡಬೇಕು ಎಂದು ಕೆಲವು ಬೇಡಿಕೆಗಳು ಇದ್ದವು. ಆ ಪ್ರಯತ್ನಗಳು ಕೂಡ ಆಗಿ ಹೋಗಿರುತ್ತದೆ. ಆ ಪ್ರಯತ್ನಗಳು 2017 ಒಂದು ಸಲ, 2018 ರಲ್ಲಿ ಒಂದು ಸಲ ಆ ನಂತರ, 2019 ರಲ್ಲಿ ಒಂದು ಸಲ ಆಗಿದೆ. ತದನಂತರ, ನಾನು ಕೂಡ ಅರಣ್ಯ ಸಚಿವರ ಜೊತೆ ಒಂದು ಸಭೆಯನ್ನು

ಸಹ ಮಾಡಿದ್ದೇನೆ. ಇಲ್ಲಿ ಮುಖ್ಯವಾಗಿ ಏನಾಗಿದೆಯೆಂದರೆ, ಕಚ್ಚಾ ವಸ್ತು ಅಂದರೆ ನೀಲಗಿರಿ ಮರ ಬೇಕಾಗಿರುತ್ತದೆ. ಆ ನೀಲಗಿರಿ ಮರ ಬೆಳೆಯುವುದಕ್ಕೆ ನಿಷೇದ ಇರುವುದರಿಂದ, ಕಚ್ಚಾ ವಸ್ತು ಸಿಗದೇ ಕಾಗದ ತಯಾರಿಕಾ ಕಾರ್ಖಾನೆಯವರು ಕಾಗದ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ, ಈ ಕಾರ್ಖಾನೆಯ ಪುನರುಜ್ಜೀವನ ಮಾಡುವುದಕ್ಕೆ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ. ಜೊತೆಗೆ, ಖಾಸಗಿಯವರು ಸಹ ಇದಕ್ಕೆ ಮುಂದೆ ಬರುತ್ತಿಲ್ಲ. ಎಲ್ಲಿಯವರೆಗೆ ಈ ನೀಲಗಿರಿ ಬೆಳೆ ಬೆಳೆಯುವುದಕ್ಕೆ ನಿರ್ಬಂಧ ಇದೆ, ಅದನ್ನು ತೆಗೆದುಹಾಕುವವರೆಗೆ ಈ ಕಾರ್ಖಾನೆಯನ್ನು ಪುನುರುಜ್ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಹಿಂದೆ ಕೂಡ 3-4 ಬಾರಿ ಪ್ರಯತ್ನ ಮಾಡಿದ್ದು, ಆ ಪ್ರಯತ್ನಗಳು ಯಶಸ್ವಿಯಾಗದೇ ವಿಫಲವಾಗಿರುತ್ತವೆ. ಆದಾಗ್ಯೂ, ಈ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಅರಣ್ಯ ಸಚಿವರ ಜೊತೆ ಕೂಡ ಒಂದು ಸಭೆ ನಡೆಸಿರುತ್ತವೆ. ಆ ಸಭೆಯಲ್ಲಿ ಎಂಪಿಎಂ ಕಾರ್ಖಾನೆಗೆ ನೀಲಗಿರಿ ಮರ ಅವಶ್ಯಕತೆ ಇದ್ದು, ಆ ಬೆಳೆಯನ್ನು ಬೆಳೆಯುವುದಕ್ಕೆ ಅವರದ್ದೇ ಸುಮಾರು 30 ಸಾವಿರ ಎಕರೆ ಪ್ರದೇಶ ಇದ್ದು, ಆ ಸೀಮಿತ ಪ್ರದೇಶದಲ್ಲಿ ನೀಲಗಿರಿ ಬೆಳೆ ಬೆಳೆಯುವುದಕ್ಕೆ ಅನುಮತಿ ನೀಡಬೇಕೆಂದು ಚರ್ಚಿಸಿದ್ದೇವೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೇವಲ ಒಂದು ಕಾರ್ಖಾನೆಯ ಪುನರುಜ್ಜೀವನಕ್ಕಾಗಿ ಈಗಾಗಲೇ ನಿಷೇದಿಸಿರುವ ನೀಲಗಿರಿ ಬೆಳೆಯನ್ನು ಬೆಳೆಯುವುದು ಬೇಡ ಮತ್ತು ಪರಿಸರವನ್ನು ಹಾಳು ಮಾಡುವುದು ಬೇಡ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದರಿ ಕಾರ್ಖಾನೆಗೆ ಒಂದು ಸೀಮಿತ ಪ್ರದೇಶವನ್ನು ಮಂಜೂರು ಮಾಡಿದ್ದು, ಅಲ್ಲಿ ನೀಲಗಿರಿ ಬೆಳೆ ಬೆಳೆಯುವುದಕ್ಕೆ ಅನುಮತಿ ನೀಡುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಈಗಾಗಲೇ ನೀಲಗಿರಿ ಬೆಳೆ ಬೆಳೆಯುವುದಕ್ಕೆ ನಿಷೇದ ಇದೆ. ಆದಾಗ್ಯೂ, ಸದರಿ ಎಂಪಿಎಂ ಕಾರ್ಖಾನೆಗೆ ಸೀಮಿತಗೊಳಿಸಿರುವ ಪ್ರದೇಶದಲ್ಲಿ ನೀಲಗಿರಿ ಬೆಳೆ ಬೆಳೆಯುವುದಕ್ಕೆ ಒಂದು ವೇಳೆ ಅನುಮತಿ ನೀಡಿದರೂ ಸಹ, ಆ ಬೆಳೆಯಿಂದ ಅವರಿಗೆ ಎಷ್ಟು ವರ್ಷಗಳವರೆಗೆ ಕಾರ್ಖಾನೆ ನಡೆಸುವುದಕ್ಕೆ ಸಾಕಾಗುತ್ತದೆ ಎಂಬ ಬಗ್ಗೆಯೂ ಸಹ ನಾವು ಆಲೋಚನೆ ಮಾಡಿ ನಿರ್ಣಯ ಮಾಡಬೇಕಾಗಿದೆ. ಇದರಲ್ಲಿ ಎರಡು ಭಾಗ ಇದೆ. ಅದೇನೆಂದರೆ, ನೀಲಗಿರಿ ಬೆಳೆ ಬೆಳೆಯುವುದಕ್ಕೆ ವಿರೋಧ ಕೂಡ ಸಾಕಷ್ಟಿದೆ. ಏಕೆಂದರೆ, ನೀಲಗಿರಿ ಬೆಳೆ ಬೆಳೆದರೆ, ಅಂತರ್ಜಲ ಮಟ್ಟ ಕುಸಿಯುತ್ತದೆ. ಏಕೆಂದರೆ, ಸದರಿ ಬೆಳೆ ಸಾಕಷ್ಟು ನೀರನ್ನು ತೆಗೆದುಕೊಳ್ಳುವುದರಿಂದ, ಅಂತರ್ಜಲ ಮಟ್ಟ ಕಡಿಮೆಯಾಗಿ ಪರಿಸರಕ್ಕೆ ತೊಂದರೆಯಾಗುವ ಆತಂಕ ಕೂಡ ಇರುತ್ತದೆ. ಈ ವಿಚಾರದ ಬಗ್ಗೆ ನಾವು ಈಗಾಗಲೇ ಮಾನ್ಯ ಅರಣ್ಯ ಸಚಿವರ ಜೊತೆ ಸಭೆ ನಡೆಸಿದ್ದು, ಆ ಇಲಾಖೆಯಿಂದ ಏನು ನಿರ್ಣಯ ಬರುತ್ತದೆ, ಆ ನಿರ್ಣಯದ ಮೇಲೆ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಅರಣ್ಯ ಇಲಾಖೆಯ ತಜ್ಞರ ಸಮಿತಿ ನೀಲಗಿರಿ ಬೆಳೆ ಬೆಳೆಯಲು ಎಂಪಿಎಂ ಕಾರ್ಖಾನೆಗೆ ವಿನಾಯಿತಿ ನೀಡುವ ಸಂಬಂಧ ಪರಿಶೀಲಿಸುವಂತೆ ಕೇಳಿದ್ದಾರೆ. ಈ ವಿಷಯದಲ್ಲಿ ಅಲ್ಲಿರುವಂತಹ ಅಧಿಕಾರಿಗಳ ಸಂಚು ನಡೆಯುತ್ತದೆ ಎಂದು ನಾನು ಆಗಲೇ ಹೇಳಿರುತ್ತೇನೆ. ಏಕೆಂದರೆ, as on today, standing crop seven

thousand hectares ಇದೆ, ಅದನ್ನು ಉಪಯೋಗ ಮಾಡಿಕೊಳ್ಳಬಹುದು. ಅಲ್ಲದೇ, ಸದರಿ ನೀಲಗಿರಿ ಬೆಳೆಯನ್ನು ಸುಮಾರು 6 ರಿಂದ 7 ಬಾರಿ ಕಟಾವು ಮಾಡಬಹುದಾಗಿರುತ್ತದೆ. ಆದಾಗ್ಯೂ, ನಾನು ಇನ್ನು ಹೆಚ್ಚಿಗೆ ನೀಲಗಿರಿ ಬೆಳೆ ಬೆಳೆಯಬೇಕೆಂದು ಒತ್ತಾಯ ಮಾಡುತ್ತಿಲ್ಲ. ಏಕೆಂದರೆ, ನೀಲಗಿರಿ ಬೆಳೆ ಬೆಳೆಯುವುದನ್ನು ನಿಷೇದಿಸಿರುವ ವಿಷಯ ನನಗೂ ಗೊತ್ತಿದೆ. ಹಾಗಾಗಿ, ಈಗಾಗಲೇ ಬೆಳೆದಿರುವಂತಹ ನೀಲಗಿರಿ ಬೆಳೆಯನ್ನು ಬಳಸಿಕೊಂಡು ಕಾರ್ಖಾನೆ ನಡೆಸಬೇಕೆಂದು ನಾನು ಕೋರುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಈ ಬಗ್ಗೆ ತಮ್ಮ ಉತ್ತರ ಹೇಳಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾನ್ಯ ಅರಣ್ಯ ಸಚಿವರ ಜೊತೆ ಒಂದು ಜಂಟಿ ಸಭೆಯನ್ನು ಮಾಡಿದ್ದು, ಅವರಿಂದ ನಿರ್ಣಯ ಬರಬೇಕಾಗಿದೆ. ಅವರು ಯಾವಾಗ ಈ ನೀಲಗಿರಿ ಬೆಳೆ ಬೆಳೆಯುವುದಕ್ಕೆ ನಿರ್ಣಯ ಮಾಡುತ್ತಾರೆ ಆಗ, restricted area ಏನು ಎಂಪಿಎಂ ಇದೆ, ಆ ಪ್ರದೇಶದಲ್ಲಿ ನೀಲಗಿರಿ ಬೆಳೆ ಬೆಳೆಯುವುದಕ್ಕೆ ಅನುಮತಿ ನೀಡುತ್ತಾರೆಯೇ ಅಥವಾ ಆ ಅನುಮತಿ ಕೊಟ್ಟರೆ ಆ ಬೆಳೆ ಸದರಿ ಕಾರ್ಖಾನೆಗೆ ಸಾಕಾಗುತ್ತದೆಯೇ? ಅಷ್ಟು viability of quantum ಆಗುತ್ತದೆಯೇ? ಈ ಎಲ್ಲಾ ಪ್ರಶ್ನೆಗಳು ಸಹ ನಮ್ಮ ಮುಂದೆ ಇರುತ್ತವೆ. ಆ ನೀಲಗಿರಿ ಬೆಳೆ ಬೆಳೆಯುವುದಕ್ಕೆ ನಿರ್ಣಯ ಆದ ನಂತರ ಮುಂದಿನ ಹೆಜ್ಜೆಯನ್ನು ಇಡಬೇಕಾಗುತ್ತದೆ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿದಿದೆ. ಹೇಳಿದ ವಿಷಯವನ್ನು ಎಷ್ಟು ಬಾರಿ ಹೇಳುತ್ತೀರಿ?

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಇದು ನಮ್ಮ ಇಡೀ ಜಿಲ್ಲೆಯ ಸಾರ್ವಜನಿಕರ ಬದುಕಿನ ಪ್ರಶ್ನೆಯಾಗಿದೆ. ಹಾಗಾಗಿ, ನಾನು ಅಲ್ಲಿ ಹೊಸದಾಗಿ ನೀಲಗಿರಿ ಬೆಳೆ ಬೆಳೆಯುವುದಕ್ಕೆ ಹೇಳುತ್ತಿಲ್ಲ. ಆದರೆ, ಈಗಾಗಲೇ ಬೆಳೆದಿರುವ ನೀಲಗಿರಿ ಬೆಳೆಯನ್ನು ಉಪಯೋಗಿಸಿಕೊಂಡು ಕಾರ್ಖಾನೆ ನಡೆಸುವುದಕ್ಕೆ ಅನುಮತಿ ನೀಡಬೇಕೆಂದು ಕೋರುತ್ತಿದ್ದೇನೆ.

**ಸಭಾಪತಿಯವರು:-** ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ಈಗ ಸಾಕು. ಆದಾಗ್ಯೂ, ಈ ವಿಷಯದ ಬಗ್ಗೆ ತಾವು ಮಾನ್ಯ ಸಚಿವರ ಜೊತೆ ಸಭೆ ನಡೆಸಿ ಚರ್ಚಿಸಿ. ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನನ್ನ ಒಂದು ಚುಕ್ಕೆ ಗುರುತಿನ ಪ್ರಶ್ನೆ ಕೊನೆಯಲ್ಲಿದೆ.

**ಸಭಾಪತಿಯವರು:-** ಇಲ್ಲ, ಪ್ರಶ್ನೋತ್ತರ ಅವಧಿ ಮುಗಿದಿದೆ. ಅಲ್ಲದೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು 15 ದಿನಗಳ ಕಾಲಾವಕಾಶ ಕೇಳಿರುತ್ತಾರೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯ ಬಗ್ಗೆ ನಾನು ಮಾತನಾಡುತ್ತೇನೆ. ಏಕೆಂದರೆ, ಮಾನ್ಯ ಸಚಿವರು ಸಹ ಈಗ ಇಲ್ಲಿ ಹಾಜರಿರುವುದರಿಂದ, ನನ್ನ ಪ್ರಶ್ನೆಯನ್ನು ಅವರ ಗಮನಕ್ಕೆ ತರುತ್ತೇನೆ. ನಂತರ, ಅವರು ತಮ್ಮ ಉತ್ತರ ನೀಡಲಿ. ಹಾಗಾಗಿ, ನನ್ನ ಪ್ರಶ್ನೆ ಕೇಳುವುದಕ್ಕೆ ಕೇವಲ ಒಂದು ನಿಮಿಷ ಅವಕಾಶ ನೀಡಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ವಾರ ನನ್ನ ಒಂದು ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಬಂದಿರಲಿಲ್ಲ. ಆಗ ತಾವು, ನನ್ನ ಪ್ರಶ್ನೆಗೆ ಮುಂದಿನ ವಾರ ಉತ್ತರ ಕೊಡಿಸುತ್ತೇನೆಂದು ಹೇಳಿದ್ದಿರಿ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 17ನೇ ಡಿಸೆಂಬರ್ 2024, ಸಮೂಹ-7ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 105 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**04. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸರ್ಕಾರ ಸಕಾಲದಲ್ಲಿ ಉತ್ತರಗಳನ್ನು ಒದಗಿಸದಿರುವ ಬಗ್ಗೆ.**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಕಳೆದ ವಾರ ನನ್ನ ಒಂದು ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಬಂದಿರಲಿಲ್ಲ. ಆಗ ತಾವು, ನನ್ನ ಪ್ರಶ್ನೆಗೆ ಮುಂದಿನ ವಾರ ಉತ್ತರ ಕೊಡಿಸುತ್ತೇನೆಂದು ಹೇಳಿ, ಈ ಮಂಗಳವಾರಕ್ಕೆ ಮುಂದೂಡಿದ್ದಿರಿ.

**ಸಭಾಪತಿಯವರು:-** ಹೌದು. ಆದರೆ, ತಮ್ಮ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ. ಮಾನ್ಯ ಸಭಾನಾಯಕರೇ, ಮಾನ್ಯ ಸಿ.ಟಿ. ರವಿಯವರ ಪ್ರಶ್ನೆಗೆ ಆದಷ್ಟು ಬೇಗ ಉತ್ತರ ಕೊಡಿಸಿ.

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರು ತಮ್ಮ ಪ್ರಶ್ನೆಗಳಿಗೆ ಉತ್ತರ ನೀಡುವ ಬಗ್ಗೆ ಹೇಳುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಸಂಬಂಧಪಟ್ಟ ಉತ್ತರವನ್ನು website ನಲ್ಲಿ upload ಮಾಡಲಾಗಿರುತ್ತದೆ. ಆದರೆ, ಲಿಸ್ಟ್‌ನಲ್ಲಿ ಹಾಕಿರುವುದಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಒದಗಿಸುವ ವಿಚಾರದ ಬಗ್ಗೆ ತಾವು ನಿನ್ನೆಯ ದಿವಸ ನಮ್ಮ ಗಮನಕ್ಕೆ ತಂದಿರುತ್ತೀರಿ. ಅದರಂತೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ನಾಳೆಯೊಳಗೆ ಎಲ್ಲಾ ಉತ್ತರಗಳನ್ನು ನಾನು ಸದನದಲ್ಲಿ ಮಂಡಿಸುತ್ತೇನೆ. ನಾಳೆ

ಒಂದು ದಿವಸದ ಕಾಲಾವಕಾಶವನ್ನು ನಾವು ಕೇಳುತ್ತಿದ್ದು, ಆದಷ್ಟು ನಾಳೆಯ ದಿವಸ ಎಲ್ಲಾ ಉತ್ತರಗಳನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ಈಗ ಶೂನ್ಯ ವೇಳೆ. ಮೊದಲನೆಯ ವಿಷಯ ಶ್ರೀ ಕೇಶವ ಪ್ರಸಾದ್ ಎಸ್. ರವರದ್ದು.

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮೊದಲ ಬಾರಿಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಸಿಕ್ಕಿರುತ್ತದೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊದಲ ಬಾರಿಗೆ ಪ್ರಶ್ನೆ ಕೇಳಿದ್ದು, ಅದು list ಆಗಿರುತ್ತದೆ. ಆದರೆ, ಅದಕ್ಕೆ ಉತ್ತರ ಬಂದಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ತಾವುಗಳು ಈ ರೀತಿ ಮಾಡಿದರೆ ನಾನು allow ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರು:-** ಮಾನ್ಯ ಸಭಾಪತಿಯವರೇ, ನಾನು ಮೊದಲ ಬಾರಿಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಸಿಕ್ಕಿರುತ್ತದೆ. ಹಾಗಾಗಿ, ದಯಮಾಡಿ ನನಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರೈತರಿಗೆ ಸಂಬಂಧಪಟ್ಟ ನನ್ನ ಒಂದು ಚುಕ್ಕೆ ಗುರುತಿನ ಪ್ರಶ್ನೆ ಇತ್ತು.

**(ಗೊಂದಲ)**

**ಸಭಾಪತಿಯವರು (ತಮ್ಮ ಸ್ಥಾನದಲ್ಲಿ ಎದ್ದುನಿಂತು):-** ಒಂದು ನಿಮಿಷ ಎಲ್ಲರೂ ಕೇಳಿ. ಒಂದೊಂದು ಚುಕ್ಕೆ ಗುರುತಿನ ಪ್ರಶ್ನೆಗೆ 20 ರಿಂದ 25 ನಿಮಿಷ ಮಾತನಾಡಿದರೆ, ಪ್ರಶ್ನೋತ್ತರ ಅವಧಿ ಮುಗಿಸುವುದಕ್ಕೆ ಆಗುತ್ತದೆಯೇ? ಒಬ್ಬ ಸದಸ್ಯರು ಪ್ರಶ್ನೆ ಕೇಳುವಾಗ ತಾವು ನಡು ನಡುವೆ ಏತಕ್ಕೆ ಎದ್ದುನಿಂತು ಮಾತನಾಡುತ್ತೀರಿ? ಹಾಗಾಗಿ, ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ ಎಂದು ಹೇಳಿರುತ್ತೇನೆ. ಈಗ ಶೂನ್ಯ ವೇಳೆ. ನಾನು ಬೇರೆ ಏನು ಮಾತನಾಡುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಿಶೋರ್ ಕುಮಾರ್ ಪುತ್ತೂರುರವರು ಮೊದಲ ಬಾರಿಗೆ ಶಾಸಕರಾಗಿ ಈ ಮನೆಗೆ ಬಂದಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿಲ್ಲದ ಸುಮಾರು 1100 ಪ್ರಶ್ನೆಗಳ ಪೈಕಿ 429 ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿದಿನ ನಮ್ಮ ಅರಣ್ಯರೋಧನ ಆಗಿರುತ್ತದೆ. ಈ ರೀತಿಯಾದರೆ ಹೇಗೆ?

**(ಗೊಂದಲ)**

**ಶ್ರೀ ಶಿವಾನಂದ ಪಾಟೀಲ್ (ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೇ, ನನಗೆ ಸಂಬಂಧಿಸಿದ ಒಂದು ಚುಕ್ಕೆ ಗುರುತಿನ ಪ್ರಶ್ನೆಗೆ ನಾನು ಉತ್ತರ ಕೊಡಲು ತಯಾರಿದ್ದು, ಪ್ರಶ್ನೆ ಕೇಳಿದರೆ ಈಗಲೇ ಉತ್ತರ ಹೇಳುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುವುದನ್ನು ಯಾರೂ ಸಹ ಕೇಳುವುದಿಲ್ಲ. ನನ್ನ ಮಾತಿಗೆ ಕಿಮ್ಮತ್ತು ಇಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆಗಳಿಗೆ ಉತ್ತರ ತರಿಸಿಕೊಡಲಿ. ನಾಳೆ ಕೊಡುತ್ತೇವೆಂದು ಪ್ರತಿದಿನ ಹೇಳುತ್ತಿದ್ದಾರೆ. ತಾವು ಪ್ರತಿದಿನ ಉತ್ತರ ತರಿಸಿಕೊಡಿ ಎಂದು ಹೇಳುತ್ತಿದ್ದರೂ ಸಹ, ಸರ್ಕಾರದವರು ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡುತ್ತಿರುವುದಿಲ್ಲ. ನಾವು ಏನು ಮಾಡಬೇಕು?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಬಗ್ಗೆ ತಾವು ನಿನ್ನೆಯ ದಿವಸ ಹೇಳಿದ್ದು, ನಾಳೆ ಅಥವಾ ಸದನ ಮುಗಿಯುವುದರೊಳಗೆ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒದಗಿಸುತ್ತೇವೆ. ನಾವು ಹೇಳುವುದನ್ನು ಕೇಳುವುದಿಲ್ಲವೆಂದರೆ ಹೇಗೆ?

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಿಶೋರ್ ಕುಮಾರ್ ಪುತ್ತೂರು ರವರ ಒಂದು ಚುಕ್ಕೆ ಗುರುತಿನ ಪ್ರಶ್ನೆಯಾಗಿರುತ್ತದೆ. ಅಲ್ಲದೇ, ಅವರು ಮೊದಲ ಬಾರಿ ಶಾಸಕರಾಗಿ ಈ ಮನೆಗೆ ಬಂದಿರುತ್ತಾರೆ. ಹಾಗಾಗಿ, ದಯಮಾಡಿ ಅವರಿಗೆ ತಾವು ಅವಕಾಶ ನೀಡಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಿನ್ನೆಯ ದಿವಸ ನಾನು ಬಾಕಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನಾಳೆಯ ಅಥವಾ ನಾಡಿದ್ದು ಉತ್ತರ ಒದಗಿಸಬೇಕೆಂದು ಸೂಚನೆ ನೀಡಿರುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಾಕಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನಾಳೆ ಉತ್ತರ ಒದಗಿಸುತ್ತೇವೆ. ಇವರು ಅದೇ ವಿಷಯವನ್ನು ದೊಡ್ಡದು ಮಾಡುವುದು ಬೇಡ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ನಮ್ಮ ಊರಿನ ಮನೆಗಳ ಬಾಗಿಲ ಮೇಲೆ "ನಾಳೆ ಬಾ" ಎಂದು ಬರೆಯುತ್ತಿದ್ದರು. ಆ ರೀತಿ ತಾವು ನಮ್ಮ ಪ್ರಶ್ನೆಗೆ ನಾಳೆ ಉತ್ತರ ನೀಡುತ್ತೇವೆಂದು ಹೇಳುತ್ತಿದ್ದೀರಿ. ಅಲ್ಲದೇ, ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡದಷ್ಟು inefficient ಆಗಿದೆಯೇ ಈ ಸರ್ಕಾರ? ಅಲ್ಲದೇ, ನಮ್ಮ ಪ್ರಶ್ನೆಗಳಿಗೆ ಇವರು ಏನು ಉತ್ತರ ಕೊಟ್ಟರು ನಾವು ಅದನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ತಾವು ನಮಗೆ ಸೂಚನೆ ನೀಡಿರುವುದನ್ನು ನಾನು ಈಗಾಗಲೇ ಹೇಳಿದ್ದು, ನಾಳೆಯ ದಿವಸ ಉತ್ತರ ನೀಡುತ್ತೇನೆ. ಇಷ್ಟು ಸಣ್ಣ ವಿಷಯವನ್ನು ದೊಡ್ಡದು ಮಾಡುವುದು ಬೇಡ. ಇಷ್ಟು ಸಣ್ಣ ವಿಷಯವನ್ನು ದೊಡ್ಡದು ಮಾಡಿ, ಜಾಸ್ತಿ ಮಾತನಾಡಿದರೆ ನಾವು ಹೆದರುವುದಿಲ್ಲ. ಈ ಬಗ್ಗೆ ನಿನ್ನೆಯ ದಿವಸ ನಾವು ಹೇಳಿರುತ್ತೇವೆ. ಈಗಲೂ ಇದೇ ಕೆಲಸವನ್ನು ಮಾಡಿದರೆ ಹೇಗೆ?

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ಕೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಹೇಳಿರುವಂತಹ ವಿಚಾರವನ್ನು ಇಂದು ಸುಧಾರಿಸಿಕೊಳ್ಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಎಲ್ಲರೂ ಬಹಳ ದೊಡ್ಡ ಬುದ್ಧಿವಂತರಾಗಬೇಡಿ. ಹಾಗಾಗಿ, ಎಲ್ಲರೂ ಕುಳಿತುಕೊಳ್ಳಿ. **(ಗೊಂದಲ)** ಮಾನ್ಯ ಸಭಾನಾಯಕರೇ, ನಾನು ನಿನ್ನೆಯ ದಿವಸ ತಮಗೆ ಏನು ಹೇಳಿದ್ದೇನೆಂದರೆ, ದಿನಾಂಕ: 18.12.2024ರಂದು ಯಾವ ಯಾವ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕಾಗಿದೆ, ಆ ಎಲ್ಲಾ ಉತ್ತರಗಳನ್ನು ನೀಡಬೇಕು. ಒಂದು ವೇಳೆ ಯಾವುದಾದರೂ ಪ್ರಶ್ನೆಗೆ ಉತ್ತರ ನೀಡದೇ ಇದ್ದರೆ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಹೆಸರು ಹೇಳಬೇಕು. ಆ ಹೆಸರುಗಳನ್ನು ನಾನು ಸದನದಲ್ಲಿ ಕರೆಯುತ್ತೇನೆಂದು ಹೇಳಿರುತ್ತೇನೆ. ಹಾಗಾಗಿ, ನಾಳೆಯ ದಿವಸ ಉತ್ತರ ಕೊಡದೇ ಇರುವಂತಹ ಅಧಿಕಾರಿಗಳ ಹೆಸರು ಕೊಡಬೇಕು. ಇಲ್ಲದೇ ಹೋದರೆ, ನಾನು ಸದನ ನಡೆಸುವುದಿಲ್ಲ. ಯಾವ ಯಾವ ಅಧಿಕಾರಿ ಯಾವ ಕಾರಣಕ್ಕಾಗಿ ಉತ್ತರ ಕೊಟ್ಟಿಲ್ಲವೆಂಬುದನ್ನು ನಾನು ಈ ಸದನದಲ್ಲಿ ಹೇಳಬೇಕು. ಆದುದರಿಂದ, ನಾನು ನಿನ್ನೆಯ ದಿವಸ ಏನು ಹೇಳಿರುತ್ತೇನೆ, ಅದನ್ನು ತಾವು ಫಾಲೋ ಮಾಡಬೇಕು. ಮುಂದೆ ನಾನು ಏನನ್ನೂ ಮಾತನಾಡುವುದಿಲ್ಲ.

**(ಗೊಂದಲ)**

## ೦೮. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ:- ಪಶ್ಚಿಮ ಘಟ್ಟದಲ್ಲಿರುವ ಖಾನಾಪುರ ತಾಲ್ಲೂಕಿನ ಬಹುತೇಕ ಜನರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವವ ಕುರಿತು

- - -

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ರಿಪಬ್ಲಿಕ್ ಕನ್ನಡ" ಸುದ್ದಿ ವಾಹಿನಿಯಲ್ಲಿ "ಖಾನಾಪುರ ತಾಲ್ಲೂಕಿನಲ್ಲಿ ಕಣ್ಣೀರ ಖಾನಾಪುರ ಅಭಿಯಾನ" ಎಂಬ ತಲೆಬರಹದ ಅಡಿಯಲ್ಲಿ ಪ್ರಸಾರವಾಗಿರುವ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ಬೆಳಗಾವಿ ಜಿಲ್ಲೆಯಲ್ಲಿರುವ ಖಾನಾಪುರ ತಾಲ್ಲೂಕು ಬಹುತೇಕ ಪಶ್ಚಿಮಘಟ್ಟ ಪ್ರದೇಶದಲ್ಲಿದೆ. ಹಾಗಾಗಿ, ಖಾನಾಪಪುರ ತಾಲ್ಲೂಕಿನ ಕಾಡಂಚಿನ ಜನರ ನೈಜ ಸ್ಥಿತಿ ಏನಿದೆ ಎನ್ನುವುದರ ಬಗ್ಗೆ ರಿಪಬ್ಲಿಕ್ ಕನ್ನಡ ಸುದ್ದಿವಾಹಿನಿ ತಂಡವು ಕಣ್ಣೀರ ಖಾನಾಪುರ ಅಭಿಯಾನದ ಮೂಲಕ ಒಂದು ಗ್ರೌಂಡ್ ರಿಪೋರ್ಟ್ ಮಾಡಿ ಸರಣಿ ವರದಿ ಮೂಲಕ ಕಾಡಂಚಿನ ಜನರ ಬದುಕು ಬವಣೆಯನ್ನು ತೆರೆದಿಟ್ಟಿದೆ. ಸ್ವಾತಂತ್ರ್ಯ ಬಂದು 78 ವರ್ಷ ಕಳೆದರೂ ಇಲ್ಲಿನ 15ಕ್ಕೂ ಅಧಿಕ ಗ್ರಾಮಗಳು ಕನಿಷ್ಠ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದು ದುರ್ದೈವ. ಪಡಿತರ ಹೊರತುಪಡಿಸಿ ಸರ್ಕಾರದ ಬೇರೆ ಯಾವುದೇ ಸೌಲಭ್ಯಗಳಿಂದ ಈ ಕಾಡಂಚಿನ ಜನರು ವಂಚಿತರಾಗಿದ್ದಾರೆ.

ವನ್ಯಪ್ರಾಣಿಗಳ ಹಾವಳಿ ಒಂದು ಕಡೆಯಾದರೆ, ಕರೆಂಟ್, ರಸ್ತೆ ಸೇರಿ, ಆಸ್ಪತ್ರೆ, ವಸತಿ, ಶಿಕ್ಷಣ ಹೀಗೆ ಕನಿಷ್ಠ ಮೂಲಸೌಕರ್ಯಗಳು ಸಿಗದೇ ಇಲ್ಲಿನ ಜನರು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಈ ಜನ ಕಲಿಯುವುದು ಹೆಚ್ಚೆಂದರೆ 5ನೇ ತರಗತಿ ಮಾತ್ರ. ನಗರಕ್ಕೆ ಬರಬೇಕಾದರೆ 15 ರಿಂದ 20 ಕಿಮೀ ನಡೆದುಕೊಂಡೇ ಬರಬೇಕು. ಸರಿಯಾದ ರಸ್ತೆ ಸಂಪರ್ಕ ಇಲ್ಲದೇ ತುರ್ತು ಸಂದರ್ಭಗಳಲ್ಲಿ ಆಸ್ಪತ್ರೆಗೆ ಹೋಗಲೂ ಸಹ ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಹೆಣವನ್ನು ಚಟ್ಟದ ಮೇಲೆ ಹೊತ್ತು ನಗರಕ್ಕೆ ತರಬೇಕಾದ ದಯನೀಯ ಸ್ಥಿತಿ ಇವರದ್ದು. ಮಳೆಗಾಲದಲ್ಲಿ ಎಂಟು ತಿಂಗಳು ಹೊರ ಪ್ರಪಂಚದ ಸಂಪರ್ಕವೇ ಇಲ್ಲದೇ ಜೀವನ ಸಾಗಿಸುತ್ತಾರೆ. ಪಡಿತರಕ್ಕೆ 10 ರಿಂದ 15 ಕಿಮೀ ನಡೆದು ಹೋಗುವ ಜನರ ಬಳಿ ಆಧಾರ್, ಚುನಾವಣಾ ಗುರುತಿನ ಚೀಟಿ ಸೇರಿ ಎಲ್ಲಾ ದಾಖಲೆಗಳಿವೆ. ಈ ಕಾಡಂಚಿನ ಜನರನ್ನು ಚುನಾವಣೆಯಲ್ಲಿ ವೋಟು ಹಾಕುವುದಕ್ಕೆ ಮಾತ್ರ ಸರ್ಕಾರ ಸೀಮಿತಗೊಳಿಸಿದೆ. ಇದು ಒಂದೆರಡು ಹಳ್ಳಿಗಳ ಕಥೆಯಲ್ಲ. ಖಾನಾಪುರ ತಾಲ್ಲೂಕಿನ ಗವಾಳ, ಕೃಷ್ಣಾಪುರ, ಪಾಸ್ತೋಲಿ, ಕೊಂಗಳಾ, ತಳೇವಾಡಿ, ಜೋರ್ಡಾನ್, ಚಾಪೋಲಿ, ಕಾಪೋಲಿ, ಮುದಗೈ, ಚಿರೇಖಣಿ, ಆಮಂಗಾವ, ಮೆಂಡಿಲ್ ಸೇರಿದಂತೆ 64 ಹಳ್ಳಿಗಳ ಕಣ್ಣೀರಿನ ಕಥೆ ಆಗಿದೆ. ಕಸ್ತೂರಿ ರಂಗನ್ ವರದಿ ಪ್ರಕಾರ 64 ಹಳ್ಳಿಗಳು ಸ್ಥಳಾಂತರಕ್ಕೆ ಅರ್ಹವಾಗಿವೆ. ಈ ಕಾಡಂಚಿನ ಜನರಿಗೆ ಸರ್ಕಾರ ಸೂಕ್ತ ಪರಿಹಾರ ಕೊಟ್ಟು ಸ್ಥಳಾಂತರ ಮಾಡಬೇಕು. ಇವರ ಹೆಸರಿನಲ್ಲಿ ಜಮೀನು ಎಷ್ಟಿದೆ ಅಷ್ಟು ಜಮೀನು ಮತ್ತೆ ಕೊಡಬೇಕು. ಜೀವನೋಪಾಯಕ್ಕೆ ಪ್ರತೀ ಕುಟುಂಬಕ್ಕೆ ತಲಾ 15 ಲಕ್ಷ ಪರಿಹಾರ ಕೊಡಬೇಕು. ಎಲ್ಲಾ ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಮನೆ ನಿರ್ಮಾಣ ಮಾಡಿ ಬದುಕು ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಯಾವಾಗ ಉತ್ತರ ಕೊಡಿಸುತ್ತೀರಿ? ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡಿಸಿ.

(ಮುಂದು)

(907) 17.12.2024 11.50 ವೈಎಲ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಆ) ವಿಷಯ:- ಸರ್ಕಾರಿ ಜಾಗಗಳನ್ನು ಮೀಸಲು ಅರಣ್ಯ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಹೊರಡಿಸಿರುವ 3 ಆದೇಶಗಳನ್ನು ಹಿಂಪಡೆಯುವ ಕುರಿತು.**

----

**ಶ್ರೀ ಎಂ.ಪಿ.ಸುಜಾ ಕುಶಾಲಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಕೃತಿಯ ತವರೂರಾದ ಕೊಡಗಿನಲ್ಲಿ ಕಸ್ತೂರಿ ರಂಗನ್ ವರದಿ, ಸೂಕ್ಷ್ಮ ಪ್ರದೇಶ, ಬಫರ್ ಝೋನ್ ಹೀಗೆ ಹಲವು ನೀತಿಗಳಿಗೆ ಜಿಲ್ಲೆಯಲ್ಲಿ ವ್ಯಾಪಕ ವಿರೋಧ ಇದ್ದು, ಆ ಸಾಲಿಗೆ ಮತ್ತೊಂದು ಪರಿಸರದ ವಿಷಯ ಸೇರ್ಪಡೆಗೊಂಡಿರುತ್ತದೆ. ಕೊಡಗಿನ ವಿವಿಧ ಪಂಚಾಯಿತಿ ವ್ಯಾಪ್ತಿಯ ಜಾಗಗಳನ್ನು ಮೀಸಲು ಅರಣ್ಯ ಪ್ರದೇಶ ಮಾಡಬೇಕೆಂಬ ಕುರಿತಾದ ಆದೇಶ ಪ್ರತಿಗಳು ಸರ್ಕಾರದಿಂದ ಹೊರಡಿಸಿರುವುದು ಈ ಭಾಗದ ಜನರಿಗೆ ತಲ್ಲಣ ಉಂಟು ಮಾಡಿದ್ದು, ರಾಜ್ಯ ಸರ್ಕಾರದ ಅಧೀನಕ್ಕೆ ಬರುವ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಕಛೇರಿಯಿಂದ ಜಿಲ್ಲೆಯ ವಿವಿಧ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಕೆಲವೊಂದು ಜಾಗಗಳ ಸರ್ವೆ ನಂಬರ್ ಉಲ್ಲೇಖಿಸಿ ಅದಕ್ಕೆ ಸಂಬಂಧಿಸಿದಂತೆ ವರದಿ ನೀಡುವಂತೆ ಪತ್ರ ರವಾನೆಯಾಗಿತ್ತು. ಅದರಲ್ಲಿರುವ ಅಂಶಗಳಿಗೆ ಕೊಡಗಿನ ಜನರಿಂದ ವ್ಯಾಪಕ ವಿರೋಧ ಉಂಟಾಗುತ್ತಿರುತ್ತದೆ. ಸರ್ಕಾರದ ಜಾಗ ಒತ್ತುವರಿಯಾಗಿದ್ದರೆ ನಿರ್ದಿಷ್ಟ ಅವಧಿಗೆ ಸಾಗುವಳಿ ಉದ್ದೇಶಕ್ಕೆ ಗುತ್ತಿಗೆ ನೀಡುವ ನಿಯಮ ಸರ್ಕಾರವೇ ಜಾರಿಗೊಳಿಸಿದ್ದು, ಈಗ ಜಾಗಗಳನ್ನು ಮೀಸಲು ಅರಣ್ಯ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರವೇ ಕಾರ್ಯತಂತ್ರ ರೂಪಿಸುತ್ತಿರುವುದು ಪ್ರಶ್ನೆಗೆ ಕಾರಣವಾಗಿದೆ. ' ಸಿ' ಮತ್ತು 'ಡಿ' ಭೂಮಿಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ, ಮರಗಳ ಗಣಕೀಕರಣ ಮತ್ತು ಹಬ್ಬ ಹರಿದಿನಗಳಲ್ಲಿ ಬಳಸುತ್ತಿದ್ದ ಮತ್ತು ಪ್ರಾಣಿಗಳ ಸಹಜ ಸಾವಿನ ನಂತರ ಸಂಗ್ರಹಿಸಿಟ್ಟ ಹಳೇ ಕಾಲದ ವಸ್ತುಗಳಾದ ಕೊಂಬು, ಚರ್ಮ ಇತ್ಯಾದಿ ವಸ್ತುಗಳನ್ನು ಇಟ್ಟುಕೊಳ್ಳದಂತೆ ಮತ್ತು ಇಲಾಖೆಗೆ ನೀಡುವಂತೆ ಸರ್ಕಾರ ಹೊರಡಿಸಿರುವ 3 ಆದೇಶಗಳು ಜನರನ್ನು ಗೊಂದಲ ಮತ್ತು ಅತಂತ್ರ ಪರಿಸ್ಥಿತಿಗೆ ದೂಡುತ್ತಿರುವುದು ಶೋಚನಿಯ ಸಂಗತಿ. ಆದ್ದರಿಂದ ಈ 3 ಆದೇಶವನ್ನು ಕೂಡಲೇ ಹಿಂಪಡೆಯುವಂತೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಇ) ವಿಷಯ:- ಶಾಲೆಗಳಲ್ಲಿ ವಿದ್ಯುತ್ ಸಂಪರ್ಕ, ಶಾಲಾ ಕಟ್ಟಡಗಳ ದುರಸ್ತಿ ಕಾರ್ಯ ಸೇರಿದಂತೆ ಮೂಲಭೂತ ಸೌಕರ್ಯವನ್ನು ಕಲ್ಪಿಸುವ ಬಗ್ಗೆ.**

----

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಶಾಲೆಗಳಿಗೆ ಕರೆಂಟ್ ಇಲ್ಲ ದುರಸ್ತಿ ಭಾಗ್ಯವು ಇಲ್ಲ" ಎಂಬ ಶೀರ್ಷಿಕೆ ಅಡಿ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಸಿ.ಎ.ಜಿ. ವರದಿಯನ್ನು ಉಲ್ಲೇಖಿಸಿ ಪ್ರಕಟವಾಗಿರುವ ವರದಿಯು ತುಂಬಾ ಗಂಭೀರ ವಿಷಯವಾಗಿದ್ದು, ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ದುಸ್ಥಿತಿಯನ್ನು ನಮ್ಮೆಲ್ಲರ ಮುಂದೆ ತೆರೆದಿಟ್ಟಿದೆ.

ರಾಜ್ಯದಲ್ಲಿ ಇನ್ನೂ 393 ಸರ್ಕಾರಿ ಶಾಲೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ. ಪಿಡಬ್ಲ್ಯೂಡಿ ಇಲಾಖೆ ನಿರ್ಮಿಸುವ ಬಹುತೇಕ ಶಾಲೆ ಕಟ್ಟಡ ಹಾಗೂ ಶೌಚಾಲಯಗಳು ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ. ಸೋರುತ್ತಿರುವ ತರಗತಿ ಕೊಠಡಿಗಳು, ಬಿರುಕುಬಿಟ್ಟ ಗೋಡೆಗಳು, ಯಾವಾಗಲಾದರೂ ಬಿಳಬಹುದಾದ ಪರಿಸ್ಥಿತಿ ಇರುವುದು ಅತ್ಯಂತ ಅಘಾತಕಾರಿ ವಿಷಯವಾಗಿದೆ.

128 ಶಾಲೆಗಳಲ್ಲಿ ತಪಾಸಣೆ ನಡೆಸಿದಾಗ, 7 ಶಾಲೆಗಳಲ್ಲಿ ಶೌಚಾಲಯಗಳ ಬಳಕೆ ಯೋಗ್ಯವಾಗಿಲ್ಲ. 21 ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿಲ್ಲ. 22 ಶಾಲೆಗಳಲ್ಲಿ ಶೌಚಾಲಯದ ಬಳಿ ಕೈತೊಳೆಯುವ ವ್ಯವಸ್ಥೆ ಇಲ್ಲ. ಶೌಚಾಲಯದ ಸೌಲಭ್ಯದ ಅನುಪಸ್ಥಿತಿ ಮತ್ತು ನಿರ್ವಹಣೆ ಇಲ್ಲದಿರುವುದು ಎದ್ದು ಕಾಣುತ್ತಿದೆ ಇನ್ನು ಸಿ.ಎ.ಜಿ. ವರದಿಯು ಸರ್ಕಾರಿ ಶಾಲೆಯಲ್ಲಿನ ಅವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾದರೇ, ಶಿಕ್ಷಣ ಇಲಾಖೆ, ಜಿಲಾಡಳಿತ ಹಾಗೂ ಸರ್ಕಾರದ ಜಡತ್ವ ಹಾಗೂ ಬೇಜವಬ್ದಾರಿತನವನ್ನು ತೋರಿಸುತ್ತದೆ.

ನಮ್ಮ ದೇಶದಲ್ಲಿ ರಾಜ್ಯದ ಮುಂದಿನ ಭವಿಷ್ಯವಾಗಿರುವ ಗ್ರಾಮೀಣ ಬಡ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಯಾವುದೇ ವಿಳಂಬವಿಲ್ಲದೆ ವಿದ್ಯುತ್-ಶೌಚಾಲಯ ವ್ಯವಸ್ಥೆಯನ್ನು ಸರ್ಕಾರವು ಕನಿಷ್ಠ ಕಾಲಮಿತಿಯಲ್ಲಿ ಒದಗಿಸಬೇಕು ಹಾಗೂ ಶಿಕ್ಷಕರ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ದಿಟ್ಟಹೆಜ್ಜೆಯನ್ನಿಟ್ಟು ನೇಮಕಾತಿಗೆ ಕ್ರಮಕೈಗೊಳ್ಳಬೇಕು. ಆ ಮೂಲಕ ರಾಜ್ಯದ ಮುಂದಿನ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಬೇಕಾಗಿ ಕೋರುತ್ತಾ, ಅತೀ ಮುಖ್ಯವಾಗಿ ಹೆಣ್ಣು ಮಕ್ಕಳ ಶೌಚಾಲಯ ನಿರ್ವಹಣೆಗೆ ಸರ್ಕಾರ ವಾರ್ಷಿಕ ರೂ.16,000 ಗಳನ್ನು ನೀಡುತ್ತಿದ್ದು, ಇದರಲ್ಲಿ ಶೌಚಾಲಯಗಳ ನಿರ್ವಹಣೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಕೂಡಲೇ ಸರ್ಕಾರ ಹೆಣ್ಣು ಮಕ್ಕಳ ಶೌಚಾಲಯ ನಿರ್ವಹಣೆಗೆ ಸರಿಯಾದ ವ್ಯವಸ್ಥೆ ಕಲ್ಪಿಸಬೇಕು ಹಾಗೂ ಶಾಲೆಗಳ ಕಟ್ಟಡಗಳ ಕಳಪೆ ಕಾಮಗಾರಿ ಮಾಡಿರುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಕ್ಕಳ ಸಂಖ್ಯೆ ಇಳಿಕೆ! ಏರುತ್ತಿದೆ ಶಿಕ್ಷಕರ ಕೊರತೆ! ಪ್ರಾಥಮಿಕ ಶಾಲೆಗಳಲ್ಲಿ ಮೂಲಸೌಕರ್ಯದ ಅಭಾವ ಏಕ ಶಿಕ್ಷಕ ಶಾಲೆಗಳ ಸಂಖ್ಯೆ ಹೆಚ್ಚಳ! ಶಾಲಾಭಿವೃದ್ಧಿಗೆ ಹಣದ ಕೊರತೆ! ಸಿಎಜಿ ವರದಿಯಲ್ಲಿ ಅಸಮಾಧಾನ. ರಾಜ್ಯದ ಶಾಲೆಗಳಲ್ಲಿ ಮಕ್ಕಳು ಮತ್ತು ಶಿಕ್ಷಕರ ಅನುಪಾತದಲ್ಲಿ ಹೆಚ್ಚಳವಾಗುತ್ತಿದೆ. ಏಕ ಶಿಕ್ಷಕರ ಸರ್ಕಾರಿ ಶಾಲೆಗಳ ಸಂಖ್ಯೆಯಲ್ಲಿ ಏರಿಕೆ ಆಗುತ್ತಿದೆ. ಸಹಪಠ್ಯ ಚಟುವಟಿಕೆಯಲ್ಲಿ ಏಕರೂಪದ ಚೌಕಟ್ಟಿಲ್ಲ. ಸಮಗ್ರ ಭಾಷಾ ಮೌಲ್ಯಮಾಪನ ಚೌಕಟ್ಟಿನ ಅಲಭ್ಯತೆ, ನಿಧಿಯ ಕೊರತೆಯಿಂದ ಶಿಕ್ಷಣದ ಗುಣಮಟ್ಟದಲ್ಲಿ ಕುಸಿತ. ಹೀಗೆ ರಾಜ್ಯದ ಶಿಕ್ಷಣ ವ್ಯವಸ್ಥೆಯ ಲೋಪದೋಷಗಳ ಬಗ್ಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು (ಸಿಎಜಿ) ತನ್ನ ವರದಿಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ವಿಧಾನಸಭೆಯಲ್ಲಿ ಮಂಡಿಸಲಾಗಿರುವಂತೆ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ಮಕ್ಕಳ ಪ್ರಮಾಣವನ್ನು ಅಳೆಯಲು ಸರ್ಕಾರದಲ್ಲಿ ಸೂಕ್ತ ಕ್ರಮಗಳಿಲ್ಲ. ಶಿಕ್ಷಣ ಕ್ಷೇತ್ರಕ್ಕೆ ನಿಧಿ ಕೊರತೆ, ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿ, ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ೩೯೩ ಶಾಲೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ, ಪಠ್ಯಪುಸ್ತಕ, ಸಮವಸ್ತ್ರ ಅಲಭ್ಯ, ಕೆಲವು ಜಿಲ್ಲೆಗಳಲ್ಲಿ ಕ್ರೀಡಾ ಅನುದಾನ ಬಳಕೆಯಾಗಿಲ್ಲ ಹಾಗೂ ೩೦ ವಿದ್ಯಾರ್ಥಿಗಳಿಗೆ ಒಬ್ಬರೇ ಶಿಕ್ಷಕರು!

ಪ್ರಾಥಮಿಕ ಶಿಕ್ಷಣದಲ್ಲಿ ನಿವ್ವಳ ದಾಖಲಾತಿ ದರಕ್ಕೆ (ಶಾಲೆಗೆ ದಾಖಲಾಗಿರುವ ಮಕ್ಕಳ ಸಂಖ್ಯೆ ಮತ್ತು ಜನಸಂಖ್ಯೆಯಲ್ಲಿ ಶಾಲೆಗೆ ದಾಖಲಾಗುವ ಅರ್ಹ ವಯಸ್ಸಿನ ಮಕ್ಕಳ ಸಂಖ್ಯೆ) ಸಂಬಂಧಿಸಿದಂತೆ ಗುರಿಯನ್ನು ಸಾಧಿಸಲಾಗಿಲ್ಲ. ಇನ್ನೂ ಬಹಳಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕಾದರೆ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ 1 ರಿಂದ 12ನೇ ತರಗತಿವರೆಗಿನ ಶಾಲೆ ಸ್ಥಾಪಿಸುವುದು, ಎಲ್ಲಾ ಗ್ರಾಮಗಳು ಮತ್ತು ವಸತಿಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವುದು, ಪಾಯಿಂಟ್ ಟು ಪಾಯಿಂಟ್ ಸಾರಿಗೆ ಒದಗಿಸುವುದು, ಶಾಲೆ ತೊರೆದವರು ಮತ್ತು ಶಾಲೆಗೆ ದಾಖಲಾಗದವರನ್ನು ಪತ್ತೆ ಹಚ್ಚಲು ಎನ್.ಜಿ.ಒ. ಹಾಗೂ ಸಮುದಾಯದ ನೆರವು ಪಡೆಯಬೇಕು ಎಂದು ಸಿ.ಎ.ಜಿ. ಸಲಹೆ ನೀಡಿದೆ. ಆದಕಾರಣ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 16.12.2024 ರಂದು "ಶಾಲೆಗಳಿಗೆ ಕರೆಂಟ್ ಇಲ್ಲ, ದುರಸ್ತಿ ಭಾಗ್ಯವೂ ಇಲ್ಲ" ಎಂದು 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದಲ್ಲಿ 393 ಸರ್ಕಾರಿ ಶಾಲೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ, ಪಿಡಬ್ಲ್ಯೂಡಿ ಹಾಗೂ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ ನಿರ್ಮಿಸಿದ ಬಹುತೇಕ ಶಾಲೆ ಮತ್ತು ಶೌಚಾಲಯಗಳು ಸರಿಯಾಗಿ ನಿರ್ವಹಣೆಯಾಗಿಲ್ಲ. ಸೋರುತ್ತಿರುವ ತರಗತಿ ಕೊಠಡಿಗಳು, ಬಿರುಕುಬಿಟ್ಟ ಗೋಡೆಗಳು, ಯಾವಾಗಾದರೂ ಬೀಳಬಹುದಾದ ಪರಿಸ್ಥಿತಿ ಇರುವುದು ಲೆಕ್ಕಪರಿಶೋಧಕರ (ಸಿಎಜಿ) ವರದಿಯಿಂದ ಬಹಿರಂಗವಾಗಿದೆ.

128 ಶಾಲೆಗಳಲ್ಲಿ ತಪಾಸಣೆ ನಡೆಸಿದಾಗ ಏಳು ಶಾಲೆಗಳಲ್ಲಿ ಕ್ರಿಯಾತ್ಮಕ ಶೌಚಾಲಯವಿಲ್ಲ, 21 ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿಲ್ಲ, 22 ಶಾಲೆಗಳಲ್ಲಿ ಶೌಚಾಲಯದ ಬಳಿ ಕೈ ತೊಳೆಯುವ ವ್ಯವಸ್ಥೆ ಇಲ್ಲ ಹಾಗೂ ಶೌಚಾಲಯ ಸೌಲಭ್ಯಗಳ ಅನುಪಸ್ಥಿತಿ ಮತ್ತು ನಿರ್ವಹಣೆ ಎದ್ದು ಕಾಣುತ್ತಿದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಅನುಪಾತದಲ್ಲಿ ವ್ಯತ್ಯಾಸವಾಗಿದೆ. ಇದು ಬಜೆಟ್ ಕೊರತೆ ಅಂಶಗಳು ಮಕ್ಕಳ ಶಿಕ್ಷಣದ ಮೇಲೆ ಭಾರಿ ಪರಿಣಾಮ ಬೀರುತ್ತದೆ. ಶಿಕ್ಷಕರ ಖಾಲಿ ಹುದ್ದೆಯ ಮಂಜೂರಾದ ಒಟ್ಟು ಸಾಮರ್ಥ್ಯದ ಶೇ.10 ರಷ್ಟು ಮೀರಬಾರದು. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಶೇಕಡ 27 ರಷ್ಟು, ನಗರ ಪ್ರದೇಶದಲ್ಲಿ ಶೇಕಡ 21 ರಷ್ಟು ಹುದ್ದೆಗಳು ಖಾಲಿ ಇವೆ. ಕೊಪ್ಪಳದಲ್ಲಿ ಶೇಕಡ 20.90 ರಷ್ಟು, ವಿಜಯಪುರದಲ್ಲಿ ಶೇಕಡ 18.70 ರಷ್ಟು ಅಧಿಕ ಹುದ್ದೆಗಳು ಖಾಲಿ ಇವೆ ಎಂದು ವರದಿಯಾಗಿರುತ್ತದೆ.

ಈ ಪ್ರಯುಕ್ತ ಶಾಲೆಗಳಲ್ಲಿ ವಿದ್ಯುತ್ ಸಂಪರ್ಕ, ಶಾಲಾ ಕಟ್ಟಡಗಳ ದುರಸ್ತಿ ಕಾರ್ಯವನ್ನು ತುರ್ತಾಗಿ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

**ಈ) ವಿಷಯ:- ಬಂಜಾರ ಮಲೆಕುಡಿಯ ಸಮುದಾಯ ಕುಟುಂಬಗಳಿಗೆ ಮಂಜೂರಾಗಿರುವ ಜಮೀನಿನ ವಿರುದ್ಧ ದಾಖಲಿಸಿರುವ ರಿಟ್ ಅರ್ಜಿಯನ್ನು ಹಿಂಪಡೆಯುವ ಬಗ್ಗೆ.**

----

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಳ್ತಂಗಡಿ ತಾಲ್ಲೂಕಿನ ಬಂಜಾರು ಮಲೆಕುಡಿಯ ಕಾಲೋನಿಯಲ್ಲಿ 47 ಕುಟುಂಬಗಳು ವಾಸಿಸುತ್ತಿದ್ದು, ಯೆನೆಪೋಯ ಮೊಹದ್ದಿನ ಕುಂಞ ಅಂಡ್ ಕಂಪನಿ ಇವರು ಬೆಳ್ತಂಗಡಿ ತಾಲ್ಲೂಕಿನ ನರಿಯ ಗ್ರಾಮದಲ್ಲಿ ಒಟ್ಟು 4028 ಎಕರೆ ಜಮೀನನ್ನು ಹೊಂದಿದ್ದು, ಇದರಲ್ಲಿ 368 ಎಕರೆ ಹೆಚ್ಚುವರಿ ಜಮೀನು ಹೊಂದಿರುವುದಾಗಿ ಬೆಳ್ತಂಗಡಿ ಭೂನ್ಯಾಯ ಮಂಡಳಿ ತೀರ್ಪು ನೀಡಿರುತ್ತದೆ. ತೀರ್ಪಿನ ವಿರುದ್ಧ ಭೂಮಾಲೀಕರ ಸಂಸ್ಥೆ ಹಾಗೂ ರಾಜ್ಯ ಸರ್ಕಾರ ಸಲ್ಲಿಸಿದ ರಿಟ್ ಅರ್ಜಿಗಳನ್ನು ರಾಜ್ಯ ಹೈಕೋರ್ಟ್ ತಿರಸ್ಕರಿಸಿರುವುದು ತಿಳಿದು ಬಂದಿರುತ್ತದೆ. ತದನಂತರದಲ್ಲಿ ಸರ್ಕಾರ ರಿಟ್ ಪಿಟಿಷನ್ ಆದೇಶದ ವಿರುದ್ಧ ರಿವ್ಯೂ ಪಿಟಿಷನ್ ಸಲ್ಲಿಸಿ, ಹೈ ಕೋರ್ಟ್‌ನಲ್ಲಿ ತಿರಸ್ಕೃತವಾದ ಕಾರಣ ಸುಪ್ರೀಂ ಕೋರ್ಟ್‌ನಲ್ಲಿ ಸ್ಪೆಷಲ್ ಲೀವ್ ಪಿಟಿಷನ್ ದಾಖಲಿಸಿರುತ್ತದೆ.

ಶ್ರೀ ಮೊಹದ್ದಿನ್ ಕುಂಞ ಅಂಡ್ ಕಂಪನಿ ಇವರು ಕರ್ನಾಟಕ ಭೂ ಸುಧಾರಣಾ ಕಾಯ್ದೆಯಂತೆ ಹೆಚ್ಚುವರಿ ಜಮೀನನ್ನು ಸರ್ಕಾರದ ವಶಕ್ಕೆ ಒಪ್ಪಿಸಬೇಕಾಗಿರುವುದರಿಂದ ಗೇಣಿದಾರರಲ್ಲದ ತಮ್ಮದೇ ವಲಯದ 53 ಜನರಿಗೆ 537 ಎಕರೆ ಜಮೀನನ್ನು ಮಂಜೂರು ಮಾಡಿಸಿಕೊಳ್ಳಲಾಗಿರುತ್ತದೆ ಎನ್ನುವುದು ಸರ್ಕಾರದ ವಾದವಾಗಿದ್ದು, ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುವ ಜಮೀನನ್ನು ರದ್ದುಗೊಳಿಸಲು ಪ್ರಯತ್ನ ನಡೆಸಿರುತ್ತದೆ.

ಆದರೆ, ಮಲೆಕುಡಿಯ ಜನಾಂಗ ವಾಸಿಸುವ ಬಂಜಾರು ಮಲೆಕುಡಿಯ ಸಮುದಾಯ ಕಾಲೋನಿಯ 37 ಕುಟುಂಬಗಳಿಗೆ ಮಂಜೂರಾಗಿರುವ ಜಮೀನಿನ ವಿರುದ್ಧ ರಾಜ್ಯ ಸರ್ಕಾರ ದಾಖಲಿಸಿರುವ ರಿಟ್ ಅರ್ಜಿಯನ್ನು ಹಿಂಪಡೆದು ಈ ಸಮುದಾಯದ ಜನರ ಶ್ರೇಯೋಭಿವೃದ್ಧಿಗೆ ಸಹಕರಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು.

**ಉ) ವಿಷಯ:- ಪ್ರಾಥಮಿಕ ಹಂತದಲ್ಲಿಯೇ ಶಾಲಾ ಮಕ್ಕಳಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ನೀಡುವ ಬಗ್ಗೆ ಸೂಕ್ತ ಕ್ರಮವಹಿಸುವ ಕುರಿತು.**

----

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಹಂತದಲ್ಲಿಯೇ ಸಮಸ್ಯೆ! ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಡಿ.ಡಿ.ಪಿ.ಐ ನೋಟೀಸ್! ಈ ಮಕ್ಕಳನ್ನು ಎಸ್ಸೆಸ್ಸೆಲ್ಲಿಯಲ್ಲಿ ಪಾಸ್ ಮಾಡಿಸುವುದು ಹೇಗೆ? ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದಿಂದ ಆಕ್ಷೇಪ ಬಂದಿದೆ.

ಸರ್ಕಾರಿ ಹಾಗೂ ಅನುದಾನಿತ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿರುವ ಸುಮಾರು 7 ಸಾವಿರ ವಿದ್ಯಾರ್ಥಿಗಳಿಗೆ ಮಾತೃ ಭಾಷೆಯಾದ ಕನ್ನಡ ಓದಲು, ಬರೆಯಲು ಬರುತ್ತಿಲ್ಲ ಹಾಗೂ ಗಣಿತದ ಕನಿಷ್ಠ ಜ್ಞಾನವೂ ಇಲ್ಲ. ಅವರನ್ನು ಪಾಸ್ ಮಾಡುವಂತೆ ಸಿದ್ಧಪಡಿಸಲು ಹೇಗೆ ಸಾಧ್ಯ. ಇಂತಹದೊಂದು ಮೂಲಭೂತ ಪ್ರಶ್ನೆಯನ್ನು ಕೊಪ್ಪಳ ಜಿಲ್ಲೆಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದವರು ಎತ್ತಿದ್ದು ಈ ಕುರಿತು ಅವರು ಕೊಪ್ಪಳ ಡಿ.ಡಿ.ಪಿ.ಐ ಮತ್ತು ಜಿಲ್ಲಾ ಪಂಚಾಯತ್ ಸಿ.ಇ.ಒ. ಅವರಿಗೆ ಮನವಿ ಸಹ ಸಲ್ಲಿಸಿ, ಬುನಾದಿ ಶಿಕ್ಷಣ ವ್ಯವಸ್ಥೆ ಸರಿಪಡಿಸುವಂತೆ ಕೋರಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಕಡ್ಡಾಯ ಶಿಕ್ಷಣ ಮತ್ತು ಶಾಲೆಗೆ ವಿದ್ಯಾರ್ಥಿಗಳು ಬರದಿದ್ದರೂ ಹಾಜರಿ ಹಾಕಿ, ಪಾಸ್ ಮಾಡಿ ಮುಂದಕ್ಕೆ ತಳ್ಳುತ್ತಿರುವುದರಿಂದ ಹೀಗಾಗುತ್ತಿದೆ. ಪ್ರಾಥಮಿಕ ಶಾಲಾ ಹಂತದಲ್ಲಿ ಶಿಕ್ಷಣ ಗುಣಮಟ್ಟ ಕುಸಿದಿರುವುದಕ್ಕೆ ಇದು ಸಾಕ್ಷಿಯಾಗಿದೆ. ಪ್ರಸಕ್ತ ವರ್ಷ ಕೊಪ್ಪಳ ಜಿಲ್ಲೆಯಲ್ಲಿ ಸುಮಾರು 23,000 ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿದ್ದಾರೆ. ಈ ಪೈಕಿ ಸರ್ಕಾರಿ ಮತ್ತು ಅನುದಾನ ಶಾಲೆಯಲ್ಲಿ ಓದುತ್ತಿರುವ 7,000 ವಿದ್ಯಾರ್ಥಿಗಳಿಗೆ ಕನ್ನಡವನ್ನು ಓದಲು, ಬರೆಯಲು ಬರುವುದಿಲ್ಲ. ಜೊತೆಗೆ ಗಣಿತದಲ್ಲಿ ಕೂಡಿಸುವುದು ಮತ್ತು ಕಳೆಯುವ ಲೆಕ್ಕ ಮಾಡದಷ್ಟು ಕನಿಷ್ಠರಾಗಿದ್ದಾರೆ. ಇದು ಕೇವಲ ಕೊಪ್ಪಳ ಜಿಲ್ಲೆಯ ಲೆಕ್ಕಾಚಾರವಾಗಿಲ್ಲದೇ ರಾಜ್ಯಾದ್ಯಂತ ಇದರ ಸಂಖ್ಯೆ ಇನ್ನು ಹಲವಾರು ಪಟ್ಟು ಇದೆ ಎಂದು ಬೆಳಕಿಗೆ ಬಂದಿದೆ.

ಕಳೆದ ವರ್ಷ ಫಲಿತಾಂಶ ತೀವ್ರ ಕುಸಿದಿರುವುದರಿಂದ ಹೇಗಾದರೂ ಫಲಿತಾಂಶ ಮೇಲೆತ್ತಬೇಕು ಎಂದು ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಹಾಗೂ ಸಹ ಶಿಕ್ಷಕರ ಮೇಲೆ ಅಧಿಕಾರಿಗಳಿಂದ ಒತ್ತಡ ಹಾಕಲಾಗುತ್ತಿದೆ. ಇದರಿಂದ ಕೆರಳಿರುವ ಪ್ರೌಢಶಾಲಾ ಸಹ ಶಿಕ್ಷಕರ ಸಂಘದವರು ಓದಲು, ಬರೆಯಲು ಬಾರದೆ ಇರುವ ಹಾಗೂ ಗಣಿತದಲ್ಲಿ ಕೂಡಿಸುವುದು, ಕಳೆಯುವ ಲೆಕ್ಕ ಬಾರದಿರುವ ವಿದ್ಯಾರ್ಥಿಗಳನ್ನು ನಾವು ಹೇಗೆ ಪಾಸ್ ಮಾಡಿಸುವಂತೆ ಸಿದ್ಧ ಮಾಡಬೇಕು ಎಂದು ಆಕ್ಷೇಪ ಎತ್ತಿದ್ದಾರೆ. ಅಷ್ಟೇ ಅಲ್ಲ ಈ ಸಮಸ್ಯೆಯನ್ನೇ ಮುಂದಿಟ್ಟುಕೊಂಡು ಡಿ.ಡಿ.ಪಿ.ಐ ಹಾಗೂ ಕೊಪ್ಪಳ ಜಿಲ್ಲಾ ಪಂಚಾಯತ್ ಸಿ.ಇ.ಒ. ಗೆ ಮನವಿ ಸಲ್ಲಿಸಿದ್ದಾರೆ. ಆಗ ಎಸ್ಸೆಸ್ಸೆಲ್ಸಿಯಲ್ಲಿರುವ ಮಕ್ಕಳ ಸ್ಥಿತಿಗತಿಯನ್ನು ಅರಿಯುಲು ಪರೀಕ್ಷೆ ಮಾಡಿ, ಫಲಿತಾಂಶ ನೋಡಿದಾಗ ಇದೆಲ್ಲವೂ ಗೊತ್ತಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಇರುವ ವಿದ್ಯಾರ್ಥಿಗಳ ಪೈಕಿ 7,000 ವಿದ್ಯಾರ್ಥಿಗಳು ಹೀಗಿರುವುದು ಗೊತ್ತಾಗಿದೆ.

ಮುಖ್ಯೋಪಾಧ್ಯಾಯರಿಗೆ "ಪ್ರಾಥಮಿಕ ಹಂತದಲ್ಲಿಯೇ ಸರಿಯಾದ ಶಿಕ್ಷಣ ದೊರೆಯುತ್ತಿಲ್ಲ. ಪ್ರಾಥಮಿಕ ಶಾಲೆಯಲ್ಲಿರುವ 7ನೇ ತರಗತಿ ವಿದ್ಯಾರ್ಥಿಗಳಿಗೂ ಓದು, ಬರಹ ಗೊತ್ತಿರದ ಶೇಕಡ 30 ರಷ್ಟು ವಿದ್ಯಾರ್ಥಿಗಳು ಇದ್ದಾರೆ. ಇವರನ್ನು ತೇರ್ಗಡೆ ಮಾಡಿ, ಪ್ರೌಢಶಾಲೆಗೆ ಕಳುಹಿಸಲಾಗುತ್ತದೆ. ಹೀಗಾಗಿಯೇ ಸಮಸ್ಯೆಯಾಗುತ್ತಿದೆ. ಆದ್ದರಿಂದ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಇಲ್ಲದಿರುವುದು ಕಂಡು ಬರುತ್ತಿದೆ. ಮುಖ್ಯೋಪಾಧ್ಯಾಯರು ಪ್ರಾಥಮಿಕ ದಿಸೆಯಲ್ಲಿ ನಿಗಾವಹಿಸಬೇಕು" ಎಂದು ಕೊಪ್ಪಳ ಡಿ.ಡಿ.ಪಿ.ಐ. ನೋಟೀಸ್ ಜಾರಿ ಮಾಡಿದ್ದಾರೆ. ಮಕ್ಕಳನ್ನು ಶಾಲೆಗೆ ಕರೆತರುವುದು, ಶಾಲೆಗೆ ಬಂದಿರುವ ಮಕ್ಕಳಿಗೆ ವಿಶೇಷ ಕಾಳಜಿ ನೀಡುವುದು, ಅವರಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಇರುವಂತೆ ನೋಡಿಕೊಳ್ಳುವ ಹೊಣೆ ನಿಮ್ಮದಾಗಿದೆ ಎಂದು ಎಚ್ಚರಿಕೆ ನೀಡಲಾಗಿದೆ. ಇದರ ಬಗ್ಗೆ ಸೂಕ್ತ ಕ್ರಮವಹಿಸುವಂತೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಉತ್ತರವನ್ನು ಒದಗಿಸುತ್ತೇನೆ.

(ಮುಂದು)

(೯೦೮) 17.12.2024 (12.00) ಎಸ್‌ಕೆ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಊ) ವಿಷಯ:-ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ದೋಷಕ್ಕೆ ಕಾರಣರಾದವರನ್ನು ಕಂಡು ಹಿಡಿಯದಿರುವ ಬಗ್ಗೆ.**

---

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಇತ್ತೀಚೆಗೆ ನಡೆದ ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ದೋಷ ಕಂಡು ಬಂದ ಬಳಿಕ ಪರೀಕ್ಷೆ ಮುಂದೂಡಿಕೆಯಾಗಿ 4 ತಿಂಗಳು ಕಳೆದರೂ ಈ ಪ್ರಮಾದಕ್ಕೆ ಹೊಣೆ ಯಾರೆಂಬುದನ್ನು ಸರ್ಕಾರ ಇನ್ನೂ ನಿರ್ಧರಿಸಿಲ್ಲ ಹಾಗೂ ಕ್ರಮವು ಜರುಗಿಸದೇ ಇರುವುದು ನೋವಿನ ಸಂಗತಿಯಾಗಿದೆ. ಇದರಿಂದಾಗಿ, ಪರೀಕ್ಷೆಗೆ ಕೆ.ಪಿ.ಎಸ್.ಸಿ., ವೆಚ್ಚ ಮಾಡಿದ್ದ 13 ಕೋಟಿ ರೂಪಾಯಿಗಳು ನೀರಿನಲ್ಲಿ ಹುಣಸೆ ಹಣ್ಣನ್ನು ತೊಳೆದಂತಾಗಿದೆ. ಅಸಲಿಗೆ ಪ್ರಶ್ನೆ ಪತ್ರಿಕೆ ಎಡವಟ್ಟಿನ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದಂತೆಯೇ ಕಾಣುತ್ತಿಲ್ಲ. ಒಂದೂವರೆ ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳು ರಾಜ್ಯದಲ್ಲಿ ಪರೀಕ್ಷೆ ಎದುರಿಸಿದ್ದರು. ಪ್ರಶ್ನೆ ಪತ್ರಿಕೆಯಲ್ಲಿನ ಭಾಷಾಂತರ ದೋಷದಿಂದಾಗಿ ಸರ್ಕಾರ ಪರೀಕ್ಷೆ ಮುಂದೂಡಿತ್ತು.

ಆಯೋಗವು 2024ರ ಸಾಲಿಗೆ ಅಧಿಸೂಚಿಸಿದ್ದ ಕೆ.ಎ.ಎಸ್. ಪರೀಕ್ಷೆಗೆ 2,10,916 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆದರಂತೆ ಪೂರ್ವಭಾವಿ ಪರೀಕ್ಷೆಯಲ್ಲಿನ ಕನ್ನಡ ಪ್ರಶ್ನೆ ಪತ್ರಿಕೆಯ ಕೆಲವು ಪ್ರಶ್ನೆಗಳಲ್ಲಿ ಭಾಷಾಂತರ ಲೋಪ ಕಂಡು ಬಂದಿತ್ತು. ಈ ಪರೀಕ್ಷೆಗೆ ಸಂಬಂಧಿಸಿದಂತೆ, ಆಯೋಗವು ಸರ್ಕಾರಕ್ಕೆ ವರದಿ ನೀಡಿತ್ತು. ಆ ಪ್ರಕಾರ ಹಲವು ಅಂಶಗಳು ಗಮನಾರ್ಹವಾಗಿವೆ. ಪೂರ್ವಭಾವಿ ಪರೀಕ್ಷೆಯಲ್ಲಿನ ಪ್ರಶ್ನೆಗಳ ಕನ್ನಡ ಭಾಷಾಂತರದಲ್ಲಿನ ಲೋಪ ಪರಿಶೀಲಿಸಲು, ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರ ದರ್ಜೆಯಲ್ಲಿಯರುವಂತಹ ಹಾಗೂ ಉತ್ತಮ ಕನ್ನಡ ಭಾಷಾ ಜ್ಞಾನ ಹೊಂದಿರುವವರಿಗೆ ಆದ್ಯತೆ ನೀಡಲಾಗಿದೆ. ಪ್ರಶ್ನೆ ಪತ್ರಿಕೆಯಲ್ಲಿ ದೋಷಗಳ ಮಹಾಪೂರವೇ ಕಾಣಿಸಿದ್ದನ್ನು ಅಭ್ಯರ್ಥಿಗಳು ಬಹಿರಂಗಪಡಿಸಿ ಆಕ್ಷೇಪಿಸಿ ಪ್ರತಿಭಟನೆಗಳನ್ನು ಸಹ ನಡೆಸಿದ್ದರು, ಆಯೋಗಕ್ಕೆ ಭಾಷಾಂತರಕಾರರು ಸಲ್ಲಿಸಿದ್ದ ವರದಿಯಲ್ಲೂ 50ಕ್ಕಿಂತ ಹೆಚ್ಚು ತಪ್ಪುಗಳಿರುವ ಮಾಹಿತಿ ಇದ್ದಿದ್ದು ಗಮನಾರ್ಹ ವಿಷಯವಾಗಿದೆ.

ಆದರೂ ಸಹ ಈ ವರೆಗೂ ಈ ಪ್ರಕರಣದಲ್ಲಿ ಯಾವುದೇ ಕ್ರಮವಾಗಿಲ್ಲ. ಕ್ರಮ ಕೈಗೊಳ್ಳುವ ಸುಳಿವೂ ಇಲ್ಲವಾಗಿದೆ. ಸರ್ಕಾರಕ್ಕೆ ಸುಮಾರು 13 ಕೋಟಿ ರೂಪಾಯಿಕ್ಕಿಂತ ಹೆಚ್ಚು ನಷ್ಟ ಮಾಡಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಮುಂದಿನ ದಿನಗಳಲ್ಲಿ ಈ ತರಹದ ತಪ್ಪುಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಡಿ.ಎಸ್. ಅರುಣ್‌ರವರೇ, ತಮ್ಮ ಶೂನ್ಯವೇಳೆಯನ್ನು ಓದಿ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ಶರವಣರವರೇ, ತಾವಲ್ಲ. ಮಾನ್ಯ ಅರುಣ್‌ರವರು.

**ಖ) ವಿಷಯ:- ಮಲೆನಾಡು ಗಿಡ್ಡ ತಳಿ ಸಂಶೋಧನೆಗಾಗಿ ಮಾಹಿತಿ ಕೇಂದ್ರವನ್ನು ಪುನರಾರಂಭಿಸಿ, ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವ ಕುರಿತು.**

---

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

"ಮಲೆನಾಡು ಗಿಡ್ಡ ಸಂಶೋಧನೆಗೆ ಕುತ್ತು" ವಿಷಯದ ಕುರಿತು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ. "ಮಲೆನಾಡು ಗಿಡ್ಡ" ಗೋವು ತಳಿ ಭೌಗೋಳಿಕ ಮಾನ್ಯತೆ ಹೊಂದಿದ್ದು, ಪ್ರಮುಖವಾಗಿ ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿಯಲ್ಲಿ ಈ ತಳಿ ಹೇರಳವಾಗಿ ಕಂಡು ಬರುವಂತಹದ್ದಾಗಿದೆ. ಈ ತಳಿಯ ಹಾಲಿನಲ್ಲಿ ಎ-2 ಕೆಸಿನ್ ಅಧಿಕವಿದ್ದು, ಜಗತ್ತಿನಲ್ಲೇ ಕಡಿಮೆ ಕೊಲೆಸ್ಟ್ರಾಲ್ ಅಂಶ ಹೊಂದಿರುವುದು ದೃಢಪಟ್ಟಿರುತ್ತದೆ. ರಾಜ್ಯದ ಪಶು ವರ್ಗದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ "ಮಲೆನಾಡು ಗಿಡ್ಡ" ತಳಿಯ ಬಗ್ಗೆ ಅಧ್ಯಯನ ಕೈಗೊಳ್ಳಲು ಪಶು ವೈದ್ಯಕೀಯ ಮಹಾವಿದ್ಯಾಲಯ ಆವರಣದಲ್ಲಿ ಸ್ಥಾಪಿಸಿದ್ದ ಮಲೆನಾಡು ಗಿಡ್ಡ ತಳಿ ಸಂಶೋಧನೆ ಹಾಗೂ ಮಾಹಿತಿ ಕೇಂದ್ರಕ್ಕೆ ಬೀಗ ಜಡಿಯುವ ಸ್ಥಿತಿಗೆ ತಲುಪಿರುವುದನ್ನು ಪತ್ರಿಕೆ ಬೆಳಕಿಗೆ ತಂದಿರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಶಿವಮೊಗ್ಗದ ಪಶು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮಲೆನಾಡು ಗಿಡ್ಡ ತಳಿ ಸಂಶೋಧನೆ ಹಾಗೂ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದ್ದು, 1 ಕೋಟಿ ರೂಪಾಯಿಗಳಷ್ಟು ಅನುದಾನ ಸಹ ಮಂಜೂರು ಮಾಡಿರುವುದಿಲ್ಲ.

ಪ್ರಸ್ತುತ ಈ ಕೇಂದ್ರವು ಯಾವುದೇ ಸವಲತ್ತು ಹಾಗೂ ಸಿಬ್ಬಂದಿಗಳನ್ನು ಹೊಂದಿಲ್ಲದೆ ಯಾರಿಗೂ ಬೇಡವಾದ ಕೂಸಾಗಿರುತ್ತದೆ.

ಮಲೆನಾಡು ಗಿಡ್ಡ ತಳಿಯ ಹಾಲು ಮತ್ತು ಅದರ ಉತ್ಪನ್ನಗಳಿಗೆ ಬೇಡಿಕೆ ಇದ್ದು, ಹಾಲಿನಲ್ಲಿರುವ ಔಷಧೀಯ ಗುಣದ ಬಗ್ಗೆ ಹಾಗೂ ಅತಿ ಹೆಚ್ಚು ರೋಗ ನಿರೋಧಕ ಶಕ್ತಿಯ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುವ ಸಲುವಾಗಿ ಮಲೆನಾಡು ಗಿಡ್ಡ ತಳಿ ಸಂಶೋಧನೆಗೆ ಅನುಕೂಲವಾಗುವಂತೆ ಮಾಹಿತಿ ಕೇಂದ್ರವನ್ನು ಪುನರಾರಂಭಿಸಬೇಕು. ಸಂಶೋಧನೆಗೆ ಸರ್ಕಾರ ಹೆಚ್ಚಿನ ಒತ್ತು ಕೊಟ್ಟು ಅಗತ್ಯವಿರುವ ಅನುದಾನವನ್ನು ಸಹ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಇಲಾಖೆಯ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೆ. ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರನ್ನು ಒದಗಿಸಲಾಗುವುದು.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದು ಶೂನ್ಯ ವೇಳೆ ಇದೆ.

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ. ನಮೋಶಿಯವರೇ, ಒಂದು ನಿಮಿಷ. ನಾನು ತಮ್ಮ ಶೂನ್ಯವೇಳೆಯನ್ನು ತೆಗೆದುಕೊಂಡಿದ್ದೇನೆ. ಅದನ್ನು ಕೆಳಗಿನ ಮನೆಯಲ್ಲಿ ತೆಗೆದುಕೊಂಡಿದ್ದಾರೆ. Complication

ಆಗಬಾರದು ಎಂದು ಹಾಕಿಕೊಂಡಿದ್ದೆ. Unnecessarily problem ಆಗುವುದು ಬೇಡ. ಅನುಭವ ಮಂಟಪದ ಚಿತ್ರವನ್ನು ವಿಧಾನಸಭೆಯವರು ಹಾಕಿದ್ದಾರೆ. ಅದು ನಮ್ಮದು ಅಲ್ಲ. ಸದನದ ನಂತರ ಮುಖ್ಯಮಂತ್ರಿಯವ ಜೊತೆ ಮಾತನಾಡೋಣ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಕನಿಷ್ಠ ಪಕ್ಷವಾದರೂ ಅನುಮತಿಯನ್ನು ಪಡೆದು, ಅದನ್ನು ಹಾಕಿದ್ದರೆ, ಒಳ್ಳೆಯದಾಗುತ್ತಿತ್ತು.

**ಸಭಾಪತಿಯವರು:-** ಅದು ಬೇಡ ಎಂದು. Complication ಪ್ರಾರಂಭವಾಗಬಾರದು.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಅದು ಸರಿಯಲ್ಲ. ಒಂದು ಕೃತಿ ಒಬ್ಬರು ಮಾಡಿದ್ದು, ಅದನ್ನು ಕಳ್ಳತನದಿಂದ ಮಾಡಿದಂತಹದ್ದಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈ ವಿಷಯದ ಕುರಿತಾಗಿ, ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡೋಣ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಹೊರಗಡೆ ಪಾರ್ಲಿಮೆಂಟ್ ಹೌಸ್‌ನ ಚಿತ್ರ ಮಾಡಿದ್ದಾರೆ…..

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಅದು ಬೇಡ. ಕೆಳಮನೆಯವರು ಮಾಡಿದ್ದನ್ನು ನಾವು ಟೀಕೆ ಮಾಡುವುದು ಬೇಡ. ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡಿ, ಅದನ್ನು ಸರಿಪಡಿಸೋಣ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಅದನ್ನು change ಮಾಡಿಸಿ.

**ಸಭಾಪತಿಯವರು:-** ಆಯಿತು.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಅವರು ಕೂಡ ಮಾಡಿಕೊಡುತ್ತಿಲ್ಲ. ಅವರ ಹೆಸರನ್ನು ಹಾಕಿದರೆ ಒಳ್ಳೆಯದಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮ್ಮ ಜೊತೆ ಮಾತನಾಡುತ್ತೇನೆ. ಈಗ ತಾವು ಮಾತನಾಡುವುದು ಬೇಡ. …..

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ನನ್ನದು ಶೂನ್ಯವೇಳೆ ಪಟ್ಟಿಯಲ್ಲಿ ಬಂದಿದೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪಿಸಿರುವುದು ಶೂನ್ಯವೇಳೆಯು ಪಟ್ಟಿಯಲ್ಲಿ ಬಂದಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದನ್ನು ತೆಗೆದಿದ್ದೇವೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮಂತ್ರಿಯವರು ಏನು ಹೇಳುತ್ತಾರೋ, ಹೇಳಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾವು ಲಿಸ್ಟ್‌ನಲ್ಲಿ ಸೇರಿಸಿದ್ದೇವೆ. ಅದರ ಬಗ್ಗೆ ನಾನು ಚರ್ಚೆಗೆ ವಿಚಾರ ಮಾಡಿದೆ. Unnecessary ಆಗಿ ಕೆಳಗಿನ ಮನೆಯವರಿಗೂ ಮೇಲ್ಮನೆಯವರಿಗೂ complications

ಶುರುವಾಗಬಾರದು. ಅದರ ಸಲುವಾಗಿ ಬೇಡ ಎನ್ನುತ್ತಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ ಮೇಲೆ ಮುಂದೆ ನೋಡೋಣ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಏನು ಉತ್ತರ ಕೊಡುತ್ತಾರೋ ಕೊಡಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಬೇಡ. ನಾನು ತಮಗೆ ಹೇಳುತ್ತೇನೆ. ಮಾನ್ಯ ಶರವಣರವರೇ, ತಮ್ಮ ಶೂನ್ಯವೇಳೆಯನ್ನು ಪ್ರಸ್ತಾಪ ಮಾಡಿ.

**ಎ) ವಿಷಯ:- ಬಿ.ಬಿ.ಎಂ.ಪಿ., ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಬಡಾವಣೆಗಳ ಇ-ಖಾತೆ ಸಂಬಂಧ ರಿಲಿಕ್ವಿಂಶ್ ಡೀಡ್‌ಗೆ ಅವಕಾಶ ಕಲ್ಪಿಸದಿರುವ ಕುರಿತು.**

---

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಪ್ರಮುಖ ದಿನಪತ್ರಿಕೆಯಾದ "ಕನ್ನಡ ಪ್ರಭ" ಮತ್ತು ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಷಯವನ್ನು ಈ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಜ್ಯಾದ್ಯಾಂತ ಎಲ್ಲಾ ರೀತಿಯ ಆಸ್ತಿ ದಸ್ತಾವೇಜು ನೋಂದಣಿಗೆ ಇ-ಖಾತೆ ಕಡ್ಡಾಯಗೊಳಿಸಿರುವ ಸರ್ಕಾರ ಕಾವೇರಿ-2 ತಂತ್ರಾಂಶದಲ್ಲಿ ರಿಲಿಂಕ್ವಿಶ್ ಡೀಡ್ ಆಯ್ಕೆಯನ್ನೇ ಕಲ್ಪಿಸಿಲ್ಲ. ಅಗತ್ಯ ಸಿದ್ಧತೆ ಇಲ್ಲದೇ ಈ ರೀತಿ ಇ-ಖಾತಾ ಕಡ್ಡಾಯಗೊಳಿಸಿರುವುದು ನಾಗರಿಕರಿಗೆ ಹಾಗೂ ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಭಾರಿ ಪೆಟ್ಟು ಬಿದ್ದಿದೆ. ಯಾವುದೇ ನಾಗರಿಕ ಸೌಲಭ್ಯಗಳ ನಿವೇಶನಗಳನ್ನು ಮೊದಲು ಸ್ಥಳೀಯ ಸಂಸ್ಥೆಗಳಿಗೆ ರಿಲಿಂಕ್ವಿಶ್ ಡೀಡ್ ಮೂಲಕ ನೊಂದಣಿ ಮಾಡಿ ಮಾಲೀಕತ್ವದ ವರ್ಗಾವಣೆ ಕಡ್ಡಾಯಗೊಳಿಸಲಾಗಿದೆ. ಇದು ಆಗದಿದ್ದರೆ, ನಿವೇಶನಗಳ ಮಾರಾಟಕ್ಕೆ ಅವಕಾಶವಿಲ್ಲ. ಹೀಗಿದ್ದರೂ ಕಳೆದ ಎರಡೂವರೆ ತಿಂಗಳಿನಿಂದ ರಿಲಿಂಕ್ವಿಶ್ ಡೀಡ್ ಆಯ್ಕೆಯನ್ನೇ ಕಲ್ಪಿಸಿಲ್ಲ. ಇದರಿಂದ ಬಡಾವಣೆಗಳ ನಿವೇಶನ ಖರೀದಿಗೆ ತುಂಬಾ ಪೆಟ್ಟು ಬಿದ್ದಿದೆ ಹಾಗೂ ಇದರಿಂದ ಸರ್ಕಾರದ ಆದಾಯಕ್ಕೆ ಕೊಕ್ಕೆ ಬಿದ್ದಿದೆ. ಮುಂದುವರೆದು, ಕುಟುಂಬದಲ್ಲಿ ಗಂಡನಿಂದ ಹೆಂಡತಿಗೆ, ಸಹೋದರರಿಗೆ ಮತ್ತು ಮಕ್ಕಳಿಗೆ ಆಸ್ತಿಯನ್ನು ವರ್ಗಾಯಿಸಲು ಸಾಧ್ಯವಾಗುತ್ತಿಲ್ಲ. ಈಗಷ್ಟೆ ಸರಿಪಡಿಸಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ನಾಗರೀಕರು ಇಲ್ಲ ಎನ್ನುತ್ತಿದ್ದಾರೆ. ಈ ಸಮಸ್ಯೆ ಪರಿಹರಿಸಲು ಪೌರಾಡಳಿತ ನಿರ್ದೇಶನಾಲಯ ದಿನಾಂಕ 08.11.2024ರಂದು ಆದೇಶ ಹೊರಡಿಸಿದ್ದು, ಆದರೆ ಬಿ.ಬಿ.ಎಂ.ಪಿ., ಸೇರಿದಂತೆ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪರಿಹಾರ ಕಲ್ಪಿಸಲು ಸಾಧ್ಯವಾಗಿಲ್ಲ. ಇನ್ನೂ ಭೂ ಬಳಕೆ ಪರಿವರ್ತನೆ ನಕ್ಷೆ ಮಂಜೂರಾತಿ ಪ್ರಕಾರ ಅಭಿವೃದ್ಧಿಗೊಳ್ಳದ ಜಮೀನನ್ನು ಒಟ್ಟಾಗಿ ಮಾರಾಟ ಮಾಡಲು ಸಹ ಅವಕಾಶ ಇಲ್ಲದಂತಾಗಿದೆ. ಹೀಗಾಗಿ ಬಡಾವಣೆ ಅಭಿವೃದ್ಧಿದಾರರು ಬಡಾವಣೆ ನಿರ್ಮಿಸಲು ಅಗತ್ಯ ಜಮೀನು ಖರೀದಿಸಲು ಸಹ ಸಮಸ್ಯೆಯಾಗಿದೆ. ಆದುದರಿಂದ, ಇ-ಖಾತೆಗೆ ಸಂಬಂಧಿಸಿದಂತೆ, ಸರ್ಕಾರ ತುರ್ತಾಗಿ ಅಗತ್ಯ ಕ್ರಮಕೈಗೊಂಡು ನಾಗರೀಕರಿಗೆ ಮತ್ತು ಭೂ ಅಭಿವೃದ್ಧಿದಾರರಿಗೆ ಅನುಕೂಲ ಕಲ್ಪಿಸಿ ಸರ್ಕಾರದ ಆದಾಯಕ್ಕೆ ಕೊಕ್ಕೆಯಾಗದಂತೆ ಮಾಡಬೇಕೆಂದು, ನಾನು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಧನ್ಯವಾದಗಳು.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರನ್ನು ಒದಗಿಸಲಾಗುವುದು.

(ಮುಂದು)

**ಶ್ರೀ ಶರವಣ.ಟಿ.ಎ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ correct ಆಗಿ ಸರ್ಕಾರ ಯಾವಾಗ ಉತ್ತರ ಕೊಡುತ್ತಾರೆಂದು ಹೇಳಬೇಕು. ನಾನು ನಿನ್ನೆ ದಿವಸ ಕೂಡ ನಿಮಗೆ ಪ್ರಾರ್ಥನೆ ಮಾಡಿ ಒಂದು ಪತ್ರವನ್ನು ಕೂಡ ಬರೆದಿದ್ದೇನೆ. ಈ ಪ್ರಶ್ನೆಗೆ ಉತ್ತರವೇ ಬರದೇ ಇರತಕ್ಕಂಥದ್ದಕ್ಕೆ ಬಹಳಷ್ಟು ನಿದರ್ಶನಗಳಿವೆ. ಇದರ ಬಗ್ಗೆ ನಿನ್ನೆ ದಿವಸ ಕೂಡ ಚರ್ಚೆ ಮಾಡಿದ್ದೇವೆ. ಇದಕ್ಕೊಂದು ಸಮಿತಿಯನ್ನು ರಚನೆ ಮಾಡುವಂತೆ ತಮಗೂ ಕೂಡ ಒಂದು ಪತ್ರ ಬರೆದಿದ್ದೇನೆ. ಅದಕ್ಕೆ ತಾವು ಉತ್ತರ ಕೊಡುತ್ತೇನೆಂದು ಹೇಳಿದ್ದೀರಿ. ಆದರೆ ತಾವು ಏನೂ ಹೇಳಿಲ್ಲ. ಅದರ ಕಡೆ ಕೂಡ ತಾವು ಗಮನ ಹರಿಸಬೇಕು.

**ಸಭಾಪತಿಯವರು:-** ಶ್ರೀ ಟಿ.ಎ.ಶರವಣರವರೇ, ನಾನು ಕೂಡ ಅದಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟವರಿಗೆ ಕಳುಹಿಸಿದ್ದೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಪತ್ರವನ್ನು ಕಳುಹಿಸಿದ್ದೇನೆ. ತಾವು ಅದನ್ನು ಮಾಡಿ. ಅವರು ಅದಕ್ಕೆ ಯಾವಾಗ ಉತ್ತರ ಕೊಡುತ್ತಾರೆಂದು ಹೇಳಲಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈ ಸದನ ಮುಗಿಯುವುದರೊಳಗೆ ಕೊಡಲು ಬಾಕಿ ಇರುವಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ನನಗೆ ಈ ಸಂಬಂಧ ಸೂಚನೆಯನ್ನು ಕೊಟ್ಟಿದ್ದೀರಿ. ತಮಗೆ ನಾನು report ಮಾಡುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಹಕಾರ ಸಚಿವರಿಂದ ತಡವಾಗಿ ಉತ್ತರ ಬಂದಿದೆ. ದಯಮಾಡಿ ಈಗ ಇದೊಂದು ಪ್ರಶ್ನೆಯನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ಬೇಕು ಬೇಕಾದಾಗ ಪ್ರಶ್ನೆ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ?

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡಲು ತಡವಾಗಿ ಬಂದಿದ್ದಾರೆ. ದಯವಿಟ್ಟು ನನ್ನ ಪ್ರಶ್ನೆಯನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕು. ಮಾನ್ಯ ಸಹಕಾರ ಸಚಿವರು ಉತ್ತರ ಕೊಡಲಿ. ನಾನೇನು ಈ ಸಮಸ್ಯೆಗೆ ಹೆಚ್ಚಿಗೆ ಸಮಯವಕಾಶ ತೆಗೆದುಕೊಳ್ಳುವುದಿಲ್ಲ.

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ಪ್ರಶ್ನೋತ್ತರ ಅವಧಿ ಮುಗಿದ ನಂತರ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರ ಅಭಿಪ್ರಾಯವನ್ನಾದರೂ ಅವರು ಏನು ಹೇಳುತ್ತಾರೋ ಕೇಳಿ. ದಯಮಾಡಿ ಅದಕ್ಕೊಂದು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ನಾನು allow ಮಾಡುವುದಿಲ್ಲ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರತಕ್ಕಂಥ ರೈತರಿಗೆ ಸಂಬಂಧಿಸಿದ ವಿಚಾರವಾಗಿದೆ. ಆ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. ರೈತರ ವಿಚಾರದಲ್ಲಿ ನೂರಾರು ಕೋಟಿ ರೂಪಾಯಿಗಳು

ಲೂಟಿ ಆಗುತ್ತಿವೆ. ಅದನ್ನು ತಡೆಯುವುದಕ್ಕೆ ದಯಮಾಡಿ ಕಾಲಾವಕಾಶ ಕೊಡಿ. ಮಾನ್ಯ ಸಚಿವರು ಎರಡು ಮಾತನಾಡುವುದಕ್ಕೆ ಕಾಲಾವಕಾಶ ಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಮನವಿ ಇದೆ. . .

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ಪ್ರಶ್ನೋತ್ತರ ಅವಧಿ ಮುಗಿದ ನಂತರ ಯಾವಾಗ ಬೇಕಾದರೂ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಈಗಾಗಲೇ ಪ್ರಶ್ನೋತ್ತರ ಅವಧಿ ಮುಗಿದಿದೆ. ಮಾನ್ಯ ಸದಸ್ಯರು ಮಾತನಾಡಲಿ. ನೀವು ಆಮೇಲೆ ಮಾತನಾಡಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಬಂದಿರುವ ಉತ್ತರದಲ್ಲಿ ಅವರ ಅಧಿಕಾರಿಗಳು ತಪ್ಪು ಮಾಡಿಬಿಟ್ಟಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಲಿ.

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ಮಾನ್ಯ ಸಚಿವರು ಸುಮಾರು 15 ದಿವಸ ಸಮಯ ಕೇಳಿದ್ದಾರೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, 15 ದಿವಸ ಅಧಿವೇಶನ ಎಲ್ಲಿದೆ?

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ನನಗೆ ಗೊತ್ತಿಲ್ಲ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಾಳೆ ಇದನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತಾರೆಯೇ ಕೇಳಿ. ಬೇರೆ ರೂಪದಲ್ಲಿ ಅವಕಾಶ ಮಾಡಿಕೊಡುತ್ತೀರಾ ಹೇಳಿ.

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ನಾಳೆ ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಎನ್.ರಾಜಣ್ಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:-** ಮಾನ್ಯ ರವಿಯವರೇ, ಈ ರೀತಿ ಆದರೆ ನಾನು ಹೇಗೆ ಸದನ ನಡೆಸುವುದು?

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಅಲ್ಲಿ ರೈತರಿಗೆ . . .

**ಶ್ರೀ ಕೆ.ಎನ್.ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಸುಲಭವಾಗಿ ಬಗೆಹರಿಯುತ್ತದೆ. ಅವರು ಶೂನ್ಯವೇಳೆಯ ಅಂತ್ಯದಲ್ಲಿ ಅವರಿಗೆ ಪ್ರಸ್ತಾಪ ಮಾಡುವುದಕ್ಕೆ ಹೇಳಿಬಿಡಿ. ನಾನು ಒಂದೇ ಲೈನ್‌ನಲ್ಲಿ ಉತ್ತರ ಹೇಳುತ್ತೇನೆ. ಅಲ್ಲಿಗೆ ಮುಗಿಯುತ್ತದೆ. ಸುಮ್ಮನೆ unnecessarily ಸಮಯ waste ಮಾಡುವುದು ಬೇಡ.

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ಅದನ್ನು ನಾಳೆ ತೆಗೆದುಕೊಳ್ಳುತ್ತೇವೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಇವತ್ತೇ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಶ್ರೀ ಎಸ್.ರವಿಯವರೇ, ವಿಚಾರ ಮಾಡುವುದಕ್ಕೆ ಸ್ವಲ್ಪ time ಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿಮ್ಮ authorityಯನ್ನು ನಾವು ಪ್ರಶ್ನೆ ಮಾಡುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. Zero hour ನಲ್ಲಿ . . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆದರೆ ಪ್ರಶ್ನೆ ಏನೆಂದರೆ, ಮಾನ್ಯ ಕಿಶೋರ್ ಕುಮಾರ್ ರವರು ಹೊಸ ಸದಸ್ಯರು. ಅವರು ಮೊದಲನೇ ಬಾರಿಗೆ ಈ ಅಧಿವೇಶನಕ್ಕೆ ಬಂದಿದ್ದಾರೆ. ಕೆಲವು ವಿಚಾರಗಳಲ್ಲಿ ಕೆಲವು ಸಂದರ್ಭಗಳಲ್ಲಿ ಇಲ್ಲ starred question ಆಗುವುದೇ ಒಂದು ಅಪರೂಪದ ವಿಷಯ. ಆದರೆ ಎತ್ತಿಗೆ ಜ್ವರ ಬಂತು ಎಂದು ಎಮ್ಮೆಗೆ ಬರೆ ಹಾಕುವುದು ಸರಿಯಲ್ಲ. ಏಕೆಂದರೆ ಅವರು ಪ್ರಥಮ ಬಾರಿಗೆ ಬಂದಿದ್ದಾರೆ. ಅವರಿಗೆ ನೋವಾಗುತ್ತದೆ. ಅವರಿಗೂ ಕೂಡ ಒಂದು ಅವಕಾಶ ಬಂದಿದೆ. ಅವರು ಕೂಡ ಪ್ರಸ್ತಾಪ ಮಾಡಲು ಒಂದು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ತಾವು ವಿರೋಧ ಪಕ್ಷದ ನಾಯಕರು. ಮೊದಲನೇ ಪ್ರಶ್ನೆಗೆ ಒಟ್ಟು 22 ನಿಮಿಷ ಆಗಿದೆ. ನಾನು ಬೆಲ್ ಮಾಡಿದರೂ ಕೂಡ ಯಾರೂ ಸುಮ್ಮನೆ ಕೂರುವುದಿಲ್ಲ. ಯಾರು ಬೇಕಾದರು ಎದ್ದು ನಿಂತು ಮಾತನಾಡಿದರೆ ನಾನು ಸದನವನ್ನು ಹೇಗೆ ನಡೆಸಬೇಕು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ವಿಷಯ ಆ ರೀತಿ ಇತ್ತು.

**ಸಭಾಪತಿಯವರು:-** ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಒಂದು ನಿಮಿಷ. ಯಾರಿಗೋ ಎಮ್ಮೆಗೆ ಬರೆ ಅಲ್ಲ, ಇದು ಸದನ. ಒಟ್ಟು 1 ಗಂಟೆ 45 ನಿಮಿಷ ಸಮಯ ಕೊಟ್ಟಿದ್ದೇನೆ. ಆದರೆ ಒಂದು ಗಂಟೆಯೊಳಗೆ ಮುಗಿಸಬೇಕಿತ್ತು. ಸುಮಾರು 20 ನಿಮಿಷಗಳ ಕಾಲ ಹೆಚ್ಚಿಗೆ ಕೊಟ್ಟಿದ್ದೇನೆ. ಮತ್ತೆ ನೀವು ಒಂದೊಂದು ಪ್ರಶ್ನೆಗೆ 20 ನಿಮಿಷಗಳ ಕಾಲ ಮಾತನಾಡಿದರೆ ನಾನು ಏನು ಮಾಡಲಿ? ಎಲ್ಲರೂ ಕೂಡ ಎದ್ದೇಳುತ್ತಾರೆ. ನಾನು ಹೇಳಿದರೂ ಕೂಡ ಕೇಳುವುದಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಸಂದರ್ಭಗಳಲ್ಲಿ ಕೆಲವು questions ಗೆ ಹೆಚ್ಚಿಗೆ ಸಮಯ ಕೊಟ್ಟರೆ ನಮ್ಮ objection ಇಲ್ಲ. ಅವರು ಹೊಸ ಸದಸ್ಯರು ಕೇಳಿದ್ದಾರೆಂದು ಹೇಳಿದೆನು.

**ಸಭಾಪತಿಯವರು:-** ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಒಂದು ನಿಮಿಷ ನನ್ನ ಮಾತು ಕೇಳಿ. ನಾನು ಎಲ್ಲಾ ರೀತಿಯಿಂದ ಎಲ್ಲಾ ಸದಸ್ಯರುಗಳಿಗೆ ಸಮಾಧಾನ ಆಗುವಂತೆ ಪ್ರಯತ್ನಪಡುತ್ತಿದ್ದೇನೆ. ಅತಿಯಾದರೆ ಅದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ? ಯಾರೂ ನನ್ನ ಮಾತು ಕೇಳದೇ, ಮಧ್ಯೆ ಎದ್ದು ನಿಂತು ಮಾತನಾಡುತ್ತಾರೆ. ಒಬ್ಬರು ಪ್ರಶ್ನೆ ಕೇಳಿವಾಗ 20 ಜನ ಸದಸ್ಯರು ಎದ್ದು ನಿಲ್ಲುತ್ತಾರೆ. ಒಂದು question ಗೆ 20 ನಿಮಿಷ ತೆಗೆದುಕೊಂಡರೆ ನಾನು ಏನು ಮಾಡುವುದು ನೀವೇ ಹೇಳಿ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಒಪ್ಪುತ್ತೇನೆ. ದಯವಿಟ್ಟು ಅವರಿಗೆ ಒಂದು ಅವಕಾಶ ಕೊಡಿ. ದಯವಿಟ್ಟು ಮಾನ್ಯ ಸಚಿವರು ಕೂಡ ಇದ್ದಾರೆ, ಉತ್ತರ ಕೊಡುತ್ತಾರೆ.

**ಸಭಾಪತಿಯವರು:-** ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ವಿಚಾರ ಮಾಡಿ ನೋಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. ನಾನು ಒಂದು ವಿಚಾರದ ಬಗ್ಗೆ ಸಾರ್ವಜನಿಕ ಮಹತ್ವವಾದ ವಿಷಯವನ್ನು zero hour ನಲ್ಲಿ ಕೊಟ್ಟಿದ್ದೇನೆ. . .

**ಸಭಾಪತಿಯವರು:-** ಶ್ರೀ ಕೆ.ಎ.ತಿಪ್ಪೇಸ್ವಾಮಿಯವರೇ, 20 ಸಾರ್ವಜನಿಕ ಮಹತ್ವವಾದ ವಿಷಯಗಳು ಬಂದಿದ್ದವು. ಅದರಲ್ಲಿ ಯಾವ್ಯಾವುದು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇನೆ. ಎಲ್ಲವನ್ನು ತೆಗೆದುಕೊಳ್ಳಬೇಕೆಂದು ಕಾಯ್ದೆ ಇಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ನಿಯಮ ಪ್ರಕಾರವಾಗಿ . . .

## 06. ಪ್ರಕಟಣೆ

**ಸಭಾಪತಿಯವರು:-** ಕರ್ನಾಟಕ ಸುವರ್ಣ ಸಂಭ್ರಮದ ಸವಿನೆನಪಿನಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ತಮಗೆ ಹೊಸ ಅಪರಾಧಿಕ ಕಾನೂನುಗಳ ಕೈಪಿಡಿ ಮತ್ತು ಭಾರತ ಸಂವಿಧಾನದ ಕೈಪಿಡಿ ಪುಸ್ತಕಗಳನ್ನು ನೀಡಲು ಹರ್ಷಿಸುತ್ತೇನೆ.

ಭಾರತ ಸರ್ಕಾರವು ಜಾರಿಗೆ ತಂದಿರುವ ಭಾರತೀಯ ನ್ಯಾಯ ಸಂಹಿತೆ 2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಮತ್ತು ಭಾರತೀಯ ಸಾಕ್ಷಿ ಅಧಿನಿಯಮ, 2023ರ ಸಮಗ್ರ ಮಾಹಿತಿಯನ್ನು ಒಳಗೊಂಡ ಹೊಸ ಅಪರಾಧಿಕ ಕಾನೂನುಗಳ ಕೈಪಿಡಿ ಹಾಗೂ ಭಾರತ ಸಂವಿಧಾನದ ಕೈಪಿಡಿ ಪುಸ್ತಕಗಳನ್ನು ಉಪಯೋಗಿಸಿಕೊಂಡು ಚಿಂತಕರ ಚಾವಡಿ ಹಾಗೂ ಪ್ರಾಜ್ಞರ ಮನೆಯಾಗಿರುವ ಈ ವಿಧಾನ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ತಾವು ಇನ್ನಷ್ಟು ಕ್ರಿಯಾಶೀಲರಾಗಿ ಮೌಲ್ಯಯುತ ಚರ್ಚೆಯಲ್ಲಿ ತೊಡಗಿಸಿಕೊಳ್ಳಲು ಸಹಕಾರಿ ಆಗುತ್ತದೆ ಎಂದು ಭಾವಿಸುತ್ತೇನೆ.

## 07. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ:-** ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

01. ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024
02. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024
03 ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2024
04 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕ, 2024
05 ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2024
06 ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024
07 ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2024

**ಸಭಾಪತಿಯವರು:-** ಮಂಡಿಸಲಾಯಿತು.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**೦೮ . ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಪಟ್ಟ ಸಚಿವರಿಂದ ಹೇಳಿಕೆಗಳು.**

**ಅ) ವಿಷಯ:- ಅರಣ್ಯಾಧಿಕಾರಿಗಳ ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವ ಬಗ್ಗೆ.**

----

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್ ರವರು ದಿನಾಂಕ ೦9.12.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಆ) ವಿಷಯ:- ನಂದಿಕೂರು-ಕಾಸರಗೋಡು ವಿದ್ಯುತ್ ಲೈನ್‌ಗೆ ಪರ್ಯಾಯ ಯೋಜನೆ ರೂಪಿಸುವ ಬಗ್ಗೆ.**

----

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರು ದಿನಾಂಕ 12.12.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ:- ರಾಜ್ಯದ ವಿಶ್ವವಿದ್ಯಾಲಯಗಳು ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಕಳೆದ ಮೂರು ವರ್ಷಗಳಿಂದ ಅಂಕಪಟ್ಟಿ ನೀಡದಿರುವ ಕುರಿತು.**

----

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ದಿನಾಂಕ 13.12.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ) ವಿಷಯ:- ಪೊಲೀಸ್ ಇಲಾಖೆಯ ಕಾನ್‌ಸ್ಟೇಬಲ್‌ಗಳ ವರ್ಗಾವಣೆಯಲ್ಲಿ ಪತಿ-ಪತ್ನಿ ಪ್ರಕರಣಗಳಿಗೆ ಮುಕ್ತ ಅವಕಾಶ ನೀಡುವ ಬಗ್ಗೆ.**

----

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರು ದಿನಾಂಕ 16.12.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಉಪ ಸಭಾಪತಿಯವರೇ, ಮಾನ್ಯ ಸಭಾಪತಿಯವರು ನಾನು ಇಂದು ಕೇಳಿದಂತಹ ಪ್ರಶ್ನೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿ ಹೋದರು. ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಮಾನ್ಯ ಸಹಕಾರ ಸಚಿವರು ಸದನದಿಂದ ಹೊರಟು ಹೋಗುತ್ತಾರೆ. ನನ್ನ ಆತ್ಮೀಯರೇ ಪೀಠಾಸೀನರಾಗಿರುವುದಕ್ಕೆ ಖುಷಿ ಆಯಿತು. ದಯಮಾಡಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರು:-** ಮಾನ್ಯ ಎಸ್.ರವಿಯವರೇ, ನೀವು ದಯವಿಟ್ಟು ಕುಳಿತುಕೊಳ್ಳಿ. ಈಗ ಇದು ಮುಗಿಯಲಿ. ಆಮೇಲೆ ಇದು ಇದೆ.

**09. ವಿತ್ತೀಯ ಕಾರ್ಯಕಲಾಪ**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಅ) 2024-25ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಬೇಡಿಕೆಗಳನ್ನು ಮಂಡಿಸುತ್ತಿದ್ದೇನೆ ಹಾಗೂ ಆ) 2024-25ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

## 10. ಸಚಿವರ ಹೇಳಿಕೆ

**ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು.**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ,

**(ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಿದೆ)**

ಮಾನ್ಯ ಸಭಾಪತಿಯವರೇ, ಕಳೆದ ವಾರ ವಿಧಾನ ಪರಿಷತ್ತಿನಲ್ಲಿ ಬಳ್ಳಾರಿಯಲ್ಲಿ ಆದಂತಹ ಅತ್ಯಂತ ನೋವಿನ ಘಟನೆಯ ಬಗ್ಗೆ ಮಾನ್ಯ ವಿರೋಧ ಪಕ್ಷದ ಮುಖಂಡರುಗಳು ಅದರ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರು. ಆ ಸಂದರ್ಭದಲ್ಲಿ ನಾನು ಶೂನ್ಯ ವೇಳೆಯಲ್ಲಿ ಬೇಡ, ಅದನ್ನು ಬೇರೆ ನಿಯಮದಡಿಯಲ್ಲಿ ಚರ್ಚೆ ಮಾಡೋಣ; ನಾನು ಕೂಡ ಒಂದು ಹೇಳಿಕೆಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ ಎಂದು ಹೇಳಿದ್ದೆನು.

ಇವತ್ತಿನ ದಿವಸ ಈ ಒಂದು ವಿಷಯದ ಬಗ್ಗೆ ಬಹಳ ಗಂಭೀರವಾದಂತಹ ಮತ್ತು ಅತ್ಯಂತ ಸೂಕ್ಷ್ಮವಾದಂತಹ ವಿಷಯದ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನಿಮಗೆ ನನ್ನ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಅವೊತ್ತಿನ ದಿವಸ ಬಳ್ಳಾರಿಯಲ್ಲಿ ಸಂಭವಿಸಿದ ತಾಯಂದಿರ ಮರಣದ ಘಟನೆಗಳಾಯಿತೋ ಅದರ ಬಗ್ಗೆ ಒಂದು ಹೇಳಿಕೆಯನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದರ ಪ್ರತಿಗಳನ್ನು ಕೂಡ ಇಲ್ಲಿ ಮಾನ್ಯ ಎಲ್ಲಾ ಸದಸ್ಯರಿಗೂ ಕೂಡ ತಲುಪಿಸುತ್ತೇನೆ. ಮಾನ್ಯ ಸಭಾಪತಿಯವರೇ, 2024ನೇ, ನವೆಂಬರ್ 9ನೇ ತಾರೀಖು, ನವೆಂಬರ್ 10ನೇ ತಾರೀಖು ಮತ್ತು ನವೆಂಬರ್ 11ನೇ ತಾರೀಖು ಈ 3 ದಿವಸಗಳಲ್ಲಿ ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಶಸ್ತ್ರಚಿಕಿತ್ಸೆ ನಡೆಯಿತು. ಅದಾದನಂತರ ಅಲ್ಲಿ ಸಾವುಗಳು ಸಂಭವಿಸಿದ ಬಗ್ಗೆ ಪತ್ರಿಕೆಗಳಲ್ಲಿ ಒಂದು ವರದಿಯಾಯಿತು. ಈ 3 ದಿನಗಳಲ್ಲಿ ಅಲ್ಲಿ 34 ಸಿಸೇರಿಯನ್ ಆಪರೇಷನ್‌ಗಳನ್ನು ಮಾಡಿದ್ದಾರೆ. ಅದರಲ್ಲಿ 7 ಪ್ರಕರಣಗಳು ಗಂಭೀರ ಸ್ವರೂಪಕ್ಕೆ ಹೋಯಿತು. ಆ 7 ಪ್ರಕರಣಗಳಲ್ಲಿ, 5 ಬಾಣಂತಿಯರು ಸಾವಿಗೀಡಾಗಿದ್ದಾರೆ. ಉಳಿದ ಇಬ್ಬರು ಬಾಣಂತಿಯವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದರು. ಒಟ್ಟಾರೆಯಾಗಿ 7 ಪ್ರಕರಣಗಳಲ್ಲಿ, 5 ಬಾಣಂತಿಯರು ಸಾವಿಗೀಡಾಗಿದ್ದಾರೆ.

**(ಮುಂದು)**

(910)17.12.2024/12.20/ಎಂ.ಎಂ-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಮುಂದು):-**
ಇದು ನಮ್ಮ ಗಮನಕ್ಕೆ 13ನೇ ತಾರೀಖಿನಂದು ಬಂದ ತಕ್ಷಣವೇ ನಾವು ಕೂಡಲೇ ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಜೊತೆ ಸಂಪರ್ಕ ಮಾಡಿ ಅಲ್ಲಿಗೆ ಒಂದು ತಂಡವನ್ನು ಕಳುಹಿಸಿದ್ದೆವು. ಏಕೆಂದರೆ ಇದುವರೆಗೂ ಈ ರೀತಿ ಯಾವುದೂ ನಮ್ಮ ಗಮನಕ್ಕೆ ಬಂದಿರಲಿಲ್ಲ. ಬಳ್ಳಾರಿಯಲ್ಲೂ ಕೂಡ ಆ ಆಸ್ಪತ್ರೆಯಲ್ಲಿ ಸುಮಾರು 2,000 ಕ್ಕಿಂತಲ್ಲೂ ಹೆಚ್ಚು

ಹೆರಿಗೆಗಳಾಗಿತ್ತು. ಅಲ್ಲಿ ಒಬ್ಬರು ಕೂಡ ಸಾವನ್ನಪ್ಪಿರಲಿಲ್ಲ. ಆದರೆ ದಿಢೀರಾಗಿ ಈ ಮೂರು ದಿವಸದಲ್ಲಿ ಏನು ಬಾಣಂತಿಯರು ತೀರಿಕೊಳ್ಳುವ ಘಟನೆಗಳಾಯಿತು; ಮೊದಲು ನಮ್ಮ ಗಮನಕ್ಕೆ ಎರಡು-ಮೂರು ಬಾಣಂತಿಯರು ತೀರಿಕೊಂಡ ವಿಚಾರ ಬಂತು. ತಕ್ಷಣವೇ ನಾವು ಒಂದು ತಂಡವನ್ನು ಅಲ್ಲಿಗೆ ಕಳುಹಿಸಿದೆವು. ತಜ್ಞ ವೈದ್ಯರು ಅಲ್ಲಿಗೆ 14ನೇ ತಾರೀಖಿಗೇ ಹೋದರು. 16ನೇ ತಾರೀಖಿನಂದು ನಮಗವರು ವರದಿಯನ್ನು ಕೊಟ್ಟರು. ಆ ವರದಿಯ ಆಧಾರದ ಮೇಲೆ ಅಲ್ಲಿನ ವೈದ್ಯರು ಅವರು ಯಾವುದೇ ರೀತಿಯ ನಿರ್ಲಕ್ಷ್ಯತೆ ಅಥವಾ ಕರ್ತವ್ಯ ಲೋಪವನ್ನು ಎಸಗಿಲ್ಲ, ಅವರು protocols and procedures ಎಲ್ಲವನ್ನೂ ಅನುಸರಿಸಿ ಮಾಡಿದ್ದೇವೆ ಎಂದು ಹೇಳಿದರು. ಅದರ ನಂತರ ಅವರ ವರದಿಯಲ್ಲಿ ಕೆಲವು "Incidental Findings" ಅನ್ನು ಪ್ರಸ್ತಾಪ ಮಾಡಿದರು. ಅದೇನೆಂದರೆ, ಯಾವ antibiotics ಅನ್ನು ಆ ಬಾಣಂತಿಯರ ಮೇಲೆ ಉಪಯೋಗ ಮಾಡುತ್ತಿದ್ದರು ಅದೇ ಬ್ಯಾಚನ್ನು ಅವರು ಈ ಎಲ್ಲಾ patients ಗೆ ಉಪಯೋಗ ಮಾಡಿದ್ದಾರೆ. ಮತ್ತು Ringer's Lactate ಎಂಬ ಒಂದು Intra venous fluid ಇದೆ. ಅದನ್ನು ಎಲ್ಲಾ ಕಡೆಯೂ ಬಹಳ ಉಪಯೋಗಿಸುತ್ತಾರೆ. Dehydration ಹಾಗೂ Surgeries ಆದಾಗ ಸಾಮಾನ್ಯವಾಗಿ ಉಪಯೋಗ ಮಾಡುವಂತಹ ದ್ರಾವಣವದು. ಅದನ್ನು ಒಂದು ಬ್ಯಾಚ್; ಹಿಂದೆ ಅದರ ಇತಿಹಾಸ ಇದೆ. ಹಿಂದೆ ನಾವದನ್ನು freeze ಮಾಡಿದ್ದೆವು. ಅದು 9ನೇ ತಾರೀಖು ಬದಲಾವಣೆಯಾಗಿ ಹೊಸ ಬ್ಯಾಚನ್ನು 9ನೇ ತಾರೀಖಿನಂದು ಆ ಆಸ್ಪತ್ರೆಯಲ್ಲಿ ಆ ಬ್ಯಾಚನ್ನು ಉಪಯೋಗ ಮಾಡಿದ್ದಾರೆ ಎಂದು ಹೇಳಿಕೆಯಲ್ಲಿ ಕೊಟ್ಟರು. ಬೇರೆ ಬೇರೆ ಹೆರಿಗೆಗಳಿಗೆ ಹೋಲಿಕೆ ಮಾಡಿದಾಗ ಇದೊಂದು ವ್ಯತ್ಯಾಸ ಕಾಣುತ್ತಿದೆ. ಅವರ ಸಂಶಯ ಇದರ ಮೇಲಿದೆ ಎಂದು ಹೇಳಿದರು. ನಂತರ ನಾವು ಇದರ ಬಗ್ಗೆ 16ನೇ ತಾರೀಖಿನಂದು ಒಂದು ತೀರ್ಮಾನ ತೆಗೆದುಕೊಂಡು; ನಮಗೆ ಇದರ ಬಗ್ಗೆ ಹತ್ತು ತಿಂಗಳ ಹಿಂದೆ ಅನುಮಾನಗಳು ಬಂದಿತ್ತು. ಆಗ ನಾವು freeze ಹಾಗೂ blacklist ಮಾಡಿದ್ದೆವು. ಅಲ್ಲದೆ ಅದರಲ್ಲಿ quality check ಮಾಡಿದಾಗ, ಆ ಒಂದು Ringer's Lactate ನ ನಾಲ್ಕು ಪ್ರಕರಣಗಳಲ್ಲಿ ಅದು ಕ್ವಾಲಿಟಿ ಇಲ್ಲವೆಂದು ಡ್ರಗ್ ಲ್ಯಾಬ್ ಹೇಳಿತ್ತು. ಅದರ ಮೇಲೆ ಅವರು ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿ blacklist ಮಾಡಿರುವುದಕ್ಕೆ ಸ್ಟೇ ತೆಗೆದುಕೊಂಡಿದ್ದರು. ನಾವೇನು ಟೆಸ್ಟ್ ಮಾಡಿ ಅದು ಸರಿಯಿಲ್ಲವೆಂದು ಹೇಳಿದ್ದೆವೆಯೋ Central Drugs Laboratory ನಲ್ಲಿ ಚಾಲೆಂಜ್ ಮಾಡಿ ಇದು ಸರಿಯಿದೆ ಎಂದು ಸಾಬೀತು ಮಾಡಿದ್ದರು.

ಕೋರ್ಟ್‌ನಲ್ಲಿ ಕೂಡ ನಾವು ಮುಂದೆ ಹೋಗುವುದಕ್ಕೆ ಆಗಿರಲಿಲ್ಲ. ಆಮೇಲೆ ನಾವು ಮಾರ್ಚ್ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೂ ಎಲ್ಲಿಯೂ ಅದನ್ನು ಹಂಚಿಕೆ ಮಾಡುವುದಕ್ಕೆ ಬಿಟ್ಟಿರಲಿಲ್ಲ. ತದನಂತರ ಅದರ ಬೇಡಿಕೆ ಹೆಚ್ಚಾಗುತ್ತಿತ್ತು. ಆಗ ಎಲ್ಲಾ ಕಡೆಯೂ ಡೆಂಗ್ಯು ಪ್ರಕರಣಗಳು ಅತಿ ಹೆಚ್ಚಾಗಿತ್ತು. ಅದಕ್ಕೆ ಈ Ringer's Lactate ನ ಅವಶ್ಯಕತೆ ಇತ್ತು. ಆ ಸಂದರ್ಭದಲ್ಲಿ KSMSCL (Karnataka State Medical Supplies Corporation Limited) ರವರು ಮತ್ತೊಮ್ಮೆ ಎಲ್ಲವನ್ನೂ NABL (National Accreditation Board for Testing and Calibration Laboratories) ಹಾಗೂ In-house Laboratory ಆದಂತಹ ಔಷಧ ನಿಯಂತ್ರಣ ಇಲಾಖೆಯಲ್ಲಿಯೂ ಟೆಸ್ಟ್ ಮಾಡಿಸಿದ್ದಾರೆ. ಅದರಲ್ಲಿ ಔಷಧ ನಿಯಂತ್ರಣ ಇಲಾಖೆಯು 22 ಮಾದರಿಗಳಲ್ಲಿ ಗುಣಮಟ್ಟ ಕಡಿಮೆ ಇದೆಯೆಂದು ಹೇಳಿದಾಗ ಅದನ್ನು ಎಲ್ಲಿಯೂ ಬಳಕೆ ಮಾಡಲಿಲ್ಲ. ಉಳಿದಿರುವುದನ್ನು ಅವರು ಒಂದು

Technical Expert Committee ಯನ್ನು ರಚನೆ ಮಾಡಿ ಅದರ ಮುಖಾಂತರ ಅವರು ಉಳಿದಿರುವುದು ಸರಿಯಿರುವುದರಿಂದ ಅದನ್ನು ಬಿಡುಗಡೆ ಮಾಡುವುದಕ್ಕೆ KSMSCL ನವರು ಆಗಸ್ಟ್ ತಿಂಗಳಿನಲ್ಲಿ ತೀರ್ಮಾನ ತೆಗೆದುಕೊಂಡರು. ತದನಂತರ ಅದನ್ನು ಎಲ್ಲಾ ಕಡೆ ಸರಬರಾಜು ಮಾಡುವುದಕ್ಕೆ ಕೊಟ್ಟಿದ್ದಾರೆ. ಅದರಲ್ಲಿ ಬಂದಿರುವಂತಹ ಈ ಒಂದು ಬ್ಯಾಚ್ ಉಪಯೋಗವಾಗಿರುವ ಸಂಶಯ ನಮಗೆ ಬಂದಿರುವುದರಿಂದ ನಾವು ಕೂಡಲೇ ಎಲ್ಲಾ ಕಡೆ 16ನೇ ತಾರೀಖಿನ ನಂತರ ನಾವದನ್ನು ನಿಲ್ಲಿಸಿದೆವು. ಈ ವಿಷಯದ ಬಗ್ಗೆ ನಾನು ಪೂರ್ತಿಯಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಅನುಬಂಧ-1ರಲ್ಲಿ ಯಾವ ರೀತಿಯಾಗಿ Ringer's Lactate ಅನ್ನು ಖರೀದಿ ಮಾಡುವುದರಲ್ಲಿ ಮತ್ತು ಅವರನ್ನು ಬ್ಲಾಕ್ ಲಿಸ್ಟ್ ಮಾಡುವುದರಲ್ಲಿ, ನಾವು ಟೆಸ್ಟ್ ಮಾಡುವುದರಲ್ಲಿ; ತಮ್ಮೆಲ್ಲರ ಮಾಹಿತಿಗೆ ಹೇಳುವುದೇನೆಂದರೆ, ಈ ಔಷಧಿಯನ್ನು ನಮಗೆ ಪಶ್ಚಿಮ ಬಂಗಾಳದ ಕಂಪನಿ ಸರಬರಾಜು ಮಾಡಿದೆ. ಅವರು ಅವರ ಸ್ವಂತ ಲ್ಯಾಬ್‌ನಲ್ಲಿ ಅದನ್ನು ಟೆಸ್ಟ್ ಮಾಡಿ ನಮಗೆ ವರದಿ ಕೊಡುತ್ತಾರೆ. ಹಾಗೂ NABL ನಲ್ಲಿ ಕೂಡ ಟೆಸ್ಟ್ ಮಾಡಿ ನಮಗೆ ವರದಿ ಕೊಡುತ್ತಾರೆ. ನಂತರ ನಮಗೆ ಸರಬರಾಜಾಗುತ್ತದೆ. ಟೆಂಡರ್‌ನಲ್ಲಿ ಅವರು ಗೆದ್ದ ನಂತರ ನಮಗೆ ಸರಬರಾಜು ಆದಾಗ ನಾವು ಕೂಡ ಮತ್ತೊಮ್ಮೆ 192 ಬ್ಯಾಚ್‌ಗಳೆಲ್ಲವನ್ನೂ ಟೆಸ್ಟ್ ಮಾಡಿಸಿದ್ದೆವು. ಕಳೆದ ವರ್ಷ ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ ನಮಗೆ ಸರಬರಾಜು ಮಾಡಿದಾಗ ಎಲ್ಲವೂ Standard Quality (SQ) ಅಂತಲೇ ವರದಿ ಬಂದಿತ್ತು. ಈ ಬ್ಯಾಚ್ ಮೂರು ಬಾರಿ ಟೆಸ್ಟ್ ಆಗಿದೆ. ಈಗಾಗಲೇ ಹೇಳಿದ ಹಾಗೆ ಕೆಲವು ಬ್ಯಾಚ್‌ಗಳು ಕ್ವಾಲಿಟಿ ಇಲ್ಲವೆಂದು ವರದಿ ಬಂದಾಗ Central Drugs Laboratory ನಲ್ಲಿ ಅವರು ಸರಿ ಇದೆಯೆಂದು ಹೇಳಿಕೊಂಡರು.

ಬೇರೆ ಪ್ರಕರಣಗಳಲ್ಲಿ ಕೂಡ Central Drugs Laboratory ನ ಮುಂದೆ ಚಾಲೆಂಜ್ ಮಾಡಿದ್ದಾರೆ. ಯಾವ ಪ್ರೊಸೆಸ್ ಅಡಿಯಲ್ಲಿ KSMSCL ನವರು ಏನೇನು ಕ್ರಮಗಳನ್ನು ತೆಗೆದುಕೊಂಡರು ಎಂದು ಅದರ ಸಂಪೂರ್ಣ ಮಾಹಿತಿಯನ್ನು ನಾನು ನಿಮಗೆ ಕೊಟ್ಟಿದ್ದೇನೆ. ಆ ಆಧಾರದ ಮೇಲೆ ಇದು ಬಿಡುಗಡೆಯಾಗಿ ನಮಗೂ ಕೂಡ ಇದರ ಬಗ್ಗೆ; ನಮಗೆ ಜನವರಿ-ಫೆಬ್ರವರಿಯಲ್ಲೇ ಇದರ ಬಗ್ಗೆ ಸಂಶಯ ಬಂದಾಗ ಇದನ್ನು freeze ಮಾಡಿದ್ದೆವು. Unfreeze ಮಾಡುವುದಕ್ಕು ಕೂಡ ನಾನು ಪೂರ್ತಿ ವರದಿಯನ್ನು ಕೊಟ್ಟಿದ್ದೇನೆ. ಅದರ ನಂತರ ನಮಗೆ ಇದನ್ನೆಲ್ಲಾ ಸೀಜ್ ಮಾಡಲು ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅದರ ಮಾದರಿಗಳನ್ನು Drugs Control Department ಗೆ ಕೂಡ ಕಳುಹಿಸಿದೆವು. ನಂತರ NABL ಕೂಡ ಕಳುಹಿಸಿದೆವು. ಆ ವರದಿ ಬರುವುದಕ್ಕೆ ಸ್ವಲ್ಪ ಸಮಯ ತೆಗೆದುಕೊಂಡಿತು. ಅಷ್ಟೊತ್ತಿಗೆ ಮುಖ್ಯಮಂತ್ರಿಗಳು ಕೂಡ ಒಂದು ಸಭೆಯನ್ನು ಕರೆದು ಇದರ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪರಿಶೀಲನಾ ಸಭೆಯನ್ನು ಮಾಡಿದರು. ಆ ಸಭೆಯಲ್ಲಿ ಕೆಲವು ನಿರ್ಣಯಗಳನ್ನು ಮಾಡಿದೆವು. ಮೊದಲನೆಯದಾಗಿ ಅದಕ್ಕೆ ಪರಿಹಾರವನ್ನು ಕೊಡಬೇಕಾಗುತ್ತದೆ. ಏಕೆಂದರೆ ಇನ್ನೂ ಇದು ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಸಾಬೀತಾಗಿದೆ ಎಂದು ನಾವು ಹೇಳುವುದಕ್ಕಾಗದಿದ್ದರೂ ಕೂಡ ಮೇಲ್ನೋಟಕ್ಕೆ ಇದು drugs ನ quality ಯ ಕೊರತೆಯಿಂದ ಆಗಿದೆ ಎಂಬುದು ನಮ್ಮ ವೈಯಕ್ತಿಕ ಅಭಿಪ್ರಾಯವಾಗಿತ್ತು. ಇದು ನಾಳೆ ಕೋರ್ಟ್ ಮುಂದೆ ಏನೇನಾಗುತ್ತದೋ ಗೊತ್ತಿಲ್ಲ. ಆದರೆ ನಮ್ಮ ಕಡೆಯಿಂದ ಇದಕ್ಕೆ ಏನಾದರೂ ಪರಿಹಾರ

ಕೊಡಬೇಕೆಂದು ಮೊದಲು ರೂ. 2,00,000/- ಪರಿಹಾರ ಘೋಷಣೆ ಮಾಡಿ ನಂತರ ರೂ. 5,00,000/- ಪರಿಹಾರವನ್ನು ಕೊಟ್ಟಿದ್ದೇವೆ. ನಾವು Drugs Controller General of India ಗೆ ಪತ್ರ ಬರೆದೆವು. ಏಕೆಂದರೆ ಇವತ್ತು ದೇಶದಲ್ಲಿ ಡ್ರಗ್ಸ್‌ನ ವಿಚಾರದಲ್ಲಿ ಕೇಂದ್ರದ ಕಾನೂನಿದೆ. ನಮ್ಮ ದೇಶದಲ್ಲಿ ಡ್ರಗ್ಸ್ ನ ಗುಣಮಟ್ಟದ ಬಗ್ಗೆ ಯಾವ ರೀತಿಯಾಗಿ ಈ ಕಾನೂನುಗಳು ಗಟ್ಟಿಯಾಗಿರಬೇಕಾಗಿದೆ ಅದು ಇಲ್ಲ ಎಂದು ಹೇಳಬಯಸುತ್ತೇನೆ. ಏಕೆಂದರೆ, ಯಾವ ಫಾರ್ಮ ಕಂಪನಿಗಳ ಮೇಲೆ ಸುಲಭವಾಗಿ ಕ್ರಮ ತೆಗೆದುಕೊಂಡಿರುವ ಇತಿಹಾಸ ನಮ್ಮ ದೇಶದಲ್ಲಿ ಇಲ್ಲವೇ ಇಲ್ಲ. ಅನೇಕ ಡ್ರಗ್ಸ್ fail ಆಗಿವೆ, ಅನೇಕ ಡ್ರಗ್ಸ್ ಗುಣಮಟ್ಟವಾಗಿಲ್ಲ ಎಂದು ವರದಿ ಬಂದರೂ ಕೂಡ ಫಾರ್ಮ ಕಂಪನಿಗಳನ್ನು ಫಿಕ್ಸ್ ಮಾಡುವುದಕ್ಕಾಗುತ್ತಿಲ್ಲ.

ರಾಷ್ಟ್ರಮಟ್ಟದಲ್ಲಿ ಕೂಡ ಇದರ ಬಗ್ಗೆ ಗಂಭೀರವಾಗಿ; ನಾವು ಗುಣಮಟ್ಟದ ಡ್ರಗ್ಸ್ ಅನ್ನು ತಯಾರು ಮಾಡುವುದಕ್ಕೆ ಆಗದೇ ಹೋದರೆ ಜನಸಾಮಾನ್ಯರ ಮೇಲೆ ದೊಡ್ಡ ದುಷ್ಪರಿಣಾಮ ಉಂಟಾಗುತ್ತದೆ. ಒಂದು, ಸಾವಿಗೂ ಕೂಡ ಈಡಾಗುವಂತಹದ್ದು, ಇನ್ನೊಂದು ವಿಚಾರವೆಂದರೆ, ಕ್ವಾಲಿಟಿ ಇಲ್ಲದೇ ಹೋದರೆ ಅನೇಕ ಜನರಿಗೆ ಸರಿಯಾದ ಚಿಕಿತ್ಸೆ ಕೂಡ ಸಿಗುವುದಿಲ್ಲ. Pharmaceutical companies ಹೆಚ್ಚಾಗಿ ಇರುವುದು ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ಈ ರಾಜ್ಯಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಅವರನ್ನು ಉತ್ತೇಜನ ಮಾಡುವುದಕ್ಕೆ ಎಲ್ಲಾ ರೀತಿಯ ಸಹಕಾರ ಕೊಡುತ್ತಿದ್ದಾರೆ. ಫಾರ್ಮ ಕಂಪನಿಗಳಿಗೆ ಕೆಟ್ಟ ಹೆಸರು ಬರಬಾರದು ಎಂದು ಎಲ್ಲಾ ಕಡೆಯಿಂದ ಅವರಿಗೆ ರಕ್ಷಣೆ ಸಿಗುತ್ತದೆ. ಅದರಲ್ಲಿಯೂ regulatory laws ಗಳಿಂದ, ಕೋರ್ಟ್‌ಗಳಿಂದ ಮತ್ತು ಕಾನೂನು ಕೂಡ ಅವರಿಗೆ ರಕ್ಷಣೆಯಾಗುವ ರೀತಿಯಲ್ಲಿದೆ. Drugs Control Department ಗಳು ಕೂಡ; ನಾನು ವಸ್ತುಸ್ಥಿತಿಯನ್ನು ಹೇಳುತ್ತಿದ್ದೇನೆ, ಇದು ಬಹಳ ಗಂಭೀರವಾದಂತಹ ವಿಚಾರ. ಕೆಲವು ಕಂಪನಿಗಳ manufacturers ಹೇಗಿದ್ದಾರೆಂದರೆ, ವಿದೇಶಕ್ಕೆ ಸರಬರಾಜು ಮಾಡುವುದಕ್ಕೆ ಒಂದು ಕ್ವಾಲಿಟಿ ಮಾಡುತ್ತಾರೆ, ನಮ್ಮ ದೇಶದಲ್ಲಿ ಸರಬರಾಜು ಮಾಡುವುದಕ್ಕೆ ಇನ್ನೊಂದು ಕ್ವಾಲಿಟಿ ಮಾಡುತ್ತಾರೆ. ಅಂದರೆ ಡ್ರಗ್ಸ್‌ನಲ್ಲಿ ವ್ಯತ್ಯಾಸ ಇರಲೇಬಾರದು. ಅದು ವಿದೇಶಕ್ಕಾದರೂ ಹೋಗಲಿ, ನಮ್ಮವರಿಗಾದರೂ ಹೋಗಲಿ ಅಥವಾ ಒಬ್ಬ ಬಡಪಾಯಿಗಾದರೂ ಹೋಗಲಿ ಒಂದೇ ರೀತಿಯ ಕ್ವಾಲಿಟಿ ಇರಬೇಕು. Quality ಯಲ್ಲಿ compromise ಆಗಬಾರದು. ಅದನ್ನು ನಮ್ಮ ವ್ಯವಸ್ಥೆಯಲ್ಲಿ ನೂರಕ್ಕೆ ನೂರು ಮಾಡುವುದಕ್ಕಾಗುತ್ತಿಲ್ಲ. ಅದು ಬೇರೆ ವಿಷಯ. ನಾವು Drugs Controller General of India ರವರಿಗೆ ಪತ್ರ ಬರೆದು ಇದರ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದೇವೆ. ಪಶ್ಚಿಮ ಬಂಗಾಳದ ಈ ಕಂಪನಿ ಏನಿದೆ; ನಾವು ಯಾವಾಗ ಕ್ವಾಲಿಟಿ ಎಂದು ಹೇಳಿದೆವೋ, ಸೆಂಟ್ರಲ್ ಲ್ಯಾಬ್‌ನವರು ಕ್ವಾಲಿಟಿ ಇದೆಯೆಂದು ಹೇಳುತ್ತಾರೆ.

(ಮುಂದು)

(911) 17.12.2024 12.30 ಹೆಚ್‌ವಿ. ಕೆಎಸ್

**ಶ್ರೀ ದಿನೇಶ್ ಗುಂಡೂರಾವ್(ಮುಂದು):-**

ಸಭಾಪತಿಯವರೇ, ನಾವು ಯಾವುದನ್ನು ಗುಣಮಟ್ಟದ ಔಷಧಿಯಲ್ಲವೆಂದು ಹೇಳಿದ್ದೇವೆ; ಅದನ್ನು ಕೇಂದ್ರದಲ್ಲಿರುವ ಲ್ಯಾಬ್‌ನವರು ಗುಣಮಟ್ಟವಿದೆ ಎಂದು ಹೇಳುತ್ತಾರೆ. ಇದಕ್ಕೆ ನಾವೇನು ಮಾಡಬೇಕು? "ನಮ್ಮ

ರಾಜ್ಯದಲ್ಲಿ ಇತ್ತೀಚೆಗೆ ಸುಮಾರು 5 ಜನ ಬಾಣಂತಿಯವರು ಮರಣ ಹೊಂದಿದ್ದಾರೆ. ಇದರ ಬಗ್ಗೆ ತಾವು ಬಹಳ ಗಂಭೀರವಾಗಿ ಪರಿಗಣಿಸಿ ಕ್ರಮ ತೆಗೆದುಕೊಳ್ಳಬೇಕು ಎಂದು ಅವರಿಗೆ ನಾವು ಪತ್ರವನ್ನು ಬರೆದಿದೇವೆ. ಅದರ ಒಂದು ಪ್ರತಿಯನ್ನು ಸಹ ಅನುಬಂಧ-2ರಲ್ಲಿ ಲಗತ್ತಿಸಿದ್ದೇನೆ. ರಾಜ್ಯ ಔಷಧ ನಿಯಂತ್ರಣ ಇಲಾಖೆಯವರು ಈ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕ್ರಮ ವಹಿಸಬಹುದಾಗಿತ್ತು ಎನ್ನುವ ಹಿನ್ನೆಲೆಯಲ್ಲಿ ಔಷಧ ನಿಯಂತ್ರಕ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೇವೆ ಮತ್ತು Karnataka State Medical Supplies Corporation Limited (KSMSCL) ನ ವ್ಯವಸ್ಥಾಪಕ ನಿರ್ದೇಶಕರಿಗೆ ಷೋಕಾಸ್ ನೋಟೀಸ್ ನೀಡಿದ್ದೇವೆ. ಏಕೆಂದರೆ, ಅವರ ಹಂತದಲ್ಲಿಯೇ ಈ ಔಷಧಿಗಳನ್ನು ಬಿಡುಗಡೆ ಮಾಡುತ್ತಾರೆ. Freeze ಮಾಡಿದಾಗ ಒಂದು ತೀರ್ಮಾನವಾಗಿತ್ತು; defreeze ಮಾಡಿ ಎಲ್ಲರ ಉಪಯೋಗಕ್ಕಾಗಿ ಔಷಧವನ್ನು ಬಿಡುಗಡೆಗೊಳಿಸುವ ಪ್ರಕ್ರಿಯೆ ಅವರ ಹಂತದಲ್ಲಿಯೇ ಆಗುತ್ತದೆ. ಅವರು ನಮ್ಮ ಗಮನಕ್ಕೆ ತಂದಿಲ್ಲ. ಆದರೆ, ಯಾವಯಾವ ಪ್ರಕ್ರಿಯೆಗಳನ್ನು ಅನುಸರಿಸಬೇಕು ಅದನ್ನು ಅವರು ಅನುಸರಿಸಿದ್ದಾರೆ. NABL (National Accreditation Board for Testing and Calibration Laboratories) ನಿಂದ ಟೆಸ್ಟ್ ಮಾಡಿಸಿದ್ದಾರೆ. ಎರಡನೆಯ ಬಾರಿಯೂ ಟೆಸ್ಟ್ ಮಾಡಿಸಿದ್ದಾರೆ. ಏನೇನು ಮಾಡಬಹುದು ಅದೆಲ್ಲವನ್ನೂ ಅವರು ಮಾಡಿದ್ದಾರೆ. ಆದರೇ, ಇನ್ನೂ ಎಚ್ಚರಿಕೆ ವಹಿಸಬಹುದಾಗಿತ್ತು ಎನ್ನುವ ಹಿನ್ನೆಲೆಯಲ್ಲಿ ಮತ್ತು ಇದರ ಬಗ್ಗೆ ಸಂಪೂರ್ಣವಾಗಿರುವ ಮಾಹಿತಿಯನ್ನು ಪಡೆದುಕೊಳ್ಳಬೇಕೆನ್ನುವ ಹಿನ್ನೆಲೆಯಲ್ಲಿ ಅವರಿಗೆ ಷೋಕಾಸ್ ನೋಟೀಸ್ ಅನ್ನು ಇಶ್ಯೂ ಮಾಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಕೆಲವು ಸುಧಾರಣೆಗಳನ್ನು ಮಾಡಿಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ಚರ್ಚೆಗಳು ನಡೆದಿದ್ದವು. NABLನವರು "ನಮ್ಮ ವರದಿ ಸರಿ ಇದೆ" ಎಂದು ಹೇಳಿದಾಗ, ನಾವು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅವರ ಜೊತೆಯಲ್ಲಿ ವಾದ ವಿವಾದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಳ್ಳಾರಿ ಜಿಲ್ಲೆಗೆ ಸರಬರಾಜು ಮಾಡಿರುವಂತಹ ಔಷಧಿ 4-5 ಬಾರಿ ಪರೀಕ್ಷೆಗೆ ಒಳಪಟ್ಟಿದೆ. ನಂತರ ಈಗ ಇನ್ನೂ ಎರಡು ಬಾರಿ ಟೆಸ್ಟ್ ಮಾಡಿಸಿದ್ದೇವೆ. ಲ್ಯಾಬ್‌ಗಳಲ್ಲಿ 5 ಬಾರಿ ಟೆಸ್ಟ್ ಮಾಡಿದಾಗಲೂ ಸರಿ ಇದೆ..... ಸರಿ ಇದೆ ಎನ್ನುವ ವರದಿ ಬಂದಿದೆ. ಈ ಫಲಿತಾಂಶವನ್ನು ನೋಡಿದರೆ, ಎನ್.ಎ.ಬಿ.ಎಲ್. ಲ್ಯಾಬ್‌ಗಳು ಸರಿಯಾಗಿ ನಿರ್ವಹಣೆ ಮಾಡುತ್ತಿವೆಯೇ; ಇವರ ಟೆಸ್ಟಿಂಗ್ ಪ್ರಕ್ರಿಯೆ ಯಾವ ರೀತಿಯಲ್ಲಿ ಇದೆ? ನಮ್ಮ ಔಷಧ ನಿಯಂತ್ರಣ ಲ್ಯಾಬ್‌ಗಳಲ್ಲಿ ಟೆಸ್ಟಿಂಗ್ ಪ್ರಕ್ರಿಯೆಗಳು ಯಾವ ರೀತಿಯಲ್ಲಿವೆ ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು; ಎಚ್ಚರಿಕೆಯನ್ನು ವಹಿಸಿ ಅಗತ್ಯವಿರುವ ಎಲ್ಲ ರೀತಿಯ ವಿಶ್ಲೇಷಣೆಗಳನ್ನು ಮಾಡಲಾಗುತ್ತಿದೆಯೇ ಎನ್ನುವುದರ ಬಗ್ಗೆ ತನಿಖೆಯನ್ನು ಡಾ॥ ಅಸೀಮಾ ಬಾನು, Prof. & HOD, Department of Microbiology, BMCRI (Bangalore Medical College and Research Institute) ಅವರ ನೇತೃತ್ವದಲ್ಲಿ ಕೈಗೊಳ್ಳಲಾಗಿದೆ. ಕಾರ್ಯ ಪ್ರಗತಿಯಲ್ಲಿದೆ.

ಇದರ ಜೊತೆಗೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ನಡೆದಿರುವ ಘಟನೆಯ ಕುರಿತು ಪರಿಶೀಲಿಸುತ್ತಾರೆ. ಎಲ್ಲಿ ಲೋಪದೋಷಗಳನ್ನು ಎಸಗಲಾಗಿದೆ, ಯಾವ ಹಂತದಲ್ಲಿ ನಾವು ವಿಫಲರಾಗಿದ್ದೇವೆ, ಯಾವ ಹಂತದಲ್ಲಿ ಕ್ರಮಗಳನ್ನು

ಕೈಗೊಂಡಿದ್ದರೇ ಈ ಘಟನೆಗಳನ್ನು ತಡೆಯುವುದಕ್ಕೆ ಸಾಧ್ಯವಾಗುತ್ತಿತ್ತು; ಔಷಧಿಗಳ ಖರೀದಿ ಮತ್ತು ಔಷಧಿಗಳ ಮಾದರಿಗಳನ್ನು ಕಳುಹಿಸುವಲ್ಲಿ ಆಗಿರುವ ನಿಯಮ ಉಲ್ಲಂಘನೆಯ ಬಗ್ಗೆ; ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯ ಬಗ್ಗೆ; KSMSCL or Drug Control Departmentನ ಅಧಿಕಾರಿಗಳ ಪಾತ್ರವೇನು ಎನ್ನುವುದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಕೊಡುವುದಕ್ಕೆ ಒಂದು ತಂಡವನ್ನು ರಚನೆ ಮಾಡಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ KSMSCL ನಿಗಮವನ್ನು ಇನ್ನೂ ಸದೃಢಗೊಳಿಸಬೇಕೆನ್ನುವ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೇವೆ. KSMSCLನ tender processಗಳಲ್ಲಿ ಹಾಗೂ ಇತರೆ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರುವುದಕ್ಕಾಗಿ ಐ.ಎ.ಎಸ್., ಅಧಿಕಾರಿಯಾಗಿರುವ ಶ್ರೀಮತಿ ಎಂ.ಕನಗವಲ್ಲಿ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ನೇತೃತ್ವದಲ್ಲಿ ಪರಿಶೀಲನಾ ತಂಡವನ್ನು ರಚಿಸಿ ಆದೇಶಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳ ನೇತ್ರತ್ವದಲ್ಲಿ ನಡೆದಂತಹ ಸಭೆಯಲ್ಲಿ ಈ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಸನ್ಮಾನ್ಯ ಸಭಾಪತಿಯವರೇ, ಈ ವರ್ಷ ಎಲ್ಲೆಲ್ಲಿ ಬಾಣಂತಿಯರ ಮರಣದ ಘಟನೆಗಳು ನಡೆದಿವೆ; ಆ ಪ್ರತಿಯೊಂದು ಪ್ರಕರಣವನ್ನು ವಿಚಾರಣೆ ಮಾಡಬೇಕೆಂದು ಹೇಳಿದ್ದೇವೆ. ಈ ವರ್ಷದ ಆಗಸ್ಟ್ ತಿಂಗಳಿನಿಂದ ಎಲ್ಲೆಲ್ಲಿ Ringer's Lactate IV Fluid ಅನ್ನು ಬಳಕೆ ಮಾಡಲಾಗಿದೆ. ಅದನ್ನು ಬಳಕೆ ಮಾಡಿರುವ ಎಲ್ಲಾ ಆಸ್ಪತ್ರೆಗಳಲ್ಲಿ ಬಾಣಂತಿಯರ ಮರಣವಾಗಿದ್ದರೆ, ಯಾವ ಕಾರಣಕ್ಕಾಗಿ ಮರಣ ಸಂಭವಿಸಿದೆ ಎನ್ನುವುದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ಒಂದು ತಂಡವನ್ನು ರಚನೆ ಮಾಡಿದ್ದೇವೆ. ಇವರಿಂದ ಬಾಣಂತಿಯವರ ಸಾವಿನ ಬಗ್ಗೆ ತನಿಖೆಯನ್ನು ನಡೆಸಿ Death Audit ವರದಿಯನ್ನು ಪಡೆದುಕೊಳ್ಳುತ್ತೇವೆ. ಸತ್ಯಾಂಶ ಹೊರಬರಬೇಕು; ಯಾವುದನ್ನೂ ಮುಚ್ಚಿ ಹಾಕುವಂತಹ ಪ್ರಯತ್ನವಾಗಬಾರದು. ಈ ಘಟನೆಗಳು ನಮ್ಮ ವ್ಯವಸ್ಥೆಯ ವೈಫಲ್ಯದಿಂದ ಆಗಿವೆ. ಈ ರೀತಿಯ ಅನೇಕ ಪ್ರಕರಣಗಳು ಈ ದೇಶದ ಬೇರೆಬೇರೆ ರಾಜ್ಯಗಳಲ್ಲಿ ಆಗಿವೆ. ಇಂತಹ ಘಟನೆಗಳು ನಡೆದಾಗ ಕೆಲವೊಂದು ಕ್ರಮಗಳನ್ನು ತೆಗೆದುಕೊಂಡು ಆನಂತರ ಅದನ್ನು ಮರೆತು ಬಿಡುತ್ತೇವೆ. ಈ ಘಟನೆಗಳ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿಯೇ ಚರ್ಚೆಯಾಗಿದೆ. ಎಲ್ಲೆಲ್ಲಿ ನಮ್ಮ ವ್ಯವಸ್ಥೆಗಳಲ್ಲಿ ವೈಫಲ್ಯತೆಗಳು ಇವೆ; ನಮ್ಮ ವ್ಯವಸ್ಥೆಯಲ್ಲಿ ಯಾವುದನ್ನು ಸರಿಯಾಗಿ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಮತ್ತು ಏನೇನು ಸುಧಾರಣೆಗಳನ್ನು ಮಾಡಬೇಕು ಎನ್ನುವುದಕ್ಕೆ ಈ ಘಟನೆಗಳು ಸಾಕ್ಷಿಯಾಗಿವೆ.

ಸನ್ಮಾನ್ಯ ಸಭಾಪತಿಯವರೇ, ಬೇರೆ ಬೇರೆ ರೀತಿಯಾಗಿರುವ ಅನುಮಾನಗಳು ಸಹ ನಮಗೆ ಬಂದಿವೆ. ಅವುಗಳ ಬಗ್ಗೆಯೂ ತನಿಖೆಯಾಗಬೇಕಾಗಿದೆ. ಯಾವುದನ್ನೂ ಬಿಡಬಾರದು. ಒಂದು ಶಿಶುವಿನ ಆಗಮನಕ್ಕಾಗಿ ಆ ತಾಯಿ ಬಹಳ ಸಂತೋಷದಿಂದ ಆಸ್ಪತ್ರೆಗೆ ಬರುತ್ತಾಳೆ. ತಾಯಿ ಆರೋಗ್ಯವಾಗಿರುತ್ತಾಳೆ, ಎಲ್ಲರೂ ಸಂತೋಷದಿಂದ ಇರುತ್ತಾರೆ. ವೈದ್ಯಕೀಯ ಕಾರಣಗಳಿಂದ ತಾಯಿ ಮರಣ ಹೊಂದಿದರೆ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಆದರೇ, ಯಾರದೋ ತಪ್ಪಿನಿಂದ ಅಥವಾ ಔಷಧಿಯ ಉತ್ಪಾನೆಯ ತಪ್ಪಿನಿಂದಾಗಿ ಬಾಣಂತಿ ಮರಣ ಹೊಂದಿದರೆ, ಅದು ಬಹಳಷ್ಟು ನೋವಿನ ಸಂಗತಿಯಾಗುತ್ತದೆ. ಇದಕ್ಕೆ ನಾವು ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ವ್ಯವಸ್ಥೆಯಲ್ಲಿನ

ವೈಫಲ್ಯವನ್ನು ಸರಿಪಡಿಸುವುದು ಅಥವಾ ಅವರಿಗೆ ಪರಿಹಾರವನ್ನು ಕೊಡುವುದು ಮುಂದಿನ ಕ್ರಮವಾಗಿದೆ. ಆದರೇ, ಮರಣ ಹೊಂದಿದ ತಾಯಿಯ ಜೀವ ವಾಪಸ್ಸು ಬರುವುದಿಲ್ಲ. ಆ ಮಗುವಿಗೆ ತಾಯಿ ಸಿಗುವುದಿಲ್ಲ. ಈ ಘಟನೆಗಳಲ್ಲಿ ಕಂಡು ಬಂದಿರುವ ಮುಖ್ಯಾಂಶವೆಂದರೆ, ಎಲ್ಲಾ ಶಿಶುಗಳು ಚೆನ್ನಾಗಿವೆ. ಆದರೆ, ತಾಯಂದಿರು ಮರಣ ಹೊಂದಿದ್ದಾರೆ. ಇವರೆಲ್ಲರೂ ಬಡವರಾಗಿದ್ದಾರೆ. ಇವರಿಗೆ 5 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡುವುದು ಒಂದು ಕಡೆಯಾದರೇ, ಅವರಿಗೆ ಅಗತ್ಯವಿರುವ ಅವಶ್ಯಕತೆಗಳು ಅಂದರೇ ಕೆಲವರಿಗೆ ವಾಸಿಸುವುದಕ್ಕೆ ಮನೆ ಇರುವುದಿಲ್ಲ ಅಂತಹವರಿಗೆ ಮನೆ ಕಟ್ಟಿಸಿಕೊಡುವಂತಹ ಕೆಲಸವನ್ನು ಮಾಡುವ ಬಗ್ಗೆ ನಮ್ಮ ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿದ್ದೇವೆ.

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಏನೇ ಪರಿಹಾರವನ್ನು ಕೊಟ್ಟರೂ ಹೋಗಿರುವ ಜೀವ ಮರಳಿ ಬರುವುದಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ಸನ್ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಹೋಗಿರುವ ಜೀವ ಮರಳಿ ಬರುವುದಕ್ಕೆ ಸಾಧ್ಯವಿಲ್ಲ. BMCRI ಲ್ಯಾಬ್‌ಗೆ ಕಳುಹಿಸಿಕೊಟ್ಟರೇ ಅನೇಕ ಮಾದರಿಗಳ ಗುಣಮಟ್ಟ ಸರಿಯಿರುವುದಿಲ್ಲ. ಹೈದ್ರಾಬಾದ್‌ನಲ್ಲಿರುವ M/s. Vimta Lab ಗೆ ಕಳುಹಿಸಿಕೊಟ್ಟಾಗ ಕೆಲವು ಮಾದರಿಗಳ ಗುಣಮಟ್ಟ ಸರಿಯಿಲ್ಲವೆಂದು ಬಂದಿದೆ. ಈ ರೀತಿಯ ಕೆಲಸವು ಬ್ಯಾಚ್‌ಗಳ ಔಷಧಿಗಳನ್ನು ಪರೀಕ್ಷೆಗಾಗಿ ಕಳುಹಿಸಿಕೊಡುತ್ತಿದ್ದೇವೆ. 10 ಬ್ಯಾಚ್ ಅನ್ನು ಪರೀಕ್ಷೆಗೆ ಕಳುಹಿಸಿಕೊಟ್ಟರೇ, ಒಂದೂ ಅಥವಾ ಎರಡು ಸರಿಯಿಲ್ಲವೆನ್ನುವ ವರದಿ ಬರುತ್ತಿದೆ. ಅದನ್ನು ನನ್ನ ಹೇಳಿಕೆಯಲ್ಲಿ ಉಲ್ಲೇಖಿಸಿದ್ದೇನೆ. M/s. Paschim Banga Pharmaceutical Ltd. ಅನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿದ್ದೇವೆ. KSMSCL ಕಂಪನಿವರು NABL ಲ್ಯಾಬ್‌ಗಳನ್ನು ಟೆಂಡರ್ ಮುಖಾಂತರ 3 ಲ್ಯಾಬ್‌ಗಳನ್ನು ತೆಗೆದುಕೊಂಡಿದ್ದಾರೆ. ಒಟ್ಟಾರೆಯಾಗಿ 7 ಲ್ಯಾಬ್‌ಗಳಿವೆ. ಈ ಲ್ಯಾಬ್‌ಗಳೂ ದೇಶದ ಬೇರೆ ಬೇರೆ ಕಡೆಗಳಲ್ಲಿ ಇದ್ದಾರೆ. ಆ ಲ್ಯಾಬ್‌ನವರು ಸಹ ತಪ್ಪು ವರದಿಯನ್ನು ಕೊಟ್ಟಿದ್ದಾರೆಂದು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದೇವೆ. ಈ ಕುಟುಂಬಗಳಿಗೆ ಪರಿಹಾರವನ್ನು ಕೊಡಬೇಕೆಂದು ನಾವು M/s. Paschim Banga Pharmaceutical Ltd. ಗೆ ನೋಟೀಸ್ ಅನ್ನು ಕೊಟ್ಟಿದ್ದೇವೆ. ನಮ್ಮ ವ್ಯವಸ್ಥೆಯಲ್ಲಿ ಔಷಧಿಯ ಗುಣಮಟ್ಟವನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗದೇ ಇರುವುದು ಒಂದು ವೈಫಲ್ಯವಾಗಿದೆ. ಆ ಔಷಧಿ ಉತ್ಪಾದಕರು ಗುಣಮಟ್ಟದ ಔಷಧಿ ಅಥವಾ ದ್ರಾವಣವನ್ನು ಸರಬರಾಜು ಮಾಡುವುದಕ್ಕೆ ಸಾಧ್ಯವಾಗಿಲ್ಲ ಎನ್ನುವುದು ಇಲ್ಲಿರುವಂತಹ ಮುಖ್ಯ ಪ್ರಶ್ನೆಯಾಗಿದೆ.

(ಮುಂದು)

(912) 17.12.2024 12.40 ಪಿಕೆ:ಎಂಡಿ

**ಶ್ರೀ ದಿನೇಶ್ ಗುಂಡೂರಾವ್(ಮುಂದು)**

ಮುಖ್ಯವಾದ failure ಎಂದರೆ, ಉತ್ಪಾದಕರು ಗುಣಮಟ್ಟದ ಔಷಧಿ ಅಥವಾ ದ್ರಾವಣವನ್ನು ಸರಬರಾಜು ಮಾಡುವುದಕ್ಕೆ ಆಗಲಿಲ್ಲ. Failure ಆಗಲೇ ಬಾರದು. ಒಂದು Pharmaceutical Company ಯವರು ಕ್ವಾಲಿಟಿ ಇಲ್ಲದೇ ಇರುವಂತಹ ಔಷಧಿಯನ್ನು ಸರಬರಾಜು ಮಾಡಲೇಬಾರದು. ಆ ರೀತಿಯ ವ್ಯವಸ್ಥೆ ನಮ್ಮ ದೇಶದಲ್ಲಿ ಇರಬೇಕು. ಜೀವದ ಮೇಲೆ ಚೆಲ್ಲಾಟ ಆಡುವಂಥದ್ದು ಆಗಬಾರದು. ಅದೇ ಕಂಪನಿಯ ಇನ್ನೊಂದು ಡ್ರಗ್ ಆದ dextrose with

sodium chloride ಅದನ್ನೂ ಕೂಡ ವಿಶ್ಲೇಷಣೆ ಮಾಡಿದಾಗ ಅದರ ಕ್ವಾಲಿಟಿ ಕೂಡ ಸರಿಯಾಗಿಲ್ಲ ಎನ್ನುವ ರಿಸಲ್ಟ್ ಬಂತು. ಆ ಕಂಪನಿಯನ್ನು ಬ್ಲಾಕ್ ಲಿಸ್ಟ್ ಮಾಡಿದ್ದಾಗಿನಿಂದ ಒಂದು ರೂಪಾಯಿ ದುಡ್ಡು ಕೂಡ ಕೊಟ್ಟಿಲ್ಲ. ನಾವು ಪೇಮೆಂಟನ್ನು ಸೀಜ಼್ ಮಾಡಿದ್ದೆವು. ಈ ಕಂಪನಿ ಮೇಲೆ ಎಲ್ಲಾ ರೀತಿಯ ಕ್ರಮಗಳಾಗಬೇಕು. ಇಂತಹ ಕಂಪನಿಗಳು ಎಷ್ಟಿವೆ ಎನ್ನುವುದು ನಮಗೆ ಗೊತ್ತಿಲ್ಲ. ಬಳ್ಳಾರಿಯಲ್ಲಿ ಒಂದೇ ಸಂದರ್ಭದಲ್ಲಿ 5 ಜನ ತೀರಿಕೊಂಡಿದ್ದಕ್ಕೆ ಈ ವಿಷಯ ಗೊತ್ತಾಯಿತು. ಬೇರೆ ಬೇರೆ ಅಲ್ಲೊಬ್ಬರೋ ಇಲ್ಲೊಬ್ಬರೋ ತೀರಿಕೊಂಡಿದ್ದರೆ ನಮಗೆ ಗೊತ್ತಾಗುತ್ತಿರಲಿಲ್ಲ. ಇಂತಹ ಒಂದು ಘಟನೆ ಆಗದ ಹೊರತು ನಮಗೆ ಗೊತ್ತಾಗುವುದೇ ಇಲ್ಲ. ಅಂದರೆ, ನಮ್ಮ reporting mechanism ಕೂಡ ಅಷ್ಟು ಸರಿಯಾಗಿಲ್ಲ ಎಂದು ಇದರಿಂದ ಅರ್ಥವಾಗುತ್ತದೆ. ಆ ಕಂಪನಿ ಮೇಲೆ ಈಗಾಗಲೇ ಕೇಂದ್ರಕ್ಕೆ ವರದಿ ಕಳುಹಿಸಿದ್ದೇವೆ. ಪಶ್ಚಿಮ ಬಂಗಾಳದ ಆ ಕಂಪನಿಯನ್ನು ವೀಕ್ಷಣೆ ಮಾಡುವುದಕ್ಕೆ ನಮ್ಮ ತಂಡ ಕೂಡ ಹೋಗಿತ್ತು. ಅಲ್ಲಿ ಕೇಂದ್ರದ ತಂಡದವರೂ ಸಹ ಬಂದು, ಒಟ್ಟಿಗೆ ತಪಾಸಣೆ ಮಾಡಿದರು. Manufacturing process ಏನಿದೆ ಅದನ್ನು ಅತ್ಯಂತ ಸ್ವಚ್ಛವಾದ, sanitized ವಾತಾವರಣದಲ್ಲಿ ಆಗಬೇಕು. Impurity or pollutant ಯಾವುದೂ ಕೂಡ ಮಿಕ್ಸ್ ಆಗಬಾರದು. ಅವೆಲ್ಲವನ್ನೂ ಟೆಸ್ಟ್ ಮಾಡಿದಾಗ ಅವರ, manufacturing process ಸರಿಯಿಲ್ಲ ಎಂದು ಹೇಳುತ್ತಿದ್ದಾರೆ. Drug Controller of India, ನಮ್ಮ ಇಲಾಖೆಯವರು ಮತ್ತು ಪಶ್ಚಿಮ ಬಂಗಾಲದ Drug Control Department ನವರೂ ಕೂಡ ಅಲ್ಲಿಗೆ ಹೋಗಿದ್ದಾರೆ. ಎಲ್ಲರೂ ಒಟ್ಟಿಗೆ ಸೇರಿ ಆ ಕಂಪನಿಗೆ stoppage order issue ಮಾಡಿದ್ದಾರೆ. ತನಿಖೆ ಮುಗಿಯುವವರೆಗೆ ನಿಮ್ಮ facility ಯಲ್ಲಿ ಯಾವುದನ್ನೂ ಕೂಡ ಉತ್ಪಾದನೆ ಮಾಡಬಾರದು ಎಂದು stoppage notice ಕೊಡಲಾಗಿದೆ. ಆ ಕಂಪನಿಯನ್ನು ಬ್ಲಾಕ್ ಲಿಸ್ಟ್ ಕೂಡ ಮಾಡಿದ್ದೇವೆ. ಆದರೆ, ನಮ್ಮ ಕೋರ್ಟ್‌ಗಳಲ್ಲಿ ಏನೇನಾಗುತ್ತದೆ ಎನ್ನುವುದು ನಿಮಗೂ ಗೊತ್ತಿರುತ್ತದೆ. ಈಗ stoppage order issue ಆಗಿದೆ. ಇದೊಂದು ಒಳ್ಳೆಯ ಬೆಳವಣಿಗೆಯಾಗಿದೆ. ಇದರಲ್ಲಿ ಮುಖ್ಯವಾದುದು ಏನೆಂದರೆ, ಅವರ manufacturing process ಸರಿಯಿಲ್ಲ ಎಂದು ಕೇಂದ್ರ, ನಮ್ಮ ರಾಜ್ಯ ಮತ್ತು ಪಶ್ಚಿಮ ಬಂಗಾಳದ ರಾಜ್ಯ ಸರ್ಕಾರದವರು ಹೇಳಿ findings ಕೊಟ್ಟಿದ್ದಾರೆ. ಉತ್ಪಾದಕ ಈ ರೀತಿ ಮಾಡದೇ ಇರುವಂತೆ ನೋಡಿಕೊಳ್ಳುವಂಥದ್ದು ಆಗದೇ ಇರುವುದೇ ನಮ್ಮ failure ಆಗಿದೆ. ಇಂಥದ್ದು ಮಾಡುವುದಕ್ಕೆ ಅವಕಾಶವೇ ಇರಬಾರದು. ಔಷಧ ನಿಯಂತ್ರಕರ ಮತ್ತು ನಿಯಂತ್ರಣ ಇಲಾಖೆಯಲ್ಲಿ ಏನೇನಾಗಿದೆ ಎಂದು ನನ್ನ ಲಿಖಿತ ಉತ್ತರದಲ್ಲಿ ತಿಳಿಸಿದ್ದೇನೆ; ಮೌಖಿಕವಾಗಿ ಕೂಡ ಹೇಳಿದ್ದೇನೆ. ನಮ್ಮ Drugs Control Department and Food Department ಅವರದೇ ಆದ ಒಂದು ವ್ಯವಸ್ಥೆಯಲ್ಲಿ ನಡೆಯುತ್ತಿದೆ. ನಾವು ಎರಡು ತಿಂಗಳ ಹಿಂದೆ, ಇದನ್ನು ಒಬ್ಬ ಐಎಎಸ್ ಅಧಿಕಾರಿ ಮೇಲ್ವಿಚಾರಣೆ ಮಾಡಿದರೆ ಸರಿಹೋಗುತ್ತದೆ ಎಂಬ ಬಗ್ಗೆ ಚಿಂತನೆ ಮಾಡಿದ್ದೆವು. Drugs Control Department ಅವರದೇ ಇಲಾಖೆಯಾಗಿದ್ದು, ಅದರ ಒಳಗಡೆ ಯಾರೂ ಹೋಗುವುದಕ್ಕೆ ಆಗುವುದಿಲ್ಲ. Drugs Inspectors, Drug Controllers ಅವರೇ ಇರುತ್ತಾರೆ; ಅವರೇ Drug Controllers ಆಗುತ್ತಾರೆ. ಅದರ ಮೇಲ್ವಿಚಾರಣೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಒಂದು ಕ್ರಮವನ್ನು ಕೈಗೊಳ್ಳಬೇಕೆಂದು ಎರಡು ತಿಂಗಳ ಹಿಂದೆ ತೀರ್ಮಾನ ಮಾಡಿದ್ದೆವು; ಈಗ ಅದು ಅಪ್ರೂವ್ ಆಗಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಮತ್ತು ಔಷಧ ನಿಯಂತ್ರಣ ಇಲಾಖೆಯನ್ನು

ವಿಲೀನ ಮಾಡುತ್ತಿದ್ದೇವೆ. ಇದಕ್ಕೆ ಈಗಾಗಲೇ ಒಬ್ಬ ಕಮಿಷನರ್ ಇದ್ದಾರೆ. ಈ ವಿಲೀನಕ್ಕೆ ಸಂಬಂಧಪಟ್ಟಂತೆ order issue ಆಗಿದೆ ಮತ್ತು ಅದಕ್ಕೆ ಸಚಿವ ಸಂಪುಟದ ಅನುಮೋದನೆ ಕೂಡ ಸಿಕ್ಕಿದೆ. ಉಳಿದಂತೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನೇನು ಕ್ರಮ ಕೈಗೊಳ್ಳುತ್ತೇವೆ ಎಂದು ಉತ್ತರದಲ್ಲಿ ತಿಳಿಸಿದ್ದೇನೆ. ಅವುಗಳನ್ನು ನೀವು ಓದಿಕೊಳ್ಳಬಹುದು. ಇದರ ಬಗ್ಗೆ ಇನ್ನೂ ಚರ್ಚೆ ಆಗುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ, ಚರ್ಚೆ ಆಗಬೇಕು. ಇದನ್ನು ಮುಚ್ಚಿ ಹಾಕುವಂಥದ್ದಾಗಲಿ ಅಥವಾ ಜವಾಬ್ದಾರಿಯಿಂದ ದೂರ ಇರುವಂಥದ್ದಕ್ಕೆ ಅವಕಾಶ ಇರಬಾರದು. ಮೊನ್ನೆ ಮಹಾರಾಷ್ಟ್ರದಲ್ಲಿ ಯಾವುದೋ ಒಂದು ಕಂಪನಿಯವರು antibiotics supply ಮಾಡಿದ್ದಾರೆ. ಅದರಲ್ಲಿ spurious power ಇರುತ್ತದೆ. ಈ ರೀತಿಯ ಅನೇಕ ಪ್ರಕರಣಗಳಲ್ಲಿ ಸಾವುಗಳು ಆಗಿವೆ. ನಮ್ಮ ದೇಶದಲ್ಲಿ pharma lobby ಬಹಳ ದೊಡ್ಡ lobby ಆಗಿದೆ. ಇವತ್ತಿನ ಕೇಂದ್ರ ಸರ್ಕಾರ ಅಥವಾ ಹಿಂದಿನ ಕೇಂದ್ರ ಸರ್ಕಾರ ಎಂದು ಹೇಳುವುದಕ್ಕೆ ಹೋಗುವುದಿಲ್ಲ, ಒಟ್ಟಾರೆ ಅವರ lobby ಬಹಳ ಜೋರಾಗಿದೆ. ಅವರನ್ನು ನಿಯಂತ್ರಣ ಮಾಡುವ ಕಾನೂನುಗಳನ್ನು ಲಾಗು ಆಗುವುದಕ್ಕೆ ಬಿಡುತ್ತಿಲ್ಲ. ನಮ್ಮಲ್ಲಿ ಡ್ರಗ್ ಕ್ವಾಲಿಟಿಯಲ್ಲಿ ನೂರಕ್ಕೆ ನೂರು compromise ಆಗದೇ ಇರುವಂತಹ ವ್ಯವಸ್ಥೆ ಇರಬೇಕು. ಅದನ್ನು ತರುವುದಕ್ಕೆ ಖಂಡಿತವಾಗಿ ನಾವು ಎಲ್ಲಾ ಪ್ರಯತ್ನ ಮಾಡಬೇಕು. ಇದು ಕೇಂದ್ರದ ಆಕ್ಟ್ ಆಗಿದೆ ಮತ್ತು ಇದರಲ್ಲಿ ನಮ್ಮ ಜವಾಬ್ದಾರಿ ಕೂಡ ಇದೆ. ನಮ್ಮ ಕಡೆಯಿಂದ ಏನೇನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಈ ಕುರಿತು ಕೇಂದ್ರಕ್ಕೆ ಬರೆದು ಮುಂದಿನ ಕ್ರಮ ಕೈಗೊಳ್ಳುವಂತೆ ಮಾಡಬೇಕಾಗುತ್ತದೆ. ನಾವು ಈಗ ನಾನಾ ಹಂತದ ತನಿಖೆಗಳನ್ನು ಮಾಡಿಸುತ್ತಿದ್ದೇವೆ. Development Commissioner ಮುಖಾಂತರ ಮಾಡಿಸುತ್ತಿದ್ದೇವೆ. KSMSCL (Karnataka Stage Medical Supplies Corporation Limited) ವತಿಯಿಂದ ಶ್ರೀಮತಿ ಎಂ.ಕನಗವಲ್ಲಿಯವರು ತನಿಖೆ ಮಾಡುತ್ತಿದ್ದಾರೆ. Maternal deaths audit ಮಾಡುವುದಕ್ಕೆ ಉನ್ನತ ಸಮಿತಿಯನ್ನು ಮಾಡಿದ್ದೇವೆ. ಇವರು ಪ್ರತಿಯೊಂದು ಕೇಸನ್ನು ಅಧ್ಯಯನ ಮಾಡಿ ವರದಿ ಕೊಡಬೇಕಿದೆ. ಈಗ ನಮ್ಮ ಮುಂದೆ 5 ಪ್ರಕರಣಗಳು ಬಂದಿವೆ. ಬೇರೆ ಇನ್ನೆಲ್ಲಿ ಇಂತಹ ಪ್ರಕರಣಗಳಾಗಿವೆ ಎನ್ನುವುದನ್ನು ಪತ್ತೆ ಹಚ್ಚಬೇಕಿದೆ. ಇದೇರೀತಿ ಅನ್ಯಾಯವಾಗಿರುವಂಥದ್ದು ಇದ್ದರೆ ಅವರಿಗೆ ನ್ಯಾಯ ಒದಗಿಸುವ ಕೆಲಸವನ್ನು ಮಾಡಬೇಕಿದೆ. ನಮ್ಮ ಸದಸ್ಯರುಗಳು, ಅವರು ವಿರೋಧ ಪಕ್ಷದವರಿರಬಹುದು ಅಥವಾ ಆಡಳಿತ ಪಕ್ಷದವರಿಬಹುದು ಅವರ ಸಲಹೆಗಳೇನಾದರೂ ಇದ್ದರೆ ಅದನ್ನು ಸ್ವೀಕಾರ ಮಾಡುತ್ತೇವೆ. ತನಿಖೆ ಬೇರೆ ರೀತಿಯಲ್ಲಿ ಆಗಬೇಕು ಎನ್ನುವುದಾದರೆ ಆ ಕುರಿತು ಕೂಡ ಸಲಹೆ ನೀಡಲಿ. ನಾವು ಮುಕ್ತವಾಗಿದ್ದೇವೆ, ಇದರಲ್ಲಿ ಮುಚ್ಚಿ ಹಾಕುವಂಥದ್ದು ಏನೂ ಇಲ್ಲ. ಇಂತಹ ದುರ್ಘಟನೆ ನಮ್ಮ ವ್ಯವಸ್ಥೆಯ ವೈಫಲ್ಯದ ಕಾರಣದಿಂದಾಗಿದೆ. ಇದಕ್ಕೆ ಬೇರೆ ಬೇರೆ ಅಂಶಗಳು ಕಾರಣವಾಗಿರಬಹುದು. Laboratories, Manufacturer or our System ಇರಬಹುದು. ಇದನ್ನೂ ನಾವು ಪರಿಗಣಿಸಿ ಸರ್ಕಾರ ಮುಂದಿನ ಕ್ರಮಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಕೊಳ್ಳುತ್ತದೆ. ಯಾರನ್ನೋ ರಕ್ಷಣೆ ಮಾಡುವುದಾಗಲಿ, ಸಪೋರ್ಟ್ ಮಾಡುವುದಾಗಲಿ, ಉಳಿಸುವುದಾಗಲಿ, ಬೆಂಬಲಿಸುವುದಾಗಲಿ ಮಾಡುವುದಿಲ್ಲ. ಹಾಗೆ ಮಾಡಿದರೆ ನಮ್ಮ ಆತ್ಮ ಸಾಕ್ಷಿಗೆ ದ್ರೋಹ ಮಾಡಿದಂತೆ ಆಗುತ್ತದೆ. ಇದು ಮನಷ್ಯತ್ವಕ್ಕೆ ಕಳಂಕವನ್ನು ತರುತ್ತದೆ. ಸರ್ಕಾರ ಆ ನಿಟ್ಟಿನಲ್ಲಿ ಪಾರದರ್ಶಕವಾಗಿ, ಮುಕ್ತವಾಗಿ ಎಲ್ಲವನ್ನೂ ಕೇಳುವುದಕ್ಕೆ ತಯಾರಾಗಿದೆ ಮತ್ತು ಏನೇನು

ವ್ಯವಸ್ಥೆಬೇಕೋ ಅವೆಲ್ಲವನ್ನೂ ಮಾಡುತ್ತೇವೆ. ಈ ವಿಷಯದಲ್ಲಿ ಮಾನ್ಯ ವೈದಕ್ಕೀಯ ಶಿಕ್ಷಣ ಸಚಿವರು ನಮ್ಮ ಜೊತೆ ಸಹಕಾರ ಕೊಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೂ ಕೂಡ ಅದೇ ನಿಟ್ಟಿನಲ್ಲಿದ್ದಾರೆ. ನಾವು ಕೂಡ ಆ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಹೇಳಿ, ನನ್ನ ಹೇಳಿಕೆ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರನ್ನು ಮತ್ತು ತಮಗೆ ವಂದನೆ ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಗೊತ್ತಿರಲಿ. ಇಂತಹ ಮಹತ್ವದ ವಿಚಾರ ಚರ್ಚೆ ಆಗಿ ಮಂತ್ರಿಗಳು ಉತ್ತರವನ್ನು ಕೊಟ್ಟಮೇಲೆ ಆ ಕುರಿತು ಪುನರ್ಪ್ರಶ್ನೆ ಕೇಳುವ ಅಧಿಕಾರ ಇರುವುದಿಲ್ಲ. ಕೇವಲ ಒಂದು ಮಾತಿನಲ್ಲಿ ಸ್ಪಷ್ಟೀಕರಣ ಕೇಳಬಹುದು. ಸ್ಪಷ್ಟೀಕರಣ ಕೇಳುವವರು ಒಂದೆರಡು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು. ಮತ್ತೆ ಚರ್ಚೆಗೆ ಅವಕಾಶ ಇರುವುದಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ನಾವು ಈ ವಿಷಯವಾಗಿ ನಿಲುವಳಿ ಸೂಚನೆ ತಂದಾಗ, ಅವರು, ಮೊದಲು ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ, ನಂತರ ಚರ್ಚೆ ಮಾಡಿ ಎಂದು ಹೇಳಿದ್ದರು.

**ಉಪ ಸಭಾಪತಿಯವರು:-** ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನೇಕೆ ಹೇಳುತ್ತೇನೆಂದರೆ, ನಾವು ಸದಸ್ಯರುಗಳಿಗೆ ಇದರ ಬಗ್ಗೆ ಸ್ವಲ್ಪ ತಿಳುವಳಿಕೆ ಇದ್ದರೆ ಒಳ್ಳೆಯದು, ನಮ್ಮಲ್ಲಿ ರೋಗಿಗಳು ಬರುತ್ತಾರೆ. ನಮಗೆ ಸ್ವಲ್ಪವಾದರೂ ಅನುಭವವಿರಬೇಕು.

(ಮುಂದು)

(913) 17.12.2024 12.50 DS-MD

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಹೇಳಿರತಕ್ಕಂಥ ವಿಚಾರ ಸರಿ ಇದೆ. ಸರ್ಕಾರ ಉತ್ತರವನ್ನು ಕೊಟ್ಟ ನಂತರ ಮಾನ್ಯ ಸಚಿವರು ಏನಾದರೂ ಮೌಲ್ಯಯುತ ಸಲಹೆಗಳಿದ್ದರೆ ಅದನ್ನು ಒಂದೆರಡು ನಿಮಿಷಗಳಲ್ಲಿ ಕೊಡತಕ್ಕಂಥಾದ್ದಕ್ಕೆ ಅವಕಾಶಗಳಿವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯನ್ನು ತಂದಿದ್ದೆವು.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಲಹೆಗಳನ್ನು ಕೊಡಲಿ, ಚರ್ಚೆಗಳಾಗಬಾರದು ಎನ್ನುವ ಉದ್ದೇಶವಿಲ್ಲ. ಆದರೆ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಮಾತನಾಡಲಿ ಅಷ್ಟೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರು ಲ್ಯಾಪ್ಸಸ್ ಆಗಿರುವಂಥಾದ್ದು ಏನಿದೆ ಅದನ್ನು ಸರಿ ಮಾಡಿಕೊಳ್ಳಬೇಕು ಎನ್ನುವ ಎಲ್ಲಾ ವಿಚಾರಗಳನ್ನು ತಮ್ಮ ಮುಂದೆ ಹೇಳಿದ್ದಾರೆ. ನಿಮಗೇನಾದರೂ ಅವರು ಹೇಳಿರುವಂಥ ವಿಚಾರಗಳಲ್ಲಿ ತಮಗೆ ಸ್ಪಷ್ಟೀಕರಣ ಬೇಕೆಂದರೆ ಗರಿಷ್ಠ ಎರಡು ನಿಮಿಷಗಳಲ್ಲಿ ಮಾತನಾಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಚರ್ಚೆ ಆಗಿದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸಚಿವರು ಆಗಲೇ ಉತ್ತರವನ್ನು ತಯಾರು ಮಾಡಿ ತಂದಿದ್ದರು. ನಾವು ಕೂಡ ನಿಲುವಳಿ ಸೂಚನೆಯನ್ನು ಮಂಡಿಸಿದ್ದೆವು. ಮಂಡಿಸಿದ್ದಕ್ಕೆ ಚರ್ಚೆಗೆ ಅವಕಾಶವಿಲ್ಲವೆಂದು ಮಾನ್ಯ ಸಭಾಪತಿಯವರು ಹೇಳಿದ್ದರು. ಅವರು ಆ ರೀತಿ ಹೇಳಿದಾಗ ಈ ವಿಷಯ ಚರ್ಚೆಯಾಗಿಲ್ಲ, ಈ ವಿಷಯ ಚರ್ಚೆ ಆಗದೇ ಇರುವ ಕಾರಣ ಸಚಿವರು ಉತ್ತರ ಕೊಟ್ಟ ನಂತರ ನಾವುಗಳು ಎರಡೆರಡು ನಿಮಿಷಗಳ ಕಾಲ ಮಾತನಾಡಬೇಕೆಂದು ಹೇಳಿದ್ದೆವು. ಆ ಕಾರಣದಿಂದಲೇ ಎಲ್ಲರೂ ಮಾತನಾಡಲು ಅವಕಾಶ ಕೇಳುತ್ತಿದ್ದರು.

**ಉಪ ಸಭಾಪತಿಯವರು:-** ಆ ಕಾರಣದಿಂದಲೇ ಅವಕಾಶವನ್ನು ಕೊಡುತ್ತಿದ್ದೇವೆ. ನೀವೇನಾದರೂ ಮಾತನಾಡುವುದಿದ್ದರೆ ಹೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅನುಕಂಪದ ಮಾತುಗಳನ್ನಾಡಿದರು. ನಮಗೂ ಒಂದು ರೀತಿ ಅನುಕಂಪವೇ ಬಂತು. ಆಗಬೇಕಾಗಿರುವುದು ಈ ಅನುಕಂಪದ್ದಲ್ಲ. ನಮಗೆ ಆಗಬೇಕಾಗಿರುವುದು ಬ್ಲಾಕ್‌ಲಿಸ್ಟ್ ಮಾಡಿದ ಕಂಪನಿಗಳನ್ನು ಯಾವ ರೀತಿ ಮತ್ತೆ ಅದನ್ನು ಒಪ್ಪಿಕೊಳ್ಳುತ್ತೀರಿ. Freeze ಮಾಡಿದ ಬ್ಯಾಚ್‌ಗಳನ್ನು ನೀವೇಕೆ ತಕ್ಷಣವೇ defreez ಮಾಡಿದಿರಿ? ಈ ಟೆಸ್ಟ್‌ಗಳೆಲ್ಲಾ ಆಗಬೇಕು. ಕೋರ್ಟ್‌ನ ವಿಚಾರವನ್ನು ತಾವು ಪ್ರಸ್ತಾಪ ಮಾಡಿದಿರಿ. ಕೋರ್ಟ್ ಮುಂದೆ ಹೋಗಿ ಬ್ಲಾಕ್‌ಲಿಸ್ಟ್ ಮಾಡಿದ ಕಂಪನಿಗಳನ್ನು, ಇಲ್ಲ ಅದು ಸರಿಯಾಗಿದೆ ಎನ್ನುವುದಾಗಿ ಮಾಡಿ ತಡೆಯಾಜ್ಞೆ ಆದೇಶವನ್ನು ತಂದರು. ಕೋರ್ಟ್ ಲ್ಯಾಬೋರೇಟರಿ ಅಲ್ಲ. ಲ್ಯಾಬೋರೇಟರಿ ಇರುವುದು ನಮ್ಮ ಕಡೆ. ನಾವು ಟೆಸ್ಟ್‌ಗಳನ್ನು ಮಾಡಿಸಿ, ಕೋರ್ಟ್‌ಗೆ ಸಬ್ಮಿಟ್ ಮಾಡಿಸಿ, ಈ ಔಷಧಿ ಸರಿ ಇಲ್ಲ, ಈ ಬ್ಯಾಚ್ ಸರಿ ಇಲ್ಲ ಎನ್ನುವುದನ್ನು ಸರ್ಕಾರ ಅವರಿಗೆ ಮನವರಿಕೆ ಮಾಡುವುದರಲ್ಲಿ ವಿಫಲರಾಗಿದ್ದೇವೆ ಎನ್ನತಕ್ಕಂಥಾದ್ದನ್ನು ತಾವು ಒಪ್ಪಬೇಕಾಗುತ್ತದೆ. ನಮ್ಮ ಕಷ್ಟ-ಸುಖಗಳು ತೀರುತ್ತವೆಂದು ನಾವೆಲ್ಲರೂ ಭಕ್ತಿಯಿಂದ ದೇವಸ್ಥಾನಕ್ಕೆ ಹೋಗುತ್ತೇವೆ. ದೇವಸ್ಥಾನಕ್ಕೆ ಹೋಗಿ ನಾವು ಪೂಜೆಯನ್ನು ಮಾಡಿದಾಗ ತೀರ್ಥ ಕೊಟ್ಟಿದ್ದು ವಿಷ ಆದರೆ ಯಾರೇನು ಮಾಡುವುದಕ್ಕಾಗುತ್ತದೆ. ಇದರ ಹೊಣೆ ಯಾರು? ಹಾಗೆಯೇ ಬಡ ಜನರು ಸರ್ಕಾರ ಆಸ್ಪತ್ರೆಗಳನ್ನು ದೇವಸ್ಥಾನ ಎಂದು ನಂಬಿ ಬರುತ್ತಾರೆ. ಅಲ್ಲಿ ಡಾಕ್ಟರ್‌ಗಳೇ ದೇವರುಗಳು.

**ಉಪ ಸಭಾಪತಿಯವರು:-** ಚರ್ಚೆ ಬೇಡ, come to the point. Clarification ಕೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಲ್ಲಿರತಕ್ಕಂಥ ಔಷಧಿಗಳಲ್ಲಿ ತೊಂದರೆಯಾದಾಗ ಅದು ಸರಿಯಾಗುವುದಿಲ್ಲ. ಕೆಲವು ಸಾರಿ ಕೆಲವನ್ನು ನಾವು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ, ದೊಡ್ಡ ಲಾಬಿ ಇದೆ ಎಂದು ಅವರೇ ಹೇಳಿದರು. ಅದಕ್ಕೆ ತಾವು ಏನಾದರೂ ಮಾರ್ಗವನ್ನು ಹುಡುಕಬೇಕು.

ಅಸಹಾಯಕತೆಯನ್ನು ಸರ್ಕಾರ ತೋರಿಸಬಾರದು. ಅದಕ್ಕೆ ಮಾರ್ಗ ಹುಡುಕಬೇಕು. ಇವತ್ತು ಆಗಿರತಕ್ಕಂಥಾದ್ದಕ್ಕೆ ತಲಾ 5 ಲಕ್ಷ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದೀರಿ. ಹೋದ ಜೀವ ನೀವು ಎಷ್ಟು ಹಣ ಕೊಟ್ಟರೂ ಬರುವುದಿಲ್ಲ. ಹಣ ಕೊಟ್ಟಿದ್ದು ಆ ಸಂದರ್ಭಕ್ಕೆ ಪರಿಹಾರವಷ್ಟೇ. ಆದರೆ ಅದು ಮಾರ್ಗವಲ್ಲ. ಇದನ್ನು ತೀಕ್ಷ್ಣವಾಗಿ ತೆಗೆದುಕೊಳ್ಳಬೇಕು. ಈ ವಿಷಯ ಇಷ್ಟೊಂದು ದೊಡ್ಡದಾಗಲಿಕ್ಕೆ ಕಾರಣವೇನು? ಬಳ್ಳಾರಿಯಲ್ಲಿ ಈ ರೀತಿ 5 ಜನರು ತೀರಿಕೊಂಡಿದ್ದಾರೆ ಎಂದಾಗ ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ ನಾವೆಲ್ಲರೂ ಹೋದೆವು. ಅಲ್ಲಿನ ಸ್ಥಳೀಯ ನಾಯಕರುಗಳು ಹೋದರು. ನಾವೆಲ್ಲರೂ ಪರಿಶೀಲನೆ ಮಾಡಿದೆವು. ಆದರೆ ಮಾನ್ಯ ಸಚಿವರು ಅಲ್ಲಿಗೆ ಹೋಗಲೇ ಇಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಸಹ ಹೋಗಲೇ ಇಲ್ಲ. ನಂತರ ಆ ವಿಷಯ ದೊಡ್ಡದಾಯಿತು. ಕೊನೆಯ ಗಳಿಗೆಯಲ್ಲಿ ತಾವು ಹೋದಿರಿ. ಇದರಲ್ಲಿ ಮಾನವೀಯ ದೃಷ್ಟಿ ಇರಬೇಕು. ಈ ರೀತಿ ಸನ್ನಿವೇಶ ನಡೆದ ತಕ್ಷಣ ಅದಕ್ಕೆ ಪರಿಹಾರವನ್ನು ಕೊಡತಕ್ಕಂಥಾದ್ದು ಆಗಬೇಕು, ಆಗಿರತಕ್ಕಂಥಾದ್ದಕ್ಕೆ ಕಾರಣವನ್ನು ಹುಡುಕತಕ್ಕಂಥಾದ್ದು ಆಗಬೇಕು. ಇವತ್ತಿನ ದಿವಸ ಇದೊಂದು ದೊಡ್ಡ ಮಾಫಿಯಾ ಎಂದು ತಾವೇ ಹೇಳಿದ್ದೀರಿ. ಇದಕ್ಕೆ ಪರಿಹಾರದ ಮಾರ್ಗಗಳನ್ನು ಸಹ ಹುಡುಕಬೇಕು ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಯಾವುದು freeze ಆಗುತ್ತದೆ ಅದನ್ನು ಯಾವುದೇ ಕಾರಣಕ್ಕೆ ಮತ್ತೆ ಒಪ್ಪಬಾರದು. ಒಂದು ಸಾರಿ freeze ಆದರೆ ಅದರಲ್ಲಿ ದೋಷವಿದೆ ಎಂದು ಅರ್ಥ. ದೋಷವಿರುವುದನ್ನು ಮತ್ತೆ ಮಾಡಿದ್ದು ಸರಿಯಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

**ಉಪ ಸಭಾಪತಿಯವರು:-** ಸಮಯವನ್ನು ಗಮನದಲ್ಲಿಟ್ಟುಕೊಂಡು ಎರಡು ನಿಮಿಷಗಳಲ್ಲಿ ಮುಗಿಸಿ

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. I am not going to kill the time. Drug Mafia is very strong ಎನ್ನುವುದು ನಿನ್ನೆ, ಮೊನ್ನೆಯ ವಿಚಾರ ಅಲ್ಲ. ಅದು ಇಡೀ ದೇಶದಲ್ಲಿಯೇ ಬಹಳ strong ಇದೆ. ಆ ಡ್ರಗ್ ಮಾಫಿಯಾವನ್ನು ನಿಯಂತ್ರಣ ಮಾಡುವುದಕ್ಕೆ ನಾವೇನು ಅಸಹಾಯಕರಲ್ಲ. ನಮ್ಮ ಕಾನೂನು ಬಹಳ ಬಲಿಷ್ಠವಾಗಿದೆ. ಅಧಿಕಾರಿಗಳು ಎಲ್ಲಾ ರೀತಿಯಲ್ಲೂ ಸಮರ್ಥರಿದ್ದಾರೆ, ಸರ್ಕಾರ ಕೂಡ ಸರ್ಮಥವಾಗಿದೆ. ಇವತ್ತು ಆಗಿರತಕ್ಕಂಥ ವಿಚಾರಕ್ಕೆ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಮ್ಮ ಸಹಮತವಿದೆ. ಕೋರ್ಟ್‌ನಲ್ಲಿ ಅವರಿಗೆ ರಕ್ಷಣೆ ಸಿಗುತ್ತದೆ ಎನ್ನುವ ವಿಚಾರವನ್ನು ನಾವೂ ಸಹ ಅಷ್ಟು ಸುಲಭವಾಗಿ ತೆಗೆದುಕೊಳ್ಳಬಾರದು. ಅದಕ್ಕೆ ತಕ್ಕಂತೆ ಏನು ಕೆಲಸವನ್ನು ಮಾಡಬೇಕೆಂದು ನಮ್ಮಲ್ಲಿಯೂ ಅಡ್ವೊಕೇಟ್ ಜನರಲ್‌ರವರಿಂದ ಹಿಡಿದು ಎಲ್ಲರೂ ಕೋರ್ಟ್‌ನ ಕಣ್ಣು ತೆರೆಸತಕ್ಕಂಥ ವಿಚಾರವನ್ನು ಮಾಡಬೇಕಾಗುತ್ತದೆ. ಯಾರು ಈ ಡ್ರಗ್ಸ್ ಮಾಫಿಯಾದಲ್ಲಿ involve ಆಗಿ habitual offenders ಇದ್ದಾರೆ, ಆ habitual offenders ನ್ನು ಹುಡುಕತಕ್ಕಂಥ ವಿಚಾರದಲ್ಲಿ ನಮಗೇನೂ ಕಷ್ಟದ ಕೆಲಸವಲ್ಲ. ಪೋಲೀಸ್

ಇಲಾಖೆಯವರು ಇದರಲ್ಲಿ ಬಹಳ ನಿಪುಣರಿದ್ದಾರೆ. 24 ಗಂಟೆಗಳಲ್ಲಿ ಅವರನ್ನು ಹಿಡಿದು ತರತಕ್ಕಂಥ ಕೆಲಸವೂ ಸಹ ಆಗುತ್ತದೆ. ಡ್ರಗ್ ಮಾಫಿಯಾದಲ್ಲಿ involve ಆಗಿರುವವರು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರನ್ನು ಕೂಡಲೇ ಬಂಧಿಸಿ ಕ್ರಿಮಿನಲ್ ಕೇಸ್ ಹಾಕಿ ಸಮಾಜದಲ್ಲಿ ಅವರನ್ನು ಯಾವ ರೀತಿ ಪರಿಗಣಿಸಬೇಕೆಂಬ ವಿಚಾರದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ನಮ್ಮ ಅಧಿಕಾರಿಗಳ ನೆರವಿಲ್ಲದೇ ಈ ಕೆಲಸವಾಗಿಲ್ಲ. ನಾವು ನೂರಕ್ಕೆ ನೂರು ಅದನ್ನು ಸಹ ಒಪ್ಪಬೇಕಾಗುತ್ತದೆ. ಅಧಿಕಾರಿಗಳ ನೆರವು ಇಲ್ಲದೇ ಅಷ್ಟು ಸುಲಭವಾಗಿ ಡ್ರಗ್ಸ್ ಮಾಫಿಯಾ ಕೆಲಸ ಮಾಡುವುದಕ್ಕಾಗುವುದಿಲ್ಲ. ಅಧಿಕಾರಿಗಳಿಗೆ ಎಲ್ಲಾ ವಿಚಾರಗಳು ಗೊತ್ತಿರುತ್ತದೆ. ಇದು ನಿನ್ನೆ ಮೊನ್ನೆಯ ವಿಚಾರವೇನೂ ಅಲ್ಲ. ಸಂಬಂಧಪಟ್ಟಂಥ ಅಧಿಕಾರಿಯ ಮೇಲೆ ಕ್ರಮ ಮಾಡುವ ಮುಖಾಂತರ, ಅವರು ಫಾರಿನ್‌ಗೆ ಎಕ್ಸ್‌ಪೋರ್ಟ್ ಮಾಡುವುದು ಬೇರೆ ನಮ್ಮಲ್ಲಿ ಸಿಗುವುದು ಬೇರೆ ಎಂದು ಹೇಳಿದರು. ಅದು ಸತ್ಯವಿದೆ. ಕ್ವಾಲಿಟಿ ಇರುವಂಥಾದ್ದನ್ನು ಎಕ್ಸಪೋರ್ಟ್ ಮಾಡುವುದು ನಮ್ಮಲ್ಲಿ ಬೇರೆ ಬಳಸುತ್ತಾರೆ ಎನ್ನುವುದಕ್ಕೆ ಇದೇನು ತರಕಾರಿ ಅಥವಾ ಕಾಫಿ ಪುಡಿ ಅಲ್ಲ. ಡ್ರಗ್ಸ್ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಸಹ ರಾಜಿಯಾಗಬಾರದು. ಯಾವುದೋ ಒಂದು ಮೆಡಿಸನ್ ಹೊರಗಡೆ ಬರುತ್ತದೆಂದರೆ, it has undergone so many tests. ಆ ಟೆಸ್ಟ್‌ನಲ್ಲಿ ಪಾಸ್ ಆಗಿ ಬಂದಾಗ ಮಾತ್ರ ನಾವು ಸಮಾಜಕ್ಕೆ ಕೊಡತಕ್ಕಂಥಾದ್ದು. ಆ ಟೆಸ್ಟ್‌ಗಳಲ್ಲಿ ಯಾರ್ಯಾರು ಒಳಗೊಂಡಿದ್ದರು, ಅವರನ್ನು ಯಾವ್ಯಾವ ರೀತಿ ಸಮಾಜಕ್ಕೆ ಕೊಟ್ಟರು ಎನ್ನುವ ವಿಚಾರವನ್ನು, ಮಾರ್ಕೆಟಿಂಗ್ ಆಚೆ ಬಿಟ್ಟರಲ್ಲ, ಅಲ್ಲಿ ಯಾರ್ಯಾರು ಬಂದರು ಎಂಬುದನ್ನು ಸಂಪೂರ್ಣವಾಗಿ ತನಿಖೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಸ್ಪತ್ರೆಗಳಿಗೆ ಔಷಧಿಗಳನ್ನು ಸರಬರಾಜು ಮಾಡುವುದು ಯಾರ ಜವಾಬ್ದಾರಿ? ನನಗೆ ಗೊತ್ತಿರುವ ಪ್ರಕಾರ KSMSCL (Karnataka State Medical Supplies Corporation Limited) ವ್ಯಾಪ್ತಿಗೆ ಬರುತ್ತದೆ. ನೀವೀಗ ಔಷಧ ನಿಯಂತ್ರಣ ಇಲಾಖೆಯ Drugs Controller ಡಾ॥ ಉಮೇಶ್‌ರವರನ್ನು ಸಸ್ಪೆಂಡ್ ಮಾಡಿದ್ದೀರಿ. ಅವರು ಯಾವಾಗಿನಿಂದ ಡ್ಯೂಟಿಯಲ್ಲಿದ್ದರು. Batch No. 03 BFO – 2338 ಯಾವಾಗ ಯೋಗ್ಯವಲ್ಲವೆಂದು ನಿಮ್ಮ ಲ್ಯಾಬೋರೇಟರಿ ರಿಪೋರ್ಟ್ ಕೊಟ್ಟಿತೋ, ಅವರು ಬ್ಲಾಕ್‌ಲಿಸ್ಟ್‌ಗೆ ಮಾತ್ರ ತಡೆಯಾಜ್ಞೆಯನ್ನು ತೆಗೆದುಕೊಂಡರು. ಸಪ್ಲೈ ಮಾಡಬೇಕೆಂದು ಕೋರ್ಟ್ ಆದೇಶವನ್ನು ಮಾಡಲಿಲ್ಲ. ನಿಮ್ಮ ಲ್ಯಾಬೋರೇಟರಿ ಟೆಸ್ಟ್‌ನಲ್ಲಿ ಇದು ಕಳಪೆ, ಯೋಗ್ಯವಲ್ಲದ್ದು ಎಂದು ವರದಿಯಾಗಿದೆ. ಈ ರೀತಿ ವರದಿಯಾದ ನಂತರ ನೀವು ಆಸ್ಪತ್ರೆಗಳಿಂದ ಸಪ್ಲೈ ಆಗಿದೆಲ್ಲವನ್ನು ವಿತ್‌ಡ್ರಾ ಮಾಡಬೇಕಿತ್ತಲ್ಲಾ, ಮತ್ತೇಕೆ ಕಳುಹಿಸಿದಿರಿ? ಕೋರ್ಟ್ ಆ ಕಂಪನಿಯನ್ನು ಬ್ಲಾಕ್‌ಲಿಸ್ಟ್ ನಲ್ಲಿ ಸೇರಿಸುವುದಕ್ಕೆ ಮಾತ್ರ ತೆಯಾಜ್ಞೆಯನ್ನು ಕೊಟ್ಟಿರುವುದು. ಆದರೆ ಆ ಔಷಧಿ ಯೋಗ್ಯ ಎಂದು ಕೋರ್ಟ್ ಏನಾದರೂ ಆದೇಶವನ್ನು ಮಾಡಿತ್ತೇ. ಕೋರ್ಟ್‌ಗೆ ಆ ರೀತಿ ಆದೇಶವನ್ನು

ಮಾಡುವ ಅಧಿಕಾರವಿದೆಯೇ? ಇದು ಜೀವದ ಪ್ರಶ್ನೆ ಇರುವುದರಿಂದ, ಒಂದು ವೇಲೆ ಕೋರ್ಟ್ ಆ ರೀತಿ ಆದೇಶವನ್ನು ಮಾಡಿದ್ದರೂ ಸಹ ನಾವು ಇದನ್ನು ಪುನರ್ ಪರಿಶೀಲನೆ ಮಾಡಬೇಕಿತ್ತು ಎಂದು ಮನವಿಯನ್ನು ಸಲ್ಲಿಸಬಹುದಿತ್ತು. ಉಚ್ಚ ನ್ಯಾಯಾಲಯ ಆದೇಶವನ್ನು ಮಾಡಿದರೆ ನಮಗೆ ವಿಶ್ವಾಸವಿದ್ದರೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುತ್ತೇವೆ. ನನಗನ್ನಿಸುತ್ತದೆ, ನಾನು ನಿಮ್ಮನ್ನು ವೈಯಕ್ತಿಕವಾಗಿ ಹೊಣೆ ಮಾಡುತ್ತಿಲ್ಲ. ಇದೆಲ್ಲದಕ್ಕೂ ಸಚಿವರು custodian ಆಗಿರುತ್ತಾರೆ. ಇಲ್ಲಿ ವೈಫಲ್ಯಗಳಾದರೆ ಆ ವೈಫಲ್ಯಗಳ ನೈತಿಕ ಹೊಣೆ ನಿಮ್ಮದು. ನೇರವಾಗಿ ನಿಮ್ಮ ತಪ್ಪಿಲ್ಲದೇ ಇರಬಹುದು.

(ಮುಂದು)

(914) 17/12/2024 1:00 ಎಸ್‌ಪಿಆರ್/ಎಕೆ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ(ಮುಂದು):-**

ಆದರೆ ಎಲ್ಲದರ ಮೇಲುಸ್ತುವಾರಿಯನ್ನು ಮಾಡುವ ಜವಾಬ್ದಾರಿ ಯಾರದ್ದು? ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಇದು ಕೇವಲ ಬಳ್ಳಾರಿಯಲ್ಲಾದ ಸಾವು ಮಾತ್ರವಲ್ಲ. ರಾಜ್ಯದ ಬೆಳಗಾವಿ, ದಾವಣಗೆರೆ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕುಗಳಲ್ಲೂ ಸಹ ಸಾವು ಸಂಭವಿಸಿದೆ. ಈಗ ಆಗಿರುವ ಸರಣಿ ಸಾವುಗಳ ಬಗ್ಗೆ ನಾವು ನಿರ್ಲಕ್ಷ್ಯವನ್ನು ವಹಿಸುವುದಕ್ಕೆ ಬರುವುದಿಲ್ಲ. ಇದು ಯಾವುದೋ ಪ್ರತ್ಯೇಕವಾದ ಘಟನೆಯಾಗಿಲ್ಲ. ಇವು ಸರಣಿ ಸಾವುಗಳಾಗಿವೆ. ಹೀಗಾಗಿ ಈ ಬಗ್ಗೆ ಸರ್ಕಾರವು ಎಚ್ಚರವನ್ನು ವಹಿಸಬೇಕು. "ಊರು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ" ಎಂಬ ನಾಣ್ಣುಡಿಯಂತಾಗದೇ, ನಮ್ಮ ಪರಿಸ್ಥಿತಿಯಾಗಬಾರದು. ಮೆ. ಪಶ್ಚಿಮ್ ಬಂಗಾ ಫಾರ್ಮಸ್ಯೂಟಿಕಲ್ ಕಂಪೆನಿಯಲ್ಲಿ ತಯಾರಿಕೆಯು ಆರೋಗ್ಯದಾಯಕವಾಗಿಲ್ಲ ಎನ್ನುವುದನ್ನು ಈಗ ಪರೀಕ್ಷೆ ಮಾಡಿ ಹೇಳಲಾಗುತ್ತಿದೆ. ನಾಳೆಯ ದಿನ ಮತ್ತಷ್ಟು ಜನ ಸತ್ತ ಮೇಲೆ ಇನ್ಯಾವುದೋ ಕಂಪೆನಿಯ ಔಷಧಿಯು ಸರಿ ಇಲ್ಲ ಎಂದು ಹೇಳಿದರೆ ಏನು ಪ್ರಯೋಜನ? ಉಳಿದವರು ಯಾರು ಯಾರು ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆಯೋ, ಆ ಕಂಪೆನಿಗಳ ಹಣೆಬರಹವನ್ನು ಸರ್ಕಾರವು ಗಮನಿಸಬೇಕು. ಉಳಿದ ಫಾರ್ಮಸ್ಯೂಟಿಕಲ್ ಕಂಪೆನಿಯವರು ಈಗ ಔಷಧಿಗಳನ್ನು ಏನು ಸರಬರಾಜು ಮಾಡುತ್ತಾರೆಯೋ, ಆ ಕಂಪೆನಿಗಳ ಪರಿಸ್ಥಿತಿ ಏನು ಎನ್ನುವ ಬಗ್ಗೆ ಒಂದು ವಿಚಾರಣಾ ಸಮಿತಿಯನ್ನು ರಚಿಸಬೇಕು. ಕಡೇ ಪಕ್ಷ ಅಲ್ಲಿನ ಸ್ಥಳ ತನಿಖೆಯನ್ನಾದರೂ ಮಾಡಬೇಕು. ಬಾಣಂತಿ ಸತ್ತ ಮೇಲೆ ಸ್ಥಳ ತನಿಖೆ ಮಾಡಿದರೆ ಏನು ಪ್ರಯೋಜನ? ಒಂದು ಸಾವಿನ ಬೆಲೆ ಐದು ಲಕ್ಷ ರೂಪಾಯಿಗಳೇ ಎಂದು ನಾನು ಕೇಳಲಿಚ್ಛಿಸುತ್ತೇನೆ. ಸಾವಿಗೆ ಬೆಲೆ ಕಟ್ಟಲು ಸಾಧ್ಯವೇ? ಹೀಗಾಗಿ ಸರ್ಕಾರವು ಈ ವಿಚಾರದಲ್ಲಿಯೂ ಸಹ ಎಚ್ಚರಿಕೆಯನ್ನು ವಹಿಸಬೇಕು. ಮೆ. ಪಶ್ಚಿಮ್ ಬಂಗಾ ಫಾರ್ಮಸ್ಯೂಟಿಕಲ್ ಕಂಪೆನಿಯಲ್ಲಿ ತಯಾರಿಸಿದ ರಿಂಗರ್ ಲ್ಯಾಕ್ಟೇಟ್ ಔಷಧಿಗಳನ್ನು ಬಳಸಬಹುದು ಎಂದು ಸರ್ಕಾರಿ ಆಸ್ಪತ್ರೆಗಳಿಗೆ ಅಕ್ಟೋಬರ್ 2024 ರಲ್ಲಿ ಸೂಚಿಸಿದ್ದಾರೆ. ಹೀಗೆ ಸೂಚನೆಗಳನ್ನು ಕೊಡಬೇಕಾದರೆ, ಸದರಿ ಔಷಧಿಗಳನ್ನು ಮತ್ತೊಮ್ಮೆ ಸರ್ಕಾರಿ ಲ್ಯಾಬ್‌ಗಳಲ್ಲಿ ಪರೀಕ್ಷಿಸಲಾಯಿತೇ? ಏಕೆಂದರೆ, ಒಂದು ಬ್ಯಾಚ್‌ಗೂ ಮತ್ತೊಂದು ಬ್ಯಾಚ್‌ಗೂ ವ್ಯತ್ಯಾಸಗಳಿರುತ್ತವೆ. ಎಲ್ಲಾ ಬ್ಯಾಚ್‌ನ

ಔಷಧಿಗಳು ಸರಿ ಇಲ್ಲದಿದ್ದರೆ, ಸಾವಿರಾರು ಜನರು ಸಾಯುತ್ತಿದ್ದರು. ಹೀಗಾಗಿ ಒಂದು ಬ್ಯಾಚ್‌ನ ಔಷಧಿಯು ಸರಿ ಇಲ್ಲ ಎಂದಾದರೆ, ಆ ಬ್ಯಾಚ್‌ನ ಔಷಧಿಗಳನ್ನು ಹಿಂಪಡೆಯಬೇಕಾಗಿತ್ತು. ಇದರ ಜವಾಬ್ದಾರಿ ಯಾರದ್ದು ಎಂದು ನಾನು ಪ್ರಶ್ನಿಸಬಯಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ, ಈಗಾಗಲೇ ಸಚಿವರು ಉತ್ತರಿಸಿದ್ದಾರೆ. ನಾನು ಈ ವಿಷಯದ ಬಗ್ಗೆ ಚರ್ಚಿಸುತ್ತಿಲ್ಲ. *"ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ"* ಎಂಬ ನಾಣ್ಣುಡಿ ಇದೆ. ಅಂದರೆ ವರ್ಷವಿಡೀ ಕುಂಬಾರನು ಮಡಿಕೆ ಮಾಡಿ ಇಡುತ್ತಾನೆ; ಆದರೆ ಒಂದು ಸಲ ಕೋಲಿನಿಂದ ಹೊಡೆದರೆ ಅದು ಒಡೆದು ಹೋಗುತ್ತದೆ ಎಂಬರ್ಥ. ಬಾಣಂತಿಯನ್ನೂ ಸಹ ನಾವು ಇದೇ ರೀತಿಯಾಗಿ ಹೋಲಿಕೆ ಮಾಡಬಹುದು. ಆಕೆಯು ವರ್ಷವೀಡಿ ತನ್ನ ಜೀವನವನ್ನು ತನ್ನ ಶಿಶುವಿಗಾಗಿ ಮೀಸಲಿಡುತ್ತಾಳೆ. ಆ ನಂತರ ಯಾವುದೋ ಔಷಧಿ ಬಂದು ಅವಳ ಬದುಕನ್ನು ಹೊಡೆದು ಹಾಕಿ ಹೋಗುತ್ತದೆ. ಹೆಣ್ಣಿಗೆ ಎರಡು ಬಾರಿ ಬದುಕು ಎಂಬುದಾಗಿ ಹೇಳುತ್ತಾರೆ. ಒಮ್ಮೆ ಆಕೆ ಜನ್ಮ ತಾಳಿದಾಗ ಮತ್ತೊಂದು ಆಕೆಯ ಹೆರಿಗೆಯ ಸಮಯದಲ್ಲಿ. ಹೆಣ್ಣು ಇನ್ನೊಂದು ಜೀವಕ್ಕೆ ಜನ್ಮ ನೀಡುವಾಗ ಪುನರ್ ಜನ್ಮ ಪಡೆಯುತ್ತಾಳೆ. ಈ ಜನ್ಮವನ್ನೂ ಸಹ ಕಿತ್ತುಕೊಂಡರು. ನನಗೆ ಬೇಸರವಾದ ಸಂಗತಿ ಏನೆಂದರೆ, ಈ ಸಂದರ್ಭದಲ್ಲಿ ನಾನು ಹೇಳಬಯಸುವುದೇನೆಂದರೆ, ಹುಟ್ಟಿದ ಮೇಲೆ ಎಲ್ಲರೂ ಸಾಯುತ್ತಾರೆ; ಸಾಯಲೂ ಬೇಕು. ಆದರೆ, ಈ ಸಾವು ಸ್ವಾಭಾವಿಕವಾದುದಲ್ಲ. ಬಾಣಂತಿಯರು ಸಾಯುತ್ತಾರೆ ಎಂದು ಸರ್ಕಾರವು ಹೇಳಿದೆ. ನಿರ್ಲಕ್ಷ್ಯದಿಂದಾಗಿ ಈ ರೀತಿಯ ಸಾವುಗಳು ಸಂಭವಿಸಿವೆ ಎಂಬುದನ್ನು ಸಚಿವರೂ ಸಹ ಮನಸಾರೆ ಒಪ್ಪಿದ್ದಾರೆ. ಸಚಿವರು ಮಾತನಾಡುವಾಗ ಆ ರೀತಿಯ ಹೇಳಿಕೆಯನ್ನು ಕೊಟ್ಟರೆ, ನಮ್ಮ ಮನಸ್ಸಿಗೆ ನೋವಾಗುತ್ತದೆ. ಈ ಮಾತನ್ನು ಸಚಿವರು ಕೆಳಮನೆಯಲ್ಲಿ ಹೇಳಿದ್ದಾರೆಯೇ; ಹೊರತು ಈ ಸದನದಲ್ಲಿ ಅಲ್ಲ. ಸಮಾಜವೆಂದ ಮೇಲೆ ಈ ರೀತಿಯ ಏರುಪೇರುಗಳಾಗುತ್ತವೆ; ನಾವುಗಳು ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಯಾವ ಶೀಘ್ರತೆ ಇದೆ ಇದರಲ್ಲಿ? ದಿನಾಂಕ 9, 10 ಮತ್ತು 11 ಗಳಂದು ಘಟನೆಗಳಾಗಿವೆ. ಆದರೆ, ಇದು ನಮಗೆ 11 ನೇ ತಾರೀಖಿನಂದು ಗೊತ್ತಾಗಿದೆ. ಸರಣಿ ಸಾವುಗಳಾಗುತ್ತಿವೆ ಎಂದು ಎಲ್ಲಾ ಟಿ.ವಿ. ವಾಹಿನಿಗಳ ಮೂಲಕ ನಮಗೆ ಮಾಹಿತಿಯು ಬಂದಿತು. ಮುಖ್ಯಮಂತ್ರಿಗಳು ಶೀಘ್ರದಲ್ಲಿ ಸಭೆ ಮಾಡಿದ್ದೇವೆ ಎಂದು ಹೇಳಿದರು. ಆದರೆ, ಘಟನೆ ನಡೆದ ಎಷ್ಟು ದಿನದ ನಂತರ ಸಭೆಯನ್ನು ಮಾಡಿದ್ದಾರೆ? ಆದರೆ, ಘಟನೆ ನಡೆದ 19 ದಿನಗಳ ನಂತರ ಸರ್ಕಾರವು ಶೀಘ್ರವಾಗಿ ಸಭೆಯನ್ನು ಮಾಡಿದೆ. 30 ನೇ ತಾರೀಖಿನಂದು ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲೆಯ ಆಸ್ಪತ್ರೆಯಲ್ಲಿ ಸಂಭವಿಸಿದ ಬಾಣಂತಿಯರ ಸಾವುಗಳ ಕುರಿತು ಪರಿಶೀಲನಾ ಸಭೆಯನ್ನು ಮಾಡಿದರು. ಆದರೆ, ಇದನ್ನು ಯಾವಾಗ ಮಾಡಿದರು? ಶೀಘ್ರವಾಗಿ ಮಾಡಿದರು ಎಂದು ತಿಳಿಸಿದರು. ಆದರೆ ಆ ಶೀಘ್ರತೆ 19 ದಿನಗಳಾಗಬಾರದು. ಇಷ್ಟು ವಿಳಂಬವಾಗಿ ಸಭೆಯನ್ನು ಮಾಡಬಾರದಿತ್ತು. ಇಲಾಖೆಯ ಮಂತ್ರಿಗಳು ಯಾವಾಗ ಭೇಟಿ ನೀಡಿದರು ಎಂದು ನಾನು ಪ್ರಶ್ನಿಸಬಯಸುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರು ಯಾವಾಗ ಗಮನ ಹರಿಸಿದರು? ಇದರಲ್ಲಿ ಸರ್ಕಾರದ ತಪ್ಪು ಇದೆಯೇ ಅಥವಾ ಇಲ್ಲವೇ ಎನ್ನುವುದನ್ನು ನಾನು ಉಲ್ಲೇಖಿಸಬಯಸುವುದಿಲ್ಲ. ಬಾಣಂತಿಯ ಮರಣ ಸಮಯದಲ್ಲಿ ಏನಿತ್ತು ಎಂದು ನಾನು ಪ್ರಶ್ನಿಸಬಯಸುತ್ತೇನೆ. ಸದರಿ ಡ್ರಗ್ ಸರಿ ಇಲ್ಲ ಎಂಬುದಾಗಿ ಸಚಿವರು ತಿಳಿಸಿದರು. ಆದರೆ,

ಇದನ್ನು ಪರೀಕ್ಷೆಗಾಗಿ ಕೇಂದ್ರಕ್ಕೆ ಕಳುಹಿಸಿದಾಗ ಅದು ಸರಿಯಾಗಿತ್ತು ಎಂದು ಹೇಳುವುದಾದರೆ, ಅದು ಅಲ್ಲಿ ಹೇಗೆ ಸರಿಯಾಗಿರುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸದರಿ ಔಷಧಿ ಬದಲಾವಣೆಯಾಗಿರಬಹುದು. ಒಂದು ಅಲ್ಲಿ ಬದಲಾವಣೆಯಾಗಿರಬಹುದು ಅಥವಾ ಇಲ್ಲಿಂದ ಕೊಂಡು ಒಯ್ಯುವಾಗ ಬದಲಾವಣೆಯಾಗಿರಬಹುದು. ಇದರ ಬಗ್ಗೆ ನನಗೆ ತಿಳಿದಿದೆ. ಏಕೆಂದರೆ ನಾನು ಪೆಟ್ರೋಲ್ ಬಂಕ್ ಅನ್ನು ನಡೆಸಿದ್ದೇನೆ. ಪೆಟ್ರೋಲ್ ಸ್ಯಾಂಪಲ್‌ನ್ನು ತೆಗೆದುಕೊಂಡು ಹೋದಾಗ ಒಂದು ಮಾದರಿಯದ್ದಾಗಿರುತ್ತದೆ ಹಾಗೂ ಪರೀಕ್ಷೆ ಮಾಡುವಾಗ ಮತ್ತೊಂದು ಮಾದರಿಯದ್ದಾಗಿರುತ್ತದೆ. ಮಧ್ಯದಲ್ಲಿ ಏರುಪೇರಾಗಿರುತ್ತದೆ. ಇಂತಹ ವ್ಯವಸ್ಥೆಯನ್ನು ನಾವು ನೋಡಿದ್ದೇವೆ ಹಾಗೂ ಈ ಬಗ್ಗೆ ನಮಗೆ ತಿಳಿದಿದೆ. ಔಷಧಿಗಳ ವಿಚಾರದಲ್ಲಿ ಈ ರೀತಿಯಾಗಿ ಏಕೆ ಆಗಿರಬಹುದು? ಆದ್ದರಿಂದ ಇದನ್ನೂ ಸಹ ಪರಿಶೀಲನೆ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಕೊನೆಯದಾಗಿ ಹೇಳುವುದಾದರೆ, ತಾಯಿಯಲ್ಲಿ ಯಾರೂ ಶ್ರೀಮಂತರು ಮತ್ತು ಬಡವರು ಎಂಬುದಾಗಿ ಇರುವುದಿಲ್ಲ. ತಾಯಿ ತಾಯಿಯಾಗಿಯೇ ಇರುತ್ತಾಳೆ. ಇವತ್ತಿನ ದಿವಸ ಆ ಮಗು ಯಾರ ತಪ್ಪಿನಿಂದಾಗಿ ಅನಾಥವಾಗಿದೆ? ತಾಯಿ ಬಡವರು ಎಂದು ಸರ್ಕಾರವು ಹೇಳುತ್ತದೆ. ಆ ಮಗುವಿನ ಲಾಲನೆ ಮತ್ತು ಪಾಲನೆಗಾಗಿ ಸರ್ಕಾರವು 2 – 5 ಲಕ್ಷ ರೂಪಾಯಿಗಳಷ್ಟು ಪರಿಹಾರವನ್ನು ಘೋಷಣೆ ಮಾಡಿದೆ. ಇದು ಸಂತೋಷದ ವಿಷಯ. ಆದರೆ, ಪಕ್ಕದ ಕೇರಳ ರಾಜ್ಯದ ವಯನಾಡಿನಲ್ಲಿ ಆನೆ ತುಳಿತಕ್ಕೊಳಗಾದ ಮೃತ ವ್ಯಕ್ತಿಗೆ ಸರ್ಕಾರವು 15 ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡುವ ಸಂದರ್ಭದಲ್ಲಿ ತಕ್ಷಣವೇ ಪರಿಹಾರ ಮೊತ್ತವನ್ನು ನೀಡುವಾಗ, ಮೃತ ಬಾಣಂತಿಯ ಮಗುವಿಗೆ ಐದು ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿದರೆ, ಇದು ಎಲ್ಲಿ ಸಾಲುತ್ತದೆ? ಇದು ಮಕ್ಕಳ ಭವಿಷ್ಯದ ಪ್ರಶ್ನೆಯಾಗಿದೆ. ಇವತ್ತಿನ ದಿವಸ ತಂದೆ-ತಾಯಿಗಳು ದುಡಿದು ಮಕ್ಕಳನ್ನು ಸಾಕುತ್ತಾರೆ. ಈ ವಿಚಾರದಲ್ಲಿ ನಾನು ಚರ್ಚಿಸುತ್ತಿಲ್ಲ. ಸರ್ಕಾರಕ್ಕೆ ವಿನಂತಿಸಿ, ಸಲಹೆಯನ್ನು ನೀಡುವುದೇನೆಂದರೆ..., ಹೆಣ್ಣುಮಕ್ಕಳಾದ ನಾವುಗಳೆಲ್ಲಾ ಇಲ್ಲಿ ಇದ್ದೇವೆ; ಸರ್ಕಾರವು ಇಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡಬೇಕಾಗಿಲ್ಲ, ಏಕೆಂದರೆ ಇಲ್ಲಿ ಸಾವಿರಾರು ಸಾವುಗಳಾಗಿಲ್ಲ. ಆ ಮಕ್ಕಳಿಗೆ ಕನಿಷ್ಟ ಐದು ಲಕ್ಷ ರೂಪಾಯಿಗಳನ್ನಾದರೂ ಸರ್ಕಾರವು ಘೋಷಿಸಬೇಕು. ಆದರೂ ಸಹ ಇದು ಕಡಿಮೆ ಮೊತ್ತವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರವು ಪುನಃ ಪರಿಶೀಲನೆ ಮಾಡಿ, ಹೆಚ್ಚು ಮೊತ್ತವನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈ ವಿಚಾರದಲ್ಲಿ ಸಚಿವರು ನೀಡಿರುವ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ. ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಸಿಸೇರಿಯನ್ ಮಾದರಿಯ ಹೆರಿಗೆಯಾಗಿ ಬಾಣಂತಿಯ ಸಾವು ಆದಾಗ..., ನಾನು ಮತ್ತು ಸಚಿವರು ಆ ಬಾಣಂತಿಯ ಮನೆಗೆ ಹೋಗಿದ್ದೆವು. ಸಚಿವರು ಬರುವುದಕ್ಕೂ ಮುನ್ನ ನಾನು ಅಲ್ಲಿನ ಎಲ್ಲಾ ವಿಷಯಗಳನ್ನು ಗಮನಕ್ಕೆ ತಂದಿದ್ದೇನೆ. ಮೃತ ಬಾಣಂತಿಯು ಅವಿದ್ಯಾವಂತಳಲ್ಲ; ಆಕೆ ಬಡವಳಾಗಿದ್ದರೂ ಸಹ ಅರೆ ಕಾಲಿಕ ವೃತ್ತಿಯನ್ನು ಮಾಡುತ್ತಿದ್ದಳು. ಅದರಲ್ಲೂ ವಿಶೇಷವಾಗಿ ಅವರ ಪತಿಯು ಮೆಡಿಕಲ್ ರೆಪ್ರೆಸೆಂಟೆಟಿವ್ ವೃತ್ತಿಯನ್ನು ಮಾಡುತ್ತಿದ್ದರು. ಇವರು ತಮ್ಮ ಆರೋಗ್ಯವನ್ನು ಬಹಳಷ್ಟು ಕಾಳಜಿಯಿಂದ ಕಾಪಾಡಿಕೊಂಡವರಾಗಿದ್ದರು. ಈಕೆಯು ಆಸ್ಪತ್ರೆಗೆ ಹೋದಾಗ

ಅಲ್ಲಿ ಏನಾಯಿತು ಎನ್ನುವ ಬಗ್ಗೆ ಅಲ್ಲಿನ ವೈದ್ಯಾಧಿಕಾರಿಗಳನ್ನು ವಿಚಾರಿಸಿದ್ದೇವೆ. ಇವತ್ತಿನ ದಿವಸ ರೋಗಿಗೆ ಕೊಡುವ ಔಷಧಗಳು ಶೇಕಡಾ 50 ರಷ್ಟು ಕೆಲಸ ಮಾಡಿದರೆ, ವೈದ್ಯರು ನೀಡುವ ಸಮಾಧಾನ ಹಾಗೂ ಅವರು ರೋಗಿಗಳನ್ನು ಉಪಚರಿಸುವ ರೀತಿ ಇನ್ನರ್ಧ ಅಂದರೆ ಶೇಕಡಾ 50 ರಷ್ಟು ಕೆಲಸ ಮಾಡುತ್ತದೆ. ಒಬ್ಬ ಗರ್ಭಿಣಿ ಮಹಿಳೆ ಆಪರೇಷನ್ ಥಿಯೇಟರ್‌ಗೆ ಹೋದಾಗ ಅಲ್ಲಿ ಆಕೆಯ ತಂದೆ-ತಾಯಿಗಳನ್ನಾಗಲೀ ಅಥವಾ ಆಶಾ ಕಾರ್ಯಕರ್ತರನ್ನಾಗಲೀ ಒಳಗಡೆ ಬಿಡುವುದಿಲ್ಲ; ಅವರನ್ನು ಪರೀಕ್ಷಿಸಿ, ಒಮ್ಮಿಂದೊಮ್ಮೆ ಬಿ.ಪಿ. ಜಾಸ್ತಿಯಾಗಿದೆ ಎಂದು ಹೇಳಿ ಆಪರೇಷನ್ ಅನ್ನು ಮಾಡುತ್ತಾರೆ. ನಿಜವಾಗಿಯೂ ಸಹ ವೈದ್ಯರ ಈ ವರ್ತನೆಯು ನಿಲ್ಲಬೇಕಾಗಿದೆ. ಈಗ ಆಗಿರುವ ಘಟನೆಗಳನ್ನು ಹೊರತುಪಡಿಸಿ, ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಆಗ ಆ ಮಹಿಳೆಯು ಎಷ್ಟರ ಮಟ್ಟಿಗೆ ಭಯ ಪಟ್ಟಳು ಎಂದರೆ, ಅವಳು ಕೊಠಡಿಯಿಂದ ಹೊರಬಂದಳು. ಒಬ್ಬ ಮಹಿಳೆಗೆ ಸಿಸೇರಿಯನ್ ಆಪರೇಷನ್ ಮಾಡಬೇಕೆಂದರೆ, ಆಕೆಯ ಬಿ.ಪಿ.ಯನ್ನು ಪರೀಕ್ಷಿಸಿ, ರಕ್ತ ಪರಿಶೀಲನೆ ಮಾಡಬೇಕು. ಪೂರ್ವಭಾವಿಯಾಗಿ ಸಂಬಂಧಿತ ಎಲ್ಲಾ ಪರೀಕ್ಷೆಗಳನ್ನು ನಡೆಸಿದ ನಂತರವಷ್ಟೇ ಆಕೆಗೆ ಸಿಸೇರಿಯನ್ ಆಪರೇಷನ್ ಮಾಡುವುದಕ್ಕಾಗುತ್ತದೆ. ಒಮ್ಮಿಂದೊಮ್ಮೆ ಐ.ವಿ. ದ್ರಾವಣವನ್ನು ಕೊಟ್ಟ ತಕ್ಷಣವೇ ಆ ಹೆಂಗಸು ಭಯಂಕರವಾಗಿ ತ್ರಾಸು ಪಡುತ್ತಾಳೆ ಎಂದರೆ ಅವಳಿಗೆ ಏನಾಗುವುದಿಲ್ಲ? ಅಗತ್ಯವಾದ ಚಿಕಿತ್ಸೆಯನ್ನು ನೀಡುತ್ತೇವೆ ಎಂದು ಹೇಳುವುದನ್ನು ಬಿಟ್ಟು, ಆಕೆಯನ್ನು ಆಪರೇಷನ್ ಥಿಯೇಟರ್‌ಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಾಗಿರುವ ಘಟನೆಗಳನ್ನು ಅವಲೋಕಿಸಿದಾಗ, ಸಿಸೇರಿಯನ್ ಆಪರೇಷನ್ ಆದ ಮಹಿಳೆಯರ ಸಾವು ಆಗಿದೆ. ಸಾಮಾನ್ಯವಾದ ಹೆರಿಗೆಯಾದ ಮಹಿಳೆಯರ ಸಾವು ಆಗಿಲ್ಲ. ಈಗ ಮೃತರಾದ ಬಾಣಂತಿಯರು ಯಾರೂ 30 ವರ್ಷದ ವಯೋಮಾನದವರಲ್ಲ. ಅವರುಗಳೆಲ್ಲಾ ಕೇವಲ 25-26 ವಯೋಮಾನದವರಾಗಿದ್ದಾರೆ. ವೈದ್ಯರು ನೀಡಿದ ಸದರಿ ದ್ರಾವಣವು ಕೊಟ್ಟ 12 ಗಂಟೆಗಳ ನಂತರ ಅವರ ದೇಹದಲ್ಲಿ ಕೆಲಸ ಮಾಡಿದೆ. ಆ ಮಹಿಳೆಯರಿಗೆ ಸಿಸೇರಿಯನ್ ಆಪರೇಷನ್ ಆಗಿದೆ, ನಂತರ ಅವರುಗಳು ಕುಳಿತುಕೊಂಡು, ಲಘು ಆಹಾರವನ್ನು ಸ್ವೀಕರಿಸಿದ್ದಾರೆ. ಮಗುವಿಗೆ ಹಾಲುಣಿಸಿದ ನಂತರ ಆ ಬಾಣಂತಿಯವರು ತೀರಿಕೊಂಡಿದ್ದಾರೆ ಎಂದರೆ ಅವರಿಗೆ ನೀಡಿದ ಆ ದ್ರಾವಣವು ಎಷ್ಟರ ಮಟ್ಟಿಗೆ ನಿಧಾನವಾಗಿ ವಿಷವಾಗಿ ಪರಿಣಮಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲಿನ ಜಿಲ್ಲಾ ಸರ್ಜನ್‌ಗಳಿಗೆ ಈ ಸಂಗತಿಯು ಗಮನಕ್ಕೆ ಬಂದಿರಲಿಲ್ಲವೇ ಎಂದು ನಾನು ಪ್ರಶ್ನಿಸಬಯಸುತ್ತೇನೆ. ನಾಲ್ಕು ಬಾಣಂತಿಯರ ಸಾವು ಆದ ನಂತರ ಬಳ್ಳಾರಿಯ ಮೋಕಾದ ಹೆಣ್ಣುಮಗಳದ್ದು ಕೊನೆಯ ಸಾವು ಆಗಿದೆ. ಆದರೆ, ಸರ್ಕಾರವು ಈ ವಿಷಯದಲ್ಲಿ ಇನ್ನೂ ತನಿಖೆ ನಡೆಯುತ್ತಿದೆ ಎಂದು ಹೇಳುತ್ತಿದೆ. ಇಷ್ಟು ಘಟನೆಯಾದರೂ ಸಹ ಜಿಲ್ಲೆಯ ಉಸ್ತುವಾರಿ ಸಚಿವರು ಅಥವಾ ಇನ್ಯಾರು ಅಲ್ಲಿಗೆ ಭೇಟಿ ನೀಡದೇ ಇರುವ ಸಂದರ್ಭದಲ್ಲಿ ನಾವು ಅಲ್ಲಿನ ಮಹಿಳೆಯನ್ನು ಹೋಗಿ ಮಾತನಾಡಿಸಿದಾಗ, ನಮಗೆ ನಿಜಾಂಶ ಗೊತ್ತಾಗಿದೆ. ಅಲ್ಲಿನ ತಾಯಂದಿರಿಗೆ ಧೈರ್ಯ ತುಂಬುವ ಕೆಲಸವನ್ನು ನಾವು ಮಾಡಬೇಕು. ನಂದಿನಿ ಎನ್ನುವವರ ಪ್ರಕರಣದಲ್ಲಿ ಸಚಿವರು ಬರುವ ಮುನ್ನ ನಾನು ಅಲ್ಲಿರುವವರನ್ನು ಮಾತನಾಡಿಸಿದಾಗ, ಆ ತಾಯಿಯು ತನಗೆ ಸಿಸೇರಿಯನ್ ಆಪರೇಷನ್ ಬೇಡ, ತನಗೆ ಭಯವಾಗುತ್ತಿದೆ ಎಂದು ತಿಳಿಸಿದರು. ಆದರೆ, ಅಂತಹ ಮಹಿಳೆಗೆ ಬಲವಂತವಾಗಿ ಸಿಸೇರಿಯನ್ ಆಪರೇಷನ್ ಮಾಡುವಂತಹ ಕೆಲಸ ಜಿಲ್ಲಾ ಸರ್ಜನ್‌ಗಳಿಗೆ ಏನಿತ್ತು ಎಂದು ನಾನು ಪ್ರಶ್ನಿಸುತ್ತೇನೆ. ಸರ್ಕಾರವು ತನಿಖೆಗೆ ಆದೇಶಿಸಿರುವುದು ಸ್ವಾಗತಾರ್ಹವಾದುದು.

ಆದರೆ, ಅಲ್ಲಿನ ಮಹಿಳೆಯರಿಗೆ ನಾವು ಯಾವ ರೀತಿಯಾಗಿ ಸಮಾಧಾನ ಹೇಳಬಹುದು? ಅಲ್ಲಿನ ಆಸ್ಪತ್ರೆಗಳಲ್ಲಿರುವ ಸರ್ಜನ್‌ಗಳೆಲ್ಲರೂ ಖಾಯಂ ವೈದ್ಯರಲ್ಲ; ತರಬೇತಿ ವೈದ್ಯರುಗಳ ಸೇವೆಗಳನ್ನೇ ಅಲ್ಲಿ ಬಳಸಿಕೊಳ್ಳುತ್ತಿದ್ದಾರೆ.

(ಮುಂದು)

(915)17-12-2024/1-10/bkp-ak (ಸಭಾಪತಿಯವರು ಉಪಸ್ಥಿತಿ)

**ಶ್ರೀ ಹೇಮಲತಾ ನಾಯಕ್(ಮುಂದು):-**

ಅವರನ್ನು ಕೇಳುತ್ತಾರೆ, ಫೋನ್ ಮಾಡುತ್ತಾರೆ, ನಂತರ ಈ ರೀತಿಯಲ್ಲಿ ಇದೆ, ಈ ರೋಗಿ ಈ ರೀತಿಯಲ್ಲಿ ಇದ್ದಾರೆಂದು ಸರ್ಜನ್‌ಗೆ ಫೋನ್ ಮಾಡಿದಾಗ ಈ ರೀತಿಯಲ್ಲಿ ಪರಿಸ್ಥಿತಿ ಇದೆ ಎಂದು ಹೇಳಿ, ಅವರು ಫೋನ್ ಮೂಲಕ ಈ ಒಂದು ಫೋಟೋವನ್ನು ತೆಗೆದು ಹಾಕುತ್ತಾರೆ. ಆನಂತರ ಅವರು ಹೇಳಿದಂತೆ ಚಿಕಿತ್ಸೆ ನೀಡುತ್ತಾರೆ. ಅಂದರೆ, ಸಂಪೂರ್ಣವಾಗಿ ಇರತಕ್ಕಂತಹದ್ದು ಇದಕ್ಕೆ ಅಲ್ಲಿ ಇರತಕ್ಕಂತಹ ಜಿಲ್ಲಾ ಅಸ್ಪತ್ರೆಯವರು ಸಹ ಹೊಣೆಗಾರರು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಧಾರುಣ ಘಟನೆ ನಡೆದಿದೆ, ಅದರ ಬಗ್ಗೆ ನಾನು ಖಂಡಿಸುತ್ತಾ, ಕೆಲವು ಸಂಗತಿಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

1. ಪಶ್ಚಿಮ ಬಂಗಾಳದ ಮೆ॥ ಪಶ್ಚಿಮ ಬಂಗಾಳ ಫಾರ್ಮಸ್ಯೂಟಿಕಲ್ ಕಂಪೆನಿ ತಯಾರಿಸಿದ Ringer Lactate Infusion FFS ಔಷಧದ ಎರಡು ಬ್ಯಾಚ್‌ಗಳು NSQ (Not of Standard Quality)ಆದ ಹಿನ್ನೆಲೆಯಲ್ಲಿ KSMSCL (Karnataka State Medical Supplies Corporation Limited) ರವರು ರಾಜ್ಯಾದಾದ್ಯಂತ ರಿಂಗರ್ ಲ್ಯಾಕ್ಟೆಟ್ ಔಷಧವನ್ನು ಬಳಸಬಾರದು ಎಂದು ಮಾರ್ಚ್ 2024 ರಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ಸೂಚಿಸಿರುತ್ತಾರೆ.

2. ಜಿಲ್ಲಾ ಆಸ್ಪತ್ರೆ ಬಳ್ಳಾರಿಯಲ್ಲಿ ಬಾಣಂತಿಯರ ಸಾವುಗಳು ಸಂಭವಿಸಿದ ಹಿನ್ನೆಲೆಯಲ್ಲಿ ದಿನಾಂಕ 13-11-2024 ರಂದು ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಬಳ್ಳಾರಿ, ರವರು ಸಹಾಯಕ ಔಷಧ ನಿಯಂತ್ರಕರು, ಬಳ್ಳಾರಿ, ಇವರಿಗೆ ಪತ್ರ ಬರೆದು Ringer Lactate Infusion FFS, Batch No.03BF2338 ಔಷಧವು ರೋಗಿಗಳಿಗೆ ಬಳಸಿದ ತಕ್ಷಣ ಅಡ್ಡ ಪರಿಣಾಮ ಬೀರಿದ ಹಿನ್ನೆಲೆಯಲ್ಲಿ ಸದರಿ ಔಷಧವನ್ನು ವಿಶ್ಲೇಷಣೆಗಾಗಿ ಪಡೆಯಬೇಕೆಂದು ಮನವಿಯನ್ನು ಸಲ್ಲಿಸಿರುತ್ತಾರೆ.

3. ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು. ಇವರು ದಿನಾಂಕ 6-12-2024 ರಂದು ಜಿಲ್ಲಾ ಆಸ್ಪತ್ರೆ, ಬಳ್ಳಾರಿ. ಇಲ್ಲಿ ರೋಗಿಗಳಿಗೆ ಬಳಸಿದ ಸದರಿ Ringer Lactate Infusion FFS Batch No.03BF2338 ಔಷಧವು ಉತ್ತಮ ಗುಣಮಟ್ಟದ್ದು ಎಂದು ಘೋಷಿತವಾಗಿರುತ್ತದೆ. ಅಂದರೆ, ಸರ್ಕಾರಿ ಅಸ್ಪತ್ರೆಗಳಿಗೆ ಇದನ್ನು

ಬಳಸಬಾರದು ಎಂದು ಹೇಳಿ ಸೂಚನೆಯನ್ನು ಕೊಡುತ್ತಾರೆ, ಅಂದರೆ, ಈ ರೀತಿಯಲ್ಲಿ ಗೊಂದಲವಾಗಿರತಕ್ಕಂತಹ ಸೂಚನೆಗಳು ಆಸ್ಪತ್ರೆಗಳಿಗೆ ಬಂದಂತಹ ಸಂದರ್ಭದಲ್ಲಿ ಮತ್ತು ಈ ವಿಷಯಕ್ಕೆ ಸಂಬಂಧಪಟ್ಟಂತೆ transparency, quality check, decentralization, ಈ ರೀತಿ ಎಲ್ಲವನ್ನೂ ಮಾಡಬೇಕು. ಆದರೆ, ಬಾಣಂತಿಯರ ಸಾವಿಗೆ ಸಂಬಂಧಪಟ್ಟಂತೆ ಒಂದು SIT ತನಿಖೆಯನ್ನು ಅಥವಾ ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಸರ್ಕಾರ ಏತಕ್ಕೆ ಹಿಂದೇಟು ಹಾಕುತ್ತಿದೆ? ಇದರಲ್ಲಿ ಅವರು ಯಾರೇ ಆಗಿರಲಿ, ಅಂದರೆ ಉಪ್ಪು ತಿಂದವನು ನೀರು ಕೊಡಿಯಲೇ ಬೇಕು, ಇದನ್ನು ಏತಕ್ಕೆ ತನಿಖೆಗೆ ಒಳಪಡಿಸಬಾರದು? ಮಕ್ಕಳು ಈ ಪ್ರಪಂಚವನ್ನು ನೋಡಲೇ ಇಲ್ಲ, ಅವರು ಕಣ್ಣನ್ನು ಬಿಡಲೇ ಇಲ್ಲ, ನೂರಾರು ಜನ ಮಕ್ಕಳು ಅಸುನೀಗಿ ಹೋದರು. ಆ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಆಗಿರುವಾಗ, ಅದು ಯಾವುದೇ ಸರ್ಕಾರದಲ್ಲಿ ಅಗಿರಲಿ, ನಾನು ಆ ಸರ್ಕಾರ, ಈ ಸರ್ಕಾರ ಎಂದು ಹೇಳಲಿಕ್ಕೆ ಹೋಗುವುದಿಲ್ಲ. ಆದ್ದರಿಂದ, ಈ ವಿಷಯಕ್ಕೆ ಸಂಬಂಧಪಟ್ಟಂತೆ SIT ತನಿಖೆಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಈ ವಿಚಾರದಲ್ಲಿ ನನ್ನದು ಎರಡು ಸಲಹೆಗಳಿವೆ. ಬೆಂಗಳೂರಿಗೆ ಬಂದು, ಬೆಂಗಳೂರಿನಿಂದ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೆ ಈ ಡ್ರಗ್ಸ್ ಹೋಗುವುದನ್ನು ತಡೆಗಟ್ಟಬೇಕು, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರೆಗಳಿಗೆ fresh medicines, fresh drugs ನ ಕೊನೆಯ ದಿನಾಂಕ ಇನ್ನು ಬಹಳ ದಿವಸ ಅಂದರೆ 5 ತಿಂಗಳು, ಒಂದು ವರ್ಷ ಇರುವಾಗ ಮುಂಗಡವಾಗಿ ಆಸ್ಪತ್ರೆಗಳಿಗೆ ಬರಬೇಕು. ಅದನ್ನು ಬಿಟ್ಟು ಬೆಂಗಳೂರಿಗೆ ಬಂದು centralized ಆಗಿ, ಅಲ್ಲಿಂದ ಎಲ್ಲಾ ಕಡೆ ಹೋಗುವುದು ಏನಿದೆ, ಅದನ್ನು ತಪ್ಪಿಸಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ಈ ವ್ಯವಸ್ಥೆಯನ್ನು ತೆಗೆದುಕೊಂಡು ಬಂದಿದ್ದಾರೆ. ಏನಾಗುತ್ತದೆ ಎಂದರೆ dates ಎಲ್ಲಾ bar ಆದ ಮೇಲೆ ಅಂದರೆ, 15 ದಿವಸ ಅಥವಾ ಒಂದು ತಿಂಗಳು ಇರುವಾಗ ಅದು ಆಸ್ಪತ್ರೆಗಳಿಗೆ ತಲುಪುವಂತಹ ಸಂದರ್ಭದಲ್ಲಿ expiry date ಆಗಿರತಕ್ಕಂತಹ, outdated ಆಗಿರತಕ್ಕಂತಹ ಔಷಧಗಳು, ಮಾತ್ರೆಗಳನ್ನು ಕೊಡುವುದರಿಂದ ಈ ರೀತಿಯ ಸಂಗತಿಗಳು ಸಂಭವಿಸುವಂತಹ ಸನ್ನೀವೇಶಗಳು ಜಾಸ್ತಿ ಇರುತ್ತವೆ. ಆದ್ದರಿಂದ, ಗುಣಮಟ್ಟದ ಪರೀಕ್ಷೆಗೆ ಅವಕಾಶ ಮಾಡಿಕೊಡಬೇಕು, transparency ಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತೇನೆ. ಇದನ್ನು ಮಾನ್ಯ ಸಚಿವರು ಇದನ್ನು SIT ತನಿಖೆಗೆ ಕೊಡಬೇಕೆಂದು ಆಗ್ರಹಪಡಿಸುತ್ತೇನೆ ಮತ್ತು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎಸ್ ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಆರೋಗ್ಯ ಸಚಿವರು ಕೊಟ್ಟಿರುವಂತಹ ಹೇಳಿಕೆ ಏನಿದೆ, ಅದು ಒಂದು ರೀತಿಯಲ್ಲಿ ಗಾಬರಿ ಪಡುವಂತಹ ಅಂಕಿ-ಸಂಖ್ಯೆಗಳು ಸಿಗುತ್ತಿವೆ. ದಕ್ಷಿಣ ಭಾರತದ 5 ರಾಜ್ಯಗಳ ಪೈಕಿ ಅತಿ ಹೆಚ್ಚು maternal mortality ಆಗುತ್ತಿರುವ ರಾಜ್ಯ ಯಾವುದು ಎಂದರೆ ಅದು ಕರ್ನಾಟಕ. ಮಾನ್ಯ ಸಚಿವರು ತಮ್ಮ ಕಾಳಜಿಯನ್ನು ಅವರ ಹೇಳಿಕೆಯಲ್ಲಿ ಹೇಳಿದ್ದಾರೆ. ಇವತ್ತು ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ 39 deaths per one lakh live births, ಕೇರಳದಲ್ಲಿ 19, ನಮ್ಮಲ್ಲಿ 68 ಇದೆ. ಅಂದರೆ, ಇದು ಮೇಲ್ನೋಟಕ್ಕೆ ಇದು ಯಾವುದೋ ಒಂದು stray ಘಟನೆ ಎನ್ನುವ ರೀತಿಯಲ್ಲಿ ತೆಗೆದುಕೊಳ್ಳುವಂತಹ

ಪರಿಸ್ಥಿತಿಯಲ್ಲ. ನಮ್ಮ ರಾಜ್ಯದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಲ್ಲ. ಹೀಗಾಗಿ, ಇದು ಬಹಳ ಗಂಭೀರವಾದಂತಹ ಸಮಸ್ಯೆ ನಮ್ಮ ರಾಜ್ಯದಲ್ಲಿ ಇದೆ. ಮತ್ತೆ, ಇನ್ನೊಂದು national average ಗಿಂತ ಹೆಚ್ಚು ಸಮಸ್ಯೆಗಳು ಇರುವಂತಹ ಜಿಲ್ಲೆ ಯಾವುದು ಎಂದರೆ ಅದು ಚಿಕ್ಕಬಳ್ಳಾಪುರ ಜಿಲ್ಲೆ. 159 deaths per one lakh live births ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದೆ.

ಮಾನ್ಯ ಸಭಾಪತಿಯವರೆ, ನಮ್ಮ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್‌ರವರು ಇನ್ನೊಂದು ವಿಷಯವನ್ನು ಹೇಳಿರುವುದನ್ನು ಮುಂದುವರಿಸಿ ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಆಗುವಂತಹ ಹೆರಿಗೆಗಳು 46% ನಷ್ಟು cesarean ಹೆರಿಗೆಗಳು ಆಗುತ್ತಿವೆ. ಇದು ದೇಶದ average ಎಷ್ಟು ಇದೆ ಎಂದರೆ 20.6% ಇದ್ದರೆ, ನಮ್ಮ ರಾಜ್ಯದಲ್ಲಿ 46% cesarean births ಆಗುತ್ತಿವೆ. ಕಳೆದ 3 ವರ್ಷಗಳಲ್ಲಿ 11% ಕರ್ನಾಟಕ ರಾಜ್ಯದಲ್ಲಿ ಜಾಸ್ತಿಯಾಗಿದೆ. ಅಂದರೆ, ಇದು ಏನನ್ನು ತೋರಿಸುತ್ತಿದೆ ಎಂದರೆ ಅಲ್ಲಿಗೆ ಹೋಗುತ್ತಿರುವಂತಹ ಬಡವರಿಗೆ, ಅಲ್ಲಿ ಹೋಗುತ್ತಿರುವಂತಹ ಬಡ ಹೆಣ್ಣು ಮಕ್ಕಳಿಗೆ ಸರ್ಕಾರಿ ಅಸ್ಪತ್ರೆಯಲ್ಲಿ ಸಿಗುವಂತಹ ಕಳಪೆ ಔಷಧಿ ಮಾತ್ರವಲ್ಲ, ಬಲವಂತವಾಗಿ ಅಲ್ಲಿ ಅವರುಗಳಿಗೆ cesarean ಮಾಡುತ್ತಿದ್ದಾರೆ. ಅದರಿಂದಾಗಿ, ಈ ರೀತಿಯಲ್ಲಿ ಬಾಣಂತಿಯರ ಸಾವುಗಳು ಆಗುತ್ತಿವೆ ಎನ್ನುವುದನ್ನು ನಾನು ಹೇಳುತ್ತಿರುವುದು ಅಲ್ಲ, ಪ್ರತಿಷ್ಠಿತ ಪತ್ರಿಕೆಗಳು ಇಡೀ ದೇಶದ ಒಟ್ಟು ಸರ್ವೆಯನ್ನು ಮಾಡಿ ಕೊಟ್ಟಿರುವಂತಹ ಮಾಹಿತಿ ಇದಾಗಿದೆ. ಅದಕ್ಕೋಸ್ಕರ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ಪ್ರತಿ ಜಿಲ್ಲೆಗೊಂದು ಟಾಸ್ಕ್ ಪೋರ್ಸ್ ಅನ್ನು ಮಾಡಿ. ಯಾವ ರೀತಿಯಲ್ಲಿ ಮಾನಿಟರ್ ಮಾಡಬೇಕೆಂದರೆ, ಆ ಮಹಿಳೆಗೆ 6 ತಿಂಗಳ ನಂತರ ಆ ಮಹಿಳೆಗೆ ಏನಾದರೂ cesarean ಆಗಬೇಕೇ, ಆ ಮಹಿಳೆಗೆ ಕೊಡುತ್ತಿರುವಂತಹ ಔಷಧಿಯಲ್ಲಿ ಏನು ಕೊರತೆಗಳಿವೆ, ವಿಶೇಷವಾಗಿ ನಮ್ಮಂತಹ ಜಿಲ್ಲೆಗಳು ಅಂದರೆ, ಚಿಕ್ಕಮಗಳೂರು, ಮಧ್ಯ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಪೌಷ್ಠಿಕಾಂಶಗಳ ಕೊರತೆಯಿಂದ ಮಹಿಳೆಯರು ಬಳಲುತ್ತಿರುತ್ತಾರೆ. ಅವರುಗಳಿಗೆ ಸಣ್ಣ ಆರೋಗ್ಯ ಸಮಸ್ಯೆಗಳಾದರೂ ಕೂಡ ಸತ್ತು ಹೋಗುತ್ತಾರೆ. ಹಾಗಾಗಿ, ನೀವು ಇದನ್ನು ಜಿಲ್ಲಾ ಮಟ್ಟದಲ್ಲಿ ಮಾಡುತ್ತೀರೋ, ವಿಭಾಗ ಮಟ್ಟದಲ್ಲಿ ಮಾಡುತ್ತೀರೋ, ಯಾವ ರೀತಿಯಲ್ಲಿ ಇದನ್ನು ತಡೆಹಿಡಿಯಬೇಕೋ ಅ ರೀತಿಯಲ್ಲಿ ಮಾಡಬೇಕು. ಏಕೆಂದರೆ, ಇಡೀ ದೇಶದಲ್ಲಿ ಇವತ್ತು maternal mortality deaths ಕಡಿಮೆಯಾಗುತ್ತಿದೆ. ಆದರೆ, ಈ ಸಾವುಗಳು ವಿಷಯದಲ್ಲಿ ದುರದೃಷ್ಟವಶಾತ್ ನಮ್ಮ ಕರ್ನಾಟಕ ರಾಜ್ಯ ಮೊದಲನೇ ಸ್ಥಾನದಲ್ಲಿದೆ. ಹೀಗಾಗಿ, ನೀವು ಇದರ ಕಡೆ ಗಮನಹರಿಸಬೇಕು. ಹಾಗೆಯೇ ಮೆ. ಪಶ್ಚಿಮ ಬಂಗಾ ಫಾರ್ಮಸ್ಯೂಟಿಕಲ್ ಕಂಪೆನಿ ಬಗ್ಗೆ ನಾನು ಒಂದು ಮಾಹಿತಿಯನ್ನು ಹೇಳಲಿಕ್ಕೆ ಬಯಸುತ್ತೇನೆ. ಈ ಕಂಪನಿಯ ಬಗ್ಗೆ ಈಗಾಗಲೇ 3-4 ರಾಜ್ಯಗಳು ದೂರುಗಳನ್ನು ಮಾಡಿದ್ದವು. ಈ ಬಗ್ಗೆ ತನಿಖೆಯನ್ನೂ ಕೂಡ ಮಾಡಬೇಕೆಂದು ಹೇಳಲಾಗಿತ್ತು. ಅಂತಹ ಒಂದು ಪರಿಸ್ಥಿತಿಯಲ್ಲಿ ನಾವು ಆ ರೀತಿಯಾದಂತಹ material supplier ಮೂಲಕ, ಇಷ್ಟೊಂದು ದೂರುಗಳು ಇರುವಂತಹ ಕಂಪನಿಯ ಮೂಲಕ ಔಷಧಿಗಳನ್ನು ಖರೀದಿ ಮಾಡುತ್ತೇವೆಂದರೆ, ಇದು ನಿಜವಾಗಿಯೂ ಕೂಡ ಎಲ್ಲೋ ಒಂದು ಕಡೆ ಅಧಿಕಾರಿಗಳು ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದಾರೆ.

ಕೊನೆಯದಾಗಿ, ಇಷ್ಟೊಂದು ಸಾವುಗಳು ಆದಾಗ ಮಾನ್ಯ ಆರೋಗ್ಯ ಸಚಿವರು ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಅಲ್ಲಿಯೇ ಉಪ ಚುನಾವಣೆ ಸಂದರ್ಭದಲ್ಲಿ ಬಂದು ಹೋಗುತ್ತಾರೆ, ಅದರೂ ಕೂಡ ಅಲ್ಲಿಗೆ ಬರುವುದಿಲ್ಲವೆಂದರೆ ನಿಜವಾಗಿಯೂ ಸಹ ನಮ್ಮ ಜನರ ಜೀವದ ಬಗ್ಗೆ ಇವರಿಗೆ ಏನು ಕಾಳಜಿ ಇದೆ ಎನ್ನುವುದನ್ನು ತೋರಿಸುತ್ತದೆ. ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಈ ಬಗ್ಗೆ ಅವರ ಮನೆಗಳಿಗೆ ಹೋಗಿ ಅವರಿಗೆ ಪರಿಹಾರದ ಹಣವನ್ನು ವಿತರಣೆ ಮಾಡುವಲ್ಲಿ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಶರವಣ ಟಿ.ಎ (ವಿಧಾನಸಭಾ ಕ್ಷೇತ್ರ):-**ಮಾನ್ಯ ಸಭಾಪತಿಯವರೆ, ಮಾನ್ಯ ಆರೋಗ್ಯ ಸಚಿವರು ಹಿರಿಯ ಸಚಿವರು ಇದ್ದಾರೆ. 3ನೇ ಬಾರಿಗೆ ಸಚಿವರಾಗಿರುವ ಅವರಿಗೆ ಅನುಭವವೂ ಸಹ ಇದೆ. ಆದರೆ, ಇವತ್ತು ಪಶ್ಚಿಮ ಬಂಗಾಳದಲ್ಲಿ ಆ ರೀತಿಯಲ್ಲಿ ನಡೆಯುತ್ತಿದೆ, ದೇಶದಲ್ಲಿ ಈ ರೀತಿಯಲ್ಲಿ ನಡೆಯುತ್ತಿದೆ, ನಮ್ಮ ರಾಜ್ಯದಲ್ಲಿ ಇಷ್ಟೆಲ್ಲಾ ಪ್ರಯತ್ನ ಮಾಡುತ್ತಿದ್ದೇವೆ, ಈ ಬಗ್ಗೆ ಕಮಿಷನ್ ಅನ್ನು ರಚನೆ ಮಾಡುತ್ತಿದ್ದೇವೆಂದು ಹೇಳಿ, ಎಲ್ಲೋ ಒಂದು ಕಡೆ ಸರ್ಕಾರ ತನ್ನ ಅಸಹಾಯಕತೆಯನ್ನು ಹೇಳಿ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದೆ. ಶಿಶು ತನ್ನ ಜೀವವನ್ನು ಕಳೆದುಕೊಂಡಿದ್ದರೂ ಅಷ್ಟೆ, ತಾಯಿ ತನ್ನ ಜೀವವನ್ನು ಕಳೆದುಕೊಂಡಿದ್ದರೂ ಅಷ್ಟೆ. ಜೀವ ಜೀವವೇ ಆಗಿರುತ್ತದೆ. ನೀವು ಎಷ್ಟೇ ಪರಿಹಾರವನ್ನು ಕೊಡಿ, ನೀವು ಏನೇ ಹಣವನ್ನು ಕೊಡಿ, ಮತ್ತೊಂದು ಕೊಡಿ, ಮಗದೊಂದು ಕೊಡಿ. ಆದರೆ, ಹೋಗಿರುವಂತಹ ಜೀವ ಮತ್ತೆ ವಾಪಸ್ಸು ಬರುವುದಿಲ್ಲ. ಆದ್ದರಿಂದ, ಸರ್ಕಾರ ಇವತ್ತು ಏನು ಅಂಕಿ-ಅಂಶಗಳನ್ನು ಕೊಟ್ಟಿರುವುದನ್ನು ನೋಡುತ್ತಿದ್ದೇವೆ. ಹಿಂದಿನ ಸರ್ಕಾರದಲ್ಲಿ ಅಷ್ಟು ಆಗಿತ್ತು, ಈಗ ಇಷ್ಟೊಂದು ಆಗುತ್ತಿದೆ ಎಂದು ಹೇಳಿ ಎಲ್ಲೋ ಒಂದು ಕಡೆ ಉತ್ತರದಲ್ಲಿ ಕೊಟ್ಟಿದ್ದಾರೆ. ನಾನು ಇದನ್ನು ವರ್ಷವಾರು ನೋಡಿಕೊಂಡು ಬರುತ್ತಿದ್ದೇನೆ.

(ಮುಂದು)

(916) 17.12.2024 01.20 ಎಸ್‌ವಿ-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ಮುಂದು):-**

ಯಾವುದೇ ಒಂದು ಔಷಧ ಬಂದರೂ ಅದಕ್ಕೆ quality control ಇರುತ್ತದೆ. ಅದಕ್ಕೆ ಅಧಿಕಾರಿಗಳಿದ್ದಾರೆ. ಅವರ ಮೇಲೆ ಕ್ರಮ ಆಗಬೇಕು. ಅವರ ಮೇಲೆ criminal case ಅನ್ನು ಹಾಕಬೇಕು. ಮತ್ತೊಬ್ಬ ಈ ರೀತಿಯ ತಪ್ಪು ಮಾಡಲಿಕ್ಕೆ ಮುಂದೆ ಹೋಗಬಾರದು. ಆ ನಿಟ್ಟಿನಲ್ಲಿ ಕಾನೂನನ್ನು ಬಿಗಿ ಮಾಡಬೇಕು. ಕೆಲವರನ್ನು ಬಲಿ ಕೊಡಿ. ಆಗಲೇ ಬೇರೆಯವರಿಗೆ ಬುದ್ಧಿ ಬರುತ್ತದೆ. ಅಧಿಕಾರಿಗಳ ಕೈವಾಡ ಇಲ್ಲದೆ ರಾಜ್ಯದಲ್ಲಿ ಏನೂ ನಡೆಯುವುದಿಲ್ಲ. ಇದರ ಹಿಂದೆ ದೊಡ್ಡ ಲಾಬಿ ಇದೆಯೆಂದು ಮಾನ್ಯ ಭೋಜೇಗೌಡರು ಹೇಳಿದರು. Medical lobby ದೊಡ್ಡ ಮಟ್ಟದಲ್ಲಿದೆ. ಇಲ್ಲವೆಂದಲ್ಲ. ಅದಕ್ಕೆ ನೀವು ಪ್ರತಿ ಜಿಲ್ಲೆಯಲ್ಲಿಯೂ ಒಂದೊಂದು Task Force ಅನ್ನು ಮಾಡಿ ಎಲ್ಲಾ ಆಸ್ಪತ್ರೆಗಳಿಗೆ visit ಮಾಡಬೇಕು. ಮಾನ್ಯ ನವೀನ್‌ರವರು ಹೇಳಿದಂತೆ ಆಸ್ಪತ್ರೆಗಳಲ್ಲಿ ಕೊಯ್ಯಬೇಕೆಂದರೆ ಅದಕ್ಕೆ ಒಂದು target.

Normal delivery ಮಾಡಬೇಕೆಂದಿದ್ದರೂ ಕೂಡ cesarean delivery ಮಾಡುತ್ತಾರೆ. ಹಿರಿಯ ಅಧಿಕಾರಿಗಳ ಸೂಚನೆ ಇರುತ್ತದೆ. ಅದಕ್ಕೆ ಒಂದಷ್ಟು ಛಾರ್ಜ್ ಮಾಡಬೇಕು. ಬಡ ಕುಟುಂಬಗಳ ಜನ ಬರುತ್ತಾರೆ. ಅವರ ಪರಿಸ್ಥಿತಿಯೇನು? ಎಷ್ಟು ಜನರಿಗೆ ಅಲ್ಲಿ vehicle facilities ಇರುವುದಿಲ್ಲ. ಅವರು ಎಲ್ಲಿಯೋ ಬಸ್ ಹತ್ತಿ ಬಂದಿರುತ್ತಾರೆ. ರಸ್ತೆಯಲ್ಲಿಯೇ delivery ಆದಂತಹ ಘಟನೆಗಳನ್ನು ತಾವು ನೋಡಿರುತ್ತೀರಿ. ನಮ್ಮ ವ್ಯವಸ್ಥೆ ಎಲ್ಲಿದೆ? ಎಲ್ಲಾ ಆದ ಮೇಲೆ ಕೂಡ ಬಾಣಂತಿಯರ ಬಗ್ಗೆ, ಶಿಶುಗಳ ಬಗ್ಗೆ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ತಾವು ಗಮನಿಸುತ್ತಿದ್ದೀರಿ. ಎಲ್ಲಿಯೋ ಒಂದು ಕಡೆ visit ಕೊಟ್ಟು ಬಂದ ತಕ್ಷಣ ಏನೂ ಆಗುವುದಿಲ್ಲ. ಕಠಿಣವಾದ ಕ್ರಮಗಳ ಜೊತೆಗೆ criminal case ದಾಖಲಿಸುವುದು ಹಾಗೂ ಇನ್ನೇನು ಬಿಗಿ ಮಾಡಲು ಸಾಧ್ಯವೋ ಅದನ್ನು ಮಾಡಬೇಕು. ಮುಂದಕ್ಕೆ ಇಂತಹ ಘಟನೆಗಳು ಆಗದಂತೆ ಕ್ರಮಗಳನ್ನು ದೊಡ್ಡ ಮಟ್ಟದಲ್ಲಿ ತೆಗೆದುಕೊಳ್ಳಬೇಕು ಎಂದು ನಾನು ಮನವಿ ಮಾಡುತ್ತೇನೆ.

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರಲ್ಲಿ ಕೇಳುವುದಿಷ್ಟೆ. ಬಳ್ಳಾರಿ ಸರ್ಕಾರಿ ಆಸ್ಪತ್ರೆಯಲ್ಲಿ ಸಾವಿರಾರು delivery ಗಳಾಗುತ್ತವೆ ಎಂದು ಅವರು ಹೇಳಿದರು. ಸೆಪ್ಟೆಂಬರ್ ತಿಂಗಳಲ್ಲಿ 585 ಹೆರಿಗೆಗಳಾಗಿವೆ. ಅಕ್ಟೋಬರ್ ತಿಂಗಳಲ್ಲಿ 577 ಹೆರಿಗೆಗಳಾಗಿವೆ. ನವೆಂಬರ್‌ನಲ್ಲಿ incident ನಡೆದ ನಂತರ 289 ಹೆರಿಗೆಗಳಾಗಿವೆ. ಡಿಸೆಂಬರ್ 14ರ statistics ಅನ್ನು ತೆಗೆದುಕೊಂಡರೆ 75 ಹೆರಿಗೆಗಳಾಗಿವೆ. ಹೆಚ್ಚಿನ ಮಟ್ಟದಲ್ಲಿ ಹೆರಿಗೆಗಳಾಗುವ ಸಂಖ್ಯೆ ಕಡಿಮೆಯಾಗಿದೆ. ಆ ನಿಟ್ಟಿನಲ್ಲಿ ತಾವು ಏನು ಕ್ರಮ ಕೈಗೊಂಡಿದ್ದೀರಿ? ಅಲ್ಲಿನ ಗರ್ಭಿಣಿಯರಿಗೆ ಯಾವ ರೀತಿ confidence ಕೊಟ್ಟು delivery ಮಾಡಿಸಿಕೊಳ್ಳುವುದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ? ಎಂಬುದು ನನ್ನ ಪ್ರಶ್ನೆ.

Lactate Ringers Fluid ಎಂದು ಹೇಳಿದಿರಿ. ನಿಮ್ಮ ಪ್ರತಿ ಮಾತಿನಲ್ಲಿಯೂ frozen, frozen ಎಂದು ಹೇಳುತ್ತಿದ್ದಿರಿ. Freed Lactate Ringer Intravenous Fluid ಅನ್ನು freeze ಮಾಡುವ ಅವಶ್ಯಕತೆ ಇರುವುದಿಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಎಲ್ಲರಿಗೂ ಅವಕಾಶ ಕೊಡುವಂತಿದ್ದರೆ ಚರ್ಚೆಗೆ ಅವಕಾಶ ಕೊಟ್ಟಿದ್ದರೆ ಒಂದೆರಡು ತಾಸು ಚರ್ಚೆ ಮಾಡುತ್ತಿದ್ದೆವು. ಈಗಲೂ ಇನ್ನೂ ಹೆಚ್ಚು ಮಂದಿ ಮಾತನಾಡುವವರಿದ್ದರೆ ಚರ್ಚೆಗೆ ಅವಕಾಶ ಕೊಡಿ. ಕೊನೆಯಲ್ಲಿ ರಾಜ್ಯ ಸರ್ಕಾರ ಉತ್ತರ ಕೊಡುತ್ತದೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ನೀವು ಪ್ರಾರಂಭಿಕವಾಗಿ ಹೇಳಬೇಕಿತ್ತು. ಮಂತ್ರಿಗಳು ಮಾತನಾಡಬೇಕಾದರೆ any clarifications ಇದಲ್ಲಿ ನನ್ನಿಂದ ಕೇಳಿಕೊಳ್ಳಬಹುದು ಎಂದು ಹೇಳಿದ್ದಾರೆ. ಆದರೂ ನಾನು cut-down ಮಾಡಿ ಎರಡು ನಿಮಿಷಗಳಿಗೆ ಸೀಮಿತಗೊಳಿಸಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಡಾ.ಸರ್ಜಿಯವರೆ, ತಾವು ಮಾತನಾಡಿ.

**ಡಾ:ಧನಂಜಯ ಸರ್ಜಿ:-** ಮಾನ್ಯ ಸಚಿವರಲ್ಲಿ ಕೇಳಬಯಸುವ ಎರಡನೆಯ ಅಂಶ Lactate Ringers Fluid ಅನ್ನು ಯಾವುದೇ IV Fluids ನ freeze ಮಾಡುವ ಅವಶ್ಯಕತೆಯಿಲ್ಲ. ಏಕೆ frozen Ringers Lactate Fluid ಅನ್ನು ಬಳಸಿದರು? ಮೂರನೆಯದಾಗಿ ಅಷ್ಟು ದೊಡ್ಡ ಆಸ್ಪತ್ರೆಯಲ್ಲಿ Ringers Lactate Fluid ಅನ್ನು pregnant ladies ಗೆ ಮಾತ್ರ ಕೊಟ್ಟಿರುವುದಿಲ್ಲ. ಐಸಿಯುನಲ್ಲಿರುವವರಿಗೆ, ಮಕ್ಕಳಿಗೆ Ringers Lactate Fluid ಅನ್ನು ಬಳಸಲಾಗುತ್ತದೆ. Pregnant ladies ಆದ ಸಮಸ್ಯೆ ಬೇರೆ ಯಾರಿಗೂ ಆಗಿಲ್ಲವೆ ಎನ್ನುವುದು ತಮಗೆ ನನ್ನ ಮೂರನೆಯ ಪ್ರಶ್ನೆ. ಅಲ್ಲಿ 5 ಜನ ಮೃತ ಪಟ್ಟಿದ್ದು ಅವರಿಗೆ kidney failure, multi-organ failure ಆಗಿದೆ ಎಂದು ಹೇಳಿದಿರಿ. ಸಾಮಾನ್ಯವಾಗಿ Intravenous Fluid reaction ಆಗಿ kidney failure ಆ ರೀತಿಯಾಗುವ ಸಾಧ್ಯತೆಗಳು ತುಂಬಾ ಕಡಿಮೆ. ಈ Intravenous Fluid ಅನ್ನು ಬೇರೆ ರೋಗಿಗಳಿಗೆ utilize ಮಾಡಿದ್ದೀರೆ, ಹಾಗಾದರೆ ಅವರಿಗೆ ಏಕೆ reaction ಆಗಿಲ್ಲ? Intravenous Fluid ಇಷ್ಟು muti-organ failure ಆಗಬೇಕೆಂದರೆ ಬೇರೆ ರೋಗಿಗಳಿಗೂ ಆಗಬೇಕು. Pregnant ladies ಗಳಿಗೆ ಮಾತ್ರ ಏಕೆ ಆಗಿದೆ? ಜೊತೆಗೆ expiry date ಆಗಿತ್ತಾ, fungus growth ಆಗಿತ್ತಾ ಎನ್ನುವುದು ನನ್ನದೊಂದು ಪ್ರಶ್ನೆ. ಏಕೆ ಅದೇ ಕಂಪನಿಯದ್ದೇ purchase ಮಾಡಿರುತ್ತೀರಿ. ಅದರ ಬೆಲೆಯೆಷ್ಟು, ಬೇರೆ ಕಂಪನಿಗೂ ಇದಕ್ಕೂ ಇರುವ ವ್ಯತ್ಯಾಸವಾದರೂ ಏನು? ಏಕೆ particular ಆಗಿ ಅದೇ ಕಂಪನಿಯನ್ನು chose ಮಾಡಿದ್ದಾರೆಂದು ಕೇಳಬಯಸುತ್ತೇನೆ.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ನನ್ನ ಮನವಿ ಇಷ್ಟೆ. ತಾಯಿ ಸತ್ತು ಹೋಗಿದ್ದಾರೆ. ತಂದೆ ಗಟ್ಟಿಯಾಗಿದ್ದಾರೆ. ತಾಯಿ ಸತ್ತ ನಂತರ ತಂದೆ ಮತ್ತೊಂದು ಮದುವೆ ಮಾಡಿಕೊಳ್ಳುತ್ತಾನೆ. ಆ ಮಗುವಿನ ಪರಿಸ್ಥಿತಿ ಏನು? ಸರ್ಕಾರ ಕೊಟ್ಟಂತಹ ರೂ.5 ಲಕ್ಷಗಳನ್ನು ತಾಯಿಯ cremation ಗೋ ಮತ್ತೊಂದಕ್ಕೋ ಬಳಸಿಕೊಂಡು ಬಿಡುತ್ತಾರೆ. ತಂದೆ ಇನ್ನೊಂದು ಮದುವೆ ಮಾಡಿಕೊಂಡ ನಂತರ ಆ ಮಗುವಿಗೆ ಏನು ಭದ್ರತೆ ಇರುತ್ತದೆ? ಸ್ಥಿತಿವಂತರಾಗಿದ್ದರೆ ಅದಕ್ಕೆ ಆಸ್ತಿಪಾಲು ಬರಬಹುದು. ಸರ್ಕಾರಿ ಆಸ್ಪತ್ರೆಗೆ ಹೋಗುವ ತಾಯಿ ಸಾಮಾನ್ಯವಾಗಿ ಶೇ.90 ರಷ್ಟು ಬಡವರಾಗಿರುತ್ತಾರೆ. ಈ ಸದನ ಮತ್ತು ಮಾನ್ಯ ಸಭಾಪತಿಯವರ ಮುಖಾಂತರ ನನ್ನ ಒತ್ತಾಯವೇನೆಂದರೆ ನೀವು ಕೊಡುವ ರೂ.5 ಲಕ್ಷಗಳು ಆ ಮಗುವಿಗೆ ಖಂಡಿತವಾಗಿಯೂ ಜೀವ ಭದ್ರತೆ ಒದಗಿಸುವುದಿಲ್ಲ. ಮಾನ್ಯ ಭಾರತಿ ಶೆಟ್ಟಿಯವರು ಹೇಳಿದಂತೆ ಅದಕ್ಕೆ ಹೆಚ್ಚಿನ ಭದ್ರತೆಯನ್ನು ನೀವು ಕಲ್ಪಿಸಿಕೊಡಬೇಕು. ಏಕೆಂದರೆ ಸರ್ಕಾರಿ ಆಸ್ಪತ್ರೆಯ ಮುಖಾಂತರ ತಾಯಿ ಸತ್ತು ಹೋಗಿರುವುದರಿಂದ ಅದು ನಮ್ಮ ಸರ್ಕಾರದ ಕರ್ತವ್ಯವಾಗಿರುತ್ತದೆ ಎನ್ನುವುದು ನನ್ನ ಅನಿಸಿಕೆ. ಮಾನ್ಯ ನವೀನ್ ಅವರು ಹೇಳಿದಂತೆ ಅಪೌಷ್ಟಿಕತೆ ಎನ್ನುವುದು ನಮ್ಮಲ್ಲಿ ಒಂದು ದೊಡ್ಡ ಪಿಡುಗು. ಅದರಲ್ಲಿಯೂ ಬಳ್ಳಾರಿ, ರಾಯಚೂರು, ಕಲಬುರಗಿ, ಯಾದಗಿರಿ ಈ ಜಿಲ್ಲೆಗಳಲ್ಲಿ ಹೆಚ್ಚು. ಮಾನ್ಯ ಶರಣ ಪ್ರಕಾಶ ಪಾಟೀಲರೂ ನೋಡಿರುತ್ತಾರೆ. ಈಗಿನ ಕಾಲದ ತಾಯಂದಿರು ಹೆಚ್ಚಿನ ದುಡಿಮೆಯನ್ನು ಮಾಡಿ ತಿನ್ನುವ ತಾಯಂದಿರಲ್ಲ. ಅದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಖಾಂತರ ನೀವು ಅವರಿಗೆ ಪೌಷ್ಟಿಕತೆಯ ಬಗ್ಗೆ ಹೆಚ್ಚಿನ ಒತ್ತನ್ನು ಕೊಟ್ಟರೆ ಇಂತಹ ಸಾವುಗಳಾಗುವ ಸಮಸ್ಯೆ ಕಡಿಮೆಯಾಗುತ್ತದೆ ಎನ್ನುವುದು ನನ್ನ ಸಲಹೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಒಂದು ಗಾದೆ ಮಾತಿದೆ. "ವೈದ್ಯೋ ನಾರಾಯಣೋ ಹರಿಃ". ವೈದ್ಯರು ರಕ್ಷಣೆ ಮಾಡುವಾಗ ಅದಕ್ಕೆ ಸಂಬಂಧಪಟ್ಟವರು ಯಾರೇ ಆಗಲಿ ಔಷಧವನ್ನು ಕೊಡುವ ಕಂಪನಿಯವರಾಗಲೀ, ಯಾರೇ ಆಗಲೀ, ಸರ್ಕಾರ ಕೂಡ ನಾರಾಯಣನ ರೂಪದಲ್ಲಿ ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ದೌರ್ಭಾಗ್ಯದಿಂದ ಈ ಪ್ರಕರಣದಲ್ಲಿ ಆಗಿರುವುದು ಕೊಲೆ ಎನ್ನುವ ಸ್ಥಿತಿಗೆ ನಮ್ಮ ರಾಜ್ಯದಲ್ಲಿ ಸುದ್ದಿ ಮಾಡಿದ ಘಟನಾವಳಿ ಇದಾಗಿದೆ. ಸರಣಿ ಸಾವುಗಳು ಇದರಲ್ಲಿ Omission and Commission ಎಂದು ಕಾನೂನಿನಲ್ಲಿ ಬರುತ್ತದೆ. ಪ್ರತ್ಯಕ್ಷವಾಗಿ ನಾವು ಮುಂದೆ ಬಂದು ಆ act ಮಾಡಿ criminal ಆಗಿ ಪರಿವರ್ತನೆ ಹೊಂದುವುದು ಒಂದು ಭಾಗವಾದರೆ ನಾವು ಮಾಡಬೇಕಾದಂತಹ ಕರ್ತವ್ಯ ನಾವು ಮಾಡದಿದ್ದರೆ ಅದೂ ಒಂದು criminal act ಆಗುತ್ತದೆ. ಅದು ಒಂದು ಜವಾಬ್ದಾರಿ. Equal ಆಗಿ ಅವರಿಬ್ಬರಿಗೂ punishment ಕೊಡಬೇಕಾಗುತ್ತದೆ. ಇದರಲ್ಲಿ Drugs Controller ಅವರೊಬ್ಬರನ್ನು suspend ಮಾಡಿದರೆ ಸಾಲದು. ಇದಕ್ಕೆ ಸಂಬಂಧಪಟ್ಟ ಜೀವ ರಕ್ಷಕ ಔಷಧಗಳನ್ನು ಕೊಡುವ, ವಿಶೇಷವಾದ ಔಷಧಗಳನ್ನು ತಯಾರು ಮಾಡುವ ವ್ಯವಸ್ಥೆಯಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಲೇಬೇಕು. ಒಂದು ಕಡೆ ಸಾವಾದ ತಕ್ಷಣ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಮತ್ತೊಂದು ಐದಾರು ಕಡೆಗಳಲ್ಲಿ ಸಾವಾಗುವುದನ್ನು ತಪ್ಪಿಸಬಹುದಾಗಿತ್ತು. ತಕ್ಷಣ alert ಆಗಿ ಬೇರೆ ಬೇರೆ ಕಡೆ ಆ ಔಷಧಿ ಎಲ್ಲೆಲ್ಲಿಗೆ ಹೋಗಿದೆ ಆ ಜಿಲ್ಲಾ ಕೇಂದ್ರಗಳಲ್ಲಿ ತಮ್ಮ ವೆಬ್‌ಸೈಟ್ ಮುಖಾಂತರ ತಕ್ಷಣ ಅಲ್ಲಿ ತಲುಪಿಸಿ ಉಪಯೋಗ ಮಾಡಲೇಬಾರದು ಎನ್ನುವ ಎಚ್ಚರಿಕೆ ವ್ಯವಸ್ಥೆಯನ್ನು ಆ ಸಂದರ್ಭದಲ್ಲಿ ಮಾಡಬೇಕಾಗಿತ್ತು.

(ಮುಂದು)

(917) 17-12-2024 1.30 ಕೆಜಿ:ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು):-**

ಅದನ್ನು ಸಹ ಸರ್ಕಾರ ಮಾಡಿಲ್ಲ. ಕೇವಲ blacklist ನಲ್ಲಿ company ಅನ್ನು ಹಾಕಿದರೆ ಸಾಲದು. ಅವರು ನ್ಯಾಯಾಲಯದಲ್ಲಿ ತಡೆಯಾಜ್ಞೆ ತರುವಂತಹದ್ದು ಸಹಜವಾಗಿರುವಂತಹದ್ದು ಆಗಿದೆ. ಎಲ್ಲೋ ಒಂದು ಸಣ್ಣ ಪುಟ್ಟ loopholes ಇದ್ದೇ ಇರುತ್ತದೆ. ಅದಕ್ಕೆ ನ್ಯಾಯಾಲಯ ತಡೆಯಾಜ್ಞೆ ಕೊಟ್ಟುಬಿಡುತ್ತದೆ. ಅದಕ್ಕೆ

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಪೂಜಾರ್‌ರವರೇ, ಸಾಕು ತಾವು ಕುಳಿತುಕೊಳ್ಳಿ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತಹ ಕೇವಲ Drug & Control Officer ಅಲ್ಲ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಅವಶ್ಯ ಬಿದ್ದರೆ, ವೈದ್ಯರ ವಿರುದ್ಧ ಸಹ criminal proceeding ಅನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ತಮಗೆಲ್ಲರಿಗೂ ಗೊತ್ತಿರುವಂತೆ IV Fluids (Intravenous Fluids )

ಏನಿದೆ, ಅದು ಒಂದು ಜೀವ ರಕ್ಷಕ ಜಲ ಇದ್ದಂತೆ. ಇವತ್ತು Ringer Lactate IV Fluids ಅನ್ನು ಕೊಟ್ಟು, ಅದು ಸಹ ಗರ್ಭಿಣಿಯರಿಗೆ, ಬಾಣಂತಿಯರಿಗೆ ಮತ್ತು ಶಿಶುಗಳಿಗೆ ಅದು ಒಂದು ಜೀವ ರಕ್ಷಕ ಜಲ. ನಮ್ಮ Bellary Institute of Medical Sciences ನಲ್ಲಿ ಒಂದು ಸರಣಿ ಬಾಣಂತಿಯರ ಸಾವು ಆಗಿದ್ದು, ಅದರಲ್ಲಿ ಏನು ಒಂದು ಗೊಂದಲ ಇದೆ, ಈ ವಿಚಾರದಲ್ಲಿ ಸರ್ಕಾರ ಎಚ್ಚೆತ್ತುಕೊಂಡು ಒಂದು ತನಿಖೆಯನ್ನು ಸಹ ನಡೆಸಿದೆ. ನಾನು ಮಾನ್ಯ ಸಚಿವರಲ್ಲಿ ನನ್ನ ಸಲಹೆ ಇಷ್ಟೇ. ಇದೇರೀತಿ ಸಾಕಷ್ಟು isolated cases ಇರಬಹುದು. ತಾಲ್ಲೂಕು ಆಸ್ಪತ್ರೆಗಳಲ್ಲಿ Community Health Centres ಆಸ್ಪತ್ರೆಗಳು ಇರಬಹುದು, ಎಲ್ಲಿ ಗರ್ಭಿಣಿಯರ, ಬಾಣಂತಿಯರ ಹಾಗೂ ಶಿಶುಗಳ ಮರಣ ಆಗುತ್ತದೆ that should be followed by an enquiry by the DHO or District Surgeon ಇದನ್ನು ಮಾಡುವಂತಹ ವ್ಯವಸ್ಥೆಯನ್ನು ದಯಮಾಡಿ ಮಾನ್ಯ ಸಚಿವರು ಮಾಡಬೇಕು. ಏಕೆಂದರೆ, ಎಲ್ಲಿ ಇದಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬರುತ್ತದೆ ಎನ್ನುವಂತಹ ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದೇರೀತಿಯಾಗಿ private hospitals ಮತ್ತೆ private medical college ಗಳಲ್ಲಿಯೂ ಕೂಡ ಅತಿಹೆಚ್ಚಾಗಿ IV Fluids ಅನ್ನು ಬೇರೆ ಬೇರೆ ರೀತಿಯಾದಂತಹ Fluids ಬಳಕೆ ಮಾಡುತ್ತಾರೆ. ಇದರ ಮೇಲೆ ನಮ್ಮ Drugs Controller ಗೆ ಏನು control ಇದೆ? ಇದರ ಬಗ್ಗೆ ಏನಾದರೂ ಸರ್ಕಾರ ಎಚ್ಚೆತ್ತುಕೊಂಡಿದ್ದೆಯೇ? ಇಲ್ಲಿಯೂ ಸಹ ಈ ತರಹದ ಕೇಸ್‌ಗಳು ಆಗಿದೆಯೇ ಎನ್ನುವುದನ್ನು ಸಹ ದಯಮಾಡಿ ನೋಡಬೇಕಾಗುತ್ತದೆ. ಈಗ ತಾವು ಅಭಿವೃದ್ಧಿಯೇತರರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೀರಿ. ಇದನ್ನು ಸಹ ಆ ಸಮಿತಿಗೆ study ಮಾಡುವುದಕ್ಕೆ ಹೇಳಸುವುದು ಒಳ್ಳೆಯದು ಎನ್ನುವುದು ನನ್ನ ಸಲಹೆ.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ನಿಮಿಷ. Drugs Control Act ನಲ್ಲಿ ಉತ್ಪಾದಕರ ಮೇಲೆ ಮತ್ತು ವಿತರಕರ ಮೇಲೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳುವಂತಹ ಅಧಿಕಾರ ಇದೆ. ಅದಕ್ಕೆ ತಾವು ಏತಕ್ಕಾಗಿ West Bengal ನ manufacturer ರವರು ಇಲ್ಲಿ ಬಂದು ವಿತರಣೆ ಮಾಡಿದವರ ಮೇಲೆ ಏಕೆ criminal case ಅನ್ನು ಹಾಕಬಾರದು? ದಯಮಾಡಿ ಮಾನ್ಯ ಸಚಿವರು ಇದನ್ನು ಅಲೋಚನೆ ಮಾಡಬೇಕು. ನಮ್ಮ State Food Safety Commissioner ರವರನ್ನು ಇದರ ಉಸ್ತುವಾರಿಗೆ ಹಾಕುತ್ತಿದ್ದೇವೆಂದು ಹೇಳಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, 2 ನಿಮಿಷಗಳ ಮೇಲೆ ಕಾಲವಕಾಶ ಕೂಡುವುದಕ್ಕೆ ಸಮಯ ಇಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ, Food Safety Standard Act ಮತ್ತು Drugs Control Act, ಈ ಎರಡು Central Acts ಇದೆ. ಇವರೆಡು interdependent ಇದೆ. ದಯಮಾಡಿ ತಾವು ಇದಕೋಸ್ಕರವಾಗಿ ಬದಲಾವಣೆ ಮಾಡುವುದಾದರೆ ಕೇಂದ್ರ ಸರ್ಕಾರಕ್ಕೆ ಸೂಕ್ತವಾದ ಪ್ರಸ್ತಾವನೆಯನ್ನು ಕಳುಹಿಸಿ ಎಂದು ಮನವಿ ಮಾಡುತ್ತೇನೆ.

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಆರೋಗ್ಯ ಸಚಿವರು ಪ್ರಕರಣಕ್ಕೆ ಸಂಬಂಧಪಟ್ಟಂತೆ, ಒಂದು ವಿವರವಾದಂತಹ ಹೇಳಿಕೆಯನ್ನು ಸದನದಲ್ಲಿ ನೀಡಿದ್ದಾರೆ. ನನ್ನ ಒಂದು ವಿನಂತಿ ಇಷ್ಟೇ. ಈ ಪ್ರಕರಣವನ್ನು ಕೇವಲ ಒಂದು IV Fluid ಸುತ್ತ ಮಾತ್ರ ಸುತ್ತಿದೇ, ಇದನ್ನು ಬೇರೆ ಎಲ್ಲಾ ಆಯಾಮಗಳಲ್ಲಿಯೂ ನೋಡುವಂತಹದ್ದು ಆಗಬೇಕು. ಇದರ ಜೊತೆಯಲ್ಲಿ ನಮ್ಮ ತಾಯಂದಿರದ್ದು ಏನು ಬಲಿದಾನವಾಗಿದೆ, ಇದನ್ನು ಬಲಿದಾನವೆಂದು ಕರೆದು, ಅದು ಕೊಲೆಯಾಗಿರುವಂತಹದ್ದು, ಅದನ್ನು ನಾವು ಬಲಿದಾನವೆಂದು ತಿಳಿದುಕೊಂಡು ಈ ವೈದ್ಯಕೀಯ ಕ್ಷೇತ್ರದಲ್ಲಿ ವಿಶೇಷವಾಗಿ ಈ drugs ಗೆ ಸಂಬಂಧಪಟ್ಟಂತೆ, ಇವತ್ತು ನಾವು ಏನು ಬೇರೆ Drug Mafia ಎಂದು ಹೇಳುತ್ತಿದ್ದೇವೆ, ಇವತ್ತು medical field ನಲ್ಲಿಯೂ ಸಹ drugs ಎಂದು ಬಳಸುತ್ತಿದ್ದೇವೆ, ಇದನ್ನು ನಾವು ಒಂದು ಮಾಫಿಯಾ ಎಂದು ಕರೆಯಬೇಕಾಗುತ್ತದೆ. ಏಕೆಂದರೆ, ನಮ್ಮ ವೈದ್ಯರುಗಳು ಹೇಳಿದ್ದಾರೆ. ಒಂದು IV Fluid ಅನ್ನು manufacturing cost ಕೇವಲ 5 ರಿಂದ 10 ರೂಪಾಯಿಗಳು ಇದ್ದರೆ, ಅದು ಇವತ್ತು 100 ರಿಂದ 150 ರೂಪಾಯಿಗಳಿಗೆ ಬಿಕರಿಯಾಗುತ್ತದೆ. ಈ ರೀತಿಯಾಗಿ ನಾವು 400 ರಿಂದ 500% profit ಅನ್ನು ಇಟ್ಟುಕೊಂಡು ಒಂದು drugs ಒಂದು ಮಾತ್ರೆಯಿಂದ ಹಿಡಿದು ಪ್ರತಿಯೊಂದನ್ನು ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಕರ್ನಾಟಕ ಸರ್ಕಾರವೇ ಆಮೂಲಾಗ್ರವಾಗಿ ನಾಂದಿಯನ್ನು ಆಡಲಿ. ಈ ಬಗ್ಗೆ ನಮ್ಮ ದೇಶದ್ಯಾಂತ ಬದಲಾವಣೆ ತರುವುದಕ್ಕೆ ಸಾಧ್ಯವಾದರೆ, ಆ ಕೆಲಸವನ್ನು ಏಕೆ ಮಾಡಬಾರದು? ಈ ತಾಯಂದಿರ ಬಲಿದಾನ ಅದಕ್ಕೆ ಒಂದು ಸಾಕ್ಷಿಕರಿಸಲಿ. ಆ ಮುಖಾಂತರ ಎಲ್ಲಾ ಆಯಾಯಮಗಳಲ್ಲಿಯೂ ಸಹ, ಕೇವಲ IV Fluid ಮಾತ್ರ ಬೇಡ. ಹಲವಾರು ಸಾವುಗಳು ಆಗುತ್ತದೆ. ಅದು ಸರ್ಕಾರಿ ಆಸ್ಪತ್ರೆಯಾಗಬಹುದು ಅಥವಾ ಖಾಸಗೀ ಆಸ್ಪತ್ರೆಯಾಗಬಹುದು. ಖಾಸಗೀ ಆಸ್ಪತ್ರೆಯಿಂದ ಆದ ಘಟನೆಗಳು ಆಚೆಗೆ ಬರದಿರಬಹುದು. ಹಾಗಾಗಿ, ದಯಮಾಡಿ ಎಲ್ಲದಕ್ಕೂ ಸಂಬಂಧಪಟ್ಟಂತೆ, ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ ಆ ಸಮಿತಿಗೆ responsibility ಇರುವಂತಹವರನ್ನು ನೇಮಕ ಮಾಡಿ ಆ ಮೂಲಕ ಒಂದು ಆಮೂಲಾಗ್ರವಾದ ಬದಲಾವಣೆಯನ್ನು ಈ Drugs Control ಗೆ ಸಂಬಂಧಪಟ್ಟಂತೆ ತರುವುದು ಒಂದು ಸೂಕ್ತ ಎನ್ನುವ ವಿಚಾರವನ್ನು ನಾನು ಸನ್ಮಾನ್ಯ ಸಚಿವರಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಕೇಶವಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಸಚಿವರು ಈ ವಿಚಾರವನ್ನು ಸವಿವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಅಲ್ಲದೇ, ಮುಕ್ತ ಚರ್ಚೆಗೂ ಸಹ ಸ್ವಾಗತ ಎಂದು ಹೇಳಿದ್ದಾರೆ. ಹಾಗಾಗಿ, ನಾನು ಮಾನ್ಯ ಸಚಿವರಾದ ಶ್ರೀ ದಿನೇಶ್ ಗೂಂಡುರಾವ್‌ರವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈ ಹಿಂದೆ ಗರ್ಭಪಾತದ ವಿಚಾರ ಚರ್ಚೆಯಾದಗಲೂ ಸಹ, ಮಾನ್ಯ ಸಚಿವರು ಇದೇರೀತಿಯಲ್ಲಿ ಗಂಭೀರವಾಗಿ ಮಾತನಾಡಿದ್ದರು. ಆದರೆ, ಗರ್ಭಪಾತದ ವಿಷಯ ಮುಂದೆ ಏನಾಯಿತು ಎಂದು ನಮಗೆ ಯಾರಿಗೂ ಗೊತ್ತಿಲ್ಲ. ಹಾಗೆಯೇ, ಈ ವಿಷಯ ಬಂದಾಗ, ಈ checking ನಲ್ಲಿ Third Party quality checking ಗೆ ಏನಾದರೂ ಯೋಚನೆ ಮಾಡಬಹುದೇ ಎಂದು ಗಮನಿಸಬಹುದು. ಹಾಗೆಯೇ, nexus between government hospital and private hospital

ಇದೆಯೇ, ಸರ್ಕಾರದ ಆಸ್ಪತ್ರೆಗೆ ಹೋದಾಗ ಹೆಚ್ಚು ಸಾವುಗಳು ಆಗುತ್ತವೆ ಎಂದು ಏನಾದರೂ ಷಡ್ಯಂತರ ನಡೆಯುತ್ತಿದೆಯೇ ಎಂಬುದನ್ನು ಸಹ ನಾವು enquiry ಮಾಡಬೇಕಾಗುತ್ತದೆ. Central Laboratories ಸರಿ ಇಲ್ಲವೆಂದು ಹೇಳಿದಾಗ, Central Laboratory ಗಳನ್ನೂ challenge ಮಾಡುವಂತಹ laboratory ಗಳನ್ನು ನಮ್ಮಲ್ಲಿ ತರುವಂತಹದ್ದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಹಾಗೆಯೇ, ಈ ತರಹದ ವಿಷಯಗಳು ಬಂದಾಗ ಸದನದ ಸಮಿತಿಯನ್ನು ರಚನೆ ಮಾಡಬೇಕು ಹಾಗೂ ಎಲ್ಲರಿಗೂ ಒಂದು ಅವಕಾಶವನ್ನು ಇದರೊಳಗೆ ಹೋಗುವುದಕ್ಕೆ ಕೊಡಬೇಕು. ಹಾಗಾಗಿ, ನಾನು ವಿಚಾರಣೆ ಯಾವ ಹಂತದಲ್ಲಿ ಹೇಗೆ ನಡೆಯುತ್ತಿದೆ ಎನ್ನುವುದು ಹಂತ ಹಂತವಾಗಿ ಎಲ್ಲರಿಗೂ ಗೊತ್ತಾಗಬೇಕೆಂದು ಈ ಮೂಲಕ ಸರ್ಕಾರಕ್ಕೆ ಮತ್ತು ಮಾನ್ಯ ಸಚಿವರಿಗೆ ಆಗ್ರಹ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್‌ರವರು ಹಾಗೂ ಶ್ರೀ ಶಶೀಲ್ ಜಿ.ನಮೋಶಿರವರು ಮಾತನಾಡಿದ ಮೇಲೆ, ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಎಲ್ಲರಿಗೂ ಅವಕಾಶ ಕೊಡತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ. ತಮಗೆ ಹೊಟ್ಟೆ ಹಸಿವು ಆಗುತ್ತಿದ್ದರೆ, ಸ್ವಲ್ಪ ತಡೆದುಕೊಳ್ಳಿ. ಇವರು ಮಾತನಾಡಿದ ತಕ್ಷಣ ತಮ್ಮ ಕಡೆಯವರಿಗೂ ಅವಕಾಶ ಕೊಡುತ್ತೇನೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ತೀರಿಕೊಂಡಿರುವಂತಹ ತಾಯಿಂದಿರ ಬಗ್ಗೆ, ಆ ಅನಾಥ ಮಕ್ಕಳ ಬಗ್ಗೆ ಕಾಳಜಿ ವಹಿಸಿ ನನ್ನ ವಿನಂತಿ ಇರುವುದು ಇಷ್ಟೇ. ಆ ತಾಯಿಂದಿರ ಪುಟ್ಟ ಮಕ್ಕಳು ಅನಾಥರಾಗಿದ್ದಾರೆ. ಆದ್ದರಿಂದ, ಸರ್ಕಾರದ ಕಡೆಯಿಂದ ಆ ಮಕ್ಕಳಿಗೆ 18 ವರ್ಷಗಳವರೆಗೆ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕು. ಇದರ ಜೊತೆಗೆ ಅವರ ಆರೋಗ್ಯದ ಎಲ್ಲಾ ಖರ್ಚು ವೆಚ್ಚಗಳನ್ನು ಸರ್ಕಾರವೇ ನೋಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಳ್ಳಾರಿಯಲ್ಲಿ ನಡೆದ ಬಾಣಂತಿಯ ಸಾವಿನ ಬಗ್ಗೆ ನಡೆದ ಘಟನೆಯ ಬಗ್ಗೆ ಈಗಾಗಲೇ ಎಲ್ಲಾ ಸದಸ್ಯರು ತಮ್ಮ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಹಾಗೆಯೇ, ಮಾನ್ಯ ಸಚಿವರು ಸಹ ಒಳ್ಳೆಯ ಉತ್ತರವನ್ನು ಸಹ ಕೊಟ್ಟಿದ್ದಾರೆ. ನಾನು ನಮ್ಮ ಕ್ಷೇತ್ರ ಇರುವುದರಿಂದ ಬಳ್ಳಾರಿ ಕಾಲೇಜಿನ ಕೆಲವು ವೈದ್ಯರುಗಳಿಗೆ ಪೋನ್ ಮಾಡಿ ಏನಾಯಿತು ಎಂದು ವಿಚಾರಣೆ ಮಾಡಿದೆ. ಅವರು ಕೊಟ್ಟಂತಹ ಸಲಹೆ ಇಷ್ಟೆ; it is only a suggestion. I leave it to the government to take a call on that. ಅವರು ಏನು ಹೇಳಿದರು ಅಂದರೆ, ಅಲ್ಲಿ ವೈದ್ಯರು National Medical Commission ನ ಅಡಿಯಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. Whereas the lower level staff B, C & D grade staff; they are all under the Health Department. ಒಂದೇ department ನ ಅಡಿಯಲ್ಲಿಯಾದರೆ ಒಳ್ಳೆಯದು ಎಂದು, it is for the government ಯಾರು ಇರಬೇಕು, ಯಾರ ಅಡಿಯಲ್ಲಿ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಬಿಟ್ಟಿದ್ದು. ಆದರೆ, control ಒಂದೇ ಕಡೆ ಇರುವುದರಿಂದ ಒಳ್ಳೆಯದು ಆಗುತ್ತದೆ. ಈ ತರಹದ

ಘಟನೆಗಳನ್ನು avoid ಮಾಡಬಹುದು. ಇದನ್ನು ಮಾಡಿದರೆ ಸೂಕ್ತ ಎಂದು ವೈದ್ಯರು ಹೇಳಿದಂತಹ ವಿಚಾರವನ್ನು ನಾನು ನನ್ನ ಸಲಹೆಯನ್ನು ತಮಗೆ ಕೊಡುತ್ತಿದ್ದೇನೆ.

**ಉಪ ಸಭಾಪತಿಯವರು:-** ಆಡಳಿತ ಪಕ್ಷದವರು ಸ್ವಲ್ಪ ತಾಳ್ಮೆಯಿಂದ ಇದ್ದರೆ, ಒಳ್ಳೆಯದು. ವಿರೋಧ ಪಕ್ಷದವರು ಮಾತನಾಡಿದ ಮೇಲೆ ತಾವು ಹೇಳಿ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2017ರಲ್ಲಿ ಕೇಂದ್ರ ಸರ್ಕಾರದಿಂದ ತಾಯಿ ಮತ್ತು ಮಕ್ಕಳ ಮೂರು ಆಸ್ಪತ್ರೆಗಳನ್ನು ಒಂದು ನಿಪ್ಪಾಣಿಯಲ್ಲಿ, 2ನೇಯದು ಚಿಕ್ಕೋಡಿಯಲ್ಲಿ ಮತ್ತು ಮೂರನೆಯದು ಸಾವದತ್ತಿಯಲ್ಲಿ ನಿರ್ಮಾಣ ಮಾಡುವುದಕ್ಕೆ ಮಂಜೂರಾತಿ ಮಾಡಿಸಿಕೊಂಡು ಬಂದಿದ್ದೇವು. ಪ್ರತಿಯೊಂದು ಆಸ್ಪತ್ರೆಗೆ 25 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಈ ಮೂರು ಆಸ್ಪತ್ರೆಗಳನ್ನು ಪೂರ್ಣ ಮಾಡಿದ್ದೇವು. ಇವತ್ತಿನ ಪರಿಸ್ಥಿತಿಯಲ್ಲಿ ಸಾಕಷ್ಟು ಬಾರಿ ಮಂತ್ರಿಯವರಿಗೆ ವಿನಂತಿ ಮಾಡಿಕೊಂಡಿದ್ದೇವೆ. ಆ ಮೂರು ಆಸ್ಪತ್ರೆಗಳಿಗೆ ಬೇಕಾಗುವಂತಹ ವೈದ್ಯರು, ಹೆರಿಗೆ ಮಾಡಿಸುವಂತಹ ವೈದ್ಯರು, ಅರವಳಿಕೆ ಕೊಡುವಂತಹ ವೈದರನ್ನು ಹಾಗೂ Staff Nurse ಗಳನ್ನು ಒದಗಿಸಬೇಕೆಂದು ನಾವು ಕಳಕಳಿಯಿಂದ ವಿನಂತಿ ಮಾಡಿಕೊಂಡಿದ್ದೇವು. ಏಕೆಂದರೆ, ಆ ಅಸ್ಪತ್ರೆಗಳಲ್ಲಿ ಸಿಬ್ಬಂದಿ ಇಲ್ಲವೆಂದರೆ, ಆ ಆಸ್ಪತ್ರೆಗಳಿಗೆ 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪ್ರಯೋಜನವಾಗುವುದಿಲ್ಲ. ಚಿಕ್ಕೋಡಿಯಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭವಾಗದೆ ನಿಂತಿದೆ. ಈ ವಿಷಯವನ್ನು ಪತ್ರಿಕೆಯವರು ಪ್ರತಿದಿವಸ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಚಿಕ್ಕೋಡಿಯಲ್ಲಿ ಇನ್ನು ಪ್ರಾರಂಭವಾಗಿಲ್ಲವೆಂದು ಹಾಗೂ ಪ್ರಾರಂಭವಾಗದಿರುವುದಕ್ಕೆ ಕಾರಣ ಏನು ಎಂದು ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದಾರೆ. ಇದನ್ನು ಮರಾಠಿ ಮತ್ತು ಕನ್ನಡ ದಿನಪತ್ರಿಕೆಯಲ್ಲಿ ಪ್ರತಿ ದಿವಸ ಪ್ರಕಟಿಸುತ್ತಿದ್ದಾರೆ. ಹಾಗಾಗಿ, ಈ ಮೂರು ಆಸ್ಪತ್ರೆಗಳಿಗೆ ಬೇಕಾದಂತಹ staff ಅನ್ನು ತಕ್ಷಣ ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ನಾವು ಕೇಳಿದಾಗ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದೇವೆಂದು ಹೇಳುತ್ತಾರೆ.

(ಮುಂದು)

(918) 17.12.2024 1.40 ಎಂವಿ-ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಮುಂದು):-**

ಅಲ್ಲಿ ಮಂಜೂರಾಗಬೇಕು ಎನ್ನುತ್ತಾರೆ. ಅದಕ್ಕೆ ದಯವಿಟ್ಟು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿಗೆ ತಕ್ಷಣ ಸಿಬ್ಬಂದಿಗಳನ್ನು ನೇಮಕ ಮಾಡಲಿ. ತಾಯಿ ಮಕ್ಕಳ ಆಸ್ಪತ್ರೆಯಲ್ಲಿಯೇ ಹೆರಿಗೆ ಆಗಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆಡಳಿತ ಪಕ್ಷದ ಸದಸ್ಯನಾಗಿ ಮತ್ತೆ ನಾನು ವಿರೋಧ ಪಕ್ಷದಲ್ಲಿದ್ದರೂ ಸಹ ಇದನ್ನೇ ಹೇಳುತ್ತಿದ್ದೆ. ನಾನು ಮಾನ್ಯ ಆರೋಗ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಈ ಘಟನೆ ನಡೆದ ಕೂಡಲೇ ನಾನು ಈ ಘಟನೆಯನ್ನು ಬಹಳ keen interest ನಿಂದ ನೋಡುತ್ತಿದ್ದೆ. ಸಚಿವ ಸಂಪುಟ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಈ

ವಿಚಾರವಾಗಿ ಗರಂ ಆಗಿದ್ದಾರೆ ಎಂದು ಸುದ್ದಿ ಬಂತು. Next day ಒಂದು ವೇಳೆ ನನ್ನಿಂದ ಏನಾದರೂ ತಪ್ಪಾಗಿದ್ದರೆ ನನ್ನ ರಾಜೀನಾಮೆಗೂ ಸಿದ್ಧವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆಂದು ಸುದ್ದಿ ಬಂತು. ಅವರ ಕಾಳಜಿ ಏನೆಂದು ನನಗೆ ಈಗ ಗೊತ್ತಾಯಿತು. He has come with preparation. ಈ ಸದನದಲ್ಲಿ ಇಷ್ಟು ಮಂದಿಯ ಮುಂದೆ ಈ ವಿಚಾರವನ್ನು ಇಟ್ಟು, ಈ ಒಂದು ವಿಚಾರದಲ್ಲಿ ಆಗಿರತಕ್ಕಂತಹ ಸಂಗತಿಯನ್ನು ತಿಳಿಸುವಂತಹ ಕೆಲಸ ಮಾಡಿದ್ದಾರೆ. ಅದಕ್ಕೆ my compliment to you, Sir. Really, I appreciate you.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

ಏಕೆಂದರೆ, ಮಾನ್ಯ ಸಚಿವರಿಗೆ ಇದರ ಬಗ್ಗೆ ಕಾಳಜಿ ಇದೆ. ನಾನು ಸದಸ್ಯನಾಗಿ ಸುಮಾರು ಏಳು ವರ್ಷವಾಗಿದೆ. ಈ ಶಾಸನ ಸಭೆಗಳಲ್ಲಿ ಎಂದೂ ಈ ರೀತಿಯಲ್ಲಿ ಒಬ್ಬ ಮಾನ್ಯ ಮಂತ್ರಿಗಳು ಬಂದು ನಾನು ಈ ವಿಷಯವನ್ನು ಸಭೆಯ ಮುಂದೆ ಇಡುತ್ತೇನೆ. You discuss on this matter ಎಂದು ಹೇಳಿದ್ದು ಇಲ್ಲ. ಇವತ್ತು ಆರೋಗ್ಯದ ವಿಚಾರವಾಗಿ ತೆಗೆದುಕೊಂಡಂತಹ ತೀರ್ಮಾನ ಏನಿದೆ, ಅದಕ್ಕೆ ಸರ್ಕಾರ ಮತ್ತು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುವುದಕ್ಕೆ ಬಯಸುತ್ತೇನೆ. ನನ್ನ ಕಡೆಯಿಂದ ಸರ್ಕಾರಕ್ಕೆ ಎರಡು suggestions ಇದೆ.

**ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತೀರಿಕೊಂಡಂತಹವರಿಗೆ ಶ್ರದ್ಧಾಂಜಲಿ ಅರ್ಪಿಸಲಿ.

**ಉಪ ಸಭಾಪತಿಯವರು:-** ಮಾನ್ಯ ಐವನ್ ಡಿ’ಸೋಜಾರವರೆ, ತಾವು ಇಷ್ಟೆಲ್ಲಾ ಹೇಳಿ, ಅದು ಕರೆಕ್ಟ್ ಇದೆ ಎಂದು ಹೇಳಿದ ಮೇಲೆ ಮತ್ತೆ ತಮ್ಮಿಂದ ಇನ್ನು ಏನು suggestions ಇವೆ?

**(ಗೊಂದಲ)**

**ಶ್ರೀ ಐವನ್ ಡಿ’ಸೋಜಾ:-** ಮಾನ್ಯ ಸಭಾಪತಿಯವರೇ, I am talking about his concern.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು compliment ಕೊಡುವಂತಹ ಸಮಯವೇ?

**(ಗೊಂದಲ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗ ತೀರಿ ಹೋಗಿರುವಂತಹವರಿಗೆ ಶ್ರದ್ಧಾಂಜಲಿ ಅರ್ಪಿಸಲಿ.

**(ಗೊಂದಲ)**

**ಉಪ ಸಭಾಪತಿಯವರು:-** ದಯವಿಟ್ಟು ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ. ಈಗ ತಾವು ಮಾತನಾಡುವುದಕ್ಕೆ ಅವಕಾಶವಿಲ್ಲ. ನಾನು ಮಾನ್ಯ ಸದಸ್ಯರಿಗೆ ಸುಮ್ಮನೆ ತಮಾಷೆ ಮಾಡಿದ್ದು. ಈಗ ಮಾನ್ಯ ಐವನ್ ಡಿ’ಸೋಜಾರವರೆ ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, Ringer Lactate Injection ಕೊಡಲಾಗಿತ್ತು, ಅದನ್ನು blacklist ನಲ್ಲಿ ಹಾಕಲಾಗಿತ್ತು. ಮತ್ತೆ ಅದನ್ನು ತರಬೇಕಾದರೆ, ಅದನ್ನು ತಮ್ಮ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿ, ಅದನ್ನು ಉಪಯೋಗಿಸಬಹುದೋ ಇಲ್ಲವೋ ಎಂಬ ವರದಿ ಇತ್ತೋ ಎಂಬುದು ಬೇಕಾಗಿರುವಂಥದ್ದು. ಇದು ಮಾನ್ಯ ಸಚಿವರ ಗಮನದಲ್ಲಿ ಇರಲಿ. ಅವರು ಮತ್ತೊಂದು ವಿಷಯವನ್ನು ಹೇಳಿದ್ದಾರೆ. ಇದನ್ನು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಈಗ ಮುಖ್ಯವಾದುದು ಏನೆಂದರೆ, ಇದಕ್ಕೆ ಕಾನೂನುಗಳು weak ಆಗಿವೆ ಎಂದು. ಹಾಗಾಗಿ, ನಾವು action ತೆಗೆದುಕೊಳ್ಳುವಂತೆ ಇಲ್ಲವೆಂದು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, this is a central and state subject, which comes under concurrent list. ರಾಜ್ಯ ಸರ್ಕಾರ ಕಾನೂನಿಗೆ ಸಂಬಂಧಪಟ್ಟಂತೆ ತೀರ್ಮಾನವನ್ನು ತೆಗೆದುಕೊಳ್ಳಬಹುದು. ಸದನದಲ್ಲಿ ಮಾನ್ಯ ಕಾನೂನು ಸಚಿವರು ಇದ್ದಾರೆ. I am requesting the Law and Parliamentary Affairs Minister. ಅದೇ ರೀತಿ Medical Education Minister ಸಹ ಇದ್ದಾರೆ. ನಮ್ಮ ರಾಜ್ಯದ ಜನತೆಗೆ ಬೇಕಾದಂತಹ ಯಾವ ರೀತಿಯ ಮೆಡಿಸಿನ್ ಅನ್ನು ಕೊಡಬೇಕು? ಯಾವ ರೀತಿಯ Drugs Controller ಇರಬೇಕು? ಪರೀಕ್ಷೆಗಳು ಹೇಗೆ ಇರಬೇಕು ಎಂದು ತೀರ್ಮಾನ ಮಾಡತಕ್ಕಂತಹ ಕಾನೂನು ರಚನೆ ಮಾಡುವಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಮಾನ್ಯ ಸಚಿವರು ಏನು ಹೇಳಿದರು ಎಂದರೆ, ಕಾನೂನಿನಲ್ಲಿ ಏನೂ strength ಇಲ್ಲ, ಹಾಗಾಗಿ ನಾನು ಕೈಬಿಟ್ಟೆ ಎನ್ನುತ್ತಾರೆ. No, you should take immediate action to form the laws. ಇದು ಮಾನ್ಯ ಕಾನೂನು ಸಚಿವರ ಗಮನದಲ್ಲಿದೆ. ಕಾನೂನಿನಲ್ಲಿ ಬದಲಾವಣೆ ತರಬಹುದು. ನಿಯಮಾವಳಿಯಲ್ಲಿ ಬದಲಾವಣೆ ತರಬಹುದು. ಇದಕ್ಕೆ strict laws ತರುವಂಥದ್ದನ್ನು ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ಒಂದು ಪ್ರಕರಣ ಏನು ನಡೆದಿದೆ, ಇದು ನಿಜಕ್ಕೂ ಕೂಡ ನೋವಿನ ಸಂಗತಿ. ಆದರೆ, ಈ ಒಂದು ವಿಚಾರದಲ್ಲಿ ಸರ್ಕಾರ ತತ್‌ಕ್ಷಣವೇ ಒಂದು ಒಳ್ಳೆಯ ನಿರ್ಧಾರಗಳನ್ನು ಮಾಡಿ, ಅದನ್ನು ತನಿಖೆಗೆ ಒಳಪಡಿಸಿ, ಅದನ್ನು blacklist ಗೆ ಹಾಕಿರುವಂಥದ್ದು ಅಭಿನಂದನಾರ್ಹ. ಆದರೆ, ಹೋಗಿರುವಂತಹ ಪ್ರಾಣಗಳು ಮತ್ತೆ ವಾಪಸ್ಸು ಬರುವುದಿಲ್ಲವೆಂಬುದು ಅಷ್ಟೇ ಸತ್ಯವಾದಂತಹ ವಿಷಯವಾಗಿದೆ. ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದಂತಹ ವಿಚಾರ ನನ್ನ ತಲೆಯಲ್ಲಿ ಓಡುತ್ತಿತ್ತು. ಏಕೆಂದರೆ, manufacturing company ಗಳಲ್ಲಿ ತಯಾರು ಮಾಡುವಂತಹ ವ್ಯವಸ್ಥೆ ಏನಿದೆ, ಆ ವ್ಯವಸ್ಥೆ ಸರಿಯಿಲ್ಲ. ಅಂದರೆ, hygienic ವ್ಯವಸ್ಥೆ ಇಲ್ಲ ಎಂಬ ಕಾರಣಕ್ಕೆ ಅಲ್ಲಿನ National Team ಮತ್ತೆ ಬೇರೆ Team ಗಳು ಹೋಗಿ, ಅವರು ತಯಾರು ಮಾಡುವುದಕ್ಕೆ ಸಂಪೂರ್ಣವಾಗಿ ನಿರ್ಬಂಧವನ್ನು ಹೇರಿ ಬಂದಿದ್ದಾರೆ ಎನ್ನತಕ್ಕಂತಹ ವರದಿಯನ್ನು ಕೊಟ್ಟಿದ್ದಾರೆ. ವರದಿಯಲ್ಲಿ ಈ ರೀತಿ ಇದೆ. ನನಗೆ ಅದು ಒಂದೇ ಕಾರಣವೆಂದು ಅನಿಸುವುದಿಲ್ಲ. ಎಲ್ಲೋ ಈ ಕಲಬೆರಕೆ ಮೆಡಿಸಿನ್‌ಗಳು ಮತ್ತು ಆ ಬ್ಯಾಚ್‌ಗಳಿಗೆ ಸಂಬಂಧಪಟ್ಟಂತೆ ಮೆಡಿಸಿನ್‌ಗಳು ಬರುತ್ತಿವೆ. ಇದರ ಮಧ್ಯದಲ್ಲಿ ಏನೋ ಆಗುತ್ತಿದೆ. ಅದು transportation ಇರಬಹುದು ಅಥವಾ ಉಗ್ರಾಣಗಳಲ್ಲಿ ಇರಬಹುದು. ಅಧಿಕಾರಿಗಳು ಇರಬಹುದು ಅಥವಾ ಸಿಬ್ಬಂದಿಗಳು ಇರಬಹುದು.

ಇವರು ಹೇಳುತ್ತಿರುವುದನ್ನು ನೋಡಿದರೆ, ನಾನು ಇದನ್ನು ಸಿನಿಮಾದಲ್ಲಿ ನೋಡಿದಂತೆ ಆಯಿತು. ಈ ಸಾಮಾಜಿಕ ದ್ರೋಹಿಗಳು ಇರುತ್ತಾರಲ್ಲ, ಆ ರೀತಿ ಸಾಮಾಜಿಕ ದ್ರೋಹವನ್ನು ಮಾಡುವಂತಹ ವ್ಯಕ್ತಿಗಳು ಕೈಜೋಡಿಸಿರಬಹುದು ಎನ್ನುವಂತೆ ಇದೆ. ನಾನು ಮಾನ್ಯ ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಕೇವಲ ತನಿಖೆ ಮತ್ತೆ ಪ್ರಯೋಗಾಲಯ ಹಾಗೂ ಅದನ್ನು ತಪಾಸಣೆ ಮಾಡುವಂಥದ್ದು ಸಾಕಾಗುತ್ತಿಲ್ಲ. ಇದು ಎಲ್ಲೋ ಒಂದು ಕಡೆ, ಈ ವ್ಯವಸ್ಥೆಯಲ್ಲಿಯೇ ಯಾವುದೋ ಜಾಲ ಕೈಜೋಡಿಸಿದೆ ಎನಿಸುತ್ತದೆ. ಈ ಜಾಲವನ್ನು ಭೇದಿಸುವಂತಹ ಕೆಲಸಕ್ಕೂ ಕೂಡ ಮಾನ್ಯ ಸಚಿವರು ಮುಂದಾಗಬೇಕೆಂದು ನಾನು ಮನವಿ ಮಾಡುತ್ತೇನೆ. This is very important. ಏಕೆಂದರೆ, ಈಗ ಔಷಧಿಯಲ್ಲಿ ಮಾತ್ರವಲ್ಲ ಪ್ರತಿಯೊಂದು ಆಹಾರದಲ್ಲೂ ಸಹ ಕಲಬೆರಕೆಯನ್ನು ನೋಡುತ್ತಿದ್ದೇವೆ. ಆದುದರಿಂದ, ಇಲ್ಲೂ ಕೂಡ ಏನೋ ಆಗುತ್ತಿದೆ. ಆದುದರಿಂದ, ಮಾನ್ಯ ಸಚಿವರು ಇದನ್ನು ಗಮನಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ನಾನು ನೇರವಾಗಿ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಎಲ್ಲಾ ಸದಸ್ಯರುಗಳು ಬಹಳಷ್ಟು ಸೂಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಮೊದಲು ಹಳ್ಳಿಗಳಲ್ಲಿ ನೈಸರ್ಗಿಕವಾಗಿ ಸೂಲಗಿತ್ತಿಯರ ನೆರವಿನೊಂದಿಗೆ ಹೆರಿಗೆಗಳು ಆಗುತ್ತಿದ್ದವು. ಇವತ್ತಿನ ದಿವಸ ಆ ಪದ್ಧತಿಗಳು ಕಡಿಮೆಯಾಗುತ್ತಿದೆ. ಆರ್ಥಿಕವಾಗಿ ದುರ್ಬಲರಾದವರು ಸರ್ಕಾರಿ ಆಸ್ಪತ್ರೆಗಳ ಮೇಲೆ ಅವಲಂಬನೆಯಾಗಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಪ್ರಕಾಶ್ ಬಾಬಣ್ಣ ಹುಕ್ಕೇರಿ ಸಾಹೇಬರು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಇಲ್ಲವೆಂದು ಹೇಳುತ್ತಿದ್ದರು. ನಾನು ಒಬ್ಬ ಆರೋಗ್ಯ ರಕ್ಷಣಾ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ ಮಾಡಿದಂತಹ ಸಂದರ್ಭದಲ್ಲಿ ಸಿಬ್ಬಂದಿ ಕೊರತೆ ಇದೆ ಎಂಬ ಅಂಶವನ್ನು ಗಮನಿಸಿರುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ತಾವು ಅದನ್ನು ಕೇಳಿಸಿಕೊಳ್ಳಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆ ಬಹಳ ಪ್ರಮುಖವಾಗಿ ಇರತಕ್ಕಂಥದ್ದು. ತಾಯಿ ಮತ್ತು ಮಗುವಿನ ಹಾಗೂ ಹೆರಿಗೆಯ ವಿಚಾರದಲ್ಲಿ ಸರ್ಕಾರಿ ಆಸ್ಪತ್ರೆಗೆ ಬರತಕ್ಕಂತಹ ಸಂದರ್ಭದಲ್ಲಿ ಅಲ್ಲಿ ಸಿಬ್ಬಂದಿಯೇ ಇಲ್ಲದಂತಾಗಿದೆ. ಈಗ ಪ್ರಸೂತಿ ತಜ್ಞರು ಇಲ್ಲವೆಂದರೆ ಆ ಸಿಸ್ಟಮ್ ಹೊರಟು ಹೋಗಿಬಿಡುತ್ತದೆ. ಡಾಕ್ಟರ್ ಇರುತ್ತಾರೆ. ಆದರೆ, ನರ್ಸ್‌ಗಳು ಇರುವುದಿಲ್ಲ. ಈಗ Ultrasound Machine ಇರುತ್ತದೆ. ಆ Ultrasound Machine ಅನ್ನು operate ಮಾಡುವುದಕ್ಕೆ ಬೇಕಾದಂತಹ Technician ಇಲ್ಲ. ಈಗ NHM (National Health Mission) ನಲ್ಲೂ outsourcing ನಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಜಿಲ್ಲಾಧಿಕಾರಿಗಳ ಮತ್ತು DHO (District Health Officer) ನೇತೃತ್ವದಲ್ಲಿ ಅವರನ್ನು interview ಮಾಡಿ ನೇರವಾಗಿ ತೆಗೆದುಕೊಳ್ಳಿ ಎಂದು ಅದಕ್ಕೂ ಸಹ ಉತ್ತರ ಹೇಳುತ್ತಾರೆ. ಆದರೆ, ಅದನ್ನು ನೋಡಿದಾಗ, ಅವರಿಗೆ ಕೊಡತಕ್ಕಂತಹ ವೇತನ ಏನಿದೆ, ಅದು ಕೇವಲ ಹದಿನೈದು ಮತ್ತು ಹದಿನಾರು ಸಾವಿರ ಇರುತ್ತದೆ. ಅದಕ್ಕೆ outsourcing

ನಲ್ಲಿ ನರ್ಸ್‌ಗಳು ಮತ್ತು Technician ಗಳು ಬರುವುದೇ ಇಲ್ಲ. ಮಾನ್ಯ ಸಚಿವರು ಅದರ ಬಗ್ಗೆ ಆಲೋಚನೆ ಮಾಡಬೇಕು. ನಾನು ಈ ಘಟನೆಯ ವಿಚಾರಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಸಚಿವರ ಕಾರ್ಯಕ್ಷಮತೆ ಮತ್ತು ಅವರು ಪ್ರತಿಕ್ರಿಯಿಸಿದಂತಹ ರೀತಿ ನಿಜಕ್ಕೂ ಅಭಿನಂದನಾರ್ಹ. ಅವರು ಒಬ್ಬ ಕಾಳಜಿಯುಕ್ತ ಮಂತ್ರಿಯಾಗಿ ಬಹಳ ತ್ವರಿತವಾಗಿ ಸ್ಪಂದಿಸಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರ ಕೂಡ ಅದನ್ನು ಪ್ರತಿಬಿಂಬಿಸಿದೆ. ಆದರೆ, ಇಷ್ಟು ಸಾಕಾಗುವುದಿಲ್ಲ. ಮಾನ್ಯ ಸಚಿವರು ಇಲಾಖೆಯಲ್ಲಿ ನಿಜವಾಗಿ ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಸಿಬ್ಬಂದಿ ಕೊರತೆಯನ್ನು ನಿರ್ವಹಣೆ ಮಾಡುವುದಕ್ಕೆ ಹೆಚ್ಚಿನ ಅನುದಾನ ಒದಗಿಸುವ ರೀತಿಯಲ್ಲಿ ಮಾನ್ಯ ಸಚಿವರು ಆರ್ಥಿಕ ಇಲಾಖೆಯನ್ನು convince ಮಾಡುತ್ತಾರೋ, ಮಾನ್ಯ ಮುಖ್ಯಮಂತ್ರಿಗಳನ್ನು convince ಮಾಡುತ್ತಾರೋ ಮತ್ತೆ ಸಿಬ್ಬಂದಿಗಳನ್ನು outsourcing ನಲ್ಲಿ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಈಗ ಹೆಚ್ಚು ವೇತನ ಕೊಡದೇ ಇದ್ದರೆ ಯಾರೂ ಸಹ ಬರುವುದಿಲ್ಲ. ಏಕೆಂದರೆ, ಅವರಿಗೆ ಖಾಸಗಿಯವರು ಹೆಚ್ಚಿನ ಹಣವನ್ನು ನೀಡುತ್ತಾರೆ. ಅದನ್ನು ಮಾನ್ಯ ಸಚಿವರು ನಿರ್ವಹಣೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಡಾ:ಎಂ.ಆರ್.ಸೀತಾರಾಂ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ಈಗಾಗಲೇ ಬಳ್ಳಾರಿ ಜಿಲ್ಲೆಯ ಆಸ್ಪತ್ರೆಯಲ್ಲಿ ನಡೆದ ಈ ದುರ್ಘಟನೆಯ ಬಗ್ಗೆ ಎಲ್ಲಾ ಸದಸ್ಯರು ಸಾಕಷ್ಟು ತಮ್ಮ ಅನಿಸಿಕೆಗಳನ್ನು ಸನ್ಮಾನ್ಯ ಮಂತ್ರಿಗಳಿಗೆ ನೀಡಿ, ಮಾನ್ಯ ಸಚಿವರ ಕಾಳಜಿಯನ್ನು ಮೆಚ್ಚುತ್ತಾ, ಈ ಎಲ್ಲಾ ಸಲಹೆಗಳಲ್ಲಿ ರಚನಾತ್ಮಕವಾದಂತಹ ಸಲಹೆಗಳನ್ನು ಖಂಡಿತವಾಗಿ ಸರ್ಕಾರ ಮತ್ತು ಮಾನ್ಯ ಮಂತ್ರಿಗಳು ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ ಯವರು ಹೇಳಿದಂತೆ, ಎಲ್ಲಾ Doctors ಗಳು National Medical Council ಅಡಿಯಲ್ಲಿ ಬರುವುದರಿಂದ, ಈ 'B', 'C' and 'D' employees ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯ ಅಡಿಯಲ್ಲಿ ಬರುವುದರಿಂದ ಇಲ್ಲಿ ಮಾನ್ಯ ಕಾನೂನು ಸಚಿವರು ಇದ್ದಾರೆ. ಮಾನ್ಯ ಸಚಿವರುಗಳು ಯಾವುದಾದರೂ ಒಂದು ರೀತಿಯ ವ್ಯವಯಸ್ಥೆಯನ್ನು ಮಾಡಿ, ಅದನ್ನು ಸಹ ನಿಯಂತ್ರಣ ಮಾಡುವುದಕ್ಕೆ ಸ್ವಲ್ಪ ಕಾಳಜಿ ವಹಿಸಬೇಕಾಗಿ ಮನವಿ ಮಾಡಿಕೊಳ್ಳುತ್ತೇನೆ. ಈ ಒಂದು ಪ್ರಸಂಗ ಏನು ನಡೆದಿದೆ, ಇವುಗಳು ಯಾವುದೂ ಸಹ ಬಯಸಿ ಮಾಡುವಂಥದ್ದು ಅಲ್ಲ. ಈಗಾಗಲೇ ಮಾನ್ಯ ಸಚಿವರು ಹೆಚ್ಚು ಮಾನವೀಯತೆಯನ್ನು ಮೆರೆದು, ನಮ್ಮೆಲ್ಲರಿಗೂ ಸಹ ಯಾವ ರೀತಿಯಾದಂತಹ ಲೋಪವಾಗಿದೆ ಎಂದು ತಿಳಿಸಿದ್ದಾರೆ. ಕೇಂದ್ರ ಮತ್ತು ರಾಜ್ಯದ ಎರಡೂ ಇಲಾಖೆಗಳು ಇರುವಂಥದ್ದು. ಅಂದರೆ, concurrent list ನಲ್ಲಿರುವ ಹೆಲ್ತ್. ಇದರಲ್ಲಿ ಕೆಲವು ಪ್ರಯೋಗಾಲಯಗಳಲ್ಲಿ ಅಪ್ರೂವ್ ಆಗುತ್ತದೆ. ಮತ್ತೆ ಕೆಲವು ಪ್ರಯೋಗಾಲಯಗಳಲ್ಲಿ ಅಪ್ರೂವ್ ಆಗುವುದಿಲ್ಲ. ಆದರೂ ಸಹ ತ್ವರಿತಗತಿಯಲ್ಲಿ National Testing, Regulatory Authority ಯವರು ರಾಜ್ಯದವರು ಮತ್ತು ಪಶ್ಚಿಮ ಬಂಗಾಳದವರು ಈ ಮೂವರು participate ಮಾಡಿ, ಈ Paschim Banga Pharmaceutical ಕಾರ್ಖಾನೆಗೆ ಹೋಗಿ ಅದನ್ನು ಪರಿಶೀಲಿಸಿದ್ದಾರೆ.

(ಮುಂದು)

(919) 17.12.2024 01.50 LL-VK (ಉಪ ಸಭಾಪತಿಯವರ ಉಪಸ್ಥಿತಿ)

**ಡಾ: ಎಂ.ಆರ್. ಸೀತಾರಾಂ(ಮುಂದು)**

ಇದರಲ್ಲಿ ಸೂಕ್ತವಾದ ಮತ್ತು ಹೈಜೆನಿಕ್ ವ್ಯವಸ್ಥೆಯಲ್ಲಿ ಔಷಧಿಯನ್ನು ತಯಾರು ಮಾಡುತ್ತಿಲ್ಲವೆಂದು ವರದಿ ಕೊಟ್ಟಿದ್ದಾರೆ. ತಕ್ಷಣವೇ ಅದನ್ನು ಸಹ ಕಾರ್ಯಗತ ಮಾಡುತ್ತಾರೆ. ಮಾನ್ಯ ಆರೋಗ್ಯ ಸಚಿವರು ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಜೊತೆಯಲ್ಲಿ Drug Control and Food Regulatory ಎರಡನ್ನೂ ಸಹ ಒಂದು ಮಾಡಿ, ಅದಕ್ಕೆ ಆಗಲೇ ಒಂದು ಅಧಿಕಾರಿಯನ್ನು ನೇಮಿಸಿದ್ದಾರೆ. ಕೊನೆಯದಾಗಿ, ಇವೊತ್ತಿನ ದಿವಸ ಡ್ರಗ್ಸ್ ಕಲಬೆರಕೆ ವಿಷಯ ಸರ್ಕಾರಿ ಆಸ್ಪತ್ರೆಗಳಲ್ಲಿ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಈ ಬಗ್ಗೆ ನನ್ನ ವಿಶೇಷವಾದಂತಹ ಸಲಹೆ ಎಂದರೆ, division wise drugs ಏನು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡುತ್ತಾರೆ, ಅದನ್ನು decentralize ಮಾಡುವುದರ ಜೊತೆಗೆ, ಔಷಧಿ ಕಲಬೆರಕೆ ಆಗುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ಕಮಿಟಿಯು ಸೂಕ್ತವಾದಂತಹ ಮೆಕಾನಿಸಮ್ ಮಾಡಬೇಕು. ಅದರಂತೆ, ರಾಜ್ಯವನ್ನು 5 ವಿಭಾಗಗಳಾಗಿ ವಿಂಗಡಿಸಿ, ಡ್ರಗ್ಸ್ ಕಂಟ್ರೋಲ್ ಮಾಡಿದರೆ, ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಡ್ರಗ್ಸ್‌ನಿಂದಾಗುವ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಮಾನ್ಯ ಆರೋಗ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಹೆಚ್ಚು ಚರ್ಚೆಯಾಗಿದೆ. ಮಾನ್ಯ ಸಚಿವರು ಆಗಿರತಕ್ಕಂತಹ ಕೆಲವು ಲೋಪಗಳನ್ನು ಸಹ ಒಪ್ಪಿಕೊಂಡಿದ್ದಾರೆ. ಈ ರೀತಿ ಲೋಪಗಳನ್ನು ಒಪ್ಪಿಕೊಂಡಿರತಕ್ಕಂತಹ ಸಂದರ್ಭದಲ್ಲಿ ಇದರ ಹಿಂದೆ ಯಾರಿದ್ದಾರೆ ಎಂಬ ಬಗ್ಗೆ ಪ್ರಶ್ನೆ ಇಲ್ಲ. ಆದುದರಿಂದ, ಎಲ್ಲಾ ಮಾನ್ಯ ಸದಸ್ಯರ ಬೇಡಿಕೆ ಏನೆಂದರೆ, ಇದರಲ್ಲಿ ಶ್ರೀ ಉಮೇಶ್ ಎಂಬುವವರನ್ನು ಸಸ್ಪೆಂಡ್ ಮಾಡಲಾಗಿರುತ್ತದೆ. ಆದರೆ, ನಾವು ತಿಳಿದುಕೊಳ್ಳಲಾಗಿ, ಅವರು ಬಂದಿರುವುದೇ ಕೇವಲ ಮೂರು ತಿಂಗಳ ಹಿಂದೆ. ಈ ಘಟನೆ ಕಳೆದ 7-8 ತಿಂಗಳುಗಳಿಂದ ನಡೆದುಕೊಂಡು ಬಂದಿರುತ್ತದೆ. ಹಾಗಾಗಿ, ಇದರ ಹಿಂದೆ ಯಾರಿದ್ದರು ಎಂಬ ವಿಷಯದ ಬಗ್ಗೆ ಪ್ರಸ್ತಾಪವೇ ಆಗಿರುವುದಿಲ್ಲ. ಸದ್ಯಕ್ಕೆ ಬಂದಿರುವ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಯಾರೋ ಉಮೇಶ್ ಎಂಬುವವರನ್ನು ಸಸ್ಪೆಂಡ್ ಮಾಡಿರುತ್ತಾರೆ. ಆದರೆ, ಇದರ ಹಿಂದೆ ಯಾರಿದ್ದಾರೆ ಎಂಬುದು ಯಾರಿಗೂ ಗೊತ್ತಿಲ್ಲ. ಆದುದರಿಂದ, ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಈ ಪ್ರಕರಣವನ್ನು ಎಸ್‌ಐಟಿ ತನಿಖೆಗೆ ಕೊಡಬೇಕೆನ್ನುವುದಾಗಿದೆ.

**ಉಪ ಸಭಾಪತಿಯವರು:-** ಈ ವಿಚಾರದ ಬಗ್ಗೆ 21 ಜನ ಮಾನ್ಯ ಸದಸ್ಯರು ಮಾತನಾಡಿ, ಕೆಲವು ಸಲಹೆಗಳನ್ನು ಸಹ ನೀಡಿರುತ್ತಾರೆ. ಹಾಗಾಗಿ, ತಾವು ಹೆಚ್ಚು ಸಮಯ ತೆಗೆದುಕೊಳ್ಳುವುದು ಬೇಡ. ಆದುದರಿಂದ, ತಾವು ಈ ವಿಷಯದ ಬಗ್ಗೆ ಆದಷ್ಟು ಚಿಕ್ಕದಾಗಿ ಮಾತನಾಡಿ ಅವರ ವಿಚಾರಗಳಿಗೆ ಸರ್ಕಾರದ ಉತ್ತರವನ್ನು ಕೊಡಿ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಆದಷ್ಟು ಕಡಿಮೆ ಅವಧಿಯಲ್ಲಿ ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಆದರೆ, ಈ ವಿಷಯದಲ್ಲಿ ನಮ್ಮ ಉದ್ದೇಶ ಏನಾಗಿತ್ತೆಂದರೆ, ಇದರ ಬಗ್ಗೆ ವಿಸ್ತೃತವಾಗಿ ಮಾತನಾಡಬೇಕೆಂದುಕೊಂಡಿದ್ದೆವು. ಏಕೆಂದರೆ, ಇದು ಬಹಳ

ಗಂಭೀರವಾದ ವಿಷಯವಾಗಿರುತ್ತದೆ. ಪ್ರಮುಖವಾಗಿ ಎಲ್ಲ ಸದಸ್ಯರಲ್ಲೂ ಕೂಡ ಕೇಳಿರುವಂತಹ ವಿಷಯವೇನೆಂದರೆ, ಯಾವ ಕಾರಣಕ್ಕಾಗಿ ಈ freeze ಮಾಡಿದ ಡ್ರಗ್ಸ್ ಅನ್ನು defreeze ಮಾಡಿರುತ್ತೀರಿ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ರವಿಯವರು ಹಾಗೂ ಇತರ ಅನೇಕ ಸದಸ್ಯರು ಕೇಳಿರುತ್ತಾರೆ. ಕಳೆದ ವರ್ಷ ನವೆಂಬರ್ ತಿಂಗಳಿನಲ್ಲಿ Ringer Lactate ನಿಂದ ಉಪಯೋಗ ಮಾಡಿದಾಗ ರೋಗಿಗಳ ಆರೋಗ್ಯದಲ್ಲಿ ಸ್ವಲ್ಪ ಚಳಿ ಮತ್ತು ಮೈ ನಡುಕ ಬರುತ್ತಿದೆ ಎಂಬ ವರದಿ ಬಂದಿರುತ್ತದೆ. ಅಲ್ಲದೇ, ಈ ಬಗ್ಗೆ ನಮಗೆ ಕೆಲವು ಫೋನ್ ಕರೆಗಳು ಕೂಡ ಬಂದಿರುತ್ತವೆ. ಆಗ ನಾವು ಇದನ್ನು ಚೆಕ್ ಮಾಡಿ, ಏತಕ್ಕೆ ಈ ರೀತಿ ಲಕ್ಷಣಗಳು ಬರುತ್ತಿವೆ ಎಂದು ನಾವು ಹೇಳಿರುತ್ತೇವೆ. ಕಳೆದ ವರ್ಷದ ನವೆಂಬರ್ ತಿಂಗಳಿನಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ಒಂದು ವರದಿ ಬಂದ ನಂತರ, ನಮ್ಮ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರು ಟೆಸ್ಟ್ ಮಾಡಿರುತ್ತಾರೆ. ಈ ವಿಚಾರ KSMSCL (Karnataka State Medical Supplies Corporation Limited) ಅವರಿಗೆ ಗೊತ್ತಾಯಿತು, ಅವರು ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರಿಗೆ ಪತ್ರ ಬರೆದರು. ಅದರಂತೆ, ಅವರು ಆ ಡ್ರಗ್ ಅನ್ನು ಟೆಸ್ಟ್ ಮಾಡಿರುತ್ತಾರೆ. ಅದು ಉತ್ತಮ ಗುಣಮಟ್ಟದಿಂದ ಕೂಡಿರುವುದಿಲ್ಲ ಎಂದು ಒಂದು ತಿಂಗಳ ನಂತರ ನಮಗೆ ವರದಿ ನೀಡಿರುತ್ತಾರೆ. ತದನಂತರ, ಕಳೆದ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ಗುಂಡ್ಲುಪೇಟೆಯಲ್ಲಿ ಅದೇ ರೀತಿ ವರದಿ ಬಂದಾಗ ನಾವು ಆ ಡ್ರಗ್ ಅನ್ನು ಸಹ ಪರಿಶೀಲಿಸಿದ್ದು, ಅದು ಕೂಡ ಉತ್ತಮ ಗುಣಮಟ್ಟದಿಂದ ಕೂಡಿರುವುದಿಲ್ಲವೆಂದು ವರದಿ ಬಂದಿರುತ್ತದೆ. ಅದು ಗೊತ್ತಾದ ತಕ್ಷಣವೇ ನಾವು ಔಷಧಿ ಕಂಪನಿ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಅಥವಾ ಪ್ರಕರಣ ದಾಖಲಿಸುವುದಕ್ಕೆ ಕನಿಷ್ಠ ಎರಡು ಸ್ಯಾಂಪಲ್‌ಗಳು ಉತ್ತಮ ಗುಣಮಟ್ಟದಿಂದ ಕೂಡಿರುವುದಿಲ್ಲವೆಂದು ವರದಿ ಬಂದಾಗ ಮಾತ್ರ ಕ್ರಮ ತೆಗೆದುಕೊಳ್ಳಬೇಕೆಂದು ನಿಯಮ ಇರುತ್ತದೆ. ಆದರೆ, ಈ ಡ್ರಗ್ ಅನ್ನು ತೆಗೆದುಕೊಂಡ ರೋಗಿಗಳ ಆರೋಗ್ಯದಲ್ಲಿ ಚಳಿ ಮತ್ತು ಮೈ ನಡುಕ ಬಂದ ಕಾರಣ ನಾವು ಎರಡು ಸ್ಯಾಂಪಲ್‌ಗಳನ್ನು ಟೆಸ್ಟ್ ಮಾಡಿಸಿದಾಗ, ಅವು ಉತ್ತಮ ಗುಣಮಟ್ಟದಿಂದ ಕೂಡಿರುವುದಿಲ್ಲವೆಂದು ನಮಗೆ ವರದಿ ಬಂದ ತಕ್ಷಣವೇ ಆ ಔಷಧಿ ತಯಾರಿಕೆ ಕಂಪನಿಯನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿರುತ್ತೇವೆ. ಈ ವಿಷಯದಲ್ಲಿ ಯಾವುದೇ ಸಾವು ಆಗುವುವರೆಗೆ ನಾವು ಕಾಯಲಿಲ್ಲ. ಏಕೆಂದರೆ, ಇಂತಹ ಡ್ರಗ್ಸ್ ನಿಂದ ರೋಗಿಗಳ ಆರೋಗ್ಯದಲ್ಲಿ ಏರುಪೇರು ಆಗುತ್ತಿದೆ. ಆದುದರಿಂದ, ತಕ್ಷಣವೇ KSMSCL ಅವರ ವಿರುದ್ಧ ಕ್ರಮ ತೆಗೆದುಕೊಂಡು ಅವರನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿರುತ್ತಾರೆ ಮತ್ತು ನಿಮ್ಮ ಮೇಲೆ ಬೇರೆ ವಿಚಾರಗಳಿಗೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದೆಂದು ನೋಟಿಸ್ ಕೂಡ ಕೊಟ್ಟಿರುತ್ತಾರೆ. ತದನಂತರ, ಅವರು ಕೋರ್ಟ್‌ಗೆ ಹೋಗಿ ಯಾವುದೋ ತಾಂತ್ರಿಕ ಕಾರಣ ಕೊಟ್ಟಿದ್ದರಿಂದ ಕೋರ್ಟ್ ಕೂಡ ಅವರಿಗೆ ಸ್ಟೇ ನೀಡಿರುತ್ತದೆ. ಅಲ್ಲದೇ, ಔಷಧಿ ತಯಾರಿಕೆ ಕಂಪನಿಯವರಿಗೆ ಕಾನೂನು ಪ್ರಕಾರ ಅವರು ತಮ್ಮ ಔಷಧ ಗುಣಮಟ್ಟದ ಬಗ್ಗೆ ಚಾಲೆಂಜ್ ಮಾಡುವುದಕ್ಕೆ ಅವಕಾಶ ಇದೆ. ಈಗ ನಾವು ಅದನ್ನು NSQ (Not of Standard Quality) ಎಂದು ಹೇಳುತ್ತೇವೆ. Under the LAW, ಅದನ್ನು ಚಾಲೆಂಜ್ ಮಾಡುವುದಕ್ಕೆ ಅವರಿಗೆ ಅವಕಾಶವಿದೆ and it will go to CDL (Central Drugs Laboratory), Kolkata ಅಲ್ಲಿಗೆ ಹೋದಾಗ, ಈ ಔಷಧಿ ಉತ್ತಮ ಗುಣಮಟ್ಟದಿಂದ ಕೂಡಿದೆ ಎಂದು ವರದಿ ಬಂದಿರುತ್ತದೆ. ಇದರಿಂದಾಗಿ, ನಾವು ಸದರಿ ಕಂಪನಿಯ ವಿರುದ್ಧ ಕಾನೂನಿನ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ.

ಅದರ ನಂತರ, ತುಮಕೂರು ಮತ್ತು ಹಾಸನ ಜಿಲ್ಲೆಯಲ್ಲಿ ಎರಡು ಸ್ಯಾಂಪಲ್‌ಗಳನ್ನು ತೆಗೆದುಕೊಂಡು ಟೆಸ್ಟ್ ಮಾಡಿಸಿದಾಗ, ಅದು ಕೂಡ ಉತ್ತಮ ಗುಣಮಟ್ಟದಿಂದ ಕೂಡಿಲ್ಲವೆಂದು ವರದಿ ಬಂದಿರುತ್ತದೆ. ಅದನ್ನು ಕೂಡ ಅವರು ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿರುತ್ತಾರೆ. ನಂತರ, ಸೆಂಟ್ರಲ್ ಡ್ರಗ್ ಲ್ಯಾಬ್‌ರವರು ಈ ಔಷಧಿ ಗುಣಮಟ್ಟ ಸರಿ ಇದೆಯೆಂದು ಹೇಳಿರುತ್ತದೆ. ಅಲ್ಲಿಗೆ ಆ ವಿಚಾರ ನಿಂತಿರುತ್ತದೆ. ಆದರೆ, ಅದನ್ನು defreeze ಮಾಡಲಿಲ್ಲ. ಏಕೆಂದರೆ, ಈ ಔಷಧದ ಬಗ್ಗೆ ನಮಗೆ ಕೆಲವು ಅನುಮಾನಗಳು ಇವೆಯೆಂದು KSMSCL ನವರು ಅದನ್ನು defreeze ಮಾಡದೇ ಹಾಗೆಯೇ ಇಟ್ಟಿರುತ್ತಾರೆ. ಅದು ಹಾಗೆಯೇ ಇತ್ತು. ಮುಂದೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕು ಏನು ಮಾಡಬೇಕು ಗೊತ್ತಾಗಲಿಲ್ಲ. ಬಹುಶಃ ಆಗ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಪಾರ್ಲಿಮೆಂಟ್ ಎಲೆಕ್ಷನ್ ಇತ್ತು. ನಂತರ, ಅದೆಲ್ಲಾ ಮುಗಿದು ಜೂನ್ ತಿಂಗಳು ಕಳೆದು ಒತ್ತಡ ಶುರುವಾಗಿರುತ್ತದೆ. ಜೊತೆಗೆ, ಡೆಂಗ್ಯೂ ಪ್ರಕರಣಗಳು ಜಾಸ್ತಿಯಾಗಿರುತ್ತವೆ. ಒಂದು ಕಡೆ ನಾವು ಔಷಧದ ಗುಣಮಟ್ಟ ಸರಿಯಿದೆ ಎಂದು ಹೇಳಿ, ಅದನ್ನು ಉಪಯೋಗ ಮಾಡದೇ ಇದ್ದರೆ, ನಾಳೆಯ ದಿವಸ ಆ ಕಂಪನಿಗೆ ಹಣ ಕಟ್ಟಲೇಬೇಕು. ನಾವು ಅದನ್ನು ಸುಮ್ಮನೆ ಇಟ್ಟುಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಅಲ್ಲದೇ, ಈ ಔಷಧಿಯನ್ನು ಬಳಕೆ ಮಾಡಬೇಕೆಂದು ಎಲ್ಲಾ ಕಡೆಯಿಂದಲೂ ಒತ್ತಡ ಬಂದಿರುತ್ತದೆ. ಅದಕ್ಕೋಸ್ಕರ ಅವರು ಏನು ಮಾಡಿದ್ದಾರೆಂದರೆ, fresh ಆಗಿ ಎಲ್ಲಾ 192 ಬ್ಯಾಚ್‌ಗಳನ್ನು NABL (National Accreditation Board for Testing and Calibration Laboratories) ಗೆ ಮತ್ತು ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರಿಗೆ ಟೆಸ್ಟ್ ಮಾಡುವುದಕ್ಕೆ ಕಳುಹಿಸಿರುತ್ತಾರೆ. ಎನ್‌ಎಬಿಎಲ್ ನವರು ಸದರಿ 192 ಬ್ಯಾಚ್‌ಗಳು ಕೂಡ ಸರಿ ಇದೆಯೆಂದು ಒಂದು ಅಧಿಕೃತ ವರದಿ ನೀಡಿರುತ್ತಾರೆ. ಜೊತೆಗೆ, ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರು ಸ್ವಲ್ಪ ತಡವಾಗಿ ವರದಿ ನೀಡಿರುತ್ತಾರೆ. ಅದರಲ್ಲಿ, ಇನ್ನು 18 ಬ್ಯಾಚ್ ಸೇರಿಸಿ, ಒಟ್ಟು 22 ಬ್ಯಾಚ್ ಆ ರೀತಿಯಾಗುತ್ತಿದೆ, quality ಇಲ್ಲವೆಂದು ವರದಿ ನೀಡಿರುತ್ತಾರೆ. ಅಂದರೆ, ಯಾವುದು ಓರಿಜನಲ್ 4 ಬ್ಯಾಚ್ ಔಷಧಗಳು ಕ್ವಾಲಿಟಿ ಇಲ್ಲವೆಂದು ನಮಗನ್ನಿಸಿತು ಮತ್ತು ಕೇಂದ್ರದ ಲ್ಯಾಬ್ ಕೂಡ ಈ ಔಷಧ ಸರಿ ಇದೆಯೆಂದು ಹೇಳಿದರೂ ಸಹ, ನಾವು ಮಾರುಕಟ್ಟೆಗೆ ಬಿಡುಗಡೆ ಮಾಡಲಿಲ್ಲ. ಇನ್ನು ಉಳಿದ 18 ಬ್ಯಾಚ್‌ಗಳನ್ನು ನಾವು ಮಾರುಕಟ್ಟೆಗೆ ಬಿಡುಗಡೆ ಮಾಡಿರುವುದಿಲ್ಲ. ಆ 22 ಬ್ಯಾಚ್ ಅನ್ನು ನಾವು ಇವೊತ್ತಿಗೂ ಕೂಡ ಬಿಡುಗಡೆ ಮಾಡಿರುವುದಿಲ್ಲ. ಇನ್ನುಳಿದಿರುವ ಬ್ಯಾಚ್ ಅನ್ನು ಸಿಡಿಎಲ್ ಸರಿ ಇದೆಯೆಂದು ಹೇಳಿದರು. ಎನ್‌ಎಬಿಎಲ್ ಸರಿ ಇದೆಯೆಂದು ಹೇಳಿದರು. ಜೊತೆಗೆ, ಕೆಎಸ್‌ಎಂಎಸ್‌ಸಿಎಲ್‌ಅದನ್ನು ಇಟ್ಟುಕೊಂಡು ಕುಳಿತು ಕೊಂಡರು. ತದನಂತರ, ತಾಂತ್ರಿಕವಾಗಿ ಒಂದು ಸಮಿತಿಯನ್ನು ನೇಮಕ ಮಾಡಿ, ಅದನ್ನು ಚೆಕ್ ಮಾಡಿಸಿಕೊಂಡಿರುತ್ತಾರೆ. ಆಗ ಅವರು ಉಪಯೋಗ ಮಾಡುವುದಕ್ಕೆ ಬಿಟ್ಟರು, in the month of August. August ನಲ್ಲಿ ಬಿಟ್ಟಾಗ, ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ಈ ಔಷಧದಿಂದ negative reaction ಆಗುತ್ತಿದೆಯೆಂಬ ಯಾವುದೇ ವರದಿ ಬಂದಿರುವುದಿಲ್ಲ. ಒಂದು ವೇಳೆ ಕೆಲವು ಕಡೆ negative reaction ಕೂಡ ಆಗಿರಬಹುದು. ಬಹುಶಃ ಕೆಲವು ಕಡೆ ಅದು ಹೊರಗೆ ಬರುವುದಕ್ಕೆ ಆಗಲಿಲ್ಲವೋ ಅಥವಾ ಏನಾಯಿತೋ ಅದು ನಮಗೆ ಗೊತ್ತಾಗಲಿಲ್ಲ. ಆದರೆ, ಈಗ ಬಳ್ಳಾರಿಯಲ್ಲಿ ನಡೆದಂತಹ ಘಟನೆಯಿಂದ ಈ ವಿಷಯ ನಮ್ಮ ಗಮನಕ್ಕೆ ಬಂದಿರುತ್ತದೆ. ಅದರ ನಂತರ, ಏನೇನು ಕ್ರಮ ತೆಗೆದುಕೊಳ್ಳಬೇಕು ಅದನ್ನು ನಾವು

ತೆಗೆದುಕೊಂಡಿರುತ್ತೇವೆ. ಆದರೆ, ಆ ಔಷಧವನ್ನು defreeze ಮಾಡುವುದಕ್ಕೆ ಕೆಎಸ್‌ಎಂಎಸ್‌ಸಿಎಲ್ ನವರು procedure follow ಮಾಡಿರುತ್ತಾರೆ. ಆದರೆ, ಒಂದು ಸಲ ಒಂದು ಡ್ರಗ್ ಬಗ್ಗೆ ಸಂಶಯ ಬಂದ ನಂತರ, ಬಹುಶಃ ಇನ್ನು ಹೆಚ್ಚಿನ ಗಮನ ಕೊಡಬೇಕಾಗಿತ್ತು ಎನ್ನುವಂತಹದ್ದು ಇರಬಹುದು ಅದು ತನಿಖೆಯಲ್ಲಿ ಗೊತ್ತಾಗಲಿ. ಆ ತನಿಖೆಯಲ್ಲಿ ಯಾವುದೇ ವಿಚಾರಗಳು ಇದ್ದರೂ ಸಹ ಅದು ಹೊರಗೆ ಬರಲಿ. ಮಾನ್ಯ ಸದಸ್ಯರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ಡ್ರಗ್ ತಯಾರಿಕೆ ಕಂಪನಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿರುತ್ತಾರೆ. ಡ್ರಗ್ ಕಂಟ್ರೋಲ್ ಅನ್ನು ಏತಕ್ಕೆ ಸಸ್ಪೆಂಡ್ ಮಾಡಿರುತ್ತಾರೆಂದು ಕೇಳಿರುತ್ತಾರೆ. ಅದು ಕೂಡ ತನಿಖಾ ವರದಿಯಲ್ಲಿ ಬರುತ್ತದೆ. ಮಾನ್ಯ ಸದಸ್ಯರು ಹೇಳಿರುವುದು ಕೂಡ ಸರಿಯಾಗಿದೆ. ಆದರೆ, ನಾನು ಈ ವಿಷಯದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ವಿಷಯ ವಿಚಾರಣಾ ಹಂತದಲ್ಲಿದ್ದು, ವಿಚಾರಣಾ ವರದಿ ಬಂದ ನಂತರ, ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಸರಣಿ ಸಾವಿನ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುತ್ತಾರೆ. ಖಂಡಿತವಾಗಿಯೂ ನಾವು ಕೂಡ ಇದನ್ನು ಒಪ್ಪುವುದಿಲ್ಲ. ಈ ವಿಷಯವನ್ನು ನಾನೇ ಮೊದಲು ಹೇಳಿರುತ್ತೇನೆ. ಈ ವಿಚಾರ ನನ್ನ ಗಮನಕ್ಕೆ ಬಂದ ತಕ್ಷಣವೇ ನಮ್ಮ ಇಲಾಖೆಯವರಿಗೆ ತಿಳಿಸಿರುತ್ತೇನೆ. ಆಗ 4 ಪ್ರಕರಣಗಳಲ್ಲಿ ಸಾವು ಆಗಿದ್ದು, 5 ನೇ ಪ್ರಕರಣದಲ್ಲಿ ಇನ್ನೂ ಸಾವು ಆಗಿರಲಿಲ್ಲ. ಹಾಗಾಗಿ, ನಾವು ಎಲ್ಲವನ್ನೂ ಟೆಸ್ಟ್ ಮಾಡಿಸೋಣ. Maternal death audit ಆಗಬೇಕು ಎಂದು ನಾನು ನಮ್ಮ ಇಲಾಖೆಯವರಿಗೆ ತಿಳಿಸಿರುತ್ತೇನೆ. ಏಕೆಂದರೆ, ಆ ಔಷಧ ತಯಾರಿಕೆ ಕಂಪನಿಯವರನ್ನು ಹೊಣೆಗಾರರನ್ನಾಗಿ ಮಾಡಬೇಕು. ಇಲ್ಲವಾದರೆ, ಅವರು ಲ್ಯಾಬ್ ರಿಪೋರ್ಟ್ ಸರಿಯಾಗಿದೆ, ಇದರಲ್ಲಿ ನಮ್ಮ ತಪ್ಪೇನು ಇಲ್ಲವೆಂದು ಕಾನೂನು ಪ್ರಕಾರ ಕೋರ್ಟ್‌ಗಳಿಗೆ ಹೋಗುವ ಮೂಲಕ ಈ ಹೊಣೆಗಾರಿಕೆಯಿಂದ ಪಾರಾಗಬಹುದು. ಹಾಗಾಗಿ, ಈ ವಿಚಾರದಲ್ಲಿ ನಮಗೆ clinical findings and clinical report ಬೇಕು. ಅದಕ್ಕಾಗಿ, ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮತ್ತು ನಾವು ಮಾತನಾಡಿಕೊಂಡು ಕ್ಲಿನಿಕಲ್ ರಿಪೋರ್ಟ್ ಬೇಕು ಎಂದು ಕ್ಲಿನಿಕಲ್ ಟೆಸ್ಟ್ ಮಾಡಿಸಿರುತ್ತೇವೆ. What are the clinical findings? Experts ಹೋಗಿ ಸ್ಟಡಿ ಮಾಡಿ, ಇಂತಹ ಕಾರಣಕ್ಕೆ ನಮಗೆ ಸಂಶಯ ಬರುತ್ತಿದೆಯೆಂದು ಒಂದು 5 ಪ್ರಕರಣಗಳಲ್ಲಿ ವರದಿ ನೀಡಬೇಕೆಂದು ಹೇಳಿರುತ್ತೇವೆ. ಜೊತೆಗೆ, ಇನ್ನು ಬೇರೆ ಕಡೆಗಳಲ್ಲಿ ಏನಾದರೂ ಆಗಿದ್ದರೆ, ಅದನ್ನು ಸಹ ತೆಗೆದುಕೊಂಡು compile ಮಾಡಿ, ಆ ಔಷಧ ಕಂಪನಿಯನ್ನು ಕೇವಲ ಪರಿಹಾರ ನೀಡುವುದಕ್ಕಾಗಿ ಮಾತ್ರವಲ್ಲದೇ, ಆ ಕಂಪನಿಯನ್ನು ಮುಚ್ಚು ಹಾಕುವಂತಹ ಮಟ್ಟಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿರುತ್ತೇವೆ. ಅದನ್ನು ಬಿಟ್ಟು ಈ ಪ್ರಕರಣದಲ್ಲಿ ಔಷಧ ತಯಾರಿಕಾ ಕಂಪನಿಯವರಿಂದ ಮೃತರ ಕುಟುಂಬ ವರ್ಗದವರಿಗೆ ಪರಿಹಾರ ಕೊಡಿಸೋಣ ಅಥವಾ ಡ್ರಗ್ ಮೇಲೆ ಫೈನ್ ತೆಗೆದುಕೊಳ್ಳುವುದು ಆಗಬಾರದು. ಏಕೆಂದರೆ, ಇದಕ್ಕೆ ಸಂಪೂರ್ಣವಾಗಿ ಕ್ಷಮಾಪಣೆಯೇ ಇರಬಾರದು. ಒಂದು ಔಷಧ ತಯಾರಿಕೆ ಕಂಪನಿಯ ಮೇಲೆ ಯಾವುದೇ ಕ್ಷಮಾಪಣೆಯೇ ಇರಬಾರದು. ಆಗಲೇ ಮಾನ್ಯ ಸದಸ್ಯರಾದ ಡಾ: ಧನಂಜಯ ಸರ್ಜಿಯವರು ಮಾತನಾಡುತ್ತಾ, ಒಂದು ಒಳ್ಳೆಯ ಅಂಶವನ್ನು ಹೇಳಿರುತ್ತಾರೆ. Maternal deaths ಎಂದರೆ, caesarian ಗೆ ಮಾತ್ರವೇ ಏತಕ್ಕೆ ಆಗಿರುತ್ತದೆ, ಬೇರೆಯವರಿಗೆ ಏತಕ್ಕೆ ಆಗಿರುವುದಿಲ್ಲ. ನಾನು ಡಾಕ್ಟರ್ ಅಥವಾ ತಜ್ಞರಲ್ಲ.

(ಮುಂದು)

(920) 17.12.2024 2.00 ವೈಎಲ್-ಬಿಎನ್ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ದಿನೇಶ್ ಗುಂಡೂರಾವ್ (ಮುಂದು):-**

ಸಿಸೇರಿಯನ್ ಹೆರಿಗೆ ಆಗುವಂಥ ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ Ringer's lactate ಉಪಯೋಗ ಮಾಡುತ್ತಾರೆ. ಬೇರೆ ಪ್ರಕರಣದಲ್ಲಿ ಕಡಿಮೆ ಉಪಯೋಗ ಮಾಡುತ್ತಾರೆ. ಇದು ನನಗೆ ತಿಳಿದಿರುವಂಥ ಮಾಹಿತಿ, ಡಾ॥ ಧನಂಜಯ ಸರ್ಜಿಯವರಿಗೆ ಇನ್ನು ಹೆಚ್ಚಿನ ಮಾಹಿತಿ ತಿಳಿದಿರಬಹುದು, ಏಕೆಂದರೆ ಅವರು ಸಹ ವೈದ್ಯರಾಗಿದ್ದು, ಆಸ್ಪತ್ರೆಯನ್ನು ನಡೆಸುತ್ತಾರೆ. ಜೊತೆಗೆ ಆಗಾಗ ಒಳ್ಳೆಯ ಸಲಹೆಯನ್ನು ಸಹ ಡಾ॥ ಧನಂಜಯ ಸರ್ಜಿಯವರು ಕೊಡುತ್ತಾರೆ. ಸಿಸೇರಿಯನ್ ಹೆರಿಗೆ ಆಗುವಂಥ ಸಂದರ್ಭದಲ್ಲಿ ರಕ್ತ ಸೋರಿಕೆ ಜಾಸ್ತಿ ಇರುತ್ತದೆ ಮತ್ತು ಬಿ.ಪಿ. ಸಹ ಹೆಚ್ಚಾಗುತ್ತಿದ್ದು, ಅದನ್ನು ನಿಯಂತ್ರಣಕ್ಕೆ ತರಬೇಕು. ಇವೆಲ್ಲದರ ಸಲುವಾಗಿ ಹೆಚ್ಚಿನ ಪ್ರಮಾಣದಲ್ಲಿ Ringer's lactate ಉಪಯೋಗ ಮಾಡಲಾಗುತ್ತದೆ. These are all medical issues.

ನಿನ್ನೆ ದಿವಸ ಇದೇ ವಿಚಾರವಾಗಿ ವಿಧಾನಸಭೆಯಲ್ಲಿ ಸಹ ಚರ್ಚೆಯಾಗಿದ್ದು, ಅಲ್ಲಿ ಸಹ ಹೇಳಿದ್ದೇನೆ. ಜನವರಿ ಮಾಹೆಯಲ್ಲಿ ಹೊಸ ಪಾಲಿಸಿ ಜಾರಿಗೆ ತರಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ (ಎ.ಬಿ.ಆರ್.ಕೆ) ಯೋಜನೆಯಡಿ ಖಾಸಗಿ ಆಸ್ಪತ್ರೆ ಇರಲಿ ಅಥವಾ ಸರ್ಕಾರಿ ಆಸ್ಪತ್ರೆ ಇರಲಿ, ಸಿಸೇರಿಯನ್ ಹೆರಿಗೆ ಮಾಡಲು ಅವರಿಗೆ procedure ಗೆ ಹಣ ಕೊಡಲಾಗುತ್ತದೆ. ಆದರೆ, ಸಹಜ ಹೆರಿಗೆಗೆ ಈ ಸೌಲಭ್ಯ ಇರುವುದಿಲ್ಲ. ಮುಂದಿನ ದಿನಗಳಲ್ಲಿ ಸಹಜ ಹೆರಿಗೆಗೂ ಸಹ ಅಷ್ಟೇ ಹಣ ಕೊಡಿಸೋಣ. ಅದರಿಂದ ಸಿಸೇರಿಯನ್ ಹೆರಿಗೆ ಪ್ರಮಾಣ ಕಡಿಮೆಯಾಗುತ್ತದೆ. ನಿನ್ನೆ ದಿವಸ ಡಾ॥ ಧನಂಜಯ ಸರ್ಜಿಯವರು 'ಖಾಸಗಿ ಆಸ್ಪತ್ರೆಯಲ್ಲಿ ಸಹ ಇಂತಹ ಸೌಲಭ್ಯವನ್ನು ಒದಗಿಸಿ" ಎಂದು ಸಲಹೆ ನೀಡಿದ್ದು, ಖಂಡಿತವಾಗಿ ಕ್ರಮಕೈಗೊಳ್ಳುತ್ತೇನೆ. ಯಾರು ಆ ರೀತಿ ಮಾಡಿದ್ದಾರೆ, ಇದಕ್ಕೆ ಯಾರು ಜವಾಬ್ದಾರಿ ಎನ್ನುವುದನ್ನು ಪತ್ತೆ ಹಚ್ಚಲು ನಮ್ಮ ಹಂತದಲ್ಲಿ ತನಿಖೆ ಮಾಡಿಸಲಾಗುತ್ತಿದೆ. ಆದರೆ, ಮಾನ್ಯ ಸಿ.ಟಿ.ರವಿ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ, ಮಾನ್ಯ ಕೆ.ಎಸ್.ನವೀನ್‌ರವರು, ಇನ್ನು ಕೆಲವು ಸದಸ್ಯರೊಳಗೊಂಡಂತೆ ಉನ್ನತ ಮಟ್ಟದ ತನಿಖೆಯಾಗಬೇಕಾಗಿದ್ದು, "ಎಸ್.ಐ.ಟಿ. ತನಿಖೆ ಅಥವಾ ನ್ಯಾಯಾಂಗ ತನಿಖೆಯಾದರೂ ಮಾಡಿ ಅಥವಾ ಸದನ ಸಮಿತಿ ರಚನೆ ಮಾಡಿ" ಎಂದು ಹೇಳಿದ್ದಾರೆ. ಹಾಗಾಗಿ, ಏನಾದರೂ ಒಂದು ವ್ಯವಸ್ಥೆ ಮಾಡೋಣ. ಈ ಸಂಬಂಧ ನಾನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರೊಂದಿಗೆ ಚರ್ಚೆ ಮಾಡಿ, ಯಾವ ರೀತಿ ಕ್ರಮಕೈಗೊಳ್ಳಬೇಕು ಮತ್ತು Development Commissioner ರವರ ವರದಿಯನ್ನು ಸಹ ತೆಗೆದುಕೊಂಡು ನೋಡಲಾಗುವುದು. ನಾನು ಕೂಡ ಖಂಡಿತ ಉನ್ನತ ಮಟ್ಟದ ತನಿಖೆಯಾಗಬೇಕೆಂದು ಹೇಳುವವನೆ. ಈ ಸಂಬಂಧ

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೊಂದಿಗೆ ಚರ್ಚೆ ನಡೆಸಿ, ತೀರ್ಮಾನ ಕೈಗೊಳ್ಳಲಾಗುವುದು. ಜೊತೆಗೆ ವಿಧಾನಸಭೆಯಲ್ಲಿ ಸಹ ಚರ್ಚೆ ಆಗುತ್ತದೆ. ಆ ಸಂದರ್ಭದಲ್ಲಿ ಇದಕ್ಕೆ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನ್ಯಾಯಾಂಗ ತನಿಖೆಗೆ ವಹಿಸಲಾಗುತ್ತದೆಯೇ ಅಥವಾ ಎಸ್.ಐ.ಟಿ. ತನಿಖೆಗೆ ವಹಿಸಲಾಗುತ್ತದೆಯೇ ಎಂಬುದನ್ನು ಮಾನ್ಯ ಸಚಿವರೇ ಪ್ರಕಟಣೆ ಮಾಡಬೇಕು.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವ ರೀತಿ ತನಿಖೆ ಮಾಡಬೇಕು ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೊಂದಿಗೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇನೆ. ತನಿಖೆ ನಡೆಸುವ ಬಗ್ಗೆ ಯಾವುದೇ ಹಿಂದೇಟು ಇಲ್ಲ. We are very clear. ಈಗಾಗಲೇ ಮಾನ್ಯ ಕೆ.ಎಸ್.ನವೀನ್‌ರವರು "ಕರ್ನಾಟಕದಲ್ಲಿ maternal deaths ಹೆಚ್ಚಾಗಿ ಆಗುತ್ತಿವೆ" ಎಂದು ಹೇಳಿದರು.

**ಡಾ॥ ಶರಣ ಪ್ರಕಾಶ್ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಹೇಳಿದ್ದಾರೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, State average ನಲ್ಲಿ ಚಿಕ್ಕಬಳ್ಳಾಪುರದಲ್ಲಿ ಬಾಣಂತಿಯರ ಸಾವು ಹೆಚ್ಚಾಗಿ ಸಂಭವಿಸುತ್ತಿದೆ. South India average ನಲ್ಲಿ ಕರ್ನಾಟಕದಲ್ಲಿ ಹೆಚ್ಚು ಪ್ರಮಾಣದಲ್ಲಿ ಬಾಣಂತಿಯರ ಸಾವು ಆಗಿದೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಕೇರಳ-19, ಮಹಾರಾಷ್ಟ್ರ-33, ತೆಲಂಗಾಣ-43, ಆಂಧ್ರಪ್ರದೇಶ-45, ತಮಿಳುನಾಡು-54, ಗುಜರಾತ್-57, ಕರ್ನಾಟಕ-64. ಪ್ರಗತಿಪರ ಮುಂದೆ ಇರುವಂಥ ದಕ್ಷಿಣ ಭಾಗದ ರಾಜ್ಯಗಳಲ್ಲಿ ಹೋಲಿಕೆ ಮಾಡಿ ನೋಡಿದಾಗ ಕರ್ನಾಟಕವು ಹಿಂದೆ ಇದ್ದು, ಇನ್ನು ಸಹ ನಮ್ಮ ರಾಜ್ಯವು maternal deaths ಗೆ ಸಂಬಂಧಿಸಿದಂತೆ improve ಆಗಬೇಕಾಗಿದೆ. Maternal deaths ಗೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಒಟ್ಟಾರೆಯಾಗಿ ಸೇರಿ ಕೆಲಸ ಮಾಡುವಲ್ಲಿ ಖಂಡಿತ ಕ್ರಮಕೈಗೊಳ್ಳಬೇಕಾಗಿದೆ. ಆದರೆ, ಕಳೆದ 10-15 ವರ್ಷಗಳ ಹಿಂದಿನ ಡೇಟಾ

ನೋಡಿದಾಗ ನಮ್ಮ ರಾಜ್ಯದಲ್ಲಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ಬಾಣಂತಿಯರ ಸಾವು ಇತ್ತು. ಹಾಗೆಯೇ ಅತೀ ವೇಗವಾಗಿ ಈ ಸಾವಿನ ಸಂಖ್ಯೆ ಕಡಿಮೆಯಾಗುತ್ತಿರುವ ರಾಜ್ಯ ಯಾವುದೆಂದರೆ, ಅದು ಕರ್ನಾಟಕ. ಅದನ್ನು ಹೇಳಿಕೊಳ್ಳಬಹುದೇ ಹೊರತು, ಬೇರೆ ರಾಜ್ಯಕ್ಕೆ ಹೋಲಿಕೆ ಮಾಡಿದರೆ ನಾವು ಹಿಂದೆಯೇ ಇದ್ದೇವೆ. ಅದರ ಬಗ್ಗೆ ಯಾವುದೇ ಅನುಮಾನವಿಲ್ಲ, ಇನ್ನು improve ಮಾಡಿಕೊಳ್ಳಬೇಕಾಗಿದೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, maternal death ಬಗ್ಗೆ ತಿಳಿಸಿದ್ದು, infant death ಬಗ್ಗೆ ಹೇಳಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನ ಪ್ರಾರಂಭವಾಗುವ ಸಂದರ್ಭದಲ್ಲಿ ಸುಮಾರು 322 ಮಕ್ಕಳು ಮರಣ ಹೊಂದಿದ್ದಾರೆ ಎಂದು ಹೇಳಿದರು. ಆದರೆ, IMR (Infant Mortality Rate) ಬೆಳಗಾವಿಯಲ್ಲಿ ಕರ್ನಾಟಕಕ್ಕಿಂತ ಅತ್ಯಂತ ಉತ್ತಮವಾದ ಸ್ಥಿತಿಯಲ್ಲಿದೆ. Number of deaths ಇದ್ದು, ಅದರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ಆ ಆಸ್ಪತ್ರೆಯಲ್ಲಿ ಪ್ರತಿ ವರ್ಷ ಒಂದಷ್ಟು ಜನ ಮರಣ ಹೊಂದುವಂಥದ್ದಾಗುತ್ತಿದೆ. ನಾನು ಅದರ ಬಗ್ಗೆ defend ಮಾಡುತ್ತಿಲ್ಲ. ಆದರೆ, ಬೆಳಗಾವಿ ಜಿಲ್ಲೆಯ ವಿಚಾರವಾಗಿ ದಿನ ಪತ್ರಿಕೆಯಲ್ಲಿ ಪ್ರಕಟವಾದಾಗ 'ಓ, ಈ ಆಸ್ಪತ್ರೆಗೆ ಬರುವವರೆಲ್ಲಾ ಸಾಯುತ್ತಿದ್ದಾರೆ, ಯಾರು ಉಳಿಯುತ್ತಿಲ್ಲ' ಎಂದು ಹೇಳುವುದಲ್ಲ. ಸಾವಿರಾರು ಸಂಖ್ಯೆಯಲ್ಲಿ ಅಲ್ಲಿಗೆ ಬರುವಂಥ ಬಾಣಂತಿಯರಿಗೆ ಮಗು ಹುಟ್ಟಿದ್ದು, ಆ ರೀತಿ ಏನಾಗಿಲ್ಲ. ನನಗೆ ನೆನಪಿರುವಂತೆ ಬೆಳಗಾವಿಯಲ್ಲಿ IMR 7.8 ಇತ್ತು. It is far better than Karnataka's average, which is almost half of the average. ಅದನ್ನು ಸಹ ಮಾಹಿತಿಗೆ ತರಬಯಸುತ್ತೇನೆ. ಕೆಲವು ಸಲ ತಪ್ಪಾಗಿ ದಿನಪತ್ರಿಕೆಯಲ್ಲಿ ಪ್ರಕಟವಾಗುವ ಹೆಡ್‌ಲೈನ್ಸ್ ನೋಡಿದಾಗ ಆ ರೀತಿಯಾಗುತ್ತದೆ. But, ಇದಕ್ಕೆ ನಾವು ಎಷ್ಟರ ಮಟ್ಟಿಗೆ ಸಾವಿನ ಪ್ರಮಾಣವನ್ನು ಕಡಿಮೆ ಮಾಡಲು ಸಾಧ್ಯವೋ ಅಷ್ಟು ಕಡಿಮೆ ಮಾಡಬೇಕೆಂಬ ಕಾಳಜಿ ಇರಬೇಕು. Preventable deaths ಅನ್ನು ಶೂನ್ಯಕ್ಕೆ ತರಬೇಕೆನ್ನುವ ಪ್ರಯತ್ನ ಮಾಡಲಾಗುತ್ತಿದೆ. ಕೆಲವೊಂದನ್ನು prevent ಮಾಡಲು ಆಗುವುದಿಲ್ಲ. ಈ ಒಂದು ಘಟನೆಯಿಂದಾಗಿ ಇನ್ನು ಹೆಚ್ಚಿನ ತೀವ್ರತೆಯಿಂದ ಕ್ರಮ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರ ಪ್ರಶ್ನೆಗೆ ಇದು ಉತ್ತರ ಅಲ್ಲ. ಅವರ ಪ್ರಶ್ನೆಗೆ ಉತ್ತರ ಏನೆಂದರೆ, ತನಿಖೆಯಾಗಬೇಕು, ಸರಿಪಡಿಸಲು ಏನೇನು ಮಾಡಬೇಕು ಅದೆಲ್ಲವನ್ನು ಮಾಡಬೇಕು ಹಾಗೂ ಆ ಕಂಪನಿಯವರ ಮೇಲೆ ಸಹ ಕ್ರಮ ಜರುಗಿಸಬೇಕು ಮತ್ತು ನಮ್ಮವರು ಯಾರಾದರೂ ತಪ್ಪು ಮಾಡಿದ್ದರೆ ಅವರ ಮೇಲೆ ಸಹ ಕ್ರಮವಾಗಬೇಕು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಲೋಕಾಯುಕ್ತದವರ observation ಸಹ ಇದ್ದು, ಆ observation ಅನ್ನು monitor ಮಾಡಿ, ಅವರು ಕೊಡುವಂಥ ಸಲಹೆ ಪಡೆಯಬೇಕು ಹಾಗೂ ಅವರು ಭೇಟಿ ನೀಡಿದ ಸಂದರ್ಭದಲ್ಲಿ ಅವರು ಕೆಲವು observation ಮಾಡಿದ್ದು, ಅದನ್ನು ಸಹ ಎಕ್ಸಿಕ್ಯೂಟ್ ಮಾಡಲು ಕ್ರಮವಹಿಸಬೇಕು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಮಾತನಾಡಿದ್ದು, ಅಮೂಲ್ಯವಾದ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಎಲ್ಲಾ ಮಾನ್ಯ ಸದಸ್ಯರಿಗೂ ನನ್ನ ಅಭಿನಂದನೆಯೇನೆಂದರೆ, ಯಾರೂ ಸಹ ರಾಜಕೀಯ ಉದ್ದೇಶವನ್ನಿಟ್ಟುಕೊಂಡು ಮಾತನಾಡಿಲ್ಲ. ಆದ್ದರಿಂದ ಮನಸ್ಪೂರ್ತಿಯಾಗಿ ಧನ್ಯವಾದಗಳನ್ನರ್ಪಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಜಾಲದ ಬಗ್ಗೆ ಸ್ವಲ್ಪ ಗಮನಹರಿಸಬೇಕು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಜಾಲದ ಬಗ್ಗೆ ಕಾನೂನು strengthen ಮಾಡುವುದು, ಈಗ ಇರುವಂಥ ಕಾನೂನನ್ನೆ ನಿರ್ವಹಣೆ ಮಾಡಲು ಸಾಧ್ಯವಿದೆ ಮತ್ತು ಸುಧಾರಣೆ ಮಾಡಲು ಬೇಕಾದಷ್ಟು ಇದೆ. ಇರುವಂಥ ಕಾನೂನನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಲು ಖಂಡಿತವಾಗಿ ಅವಕಾಶ ಇದೆ. ಹಾಗಾಗಿ, ಅವೆರಡನ್ನೂ ಸಹ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

## 11. ವರದಿಯನ್ನೊಪ್ಪಿಸುವುದು

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 39, 40, 41 ಹಾಗೂ 42ನೇ ಸಮಿತಿಯ ಸದಸ್ಯನಾದ ನಾನು 2023-24ನೇ ಹಾಗೂ 2024-25ನೇ ಸಾಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**12. ಶಾಸನ ರಚನೆ**

**ಅ) ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕ, 2024**

**ಹಿಂಪಡೆಯುವ ಪ್ರಸ್ತಾಪ**

**ಶ್ರೀ ಹೆಚ್.ಕೆ.ಪಾಟೀಲ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, 2024ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿ ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಕೆ.ಪಾಟೀಲ:-** ಮಾನ್ಯ ಸಭಾಪತಿಯವರೇ, ಈ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕಕ್ಕೆ ಈಗಾಗಲೇ ಸದನದಲ್ಲಿ ಅನುಮೋದನೆ ನೀಡಲಾಗಿತ್ತು. ಆದರೆ, ವಿಧೇಯಕದಲ್ಲಿ ಕೆಲವು ಅಂಶಗಳಾದ "ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷರ ಹುದ್ದೆ ಅಥವಾ ಕೆಲವು ಸಲಹೆಗಾರರ ಹುದ್ದೆ" ಎಂದು ಮಾತ್ರ ನಮೂದಿಸಲಾಗಿತ್ತು. ಈ ಸಂಬಂಧ ಘನತೆವೆತ್ತ ರಾಜ್ಯಪಾಲರು 'ಯಾವ ಹುದ್ದೆಗಳನ್ನು ಅನರ್ಹತಾ ನಿವಾರಣೆ ಅಡಿಯೊಳಗೆ ತರಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿ' ಎಂದು ನಮಗೊಂದು ಸೂಚನೆ ಕಳುಹಿಸಿದರು.

(ಮುಂದು)

(921) 17.12.2024 (2.10) ಎಸ್‌ಕೆ-ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ. ಪಾಟೀಲ್ (ಮುಂದು):-**

ಈಗ ಇದಕ್ಕೆ ಮತ್ತೊಂದನ್ನು ಸೇರ್ಪಡೆ ಮಾಡುತ್ತಿದ್ದೀರಿ, ಅದು ಆಗುವುದಿಲ್ಲ. ಅದಕ್ಕಾಗಿ ಆ ವಿಧೇಯಕವನ್ನು withdraw ಮಾಡಿ, ಯಾವ್ಯಾವುದು ಮಾಡಬೇಕೆಂದು ನೀವು ತರಿಸಿ ಎಂದು ಹೇಳಿದ್ದರು. ಅದಕ್ಕಾಗಿ ನಾವು ಅದನ್ನು ನಿಮ್ಮಲ್ಲಿ ತೆಗೆದುಕೊಂಡು ಬಂದೆವು. ನೀವು ಅದನ್ನು ಪಾಸ್ ಮಾಡಿ ಕೊಟ್ಟಿದ್ದೀರಿ. ನಾವು ಅದನ್ನು ಗೌರವಾನ್ವಿತ ರಾಜ್ಯಪಾಲರಿಗೆ ಕಳುಹಿಸಿದ್ದೇವೆ. ನಾವು ಮೊದಲೇ ವಿಧೇಯಕವನ್ನು ಏನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿದ್ದೇವೆಯೋ, ಅದನ್ನು ವಾಪಸ್ಸು ಪಡೆಯುವುದಕ್ಕೆ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ವಾಪಸ್ಸು ಪಡೆದರೆ, ಈಗ ಏನು ನಾವು latest ಆಗಿ ಕಳುಹಿಸಿದ್ದೇವೆಯೋ ಅದಕ್ಕೆ assent ಕೊಡುತ್ತೇವೆ ಎಂದು ಸೂಕ್ಷ್ಮವಾಗಿರುವಂತಹ ಸೂಚನೆಯನ್ನು ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ prevention of disqualification provision ಅನ್ನು ಏನು ಮಾಡಿದ್ದೇವೆ, ಅದಕ್ಕೆ ಏನು ಈ ಒಂದು ತಿದ್ದುಪಡಿ ಮಾಡಿದ್ದೇವೆ. ಅದನ್ನು ವಾಪಸ್ಸು ಪಡೆದುಕೊಳ್ಳುತ್ತೇವೆ. ವಾಪಸ್ಸು ಪಡೆಯುವುದರಿಂದ, ನಮಗೆ ತಾಂತ್ರಿಕವಾಗಿ ಅನುಕೂಲತೆ ಆಗುತ್ತದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದನ್ನು ಮತ್ತೆ ಹೊಸ ರೂಪದಲ್ಲಿ ಏನಾದರೂ ತರುತ್ತಿದ್ದೀರಾ?

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ನ್ಯಾಯ ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಈಗಾಗಲೇ ವಿಧೇಯಕವನ್ನು ಅಂಗೀಕಾರ ಮಾಡಿಕೊಟ್ಟಿದ್ದೀರಾ. ನಾವು ಅದನ್ನು ಕಳುಹಿಸಿದ್ದೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ವಿಧೇಯಕವನ್ನು ವಾಪಸ್ಸು ಪಡೆಯಲು ಅನುಮತಿ ನೀಡುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಹಿಂಪಡೆಯಲು ಸದನದ ಅನುಮೋದನೆ ದೊರೆಯಿತು.**

**ಸಭಾಪತಿಯವರು:-** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ 2 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟು,**
**ಪುನಃ ಅಪರಾಹ್ನ 03-00 ಗಂಟೆಗೆ ಸೇರಲು ನಿಶ್ಚಯಿಸಿತು)**

(922) 1712.2024 3.30 ಪಿಕೆ:ಎಂಡಿ

**(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆ 31 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)(ಮುಜರಾಯಿ ಹೊರತುಪಡಿಸಿ) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)(ಮುಜರಾಯಿ ಹೊರತುಪಡಿಸಿ)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ, ಕರ್ನಾಟಕದಲ್ಲಿ ಕೆಪಿಐಡಿ ಎನ್ನುವ ಆಕ್ಟ್ ಇದೆ. ಅದು 2004ರಲ್ಲಿ ವಿಧಾನ ಮಂಡಲದಿಂದ ಅಂಗೀಕೃತವಾಗಿ ಕಾನೂನಾಗಿತ್ತು. ನಮ್ಮಲ್ಲಿ Pyramid Schemes and Ponzi Schemes ಗಳಿವೆ. ಠೇವಣಿದಾರರಿಗೆ ಅತಿ ಹೆಚ್ಚು ಬಡ್ಡಿ ಕೊಡುತ್ತೇವೆ ಎಂದು ಭರವಸೆ ನೀಡಿ, ಠೇವಣಿಗಳನ್ನು ಸ್ವೀಕರಿಸಿ ಅವರಿಗೆ ಬಡ್ಡಿ ಕೊಡದೇ ಇರುವಂಥದ್ದು ಅಥವಾ ರಾತ್ರೋರಾತ್ರಿ ಓಡಿ ಹೋಗುವಂಥದ್ದು ಆಯಿತು. 2003-04ರಲ್ಲಿ ವಿನಿವಿಂಕ್ ಎನ್ನುವಂತಹ ಸಂಸ್ಥೆ ಇದೇ ರೀತಿ ಮಾಡಿತ್ತು. ಠೇವಣಿದಾರರಿಗೆ ವಂಚನೆ ಮಾಡಿದ್ದರಿಂದ ಆ ಹಿನ್ನೆಲೆಯಲ್ಲಿ ವಿಧಾನ ಮಂಡಲದಲ್ಲಿ ಚರ್ಚೆಯಾಗಿ ಆವತ್ತಿನಿಂದ ಈ ಕಾನೂನು ಜಾರಿಯಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಐಎಂಎ ಪ್ರಕರಣ, ಶ್ರೀ ಗುರುಸಾರ್ವಭೌಮ ಕೋ-ಆಪರೇಟಿವ್ ಬ್ಯಾಂಕ್, ಶ್ರೀ ರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕ್, ಸಂಗೊಳ್ಳಿ ರಾಯಣ್ಣ ಕೋ-ಆಪರೇಟಿವ್ ಬ್ಯಾಂಕ್, ವಸಿಷ್ಠ ಕೋ-ಆಪರೇಟಿವ್ ಬ್ಯಾಂಕ್ ಇವುಗಳಿಂದ ವಂಚನೆ ಪ್ರಕರಣಗಳಾಯಿತು. ಎಲ್ಲವೂ ಕೂಡ ಈ ಆಕ್ಟ್‌ನ ಕೆಳಗಡೆ ಬರುವುದರಿಂದ ಈಗಾಗಲೇ ಆ ಠೇವಣಿದಾರರಿಗೆ ನ್ಯಾಯವನ್ನು ಒದಗಿಸುವ ಕೆಲಸ ನಡೆಯುತ್ತಿದೆ. ಈ ಕಾನೂನು 20 ವರ್ಷಗಳಿಂದ ನಮ್ಮಲ್ಲಿ ಜಾರಿಯಲ್ಲಿದೆ. ಕಾನೂನು ಪ್ರಕ್ರಿಯೆಯನ್ನು ಸ್ವಲ್ಪ ತ್ವರಿತಗೊಳಿಸುವುದಕ್ಕೆ ಕಳೆದ 3-4 ವರ್ಷಗಳ ಅನುಭವದ ಆಧಾರದ ಮೇಲೆ, ಕೆಲವು ಸಣ್ಣ-ಪುಟ್ಟ ತಿದ್ದುಪಡಿಗಳನ್ನು ಈ ತಿದ್ದುಪಡಿ ವಿಧೇಯಕದ ಮುಖಾಂತರ ಪ್ರಸ್ತಾಪಿಸಿ ತಮ್ಮ ಅನುಮೋದನೆ ಕೋರುತ್ತಿದ್ದೇವೆ.

ಮಾನ್ಯ ಸಭಾಪತಿಗಳೆ, ಇದರಲ್ಲಿ ಬಹಳ ಏನೂ ಬದಲಾವಣೆಗಳಿಲ್ಲ. ಕೆಲವು definitions introduce ಮಾಡುತ್ತಿದ್ದೇವೆ, ಕೆಲವು inclusions and exclusions introduce ಮಾಡುತ್ತಿದ್ದೇವೆ. ಉದಾಹರಣೆಗೆ, ಠೇವಣಿದಾರರು ಯಾರು ಎನ್ನುವುದು ಬಂದಾಗ, ಯಾವ ಸಂಸ್ಥೆ ವಂಚನೆ ಮಾಡಿದೆಯೋ ಆ ಸಂಸ್ಥೆಯ ನೌಕರರು ಅದೇ ಸಂಸ್ಥೆಯಲ್ಲಿ ಠೇವಣಿ ಇಟ್ಟಿದ್ದರೆ, ಅವರೂ ಕೂಡ ಠೇವಣಿದಾರರೆಂದು ಪರಿಗಣಿಸಿ ಅವರಿಗೂ ಪರಿಹಾರ ವಿತರಣೆ ಮಾಡುವುದಕ್ಕೆ ಅವಕಾಶ ಇತ್ತು. ಆದರೆ ಈಗ, ಅವರು ಸಂಸ್ಥೆಯ ಉದ್ಯೋಗಿಗಳಾಗಿದ್ದರೆ ಅವರನ್ನು ಠೇವಣಿದಾರರ ವ್ಯಾಖ್ಯಾನದಿಂದ ಹೊರಗೆ ತೆಗೆಯುತ್ತಿದ್ದೇವೆ. ಏಕೆಂದರೆ ಅವರೂ ಸೇರಿ ಇಂತಹ ಹಗರಣ ಮಾಡಿರುತ್ತಾರೆ ಮತ್ತು ಅವರಿಗೆ ಸಂಬಳ ಸಿಗುತ್ತಿರುತ್ತದೆ ಅಥವಾ ಅವರು ದುರ್ಲಾಭ ಮಾಡಿಕೊಳ್ಳುವುದಕ್ಕೋಸ್ಕರ ಠೇವಣಿ ಇಟ್ಟಿರಬಹುದಾಗಿರುತ್ತದೆ. ನಿಜವಾದ ನೊಂದ ಠೇವಣಿದಾರರಿಗೆ ಸಿಗುವಂತಹ ರಕ್ಷಣೆ ಅವರಿಗೆ ಸಿಗಬಾರದೆಂದು ಅವರನ್ನು ಆ ವ್ಯಾಪ್ತಿಯಿಂದ ತೆಗೆಯುತ್ತಿದ್ದೇವೆ. ಎರಡನೆಯದಾಗಿ, ಯಾರ ಮೇಲೆ ಇದರ ಜವಾಬ್ದಾರಿ ಬರುತ್ತದೆ ಎನ್ನುವುದು ಬಂದಾಗ, ಆ ಸಂಸ್ಥೆಯ ಮಾಲೀಕರು ಅಥವಾ ನಿರ್ದೇಶಕರು ಎನ್ನುವಂತಹ ವ್ಯಾಖ್ಯಾನ ಇದೆ. ಅದಕ್ಕೆ ಇನ್ನೊಂದನ್ನು ಸೇರಿಸುತ್ತಿದ್ದೇವೆ. ಇತ್ತೀಚಿನ ದಿನಗಳವರೆಗೆ ಸಂಸ್ಥೆಯಲ್ಲಿ ನಿರ್ದೇಶಕರಾಗಿ ಅಥವಾ ಹಗರಣವಾದಾಗ ಅವರು ನಿರ್ದೇಶಕರಾಗಿದ್ದರೂ, ಪ್ರಕರಣ ದಾಖಲಾಗುವಾಗ ಅವರು ನಿರ್ದೇಶಕರಾಗಿರುವುದಿಲ್ಲ ಎಂದಾದರೂ ಅಂಥವರಿಗೆ ವಿನಾಯಿತಿ ಕೊಡುವುದಕ್ಕೆ ಆಗುವುದಿಲ್ಲ; ಆಗಿರುವ ಹಗರಣದಲ್ಲಿ ಅವರೂ ಕೂಡ ತಪ್ಪಿತಸ್ಥರು, ಆರೋಪಿತರು ಎಂದು ಪರಿಗಣಿಸಬೇಕಾದರೆ, ಅವರು ನಿರ್ಗಮಿತ ನಿರ್ದೇಶಕರಾಗಿರುತ್ತಾರೆ. ಹಗರಣ ಆದಂಥ ಸಂದರ್ಭದಲ್ಲಿ ನಿರ್ದೇಶಕರಾಗಿದ್ದು ಅಥವಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ತದನಂತರ ಅವರು ನಿರ್ಗಮಿಸಿದ್ದರೂ ಅವರನ್ನೂ ಕೂಡ ಆಪಾದಿತರ ಪಟ್ಟಿಯಲ್ಲಿ ಸೇರಿಸುವುದಕ್ಕೆ ಅವಕಾಶ ಮಾಡುತ್ತಿದ್ದೇವೆ. ತಡೆಗಟ್ಟುವ ಕ್ರಮಗಳಿಗಾಗಿ, ಅಂತಹ ಒಂದು ಸಂಸ್ಥೆ ಏನಾದರೂ ಈ ರೀತಿಯ ಒಂದು ಕೆಲಸ ಮಾಡುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಾಗ, ಆ ಕಂಪನಿಯಲ್ಲಿ ಯಾರೂ ಠೇವಣಿ ಇಡಬಾರದು ಎಂದು ಪ್ರಕಟಣೆ ಮಾಡುವಂತಹ ಅಧಿಕಾರವನ್ನು ಸರ್ಕಾರಕ್ಕೆ ಕೊಡುತ್ತಿದ್ದೇವೆ. ಇಂತಹ ಸಂಸ್ಥೆಯಲ್ಲಿ ಯಾರೂ ಠೇವಣಿ ಇಡಬೇಡಿ ಎಂದು ಜಾಹೀರಾತು ನೀಡುವುದಕ್ಕೆ ಮತ್ತು ಅದನ್ನು ಮಾಧ್ಯಮದವರು ಪ್ರಕಟಣೆ ಮಾಡಬೇಕೆಂದು ಒಂದು inclusion ಮಾಡುತ್ತಿದ್ದೇವೆ. ಇನ್ನೂ ಕೆಲವು ಸಂದರ್ಭದಲ್ಲಿ ಇ.ಡಿ.ಯವರು ಬಂದು property attach ಮಾಡುತ್ತಾರೆ. ನಾವು ಬೇಗ dispose ಮಾಡಿದರೆ ಆ ಠೇವಣಿದಾರರಿಗೆ ಬೇಗ ಹಣವನ್ನು pro rata basis ನಲ್ಲಿ ವಾಪಸ್ಸು ಕೊಡಬಹುದು. ಆದರೆ ಅನಗತ್ಯವಾಗಿ ಕೆಲವು litigation ಗಳಲ್ಲಿ ಸಿಕ್ಕಿ ಹಾಕಿಕೊಂಡು ಬೇಗ ವಿಲೇ ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಕೆಲವು ಸ್ಪಷ್ಟೀಕರಣಗಳನ್ನು ಇದರಲ್ಲಿ ಸೇರಿಸಿದ್ದೇವೆ. ಈ ರೀತಿ ಸಣ್ಣ ಪುಟ್ಟ ತಿದ್ದುಪಡಿಗಳನ್ನು ಕೆಪಿಐಡಿ ಆಕ್ಟ್‌ಗೆ ತೆಗೆದುಕೊಂಡು ಬಂದಿದ್ದೇವೆ. ಇದರಲ್ಲಿ ಸ್ವಲ್ಪ ಕೆಲಸ ಆಗುತ್ತಿದೆ. ಇನ್ನೂ ಸ್ವಲ್ಪ ಇದಕ್ಕೆ ಇಂಬು ಕೊಡಬೇಕು, ವೇಗ ಕೊಡಬೇಕು ಎನ್ನುವ ಉದ್ದೇಶದಿಂದ ತಿದ್ದುಪಡಿ ತಂದಿದ್ದೇವೆ. ಕಳೆದ ಒಂದು ವರ್ಷಗಳಿಂದ ಇದರ ಬಗ್ಗೆ ಅಧಿಕಾರಿಗಳು ಸಾಕಷ್ಟು ಪ್ರಯತ್ನ ಮಾಡಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಈ ವಿಧೇಯಕವನ್ನು ಅಂಗೀಕರಿಸಿ ಕೊಡಬೇಕೆಂದು ತಮ್ಮ ಮುಖಾಂತರ ಕೋರುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ 2024 ಅನ್ನು ತಂದಿದ್ದಾರೆ. ಈ ಕಾನೂನು ಮೊದಲೂ ಕೂಡ ಇತ್ತು. ಈಗ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ನಾವು ಎಷ್ಟೇ ತಿದ್ದುಪಡಿ ಮಾಡಿದರೂ ಕೂಡ, ನಾವು ಚಾಪೆ ಕೆಳಗೆ ನುಸುಳಿದರೆ ಕಂಪನಿಗಳವರು ರಂಗೋಲಿ ಕೆಳಗಡೆ ನುಸುಳುವಂಥದ್ದನ್ನು ಮಾಡುತ್ತಾರೆ.

(ಮುಂದು)

(923) 17-12-2024 3.40 ಡಿಎಸ್-ಎಕೆ

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):-**

ಉದಾಹರಣೆಗೆ ಹೇಳುವುದಾದರೆ ಗುರುರಾಘವೇಂದ್ರ ಬ್ಯಾಂಕ್, ಹೆಸರು ಬಹಳ ಚೆನ್ನಾಗಿ ಇಟ್ಟಿದ್ದಾರೆ. ಅದರ ಪರಿಸ್ಥಿತಿ ಏನಾಯಿತು? 10,000 ಕೋಟಿ ರೂಪಾಯಿಗಳಗಿಂತ ಹೆಚ್ಚಾಗಿ ವಂಚನೆಯಾಯಿತು. ಅದನ್ನು ಯಾರು ತಡೆಯುವುದಕ್ಕಾಗಲಿಲ್ಲ. ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸಿದ್ದಾರೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಹತ್ತಾರು ಬಾರಿ ಈ ವಿಷಯವನ್ನು ಚರ್ಚೆ ಮಾಡಿದ್ದಾರೆ. ಮಾನ್ಯ ಸಹಕಾರ ಸಚಿವರು ಬಹಳಷ್ಟು ಸಲ ಉತ್ತರ ಕೊಟ್ಟರು. ಇಂತಹ ಬ್ಯಾಂಕ್‌ಗಳಲ್ಲಿ ಹೆಚ್ಚು ಬಡ್ಡಿಗೆ ಆಕರ್ಷಿತರಾಗಿ ಯಾರು ಠೇವಣಿಯನ್ನು ಇಡುತ್ತಾರೆಂದರೆ ನಿವೃತ್ತಿಯಾದಂತಹ ಶಿಕ್ಷಕರುಗಳು, ಅದರಲ್ಲೂ ಕೆಳಮಟ್ಟದಲ್ಲಿ ಕೆಲಸ ಮಾಡಿದ್ದಂತಹ ನೌಕರ ವರ್ಗದವರು ಠೇವಣಿ ಇಡುತ್ತಾರೆ. ನಾವೆಲ್ಲಾ ಸಹಕಾರ ಬ್ಯಾಂಕ್‌ಗಳಲ್ಲಿ ಕೆಲಸ ಮಾಡುತ್ತಿದ್ದಂತಹ ಸಮಯದಲ್ಲಿ ಬಂತು. ವೈದ್ಯನಾಥನ್ ವರದಿಯ ಪ್ರಕಾರ ಎಲ್ಲಾ ಪೂರ್ಣ ಸ್ವಾಯತ್ತತೆಯನ್ನು ಕೊಟ್ಟಂತಹ ಸಂದರ್ಭದಲ್ಲಿ ಎಲ್ಲರಿಗೂ ಕೂಡ including Chairman and Board of Directors, ಜವಾಬ್ದಾರಿಯನ್ನು ಕೊಡಬೇಕಾಗುತ್ತದೆ. If anything goes wrong ಅಥವಾ ಯಾವುದಾದರು untold incident ಆದಾಗ ನಮ್ಮ ಆಸ್ತಿಗಳನ್ನು ರಿಕವರಿ ಮಾಡುವಂತಹ ಕಾನೂನನ್ನು ತಂದರು. It is still in force. ಆದರೂ ಕೂಡ ಪರಿಣಾಮಕಾರಿಯಾಗಿ ಆಗಿಲ್ಲ. ಬಹಳಷ್ಟು ಸೊಸೈಟಿಗಳು ಮುಳುಗಿವೆ. ಈಗ ವಿಶ್ವೇಶ್ವರಯ್ಯ ಸಹಕಾರಿ ಬ್ಯಾಂಕ್, ತುಮಕೂರಿನಲ್ಲಿ ಚಿಟ್ ಫಂಡ್, ಇಂಥದೆಲ್ಲಾ ಆಗಿದೆ. IMA case ನಲ್ಲಿ ಏನಾಗಿದೆ ಎಂಬುದನ್ನು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ ಅದರಲ್ಲಿ ಬಹಳ ಜನ escape ಆಗುತ್ತಾರೆ. ನಿರ್ದೇಶಕರುಗಳು, ಮಾಜಿ ನಿರ್ದೇಶಕರುಗಳು ಕೂಡ ಸಕಾರಣ ಕೊಡಬೇಕು. ಇಂತಹ ಕಾರಣದಿಂದ ನಾನು ಇಲ್ಲಿ ನಿವೃತ್ತಿಯನ್ನು ಹೊಂದುತ್ತಿದ್ದೇನೆ, ನನಗೂ ಈ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ ಎನ್ನುವುದನ್ನು ಕೊಟ್ಟು ಅವನು ಅನುಮತಿಯನ್ನು ಪಡೆಯಬೇಕು. ಏಕೆಂದರೆ, ಈ ಬ್ಯಾಂಕ್‌ಗಳು ಏಕಾಏಕಿ ಹುಟ್ಟುವುದಿಲ್ಲ. ಇದು ನಮ್ಮ ಸರ್ಕಾರದ ಸಹಕಾರ ಇಲಾಖೆಯ ಲೈಸೆನ್ಸ್ ಪ್ರಕಾರ ಬರುತ್ತದೆ, ಆರ್.ಬಿ.ಐ. ಬ್ಯಾಂಕ್ ಮಾರ್ಗಸೂಚಿಯ ಪ್ರಕಾರ ಒಳಪಟ್ಟು ಬರುತ್ತದೆ. ಠೇವಣಿ ಇಡುವಂತಹ ಸಂದರ್ಭದಲ್ಲಿ ನೂರಕ್ಕೆ ನೂರು ಸಮಾಜದ ಸುಧಾರಣೆಗೆ ಮತ್ತು ಗ್ರಾಹಕರ ಹಿತ ಕಾಪಾಡುತ್ತದೆ ಎನ್ನುವ ದೂರದೃಷ್ಟಿಯನ್ನಿಟ್ಟುಕೊಂಡು ನಮ್ಮ ಅಧಿಕಾರಿಗಳು ಲೈಸೆನ್ಸ್ ಅನ್ನು ಕೊಡಬೇಕಾಗುತ್ತದೆ. ಸುಮ್ಮನೆ ನಾಯಿ ಕೊಡೆ ಹಾಗೆ ಎಲ್ಲರಿಗೂ ಲೈಸೆನ್ಸ್ ಕೊಟ್ಟುಬಿಟ್ಟು, ನಾಳೆ ಬೆಳಗ್ಗೆ ಇವರೆಲ್ಲಾ ಏಕಾಏಕಿ ಬಡ್ಡಿ ಜಾಸ್ತಿ ಎನ್ನುವ ಆಸೆಗೋಸ್ಕರ ಠೇವಣಿಯನ್ನು ಇಡುತ್ತಾರೆ. ಅದಕ್ಕೊಂದು

ಲಿಮಿಟ್ ಮಾಡಬೇಕಾಗುತ್ತದೆ. ಈ ಸಹಕಾರ ಬ್ಯಾಂಕ್‌ಗಳಲ್ಲಿ ಶೇಕಡ 8-9 ರಷ್ಟು ಬಡ್ಡಿಗಾಗಿ ಠೇವಣಿಯನ್ನು ಇಡುತ್ತೇವೆ. ಶೇಕಡ 10 ರಷ್ಟು ಬಡ್ಡಿಗಾಗಿ ಮತ್ತೊಂದು ಬ್ಯಾಂಕ್‌ನಲ್ಲಿ ಠೇವಣಿ ಇಡುತ್ತೇವೆ. ಹಾಗಾಗಿ ಇವರಿಗೂ ಕೂಡ ಇಷ್ಟು ಬಡ್ಡಿಗಿಂತ ಜಾಸ್ತಿ ಬಡ್ಡಿ ಕೊಡುವ ಹಾಗಿಲ್ಲ ಎಂದು ಮಿತಿಯನ್ನು ಹಾಕಬೇಕಾಗುತ್ತದೆ. ಆ ಬಡ್ಡಿಯ ಆಸೆಗಾಗಿ ಠೇವಣಿ ಇಟ್ಟು ನಾಳೆ ಬೆಳಗ್ಗೆ principal amount ಅನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಇರುವಾಗ ಆ ಬಡ್ಡಿ it should not exceed the rate of interest offered by any other co-operative banks ಅಥವಾ ಸರ್ಕಾರಕ್ಕೆ ಸಂಬಂಧಪಟ್ಟಂಥ ಸಂಸ್ಥೆಗಳಗಿಂತ ಹೆಚ್ಚು ಇಡಬಾರದು ಎನ್ನುವ ಷರತ್ತನ್ನು ಹಾಕಿದರೆ ತಾನಾಗಿಯೇ ಠೇವಣಿದಾರರು ಆಕರ್ಷಿತರಾಗುವುದಿಲ್ಲ. ಇಲ್ಲದಿದ್ದರೆ ಎರಡು ಪರ್ಸೆಂಟ್ ಬಡ್ಡಿ ಜಾಸ್ತಿ ಕೊಡುತ್ತಾರೆಂದು ಠೇವಣಿಯನ್ನು ಇಡುತ್ತಾರೆ. ಈಗ ಚಕ್ರಬಡ್ಡಿ ಎರಡು ಪರ್ಸೆಂಟ್, ಮೂರು ಪರ್ಸೆಂಟ್ ಎಂದು ಬೇರೆಯವರೆಲ್ಲಾ ಮಾಡುತ್ತಾರೆ. ಖಾಸಗಿ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಳ್ಳುತ್ತಾರೆ. ಅಂತಹ ಸಂಸ್ಥೆಗಳಿಗೆ ಕಡಿವಾಣ ಹಾಕಬೇಕಾಗುತ್ತದೆ. ಬಡ್ಡಿಯ ವಿಚಾರದಲ್ಲಿ ಮಾಡಿದರೆ ಖಂಡಿತ ಠೇವಣಿದಾರರು ಆಕರ್ಷಿತರಾಗುವುದಿಲ್ಲ. ತಾನಾಗಿಯೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಥವಾ ಸಹಕಾರ ಬ್ಯಾಂಕ್‌ಗಳಲ್ಲಿ, ಡಿಸಿಸಿ ಬ್ಯಾಂಕ್‌ಗಳಲ್ಲಿ ಠೇವಣಿಯನ್ನು ಇಡುತ್ತಾರೆ. ಅಲ್ಲಿ ಠೇವಣಿಯನ್ನು ಸೇಫ್ಟಿ ಮಾಡಿದ ಹಾಗೆ ಆಗುತ್ತದೆ. ಅದರ ಬಗ್ಗೆ ಆಲೋಚನೆ ಮಾಡಬೇಕು. ಇದು ಒಳ್ಳೆಯ ವಿಧೇಯಕವಾಗಿದೆ. ಆದರೆ ಕೆಲವು ವಿಚಾರಗಳಲ್ಲಿ KPID Act ಒಳಗೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವಂಥದ್ದು, Board of Directors ಗಳನ್ನು involve ಮಾಡುವಂಥದ್ದು. ನೌಕರವಾರು, ನಾನು ಈಗ ನೌಕರಿ ಮಾಡುತ್ತಿದ್ದೇನೆ, ನಾನು ಬೇರೆಯವರ ಮನೆಗೆ ಹೋಗಿ ಅವರನ್ನು ಆಕರ್ಷಣೆ ಮಾಡಿ ಅವರೆಲ್ಲಾ ಠೇವಣಿಯನ್ನು ನನ್ನ ಮುಖ ನೋಡಿ ಬ್ಯಾಂಕ್‌ನಲ್ಲಿ ತಂದು ಇಡುತ್ತಾರೆ. ಅಂಥವರನ್ನು ಜವಾಬ್ದಾರಿಯಾಗಿ ಮಾಡಬೇಕಾಗುತ್ತದೆ. ಅವರನ್ನು ಸಾಧಾರಣವಾಗಿ ಬಿಡುವ ಹಾಗಿಲ್ಲ. ಹಾಗಾಗಿ ಅಂತಹ ಷರತ್ತುಗಳನ್ನು impose ಮಾಡಿದರೆ ಒಳ್ಳೆಯದು. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಈ ವಿಧೇಯಕದಿಂದ ಸಮಾಜಕ್ಕೆ ಒಳ್ಳೆಯ ಕೆಲಸ ಆಗಲಿ ಎಂದು ಹೇಳಿ ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕದ ಬಗ್ಗೆ ನಾನು ಮಾನ್ಯ ಸಚಿವರಿಗೆ 2-3 ಸಲಹೆಗಳನ್ನು ಕೊಡುತ್ತಿದ್ದೇನೆ. ಮಾನ್ಯ ಸಚಿವರು ಮಾತನಾಡುತ್ತಾ ಹೇಳಿದರು, ಈ ರೀತಿಯಾದರೆ ಯಾರು ಅಲ್ಲಿ ಸಿಬ್ಬಂದಿಯಾಗಿರುತ್ತಾರೆ, ಅವರನ್ನು ಠೇವಣಿದಾರರಿಂದ ನಾವು ತೆಗೆದುಬಿಡುತ್ತೇವೆ, ಅವರಿಗೆ ಕ್ಲೇಮ್, ಪರಿಹಾರ ಕೊಡುವುದಿಲ್ಲ ಎಂದು ಹೇಳಿದರು. ಆ ಕೃತ್ಯದಲ್ಲಿ, ಅಕ್ರಮದಲ್ಲಿ ಅವರು ಭಾಗಿಯಾಗಿರುತ್ತಾರೆ ಎಂಬುದು ಅವರ ಉದ್ದೇಶ ಸರಿಯಿರಬಹುದು. ಆದರೆ ಯಾರೋ ಒಂದಿಷ್ಟು ಜನ ಅದರಲ್ಲಿ ಭಾಗಿಯಾಗಿರುತ್ತಾರೆ. ಈ ರೀತಿ ಅನೇಕ ಬ್ಯಾಂಕ್‌ಗಳಲ್ಲಿ ನಿವೃತ್ತಿಯಾದ ಬ್ಯಾಂಕ್ ಉದ್ಯೋಗಿಗಳು ಕೆಲಸ ಮಾಡುತ್ತಿರುತ್ತಾರೆ. ಆ ನಿವೃತ್ತಿಯಾದ ಬ್ಯಾಂಕ್ ಉದ್ಯೋಗಿಗಳು ಮೇಲಿನ ಮಟ್ಟದಲ್ಲಿ ನಿರ್ದೇಶಕರ ಮಟ್ಟದಲ್ಲಿ, ಎಂ.ಡಿ. ಮಟ್ಟದಲ್ಲೋ ಅಥವಾ ತೀರ್ಮಾನ ಮಾಡುವ ಮಟ್ಟದಲ್ಲಿ decision making ನಲ್ಲಿ ಅವರದ್ದೇನು ಪಾತ್ರ ಇರುವುದಿಲ್ಲ. ಅವರು ಸಂಬಳಕ್ಕೋಸ್ಕರ ಕೆಲಸ ಮಾಡುತ್ತಿರುತ್ತಾರೆ.

ಜೊತೆಯಲ್ಲಿ ನಿವೃತ್ತಿಯಾದ ಹಣವನ್ನು ಅವರು ಅದೇ ಬ್ಯಾಂಕ್‌ನಲ್ಲಿ ಇಟ್ಟಿರುತ್ತಾರೆ. ಹಾಗಾಗಿ ಅಲ್ಲಿ ಉದ್ಯೋಗ ಮಾಡುತ್ತಿದ್ದಾರೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಏನೇ ಬೆನಿಫಿಟ್ ಅಥವಾ ಪರಿಹಾರ ಬಂದರೆ ಅದರಿಂದ ಅವರನ್ನು ಹೊರಗಡೆ ಇಡಬೇಕೆನ್ನುವುದು ಸರಿಯಲ್ಲ. ಏಕೆಂದರೆ, ಅಮಾಯಕರು ಏನೂ ತಪ್ಪು ಮಾಡದಿರುವವರು ಕೂಡ ಅದರಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟರೆ ಅವರಿಗೆ ಹಣವೇ ಬರುವುದಿಲ್ಲ. ಹಾಗಾಗಿ ಎಲ್ಲರನ್ನು ಒಂದೇ ದೃಷ್ಟಿಯಿಂದ ನೋಡಬಾರದು, ಆ ರೀತಿ ನೋಡಿದರೆ ಒಳ್ಳೆಯವರಿಗೆ ತೊಂದರೆಯಾಗುತ್ತದೆ. ಯಾರೋ ಒಂದಿಷ್ಟು ಜನ ಅಲ್ಲಿ ಭಾಗಿಯಾಗಿರುವಂಥವರ ಮೇಲೆ ಕ್ರಮ ತೆಗೆದುಕೊಳ್ಳಲಿ. ಅದರ ಬಗ್ಗೆ ಆಕ್ಷೇಪಣೆ ಇಲ್ಲ. ಆದರೆ, ಎಲ್ಲಾ ಉದ್ಯೋಗಿಗಳು ಕೂಡ ಠೇವಣಿದಾರರ ಹೆಸರಿನಿಂದ ನಾವು ಅವರನ್ನು ಹೊರಗಿಡುತ್ತೇವೆ ಎನ್ನುವ ಕ್ರಮ ಸರಿಯಿಲ್ಲ ಎನ್ನುವುದು ನನ್ನ ಭಾವನೆ. ಇದನ್ನು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದೇನೆ. ಇನ್ನು ಎರಡನೇ ವಿಚಾರವೇನೆಂದರೆ, ಅನೇಕ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ವಿಧೇಯಕದಲ್ಲಿ ತಂದಿದ್ದಾರೆ. ಇದರ ಜೊತೆಗೆ ಅನೇಕ ಸಲ ಏನಾಗುತ್ತದೆಂದರೆ, ಈ ರೀತಿಯ ಸಣ್ಣ ಸಣ್ಣ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವಂಥವರಿಗೆ ಎರಡು ರೀತಿಯದ್ದು ಇದೆ, ಕಡಿಮೆ ಹಣ ಠೇವಣಿ ಇಡುವವರಿಗೆ ಹೆಚ್ಚಿನ ಬಡ್ಡಿ ನೀಡುತ್ತೇವೆಂದು ಆಕರ್ಷಣೆ ಇದ್ದರೆ, ಇನ್ನು ಕೆಲವರಿಗೆ ಯಾವುದೋ ಬೇರೆ ಬೇರೆ ರೂಪದಲ್ಲಿರುವಂತಹ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಟ್ಟರೆ ಅಥವಾ ಖಾಸಗಿ ಬ್ಯಾಂಕ್‌ನಲ್ಲಿಟ್ಟರೆ ಅದು ಹೊರಗಡೆ ಡಿಕ್ಲೇರ್ ಆಗುತ್ತದೆ, ಡಿಕ್ಲೇರ್ ಆದರೆ ನಾಳೆ ಅದು ಎಲ್ಲಾ ಇಲಾಖೆಗಳಿಗೆ ಹೋಗುತ್ತದೆ. ರಿಸರ್ವ್ ಬ್ಯಾಂಕ್‌ಗೆ ಹೋಗುತ್ತದೆ. ಇವೆಲ್ಲಾ ನಾವು ಹೇಗಾದರೂ ಮಾಡಿ ಮರೆಮಾಚಬೇಕೆಂದು ಈ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಾರೆ. ಅಂಥವರನ್ನು ಪತ್ತೆ ಮಾಡಿ ಡಿಕ್ಲೇರ್ ಮಾಡುವಂತಹ ಕಾನೂನನ್ನು ತರಬೇಕು. ಏಕೆಂದರೆ, ಸಣ್ಣ ಬ್ಯಾಂಕ್ ಇರುವಂಥದ್ದು. ಆದರೆ ಬಹಳಷ್ಟು ಠೇವಣಿ ಮೊತ್ತ ಇರುತ್ತದೆ. ಠೇವಣಿಗಳನ್ನು ಇಟ್ಟಿರುವವರು ಯಾರು ಎಂಬುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಅನೇಕ ಸಲ ಏನಾಗುತ್ತದೆಂದರೆ, ಈಗಾಗಲೇ 2-3 ಸಂಸ್ಥೆಗಳನ್ನು ಉದಾಹರಣೆ ಕೊಡಲಾಗಿದೆ. ಕೆಲವು ಸಣ್ಣ ಸಂಸ್ಥೆಗಳಲ್ಲಿ ಯಾರು ಸಾಲವನ್ನು ಪಡೆಯುತ್ತಾರೆ, ಅವರಿಗೆ ಒಂದು ರೀತಿಯ ಶೀಲ್ಡ್ ಕೊಡುವಂತಹ ಕೆಲಸವನ್ನು ಅವರ ಸಂಸ್ಥೆಯೊಳಗೆ ಕೆಲವು ಮಾರ್ಗಸೂಚಿಗಳನ್ನು ತಂದಿರುತ್ತಾರೆ. ಉದಾಹರಣೆಗೆ, ಅವರ ಹೆಸರುಗಳು ಸಿಬಿಲ್‌ಗೆ ಹೋಗುವುದಿಲ್ಲ, ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಪ್ರೊಸೀಜರ್‌ಗಳಿವೆ. ಅದರಲ್ಲಿ ಪಬ್ಲಿಷ್ ಆಗುವುದಿಲ್ಲ. ಆ ರೀತಿಯ ಅನೇಕ ಬೆನಿಫಿಟ್‌ಗಳನ್ನು ಅವರಿಗೆ ಕೊಡುತ್ತಿರುತ್ತಾರೆ. ಹಾಗಾಗಿ ಎರಡು ರೀತಿಯಲ್ಲಿ, ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವುದರ ಜೊತೆಗೆ ಇವರ ಬೇರೆ ಬೇರೆ ಚಟುವಟಿಕೆಗಳನ್ನು ಯಾವ ರೀತಿ ನಾವು ನಿಯಂತ್ರಣ ಮಾಡಬೇಕು, curtail ಮಾಡಬೇಕು, ಅದರ ಮೂಲಕ ಯಾವ ಜನಸಾಮಾನ್ಯರು ಇಂಥವರನ್ನು ನಂಬಿ ಹೋಗಿ ಅಲ್ಲಿ ಹಣ ಇಡುವಂಥವರಿಗೆ ಯಾವುದೇ ರೀತಿಯ ತೊಂದರೆಯಾಗಬಾರದು. ಇಟ್ಟ ಹಣ ಒಪ್ಪಿರುವಂತಹ ಬಡ್ಡಿಯ ಜೊತೆಗೆ ಅವರಿಗೆ ವಾಪಸ್ ಸಿಗುವಂತಹ ವ್ಯವಸ್ಥೆ ಆಗಬೇಕು. ಇದು ಆಗುವುದರ ಜೊತೆಗೆ the other side of the story ಅನ್ನು ಒಂದು ನಿಮಿಷದಲ್ಲಿ ಮಾತನಾಡುತ್ತೇನೆ. ನಾನು ಈಗ ಠೇವಣಿದಾರರ ಬಗ್ಗೆ ಮಾತನಾಡುತ್ತಿದ್ದೇನೆ. ನಾವು banker's interest ಮತ್ತು lender's interest ಅನ್ನು safeguard ಮಾಡುವಂತಹ ಕೆಲಸ ಮಾಡಬೇಕು. ಅನೇಕ ಸಲ ಯಾರು ಸಾಲ ಪಡೆದಿರುತ್ತಾರೆ ಅವರು ಅನೇಕ ಫೇಕ್

ಡಾಕ್ಯುಮೆಂಟ್‌ಗಳನ್ನು ಕೊಟ್ಟು ಸಾಲವನ್ನು ಪಡೆದುಕೊಂಡುಬಿಡುತ್ತಾರೆ. ಬೆಂಗಳೂರಿನಲ್ಲಿ ಒಂದೇ ಆಸ್ತಿಯ ಮೇಲೆ 38 ಬ್ಯಾಂಕ್‌ಗಳಲ್ಲಿ ಒಬ್ಬ ಭೂಪ ಸಾಲ ತೆಗೆದುಕೊಂಡಿದ್ದ ಎನ್ನುವುದು ನಾನು ಮಾಧ್ಯಮಗಳಲ್ಲಿ ಓದಿದ್ದೇನೆ. ಸಾಲ ಕೊಡುವವರಿಗೂ ಸಮಸ್ಯೆ, ಸಾಲ ಪಡೆಯುವವನಿಗೂ ಸಮಸ್ಯೆ. ಈ ರೀತಿ ನಾವು ಕೇವಲ lending ಮಾಡುವಂಥವರನ್ನು ಮಾತ್ರ ಕ್ರಿಮಿನಲ್ ರೀತಿ ನೋಡದೆ ಅಥವಾ ಸಾಲ ಪಡೆಯುವವನಷ್ಟೇ ಕ್ರಿಮಿನಲ್ ರೀತಿ ನೋಡದೆ ಇದಕ್ಕೆ ಸೂಕ್ತವಾದ ರೀತಿಯಲ್ಲಿ ಠೇವಣಿದಾರರ ಭದ್ರತೆ ಹಿತಾಸಕ್ತಿಯನ್ನು ನೋಡಬೇಕು, ಸಾಲ ಕೊಡುವವರ ಹಿತಾಸಕ್ತಿಯನ್ನು ಕೂಡ ಇದರಲ್ಲಿ ನೋಡುವಂತಹ ಕಾನೂನುಗಳನ್ನು ತರಬೇಕು. ಅದಕ್ಕೇನು ಈಗ ಸರ್ಕಾರದ ಕಡೆಯಿಂದ ಚಾಲನೆಯನ್ನು ಕೊಟ್ಟಿದ್ದಾರೆ ಅದು ಸ್ವಾಗತಾರ್ಹ. ಏಕೆಂದರೆ, ಅಮಾಯಕರು ಸಾವಿರಾರು ಕೋಟಿ ಹಣವನ್ನು ಇವತ್ತು ಯಾವ್ಯಾವುದೋ ಸಂಸ್ಥೆಗಳಲ್ಲಿಟ್ಟು ತಮ್ಮ ಇಡೀ ಜೀವಮಾನದ ದುಡಿಮೆಯನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಆಗಿದೆ. ಹಾಗಾಗಿ ನಾನು ವಿನಂತಿ ಮಾಡುತ್ತೇನೆ, ಸಾಧ್ಯವಾದರೆ ಇದರ ಬಗ್ಗೆ ಇನ್ನು ಚರ್ಚೆಗಳನ್ನು ಮಾಡಿ ರೂಲ್ಸ್ ಫಾರ್ಮೇಷನ್ ಮಾಡುವಂತಹ ಸಂದರ್ಭದಲ್ಲಿ ಇನ್ನು ಒಂದಿಷ್ಟು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಗುಬ್ಬಿ ಮೇಲೆ ಬ್ರಾಹ್ಮಾಸ್ತ್ರ ಪ್ರಯೋಗಿಸುವ ಕೆಲಸ ಆಗಬಾರದು.

(ಮುಂದು)

(924) 17/12/2024 3:50 ಎಸ್‌ಪಿಆರ್/ಎಕೆ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):-**

ಯಾರು ಮುಖ್ಯ ವ್ಯಕ್ತಿ ಅಥವಾ ಆಡಳಿತ ಮಂಡಳಿಯವರು ಇದ್ದಾರೆಯೋ, ಇವರುಗಳು ಉದ್ದೇಶಪೂರ್ವಕವಾಗಿ ಮೋಸ ಮಾಡುವ ಉದ್ದೇಶ ಕಂಡು ಬಂದಲ್ಲಿ, ನಿರ್ದಾಕ್ಷಿಣ್ಯವಾಗಿ ಅವರ ವಿರುದ್ಧ ಕ್ರಮಗಳನ್ನು ತೆಗೆದುಕೊಂಡು ಅವರುಗಳನ್ನು ಬಂಧಿಸುವ ಕಾನೂನನ್ನು ತಂದರೆ, ಖಂಡಿತವಾಗಿಯೂ ಸಹ ನಮ್ಮ ರಾಜ್ಯದಲ್ಲಿರುವ ಪ್ರತಿಯೊಬ್ಬ ಠೇವಣಿದಾರರೂ ಸಹ ಸರ್ಕಾರದ ನಿರ್ಣಯಗಳನ್ನು ಖುಷಿಯಿಂದ ಸ್ವಾಗತಿಸುತ್ತಾರೆ. ಇಂತಹ ಕ್ರಮಗಳಾಗಬೇಕು ಎನ್ನುವ ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಚಿವರು ಪ್ರಸ್ತಾಪಿಸಿರುವ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ಸ್ವಾಗತಿಸುತ್ತೇನೆ. ನನಗಾಗಿರುವ ಅನುಭವವನ್ನು ಸಚಿವರಿಗೆ ಹೇಳಬಯಸುತ್ತೇನೆ. ನಾನೂ ಸಹ ಸಣ್ಣ ಬ್ಯಾಂಕ್‌ನ್ನು ನಡೆಸುತ್ತಿದ್ದು, ಬಡವರಿಗೆ ಸಾಲ ನೀಡುತ್ತಿದ್ದೇನೆ. ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಚರಣ್ ಸಹಕಾರಿ ಬ್ಯಾಂಕ್ ಇವುಗಳು ನನ್ನ ಬಸವನಗುಡಿ ವ್ಯಾಪ್ತಿಗೆ ಬರುತ್ತದೆ. ಈ ರೀತಿಯ ಅನೇಕ ಬ್ಯಾಂಕುಗಳು ಬಸವನಗುಡಿಯ ವ್ಯಾಪ್ತಿಯಲ್ಲಿವೆ. ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಹಾಗೂ ನಾನು ಇಬ್ಬರೂ ಸೇರಿ ಹೋರಾಟವನ್ನು ಮಾಡಿದ್ದೇವೆ. ಸದರಿಯವರ ಅಧಿಕಾರಾವಧಿಯು ಪ್ರಸ್ತುತ ಪೂರ್ಣಗೊಂಡಿದೆ. ಈ ಹಿಂದಿನ ಭಾರತೀಯ ಜನತಾ ಪಕ್ಷದ ಸರ್ಕಾರದ ಅವಧಿಯಲ್ಲಿ ಈ ಬ್ಯಾಂಕಿನ ಅವ್ಯವಹಾರ ಕುರಿತಾದ ಪ್ರಕರಣಗಳನ್ನು ಸಿ.ಬಿ.ಐ.

ಸಂಸ್ಥೆಗೆ ತನಿಖೆಗೆ ವಹಿಸಲೇಬೇಕೆಂದು ಹೋರಾಟಗಳನ್ನು ಮಾಡಿದ್ದೆವು. ಬಹುಶಃ ಅಂದಿನ ಸಚಿವರು ಇದನ್ನು ಸಿ.ಬಿ.ಐ. ಸಂಸ್ಥೆಗೆ ತನಿಖೆಗೆ ವಹಿಸುವುದಕ್ಕೆ ಬಹಳ ವಿಳಂಬ ಮಾಡಿದರು. ಪ್ರಸ್ತುತ ಅಧಿಕಾರಕ್ಕೆ ಬಂದ ಸರ್ಕಾರವು ಈ ಪ್ರಕರಣದ ತನಿಖೆಯನ್ನು ಸಿ.ಬಿ.ಐ. ಸಂಸ್ಥೆಗೆ ವಹಿಸಿದೆ. ಇದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇಂತಹ ಬ್ಯಾಂಕುಗಳಲ್ಲಿ ಠೇವಣಿ ಇಡುವವರು ಯಾರೆಂದರೆ, ಒಂದಿಷ್ಟು ಮಹಿಳೆಯರು ಸಂಸಾರ ನಡೆಸುವಾಗ, ಮನೆಯಲ್ಲಿ ಅಕ್ಕಿ-ಬೇಳೆಗಳಲ್ಲಿ ಒಂದಿಷ್ಟು ಹಣ ಉಳಿತಾಯ ಮಾಡಿ ಅದನ್ನು ಸಣ್ಣ ಪುಟ್ಟ ಠೇವಣಿಗಳು ಮೂಲಕ ಬ್ಯಾಂಕ್‌ಗಳಲ್ಲಿ ಇಡುತ್ತಾರೆ. ಹಿರಿಯ ನಾಗರಿಕರು ಅಂದರೆ 60 ವರ್ಷಗಳಾದವರು ತಮ್ಮ ವೃತ್ತಿ ಜೀವನದಲ್ಲಿ ಮಾಡಿದ ಉಳಿತಾಯವನ್ನು ತಂದು ಇಂತಹ ಬ್ಯಾಂಕ್‌ಗಳಲ್ಲಿ ಠೇವಣಿ ಇಡುತ್ತಾರೆ. ಮುಪ್ಪಿನ ಕಾಲದಲ್ಲಿ ಒಂದಿಷ್ಟು ಹಣ ಬರುತ್ತದೆ; ಅದು ಜೀವನೋಪಾಯಕ್ಕೆ ಆಸರೆಯಾಗುತ್ತದೆ; ತಮ್ಮ ಮಕ್ಕಳಿಗೆ ಒಂದಿಷ್ಟು ಹಣವನ್ನು ನೀಡಬೇಕು ಎನ್ನುವ ಬಹಳಷ್ಟು ಯೋಚನೆಗಳನ್ನು ಮಾಡಿ ಕಳಕಳಿಯಿಂದ ಇಂತಹ ಬ್ಯಾಂಕುಗಳಲ್ಲಿ ಠೇವಣಿ ಇಡುತ್ತಾರೆ. ದೂರದರ್ಶನ ಮಾಧ್ಯಮದಲ್ಲಿ ಬಿತ್ತರಗೊಳ್ಳುವ ಬ್ಯಾಂಕುಗಳು ನೀಡುವ ಜಾಹಿರಾತುಗಳನ್ನು ನೋಡಿ, ಆಕರ್ಷಿತರಾಗುತ್ತಾರೆ. ಸದರಿ ಜಾಹಿರಾತುಗಳಲ್ಲಿ ಠೇವಣಿಯ ಮೇಲೆ ಶೇಕಡಾ 10 – 12 ರಷ್ಟು ಬಡ್ಡಿಯನ್ನು ನೀಡಲಾಗುತ್ತದೆ ಎಂದು ತಿಳಿಸಲಾಗಿರುತ್ತದೆ. ಇವುಗಳನ್ನು ನೋಡಿ, ಆಕರ್ಷಿತರಾಗಿ, ಆ ಬ್ಯಾಂಕುಗಳಲ್ಲಿ ಠೇವಣಿ ಇಡುತ್ತಾರೆ. ಇವರುಗಳು ಬೇರೆ ಏನನ್ನೂ ವಿಚಾರ ಮಾಡುವುದಿಲ್ಲ. ಇವರಿಗೆ ಒಂದಿಷ್ಟು ಆದಾಯವಷ್ಟೇ ಬೇಕಾಗಿರುತ್ತದೆ; ಬೇರೆ ಏನೂ ಬೇಕಾಗಿರುವುದಿಲ್ಲ. ಬ್ಯಾಂಕಿನವರು ನೀಡುವ ಬಡ್ಡಿಗೆ ಆಸೆ ಪಟ್ಟು ಬ್ಯಾಂಕಿನಲ್ಲಿ ಠೇವಣಿಯನ್ನು ಇಡುತ್ತಾರೆ. ನಾವುಗಳು ಯಾವುದೇ ದೇವಸ್ಥಾನ, ಹೋಟೇಲ್ ಮತ್ತಿತರೆ ಕಡೆಗಳಲ್ಲಿ ಹೋದರೆ, ಇಂತಹ ಠೇವಣಿದಾರರು "ಗುರು ರಾಘವೇಂದ್ರ ಬ್ಯಾಂಕಿನದು ಮತ್ತೂ ಚರಣ್ ಸಹಕಾರಿ ಬ್ಯಾಂಕಿನದು ಏನಾಯಿತು?" ಎಂದು ನಮ್ಮನ್ನು ಕೇಳುತ್ತಾರೆ. ಇವುಗಳ ತನಿಖೆಯನ್ನು ಸಿ.ಬಿ.ಐ. ಸಂಸ್ಥೆಗೆ ವಹಿಸಿದೆ ಎಂದು ನಾವು ಹೇಳಿದರೆ, ಅವರಿಗೆ ಅರ್ಥವಾಗುವುದಿಲ್ಲ. "ಸಿ.ಬಿ.ಐ. ಸಂಸ್ಥೆಗೆ ತನಿಖೆಗೆ ವಹಿಸಿರುವುದು ನಿಜ, ಆದರೆ, ನನಗೆ ಯಾವಾಗ ಹಣ ಬರುತ್ತದೆ" ಎಂಬುದಾಗಿ ಪ್ರಶ್ನಿಸುತ್ತಾರೆ. ಇದು ಅವರ ಕಳಕಳಿಯಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ನೈಜ ಘಟನೆಯನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಒಬ್ಬ ಸರ್ಕಾರಿ ನೌಕರನು ನನ್ನ ಬಳಿ ಬಂದು, ತನ್ನ ತಾಯಿಯನ್ನು ಆಸ್ಪತ್ರೆಗೆ ಸೇರಿಸಿರುವುದಾಗಿ ಹಾಗೂ ತನಗೆ ಐದು ಲಕ್ಷ ರೂಪಾಯಿಗಳಷ್ಟು ಹಣವನ್ನು ಸಾಲವಾಗಿ ನೀಡುವಂತೆ ಕೋರುತ್ತಾನೆ. ದೂರವಾಣಿ ಮೂಲಕ ನನ್ನನ್ನು ಸಂಪರ್ಕಿಸಿ, ವಾಟ್ಸ್‌ಆಪ್ ತಂತ್ರಾಂಶದ ಮೂಲಕ ತನ್ನ ತಾಯಿಯ ಭಾವಚಿತ್ರವನ್ನು ನನಗೆ ಕಳುಹಿಸುತ್ತಾನೆ. ನಾನು ಆಯಿತು ಸಾಲ ನೀಡುತ್ತೇನೆ ಬಾ ಎಂದು ಕರೆದರೆ ಆತನು ಬರುವುದಿಲ್ಲ. ಇದಕ್ಕೆ ಪ್ರತ್ಯುತ್ತರವಾಗಿ ತಾನು ನಾನು ಇದ್ದಲ್ಲಿಗೆ ಬರುವ ಪರಿಸ್ಥಿತಿಯಲ್ಲಿ ಇಲ್ಲ; ಆದರೆ ಸಾಲ ಕೊಡಿ ಎಂದು ಕೇಳುತ್ತಾನೆ. ನಾನು ಮಾನವೀಯತೆಯ ಆಧಾರದ ಮೇಲೆ ಸಾಲ ನೀಡುತ್ತೇನೆ. ಈ ವ್ಯಕ್ತಿಯು ಮುಜರಾಯಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನನ್ನ ಬಳಿ ಸಾಲ ಮಾಡಿದ ರೀತಿಯಲ್ಲಿಯೇ ಹತ್ತಾರು ಕಡೆಗಳಲ್ಲಿ ಸಾಲ ಮಾಡಿರುತ್ತಾರೆ. ಈ ರೀತಿಯಾಗಿ ಸಾಲ ಮಾಡಿದ ವ್ಯಕ್ತಿ ಎಲ್ಲಿಗೆ ಹೋದನೋ ಗೊತ್ತಾಗಲಿಲ್ಲ. ಈ ಬಗ್ಗೆ ಪೋಲೀಸಿನವರಿಗೆ ಹಾಗೂ ಆತನ ಇಲಾಖೆಗೆ ದೂರು ನೀಡಿದ್ದಾಯಿತು. ಆದರೆ ಆತನ ಬಗ್ಗೆ ಎಲ್ಲಿಯೂ ಸಹ ಪತ್ತೆಯಾಗಲಿಲ್ಲ. ಈ ವ್ಯಕ್ತಿಯ ಬಗ್ಗೆ ಮುಜರಾಯಿ ಇಲಾಖೆಯಲ್ಲಿ ವಿಚಾರಿಸಿದಾಗ, ಈತನು ಸುಮಾರು ಕಡೆಗಳಲ್ಲಿ ಸಾಲ ಮಾಡಿ ಹೋಗಿರುವುದಾಗಿ ಹಾಗೂ

ಆತನು ಎಲ್ಲಿಗೆ ಹೋಗಿದ್ದಾನೆ ಎನ್ನುವುದು ತಮಗೂ ಸಹ ತಿಳಿದಿಲ್ಲ ಮತ್ತೂ ಆತನಿಗೆ ಸಂಬಂಧಿತ ಯಾವುದೂ ಸಹ ಇಲ್ಲ ಬಾಕಿ ಇರುವುದಿಲ್ಲ ಎಂಬುದಾಗಿ ತಿಳಿಸಿದರು. ನಮ್ಮ ಬ್ಯಾಂಕಿನ ನಿರ್ದೇಶಕರುಗಳು, ಸಾಲ ಕೇಳಿದ ಆ ವ್ಯಕ್ತಿಯು ಮುಜರಾಯಿ ಇಲಾಖೆಯ ನೌಕರನೆಂದು ನೀವು ಸಾಲ ನೀಡಿದ್ದೀರಿ, ಹೀಗಾಗಿ ಇದನ್ನು ನೀವೇ ಪಾವತಿಸಬೇಕೆಂದು ತಿಳಿಸಿದರು. ಆಯಿತು ನಾನೇ ಆ ಮೊತ್ತವನ್ನು ಮರುಪಾವತಿಸುವುದಾಗಿ ತಿಳಿಸಿದೆ. ವಾಸ್ತವವಾಗಿ ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಆಗಲೇ ಸದಸ್ಯರಾದ ಶ್ರೀ ಕೆ.ಎಸ್.ನವೀನ್ ರವರು ಪ್ರಸ್ತಾಪಿಸಿದಂತೆ, ಬ್ಯಾಂಕರ್ಸ್‌ನವರಿಗೂ ಹಾಗೂ ಠೇವಣಿದಾರರಿಗೂ ಸಹ ತೊಂದರೆಗಳಿವೆ. ಎಲ್ಲರನ್ನೂ ರಕ್ಷಣೆ ಮಾಡುವ ಕಠಿಣವಾದ ಕಾನೂನನ್ನು ಜಾರಿಗೆ ತರಬೇಕು. ಬ್ಯಾಂಕಿನವರು ಅಂತರ್ಜಾಲದಲ್ಲಿ ತಮ್ಮ ವೆಬ್‌ಸೈಟ್‌ಗಳನ್ನು ಕಡ್ಡಾಯವಾಗಿ ತೆರೆಯಬೇಕು. ಅವರುಗಳು ತಾವು ನಡೆಸುವ ವ್ಯವಹಾರಗಳನ್ನು ಅದು ಸಾಲ ಅಥವಾ ಠೇವಣಿ ಯಾವುದೇ ಇರಬಹುದು. ಅಂತರ್ಜಾಲದ ಮೂಲಕ ಎಲ್ಲವನ್ನೂ ನೋಡುವಂತಹ ಅಂದರೆ ಆನ್‌ಲೈನ್‌ನಲ್ಲಿಯೇ ಎಲ್ಲವನ್ನೂ ವೀಕ್ಷಿಸುವ ಅಂದರೆ ಡಿಜಿಟಲೀಕರಣದ ವ್ಯವಸ್ಥೆಯನ್ನು ಸರ್ಕಾರವು ಮಾಡಬೇಕು. ಈ ಬಗ್ಗೆ ಎಲ್ಲರಿಗೂ ಜ್ಞಾನವಿರುವುದಿಲ್ಲ ಏಕೆಂದರೆ ಕೆಲವರು ಅವಿದ್ಯಾವಂತರಾಗಿರುತ್ತಾರೆ. ಇವತ್ತಿನ ದಿವಸ ಠೇವಣಿದಾರರು ಮೋಸ ಹೋಗುತ್ತಿದ್ದಾರೆ. ಈ ರೀತಿಯಾಗಿ ಮೋಸ ಹೋಗುವವರಿಗೆ ಬ್ಯಾಂಕಿನವರಿಂದ ಅಂದರೆ ಬ್ಯಾಂಕಿನ ಅಧ್ಯಕ್ಷರು, ನಿರ್ದೇಶಕರು ಅಥವಾ ಅಲ್ಲಿ ಕೆಲಸ ಮಾಡುವವರು ಯಾರೇ ಇರಬಹುದು; ಇವರುಗಳು ಯಾರೂ ಸಹ ಮುಂದಿನ ಏನೇ ವ್ಯವಹಾರಗಳನ್ನು ಮಾಡಬಾರದು. ಈ ರೀತಿಯಾಗಿ ಬಹಳ ಕಟ್ಟುನಿಟ್ಟಿನ ಕ್ರಮಗಳಾಗಬೇಕು. ಬ್ಯಾಂಕ್‌ನ್ನು seal ಮಾಡಬೇಕು. ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಬೇಕು. ಇಷ್ಟೇ ಅಲ್ಲದೇ, ಕಾನೂನಿನಲ್ಲಿ ಅವಕಾಶವಿರುವ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವಂತಾಗಬೇಕು. ಈ ಮೂಲಕ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಣೆ ಮಾಡುವ ಕೆಲಸಗಳನ್ನು ಸರ್ಕಾರವು ಮಾಡಬೇಕೆಂದು ನಾನು ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024 ರ ವ್ಯಾಪ್ತಿಯಲ್ಲಿ ಬರುವ ಹಣಕಾಸು ಸಂಸ್ಥೆಗಳು ಏನು ಇವೆ, ಅವು non-financial banking institutions ಎಂದು ನಾನು ತಿಳಿದುಕೊಂಡಿದ್ದೇನೆ. ಆರ್.ಬಿ.ಐ. ಬ್ಯಾಂಕಿನ ಕಾಯ್ದೆಯಡಿ ಮತ್ತು ಈ ಕಾಯ್ದೆಯಡಿ ಇವುಗಳು ಬರುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿಯಾಗಿ ಸರ್ಕಾರ ಗ್ರಾಮಾಂತರ ಪ್ರದೇಶದಲ್ಲಿ ಚಿನ್ನದ ಸಾಲದ ಮೂಲಕ ನೀಡುವ ಸಾಲ ಮತ್ತು ಅತೀ ಸಣ್ಣ ಸಾಲಗಳನ್ನು ಈ ಕಾಯ್ದೆಯಡಿ ತರುವುದಕ್ಕೆ ಪ್ರಸ್ತಾವನೆಯು ಇದರಲ್ಲಿದೆಯೇ ಅಥವಾ ಮುಂದಿನ ದಿನಗಳಲ್ಲಿ ಇದನ್ನು ಪ್ರಸ್ತಾಪಿಸಲಾಗುತ್ತದೆಯೇ ಎಂಬ ಬಗ್ಗೆ ಸಚಿವರು ತಿಳಿಸಬೇಕು. ಈ ಕಾಯ್ದೆಯನ್ನು ಅನುಷ್ಠಾನಗೊಳಿಸುವ line department ಯಾವುದು ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ಮಾರುಕಟ್ಟೆಯ ಗುಪ್ತ ಮಾಹಿತಿಯ ಪ್ರಕಾರ, ಸಹಾಯಕ ಆಯುಕ್ತರು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕ್ರಮ ತೆಗೆದುಕೊಳ್ಳಬಹುದು ಎಂಬುದಾಗಿ ತಿಳಿಸಿದ್ದು, ಬಹುಶಃ ಇದು ಕಂದಾಯ ಇಲಾಖೆಯ ವ್ಯಾಪ್ತಿಗೊಳಪಡುತ್ತದೆಯೇ ಅಥವಾ ಇನ್ಯಾವ ಇಲಾಖೆಯ ವ್ಯಾಪ್ತಿಗೊಳಪಡುತ್ತದೆ ಎನ್ನುವುದನ್ನು ಸಚಿವರು ತಿಳಿಸಬೇಕು.

ಯಾರು ಸಂಘ ಸಂಸ್ಥೆಗಳಿಗೆ ಕೆಲಸ ಮಾಡುತ್ತಾರೆಯೋ ಅಂತಹ ನೌಕರರು ಠೇವಣಿದಾರರಾಗಿದ್ದರೆ, ಅಂತಹವರನ್ನು ಹೊರತುಪಡಿಸುತ್ತೇವೆ ಎಂದು ಸರ್ಕಾರವು ತಿಳಿಸಿದೆ. ಬಹುಶಃ ಎಲ್ಲಿಯೋ ಒಂದು ಕಡೆ ಇದು ತಾರತಮ್ಯವಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಏಕೆಂದರೆ, ಎಸ್.ಬಿ.ಐ. ಷೇರುಗಳನ್ನೂ ಹಾಗೂ ಡಿ-ಮ್ಯಾಟ್ ಖಾತೆಗಳನ್ನೂ ಸಹ ಇಟ್ಟುಕೊಂಡಿದ್ದೇವೆ. ಇಲ್ಲಿ ಠೇವಣಿ ಮತ್ತು ಬ್ಯಾಂಕ್ ಖಾತೆಗಳೂ ಸಹ ಇವೆ. ನಮ್ಮನ್ನು ಯಾವ ರೀತಿಯಾಗಿ ಹೊರತುಪಡಿಸಿಲ್ಲವೋ ಅದೇ ರೀತಿಯಾಗಿ ಇವರನ್ನು ಹೊರತುಪಡಿಸಿದರೆ, ಇದು ತಾರತಮ್ಯವಾಗಬಹುದು ಎನ್ನುವ ಅಂಶವನ್ನು ಸರ್ಕಾರವು ಪರಿಗಣಿಸಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಕೋರುತ್ತೇನೆ.

**ಶ್ರೀ ಎಸ್.ಕೇಶವ ಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024 ನ್ನು ನಾನು ಸ್ವಾಗತಿಸುತ್ತೇನೆ. ಕೆಲವಾರು ವಿಷಯಗಳನ್ನು ಅತ್ಯಂತ ಗಂಭೀರವಾಗಿ ಇದರಲ್ಲಿ ಸೇರಿಸಬೇಕೆಂಬ ಸಂಗತಿಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಾಮಾನ್ಯವಾಗಿ ಸಾಲ ನೀಡುವಾಗ ಸ್ಥಿರಾಸ್ತಿಯ ಮೌಲ್ಯವನ್ನು ಹೆಚ್ಚಳ ಮಾಡುವ ಸಂದರ್ಭಗಳು ಕಂಡು ಬಂದಿವೆ. ಉದಾಹರಣೆಗೆ ಹೇಳುವುದಾದರೆ, ಸ್ಥಿರಾಸ್ತಿಯ ಮೊತ್ತವು ಒಂದು ಕೋಟಿ ರೂಪಾಯಿಗಳಷ್ಟಿದ್ದು, ಬ್ಯಾಂಕಿನವರೊಂದಿಗೆ ಸಂಬಂಧ ಚೆನ್ನಾಗಿದೆ ಎನ್ನುವ ಕಾರಣಕ್ಕಾಗಿ ಮೂರರಿಂದ ಐದು ಕೋಟಿ ರೂಪಾಯಿಗಳಷ್ಟು ಸಾಲ ನೀಡಿದ್ದಾರೆ. ತುಂಬಾ ಬ್ಯಾಂಕುಗಳು ಈ ಕಾರಣಕ್ಕಾಗಿ ದಿವಾಳಿಯಾಗಿವೆ. ಹೀಗಾಗಿ ಇಲ್ಲಿ ಮೌಲ್ಯಮಾಪನ ಪ್ರಾಧಿಕಾರವನ್ನು ಮಾಡಬೇಕು. ಇವರುಗಳು ಆಸ್ತಿಯನ್ನು ಮೌಲ್ಯ ಮಾಡಿ, ಇದಕ್ಕೆ ಇಷ್ಟು ಬೆಲೆ ಇದೆ ಎಂದು ಹೇಳಿದರೆ, ಎಲ್ಲಾ ಬ್ಯಾಂಕುಗಳು ಸಾಲಗಳನ್ನು ನೀಡುವಂತಾಗಬೇಕು. ಮುಂದುವರೆದು, ಕೆಲವಾರು ಬ್ಯಾಂಕುಗಳು ಶೇಕಡಾ 9 ರಿಂದ ಶೇಕಡಾ 10 ರಷ್ಟು ಬಡ್ಡಿಯನ್ನು ನೀಡುತ್ತೇವೆ ಎಂದು ಹೇಳುತ್ತಾರೆ. ಯಾರು ಶೇಕಡಾ 13 ರಷ್ಟು ಬಡ್ಡಿಯನ್ನು ನೀಡುತ್ತಾರೋ, ಇವರ ಬಳಿ ಠೇವಣಿಯನ್ನು ಇಡುವಂತಹ ಕೆಲಸವನ್ನು ಮಾಡುತ್ತಾರೆ. ನನಗೆ ತಿಳಿದಿರುವಂತೆ, ನೇಕಾರರ ಸಮಾಜಕ್ಕೆ ಸಂಬಂಧಪಟ್ಟ ಒಂದು ಕುರುಹಿನ ಶೆಟ್ಟಿ ಸಂಘದ ಬ್ಯಾಂಕ್‌ವೊಂದು ಶ್ರೀ ಗುರು ರಾಘವೇಂದ್ರ ಸಹಕಾರಿ ಸಂಘದ ಬ್ಯಾಂಕಿನಲ್ಲಿ ಸುಮಾರು 50 ಕೋಟಿ ರೂಪಾಯಿಗಳಷ್ಟು ಹಣವನ್ನು ಠೇವಣಿಯಾಗಿ ಇಟ್ಟಿದೆ. ಆ ಬ್ಯಾಂಕು ಮುಳುಗಿ ಹೋದ ತಕ್ಷಣ ಈ ಬ್ಯಾಂಕ್ ಸಹ ಮುಳುಗಿ ಹೋಯಿತು. ಇಂತಹವುಗಳಿಗಾಗಿ perfect checks and measures ನ ಅವಶ್ಯಕತೆ ಇದೆ. ಇನ್ನೊಂದು ಬ್ಯಾಂಕು ತುಂಬಾ ದೊಡ್ಡ ಮೊತ್ತವನ್ನು ಮತ್ತೊಂದು ಬ್ಯಾಂಕಿನಲ್ಲಿ ಠೇವಣಿ ಇಡುವಂತಹ ಕ್ರಮಗಳಿಗೆ ಕಡಿವಾಣ ಹಾಕಬೇಕು. ಇಂತಹ ಬ್ಯಾಂಕುಗಳನ್ನು ನಿಷ್ಕ್ರಿಯಗೊಳಿಸಬೇಕು.

(ಮುಂದು)

(925)17-12-2024/4-00/bkp-rn (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್ ಎಸ್(ಮುಂದು..)**

ಮತ್ತೆ ಬೆಂಗಳೂರಿನ ಹಲವಾರು ಬ್ಯಾಂಕುಗಳು ಈ ರೀತಿಯಲ್ಲಿ ಮಾಡಿವೆ ಎನ್ನುವುದು ಗಮನಕ್ಕೆ ಬಂದಿದೆ. ಪ್ರತಿ 6 ತಿಂಗಳಿಗೊಮ್ಮೆ ಬ್ಯಾಂಕಿನ ಆರ್ಥಿಕ ಸ್ಥಿತಿಯನ್ನು review ಮಾಡಬೇಕು. ಇದಕ್ಕೊಂದು authority ಬರಬೇಕು.

ಮಾನ್ಯ ಸದಸ್ಯರಾದ ಶ್ರೀಮಾನ್ ಕೆ.ಎ. ತಿಪ್ಪೇಸ್ವಾಮಿಯವರು ಕೇಳಿದಂತೆ ಇದು ಸಹಕಾರ ಇಲಾಖೆಗೆ ಬರುತ್ತದೋ ಅಥವಾ ಆರ್ಥಿಕ ಇಲಾಖೆಗೆ ಬರುತ್ತದೋ, ಕಂದಾಯ ಇಲಾಖೆಗೆ ಬರುತ್ತದೋ ಅಥವಾ ಎಲ್ಲವೂ ಒಟ್ಟಾಗಿ ಬರುತ್ತದೋ ಎನ್ನುವುದನ್ನು ಸರ್ಕಾರ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು digitalize ಆಗಬೇಕು, ವೆಬ್‌ಸೈಟ್ ಇರಬೇಕು, ಮತ್ತೆ Chartered Accountants' ಕಮಿಟಿ ಯಾವುದೇ ನಾಮಾಂಕಿತ Chartered Accountants' ಕಮಿಟಿಗೆ ಅವರು ವೆಬ್‌ಸೈಟ್ ಅನ್ನು ಅವರ ರೆಕಾರ್ಡ್‌ಗಳನ್ನು public domain ನಲ್ಲಿರುವುದನ್ನು ನೋಡಿ ಪ್ರಮಾಣಪತ್ರವನ್ನು ಕೊಡುವಂತಹ ಅಧಿಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿ checks and measures ಇದ್ದಾಗ ಸಾಕಷ್ಟು ದುರುಪಯೋಗವನ್ನು ನಾವು ಕಡಿಮೆ ಮಾಡಬಹುದು ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಒಂದು ಪ್ರಸ್ತಾವನೆಯ್ನನ್ನು ಸ್ವಾಗತ ಮಾಡುತ್ತಾ, ಇವತ್ತು ಬ್ಯಾಂಕುಗಳಲ್ಲಿ deposit ಅನ್ನು ನಾವು ಕಾಪಾಡಬೇಕಾದರೆ, ಸಾಲ ಕೊಡತಕ್ಕಂತಹ ಸಂಸ್ಥೆಗಳು ಮಾನ್ಯ ಕೇಶವ ಪ್ರಸಾದ್ ಎಸ್.ರವರು ಹೇಳಿದ ಹಾಗೆ over estimate ಮಾಡಿಕೊಡತಕ್ಕಂತಹದ್ದು ಒಂದು ವಿಷಯ. ಮತ್ತೆ, ನನಗೆ ಗೊತ್ತಿರುವಂತೆ ಒಂದೇ ಮನೆಯ ದಾಖಲೆಯನ್ನು 5-6 ಬ್ಯಾಂಕಿನಲ್ಲಿಟ್ಟು ಸಾಲವನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಒಂದು ನಿಯಂತ್ರಣ ಇಲ್ಲದೇ ಇದ್ದರೆ, ಅದು ತುಂಬಾ ಕಷ್ಟವಾಗುತ್ತದೆ. ಠೇವಣಿದಾರರನ್ನು ನಾವು ರಕ್ಷಿಸಬೇಕಾದರೆ ನಾವು ಸಾಲವನ್ನು ಕೊಡುವವರು ಸಹ ಸರಿಯಾದ ರೀತಿಯಲ್ಲಿ ಅದನ್ನು ಮರುಪಾವತಿ ಮಾಡಿದಾಗ ಮಾತ್ರ ಠೇವಣಿಯನ್ನು ವಾಪಸ್ಸು ಕೊಡಲಿಕ್ಕೆ ಆಗುತ್ತದೆ. ಆದ್ದರಿಂದ, ಸಾಲ ಕೊಡುವುದು ಕೂಡ strict stringent action ಇರಬೇಕು. ಅದಕ್ಕೋಸ್ಕರ ನಾವು ಹೆಚ್ಚಿನ ಆದ್ಯತೆಯನ್ನು ಕೊಟ್ಟರೆ, ಠೇವಣಿದಾರರು automatic ಆಗಿ ರಕ್ಷಣೆಯಾಗುತ್ತಾರೆ. ಸಾಲ ಯಾರಿಗೆ ಕೊಡುತ್ತೇವೆ, ಅವರುಗಳೇ ಒಂದು ಸರಿಯಾದ ರೀತಿಯಲ್ಲಿ ವಾಪಸ್ಸು ಮರುಪಾವತಿ ಮಾಡಿದರೆ, ಅದರ ಮರುಪಾವತಿ ಸರಿಯಾದರೆ ಮಾತ್ರ ಇದು ಉಪಯೋಗವಾಗುತ್ತದೆ. ಅದಕ್ಕೋಸ್ಕರ ಸಾಲವನ್ನು ಕೊಡುವುದು ಸಹ stringent action ತೆಗೆದುಕೊಳ್ಳುವಂತಹ ಒಂದು ಕಾನೂನನ್ನು ರೂಪಿಸಬೇಕೆನ್ನುವುದು ನನ್ನ ಅಭಿಪ್ರಾಯ.

**ಶ್ರೀ ಕೃಷ್ಣಭೈರೇಗೌಡ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳು ಈ ರೀತಿಯ ವಂಚನೆ ಪ್ರಕರಣಗಳ ಬಗ್ಗೆ ತಮ್ಮ ಆತಂಕವನ್ನು ಬಹಳ ಸ್ಪಷ್ಟವಾಗಿ ವ್ಯಕ್ತ ಮಾಡಿದ್ದಾರೆ. ಬಹುಶಃ ಆರಂಭದಲ್ಲಿಯೇ ನಾನು ಹೇಳಬೇಕಾಗುತ್ತದೆ. ಅವರುಗಳು ಏನೆಲ್ಲಾ ಆತಂಕವನ್ನು ವ್ಯಕ್ತ ಮಾಡಿದ್ದಾರೆ, ಅದಕ್ಕೆ ಪರಿಹಾರಗಳನ್ನು ಈ ತಿದ್ದುಪಡಿಯಲ್ಲಿ ತರಲಿಕ್ಕೆ ಆಗಿರುವುದಿಲ್ಲ. ಆದರೆ, ಅವರುಗಳ ಅತಂಕವನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಈ ವಿಧೇಯಕದ ಮಾಲಿಕತ್ವ ಹಣಕಾಸು ಇಲಾಖೆಯಲ್ಲಿ ಇರುವಂತಹದ್ದು. ಇದರ ಬಗ್ಗೆ ಈಗಾಗಲೇ ಸಚಿವ ಸಂಪುಟದಲ್ಲಿಯೂ ಚರ್ಚೆಯಾಗಿದೆ, ಕೆಳಮನೆಯಲ್ಲೂ ಚರ್ಚೆಯಾಗಿದೆ. ಬೇರೆ ಬೇರೆ ಸ್ವರೂಪದ ವಂಚನೆಗಳು ಏನಾಗುತ್ತಿವೆ, ಅದಕ್ಕೆ ಕೆಲವು micro-credit ಸೇರಿಸಿ, ಯಾವ ಯಾವ ರೂಪದಲ್ಲಿ

ಇದನ್ನು ಸರಿಯಾಗಿ ನಿಯಂತ್ರಣಕ್ಕೆ ತರಬಹುದು. ಅವರು ನ್ಯಾಯಯುತವಾಗಿ ವ್ಯವಹಾರ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟು ವಂಚನೆ ಮಾಡುವುದನ್ನು ಆರಂಭದಲ್ಲಿಯೇ ಹೇಗೆ ತಡೆಗಟ್ಟಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಇನ್ನು ಸ್ವಲ್ಪ ಆಳವಾಗಿ ಮಾಡಿ, ಅದಕ್ಕೆ ಪ್ರತ್ಯೇಕವಾದಂತಹ ಅಂದರೆ ಈ ಕಾನೂನಿನಲ್ಲಿ ತರಲಿಕ್ಕೆ ಆಗದೇ ಹೋದರೂ ಸಹ ಪ್ರತ್ಯೇಕ ಕಾನೂನು ತರುವ ಬಗ್ಗೆ ವಿಚಾರ ಮಾಡಬೇಕೆಂದು ಈಗಾಗಲೇ ನಾವು ಚರ್ಚೆ ಮಾಡಿದ್ದೇವೆ. ನಾನು ಈ ಬಗ್ಗೆ ಹಣಕಾಸು ಇಲಾಖೆಯವರ ಜೊತೆ ಮಾತನಾಡಿ, ಅದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಯಾವ್ಯಾವುದು ಈ ರೀತಿಯ ವಂಚನೆ ಪ್ರಕರಣಗಳು ಆಗುತ್ತಿವೆ, ಅವುಗಳನ್ನು ತಡೆಗಟ್ಟಲಿಕ್ಕೆ preventive measures ಏನು ಮಾಡಬಹುದು ಎಂದು ಪ್ರತ್ಯೇಕ ತಿದ್ದುಪಡಿ ಅಥವಾ ಕಾನೂನು ರೂಪಿಸುವಂತಹ ಕೆಲಸವನ್ನು ನಾವು ಖಂಡಿತವಾಗಿ ಮಾಡುತ್ತೇವೆ.

ಎರಡನೆಯದಾಗಿ, ಈಗ ಇರುವಂತಹ ವಿಧೇಯಕಕ್ಕೆ ತಂದಿರುವಂತಹ ತಿದ್ದುಪಡಿಗಳು. ಇದು ನಮ್ಮ ಪಟ್ಟಿಯಲ್ಲಿ ಅರ್ಧ ತಿದ್ದುಪಡಿಗಳನ್ನು ಮಾತ್ರ ಈಗ ತಂದಿದ್ದೇವೆ. ಇನ್ನು ಸಹ ಕೆಲವು ತಿದ್ದುಪಡಿಗಳಿದ್ದು, ಅದನ್ನೆಲ್ಲಾ ತಯಾರು ಮಾಡಿ ತರಲಿಕ್ಕೆ ಬಹುಶಃ ಇನ್ನೂ 3-4 ತಿಂಗಳು ನಮಗೆ ಸಮಯ ಬೇಕು, ಮುಂದೆ ತರುತ್ತೇವೆ. ಅದು ಕೂಡ ಪರಿಶೀಲನೆಯ ಹಂತದಲ್ಲಿದೆ. ಈಗ ತಂದಿರುವಂತಹ ತಿದ್ದುಪಡಿಗಳು ರಿಸರ್ವ್ ಬ್ಯಾಂಕ್‌ನವರು ಸೇರಿದಂತೆ ಎಲ್ಲರನ್ನೂ ಕೂಡ ನಾವು ಸಮನ್ವಯ ಮಾಡಿ, ಅವರ ಅಭಿಪ್ರಾಯ ತೆಗೆದುಕೊಂಡು ಯಾವುದು ಕಾನೂನಿನಲ್ಲಿ ಸಿಂಧು ಇದೆ ಎನ್ನುವುದನ್ನು ನೋಡಿಕೊಂಡು ಇಲ್ಲಿ ಇವತ್ತು ತಂದಿದ್ದೇವೆ. ಇಲ್ಲಿ ಒಂದು ತಡೆಗಟ್ಟುವಂತಹ ಕ್ರಮ ಏನೆಂದರೆ ನಾವು ಯಾರನ್ನು ಬೇಕಾದರೂ ಈ ಕಾನೂನಿಡಿಯಲ್ಲಿ ನೋಡಲ್ ಅಧಿಕಾರಿ ಎಂದು ನೇಮಿಸಬಹುದು. ಉದಾಹರಣೆಗೆ ಸಹಾಯಕ ಅಯುಕ್ತರನ್ನು ಇಟ್ಟುಕೊಂಡರೆ ಅವರನ್ನು ಇಲ್ಲಿ ನೋಡಲ್ ಅಧಿಕಾರಿ ಎಂದು ನೇಮಕ ಮಾಡಿ ಅವರ ವ್ಯಾಪ್ತಿಯಲ್ಲಿ ಈ ರೀತಿಯಲ್ಲಿ ಯಾವುದು ಚಟುವಟಿಕೆ ನಡೆಯುತ್ತಿದೆ ಎಂದು ಗಮನಿಸಿಕೊಳ್ಳುವಂತಹ ಜವಾಬ್ದಾರಿಯನ್ನು ಅವರಿಗೆ ಕೊಟ್ಟು, ಇಂತಹದ್ದು ಕಣ್ಣಿಗೆ ಬಂದ ಕೂಡಲೇ ಅವರು ಆ ಸಂಸ್ಥೆಗೆ ನಿರ್ದೇಶನ ಕೊಡಬಹುದು. Seize all advertising activities. ಈ ರೀತಿಯ ದುಬಾರಿ ಅಂದರೆ, ಏನು ಆಕರ್ಷಣೀಯ ಠೇವಣಿ ಬಡ್ಡಿದರವನ್ನು ಕೊಡುವಂತೆ ಮಾಡುವಂತಹದ್ದು ಅಥವಾ ನೀವು ಒಂದು ತಿಂಗಳು ಠೇವಣಿ ಇಟ್ಟರೆ ನಿಮಗೆ ಟಿವಿ. ಕೊಡುತ್ತೇವೆಂದು ಹೇಳುವುದು. ಈ ರೀತಿಯ ಜಾಹೀರಾತುಗಳನ್ನು ಕೊಡುವುದನ್ನು ನಿಷೇಧಿಸುವಂತಹ ಅಧಿಕಾರವನ್ನು ಸಹ ಈ ಒಂದು ತಿದ್ದುಪಡಿಯಲ್ಲಿ ಸೇರಿಸಲಾಗಿದೆ. ಅದಕ್ಕೆ ಪೊಲೀಸ್‌ನ ಪ್ರಾಧಿಕಾರದ ಬಲವನ್ನು ಕೂಡ ಕೊಟ್ಟಿದ್ದೇವೆ. Nodal Officer can be any officer, but Nodal Officer is empowered to give a direction to Police to make sure that advertising activities are seized. ಹೀಗಾಗಿ ಆ ರೀತಿಯಾದಂತಹದ್ದು ಮತ್ತು ಅವರು ಕೂಡ time to time ಇದರ ಬಗ್ಗೆ ಜನರಿಗೆ advisory ಯನ್ನು ಕೊಡುವಂತಹ ಅವಕಾಶಗಳನ್ನು ಸಹ ಇದರಲ್ಲಿ ತೆಗೆದುಕೊಂಡು ಬಂದಿದ್ದೇವೆ. ಇನ್ನು ಉಳಿದಂತೆ ತಾವು ಹೇಳಿರುವಂತಹದ್ದು. ಇದರಲ್ಲಿ ನೀವು employees ನ್ನು ನೀವು exclude ಮಾಡುತ್ತಿದ್ದೀರಿ, ಈ ವಿಚಾರದಲ್ಲಿ ನಿಮ್ಮ ವಾದ ಸರಿ ಇದೆಯೇ ಎನ್ನುವಂತಹದ್ದು,

ಇದನ್ನು ಅನುಭವದ ಆಧಾರದ ಮೇಲೆ ತಂದಿರುವುದಾಗಿದೆ. IMA., ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಇವುಗಳಲ್ಲಿ ಈ ಬಗ್ಗೆ ನೋಡಿದಾಗ ನಮ್ಮ ಮನಸ್ಸಿಗೆ ಒಪ್ಪದೇ ಇದು ಆಗುತ್ತಿರುವುದು ಸರಿಯಿಲ್ಲ, ಎಂದು ಹೇಳಿ, purely ಇದನ್ನು theory ಮೇಲೆ ತಂದಿರುವುದಲ್ಲ. ವಾಡಿಕೆಯಲ್ಲಿ ನೋಡಿ ಅಂದರೆ, ಅಲ್ಲಿ ನಡೆದಿರುವಂತಹ ಚಟುವಟಿಕೆಗಳನ್ನು ನೋಡಿ, ಇದು ಅನ್ಯಾಯ ಎಂದು ನಮಗೆ ಅನಿಸಿದ್ದರಿಂದ ನಾವು ತೆಗೆದುಕೊಂಡು ಬಂದಿದ್ದೇವೆ. Based on experience ನಾವು ಸುಮ್ಮನೆ prospective ಆಗಿ ಏನೋ ನಮ್ಮ ಮನಸ್ಸಿಗೆ ಬಂದಿರುವುದನ್ನು ಮಾಡುತ್ತಿಲ್ಲ. ಈಗ ಅಲ್ಲಿ ನಡೆದಿರುವುದನ್ನು ನೋಡಿ ಮಾಡುತ್ತಿದ್ದೇವೆ.

ಮೂರನೆಯದಾಗಿ, ತಾವೆಲ್ಲರೂ ಮಾತನಾಡುತ್ತಾ, ಅಂದರೆ, 3 ಜನ ಮಾನ್ಯ ಸದಸ್ಯರು ಮಾತನಾಡುತ್ತಾ, ಒಂದೇ ಆಸ್ತಿಯನ್ನು 3-4-5 ಕಡೆ, 20 ಕಡೆ pledge ಮಾಡುವಂತಹದ್ದು ನಡೆಯುತ್ತಿದೆ ಎಂದು ಹೇಳಿದರು. ಇದರಲ್ಲಿ ಸಾಲಗಾರನದ್ದು ಎಷ್ಟು ಪಾತ್ರ ಇರುತ್ತದೋ ಆ ಸಂಸ್ಥೆಯ ಅಧಿಕಾರಿಗಳದ್ದು, ಅಷ್ಟೇ ಪಾತ್ರ ಇರುತ್ತದೆ. ಏಕೆಂದರೆ, ತಮಗೆಲ್ಲರಿಗೂ ತಿಳುವಳಿಕೆ ಇದೆ. ತಾವು ಎಲ್ಲರೂ ವ್ಯವಹಾರದಲ್ಲಿ ಇರುವವರು ಆಗಿದ್ದೀರಿ. ಬ್ಯಾಂಕ್ ನೌಕರನ ಕೆಲಸ ಏನು? ತಕ್ಷಣ ಅದನ್ನು Encumbrance Certificate ನಲ್ಲಿ entry ಮಾಡಿಸುವುದು. ಹೌದೋ ಇಲ್ಲವೋ ಹೇಳಿ. ಆಸ್ತಿ ದಾಖಲೆಯಲ್ಲಿ ಈ ಆಸ್ತಿ ಮೇಲೆ ಸಾಲ ಕೊಟ್ಟಿದೆ ಎಂದು ಎಂಟ್ರಿ ಮಾಡಿಸುವ ಕೆಲಸ ಯಾರದ್ದು? ಸಾಲ ಕೊಟ್ಟವನ ಜವಾಬ್ದಾರಿಯಾಗಿರುತ್ತದೆ.

**ಶ್ರೀ ಕೇಶವ ಪ್ರಸಾದ್ ಎಸ್:-** ಅದನ್ನು ಸರಿಪಡಿಸಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಇಲ್ಲವೆಂದು ಹೇಳುತ್ತಿಲ್ಲ, ಕೇಳಿಸಿಕೊಳ್ಳಿ. ನಾವು ಈ ನಿಟ್ಟಿನಲ್ಲಿ ಕೆಲಸ ಮಾಡುತಿದ್ದೇವೆ. ಅದನ್ನು ಮಾಡಿದಾಗ ಏನೇನು ಟೀಕೆಗಳು ಬಂತು ಎನ್ನುವುದನ್ನು ಬೇಕಾದರೆ ಹೇಳುತ್ತೇನೆ. ಸಾಲ ಕೊಡುವವರದ್ದು ಜವಾಬ್ದಾರಿ ಇದೆ. ಸಾಲ ಕೊಡುವವನು ಏತಕ್ಕೆ ಎಂಟ್ರಿ ಮಾಡಿಸುತ್ತಿಲ್ಲ. ಏಕೆಂದರೆ, ಸಾಲದಲ್ಲಿ ಅವನಿಗೆ 5%-10% ಭಾಗ ಬಂದಿರುತ್ತದೆ. ನನ್ನ ವೈಯಕ್ತಿಕ ಅನುಭವದಲ್ಲಿಯೇ ಹೇಳುತ್ತೇನೆ. ನನಗೆ ಪರಿಚಿತ ಇರುವವರರೇ ಒಂದು ಮನೆಯ ದಾಖಲೆಗಳನ್ನು ಇಟ್ಟು 4 ಕಡೆ ಸಾಲ ತೆಗೆದುಕೊಂಡಿದ್ದಾರೆ, ಆ ಸಾಲದಲ್ಲಿ 10%-20% ಸಾಲ ಕೊಟ್ಟವನಿಗೆ ಹೋಗಿರುತ್ತದೆ. ಅವರು ಏನು ಮಾಡುತ್ತಾರೆ ಆ ಖಾತೆಯನ್ನು ಪೇಪರ್‌ನಲ್ಲಿ ತೆಗೆದುಕೊಂಡು ಹೋಗಿ ಕೊಡುತ್ತಾರೆ. ಕೆಲವು ಕಡೆ ಆ ಆಸ್ತಿಗೆ ಅಲ್ಲಿ ಖಾತೆಯೇ ಇರುವುದಿಲ್ಲ. ಅಥವಾ ಅದನ್ನು ಇವರು fololow up ಮಾಡಿ ಅದನ್ನು Encumbrance Certificate ಯಲ್ಲಿ entry ಮಾಡಿಸುವುದಿಲ್ಲ. ಅದಕ್ಕೆ ನಾವು ಈಗ ಏನು ಮಾಡಿದ್ದೇವೆಂದರೆ ಈ ಎಲ್ಲಾ transactions ಗಳನ್ನು ಅನ್‌ಲೈನ್ ಮಾಡಿದ್ದೇವೆ. ಆನ್‌ಲೈನ್‌ನಲ್ಲಿ ಆಸ್ತಿಗೆ ಖಾತೆ ಇರಬೇಕು. ಅವರು ಸಾಲವನ್ನು ಕೊಟ್ಟ ತಕ್ಷಣ ಅದು Encumbrance Certificate ಯಲ್ಲಿ ಆಟೋಮ್ಯಾಟಿಕ್ ಆಗಿ entry ಆಗಬೇಕು mortgage ಎಂಟರ್ ಆಗಬೇಕು. ಹೀಗಾಗಿ, ಆ ರೀತಿಯಲ್ಲಿ ನಾವು ಮಾಡಿದ್ದೇವೆ. ಇದಕ್ಕೆ ಬಹಳ ಜನರು ವಿರೋಧ ಮಾಡುತ್ತಿದ್ದಾರೆ. ಇದನ್ನು ನಾವು ಆನ್‌ಲೈನ್‌ನಲ್ಲಿ integration ಮಾಡಲಿಕ್ಕೆ ಇದು ಒಂದು ಕಾರಣ. ಏಕೆಂದರೆ, ಒಂದೇ ಆಸ್ತಿ multiple ಕಡೆ pledge ಆಗುತ್ತಿದೆ. ಈಗ ಇದನ್ನು ಮಾಡಿರುವುದರಿಂದ ಅವರು ಸಾಲ ಕೊಟ್ಟ ಮೇಲೆ

ಆಟೋಮ್ಯಾಟಿಕ್ ಆಗಿ ಬಂದು ಕುಳಿತುಕೊಳ್ಳುತ್ತದೆ. ಅದಕ್ಕೆ ಆಧಾರ ಖಾತೆ ಇರಬೇಕಲ್ಲವೇ? ಅದಕ್ಕೆ ಇ-ಖಾತೆಯನ್ನು ಕಡ್ಡಾಯಗೊಳಿಸಲಾಗಿದೆ. ಅರಂಭದಲ್ಲಿ ಸ್ವಲ್ಪ ಸಮಸ್ಯೆ ಬರುತ್ತದೆ. ಮಗು ಹುಟ್ಟಿದ ತಕ್ಷಣ ಅದು ವೇಗವಾಗಿ ಓಡುವುದಿಲ್ಲ. ಮೊದಲು ನಿಂತುಕೊಳ್ಳಬೇಕು. ಒಂದೆರಡು ತಿಂಗಳು ಸಮಸ್ಯೆಯಾಗಬಹುದು. ಆದರೆ, ಈ ಎಲ್ಲಾ ಸಮಸ್ಯೆಗಳಿಗೆ ನೀವು ಹೇಳಿದ ಹಾಗೆ ಅದನ್ನು ಮಾಡುವುದರಿಂದ ಆಟೋಮ್ಯಾಟಿಕ್ ಅಗಿ ಅವರದ್ದು pledge create ಆಗಿ ಮತ್ತೆ ಅದನ್ನು ಸಾಲಕ್ಕೆ ಇನ್ನೊಂದು ಕಡೆ ಹೋಗಿ ಕೊಡಲಾರದಂತಹ ವ್ಯವಸ್ಥೆ ಕೂಡ ಇವತ್ತು ಸಿಸ್ಟಮ್‌ನಲ್ಲಿ cleanup ಆಗುತ್ತಿದೆ. ಅದು ಪರಿಹಾರ. ಅದರಲ್ಲೂ ಏನಾದರೂ ನ್ಯೂನ್ಯತೆ ಇರಬಹುದು. ಇಲ್ಲವೆಂದು ಹೇಳುತ್ತಿಲ್ಲ. ಅದು ಗಮನಕ್ಕೆ ಬಂದಾಗ ಅದನ್ನೂ ಸಹ ಸರಿ ಮಾಡುವಂತಹ ಕೆಲಸವನ್ನು ಮಾಡೋಣ.

ಮಾನ್ಯ ಸಭಾಪತಿಯವರೆ, ಒಟ್ಟಾರೆ, ಏನೇನು ಇನ್ನೂ ಸಹ ದೂರಗಾಮಿಯಾದಂತಹ ಕೆಲವು ಕ್ರಮಗಳು ಬೇಕೆಂದು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅನುಷ್ಠಾನ ಯಾರು ಮಾಡುತ್ತಾರೆಂದು ಕೇಳಿದರು, ಇದರ custodian ಆರ್ಥಿಕ ಇಲಾಖೆಯಾಗಿರುತ್ತದೆ. ಅನುಷ್ಠಾನ major ಇದರಲ್ಲಿ ಕಂದಾಯ ಇಲಾಖೆಯ ಕೆಳಗಡೆ ಒಂದು Competent Officer ಎಂದು ಇದ್ದಾರೆ. ಅವರು ಐ.ಎ.ಎಸ್. ಆಫೀಸರ್ ಇದ್ದಾರೆ, ಅವರು supervise ಮಾಡುತ್ತಾರೆ. ಅವರಿಗೆ ಸಹಾಯ ಮಾಡುವವರು ಆಯಾ ವ್ಯಾಪ್ತಿಯ ಸಹಾಯಕ ಆಯುಕ್ತರು ಸಹಾಯ ಮಾಡುತ್ತಾರೆ. ಪೋಲೀಸ್‌ನವರಿಗೂ ಸಹ ಅಧಿಕಾರವನ್ನು ಇದರಲ್ಲಿ ಇದೆ. It is a collective model. ಒಂದು hybrid model ಇದೆ. ಇದರಿಂದ, ಇದರಲ್ಲಿ ಏನು ನಾವು ಬಹಳ ದೊಡ್ಡ ಬದಲಾವಣೆಯನ್ನು ಏನೂ ಇದರಲ್ಲಿ ಇರುವುದಿಲ್ಲ. ಸಣ್ಣಪುಟ್ಟ ಬದಲಾವಣೆ ಇರುತ್ತದೆ. ಈಗ 3-4 ವರ್ಷದಿಂದ ಮಾಡಿರುವ ಕೆಲಸದ ಆಧಾರದ ಮೇಲೆ ಸ್ವಲ್ಪ speedup ಮಾಡುವುದಕ್ಕೆ ಒಂದೆರಡು ಬದಲಾವಣೆ ಮಾಡುತ್ತಿದ್ದೇವೆ. (ಮುಂದು)

(926) 17.12.2024 04.10 ಎಸ್‌ವಿ-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಭೈರೇಗೌಡ (ಮುಂದು):-**

ನಿಮ್ಮ ಭಾವನೆಯನ್ನು ನೂರಕ್ಕೆ ನೂರು ನಾನು ಸ್ವೀಕಾರ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಅದನ್ನು ಚರ್ಚೆ ಮಾಡಿ ಇನ್ನೂ ಸ್ವಲ್ಪ strong ಆಗಿ ಮಾಡುವಂತಹ ಕೆಲಸ ಮಾಡುತ್ತೇವೆ. ನಮ್ಮ competent officer ಬಳಿ ಈ ಗುರುರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಮುಂತಾದ ವಿಷಯಗಳು ಇತ್ತು. ದುರದೃಷ್ಟವಶಾತ್, ನಿಮ್ಮಂಥವರು, ನಮ್ಮ ಯು.ಬಿ.ವೆಂಕಟೇಶ್ ಅವರೆಲ್ಲಾ ಹೋರಾಟ ಮಾಡಿ ಇದನ್ನು ಸಿ.ಬಿ.ಐ.ಗೆ ವಹಿಸಲಾಯಿತು. ಸಿ.ಬಿ.ಐ.ಗೆ ಆ ಬಡ ಬ್ರಾಹ್ಮಣರ ಮೇಲೆ ಏಕೆ ಕನಿಕರವಿಲ್ಲವೋ ಗೊತ್ತಿಲ್ಲ. ಇವತ್ತಿನವರೆಗೂ ಏನೂ ಮಾಡಿಲ್ಲ. ನಮ್ಮ ಅಧಿಕಾರಿಗಳು ಈಗ ಸರ್, ನೀವೆಲ್ಲಾ ಸೇರಿ ಸಿ.ಬಿ.ಐ.ಗೆ ಕೊಟ್ಟಿರಿ, ಅವರು ಇದರ ಕಡೆ ತಿರುಗಿಯೂ ನೋಡಿಲ್ಲವಲ್ಲ ಸರ್ ಎಂದು ಬೇಜಾರು ಮಾಡಿಕೊಳ್ಳುತ್ತಾರೆ. ನಾವು ಪತ್ರವನ್ನು ಬರೆದಿದ್ದೇವೆ. ಅಂತಿಮವಾಗಿ ಏನು ಮಾಡಬೇಕೆಂದು ಸರ್ಕಾರ ತೀರ್ಮಾನ

ಮಾಡುತ್ತದೆ. ಇದರಲ್ಲಿ ನಮ್ಮದೇನೂ ಮುಚ್ಚುಮರೆ ಇರಬಾರದು ಎಂದು ನಾವು ಸಿ.ಬಿ.ಐ.ಗೆ ಕೊಟ್ಟಿದ್ದೆವು. ಆ ಉದ್ದೇಶ ಇಲ್ಲಿಯವರೆಗೂ ಈಡೇರಲಿಲ್ಲ. ಇನ್ನು ಮೇಲಾದರೂ ಈಡೇರುತ್ತದೆ ಎಂದು ನಾನು ಭಾವಿಸಿದ್ದೇನೆ.

ಒಟ್ಟಾರೆ ಈ ತಿದ್ದುಪಡಿಗೆ ಅನುಮೋದನೆಯನ್ನು ಕೊಡಬೇಕೆಂದು ಮತ್ತೊಮ್ಮೆ ತಮ್ಮ ಮೂಲಕ ಈ ಸದನವನ್ನು ಕೋರುತ್ತೇನೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 14 ರವರೆಗೆ**

**ಉಪ ಸಭಾಪತಿಯವರು:- "ಖಂಡ 2 ರಿಂದ 14 ರವರೆಗೆ ಎರಡೂ ಸೇರಿದಂತೆ ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 14 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## ಆ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೆಯ ತಿದ್ದುಪಡಿ) ವಿಧೇಯಕ 2024

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು) (ಮುಜರಾಯಿ ಹೊರತುಪಡಿಸಿ) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೆ, ಕರ್ನಾಟಕದಲ್ಲಿ ಸರಕು ಮತ್ತು ಸೇವಾ ತೆರಿಗೆ ಇರುವುದು ತಮಗೆ ತಿಳಿದಿದೆ. ಇದು ದೇಶದಲ್ಲಿ ಏಕರೂಪ ಕಾನೂನು. ಕಾಲಕಾಲಕ್ಕೆ ಬದಲಾವಣೆಗಳನ್ನು ಮಾಡಲು, ಚರ್ಚಿಸಲು GST Council ಇದೆ. ಅಲ್ಲಿ ದೇಶದ ಎಲ್ಲಾ ರಾಜ್ಯಗಳೂ ಸೇರಿ ಕೆಲವು ಬದಲಾವಣೆಗಳನ್ನು ಒಪ್ಪಿ ತೀರ್ಮಾನ ಮಾಡಿದ್ದನ್ನು ನಮ್ಮ ವಿಧಾನಮಂಡಲಗಳಲ್ಲಿ ಮಂಡಿಸಿ ಅಂಗೀಕಾರ ಪಡೆಯುವುದು, ಇದು ನಮ್ಮ ಒಡಂಬಡಿಕೆಯಲ್ಲಿ ನಡೆಯುತ್ತಿರುವ ವ್ಯವಸ್ಥೆಯಾಗಿದೆ. ಅದರ ಹಿನ್ನೆಲೆಯಲ್ಲಿ GST Council ನಲ್ಲಿ ತೀರ್ಮಾನವಾಗಿರುವಂತಹ ತಿದ್ದುಪಡಿಗಳನ್ನು ನಾವು ಈ ತಿದ್ದುಪಡಿಯ ಮುಖಾಂತರ ರಾಜ್ಯದಲ್ಲಿಯೂ ಅಳವಡಿಸಿಕೊಳ್ಳಬೇಕೆಂದು ಕೋರುವುದಕ್ಕೆ ತಮ್ಮ ಮುಂದೆ ಬಂದಿದ್ದೇವೆ. ಮುಂದುವರೆದು ಇದು ಈಗಾಗಲೇ ಸುಗ್ರೀವಾಜ್ಞೆಯ ಮುಖಾಂತರ ಅನುಷ್ಠಾನವಾಗಿದೆ. ಏಕೆಂದರೆ ತಮಗೆ ತಿಳಿದಿರುವಂತೆ ದೇಶದಲ್ಲಿ ಒಂದು ಸಮಯಕ್ಕೆ ಎಲ್ಲವೂ ಅನುಷ್ಠಾನವಾಗಬೇಕು ಎಂದು ತೀರ್ಮಾನ ಮಾಡಿದಾಗ ಹೆಚ್ಚು-ಕಡಿಮೆ ಅದೇ ತಾರೀಖಿಗೆ ದೇಶದಲ್ಲಿ ಎಲ್ಲರೂ ಆ ನಿಯಮವನ್ನು ಅಳವಡಿಸಿಕೊಳ್ಳಬೇಕಾದಂತಹ ಅನಿವಾರ್ಯತೆ ಇರುತ್ತದೆ. ಅಕ್ಟೋಬರ್ 1ನೇ ತಾರೀಖಿನಿಂದ ನಾವು ಈ ತಿದ್ದುಪಡಿಗಳನ್ನು ಅನುಷ್ಠಾನ ಮಾಡಿದ್ದೇವೆ. ಈಗ ಆ ಸುಗ್ರೀವಾಜ್ಞೆಯಲ್ಲಿ ಅನುಷ್ಠಾನವಾಗಿರುವಂತಹ ತಿದ್ದುಪಡಿಗಳಿಗೆ ತಾವೂ ಕೂಡ ಅನುಮೋದನೆಯನ್ನು ನೀಡಬೇಕೆಂದು ಕೋರುತ್ತಾ, ಈ ವಿಧೇಯಕದೊಂದಿಗೆ ತಮ್ಮ ಮುಂದೆ ಬಂದಿದ್ದೇವೆ. ಸುಮಾರು ಸಣ್ಣಪುಟ್ಟ ಅಂಶಗಳು ಇದರಲ್ಲಿದ್ದು ಅವುಗಳಲ್ಲಿ ಪ್ರಮುಖವಾಗಿರುವ ನಾಲ್ಕು ಅಂಶಗಳು ಇದರಲ್ಲಿ ಸೇರಿವೆ.

ಮಾನ್ಯ ಸಭಾಪತಿಯವರೆ, Taxpayer ಗೂ ನಮಗೂ ಅಂದರೆ Tax Authorities ಗೆ ಅವರು ಕಡಿಮೆ ಕಟ್ಟಿದರು, ಸಮಯಕ್ಕೆ ಸರಿಯಾಗಿ ಕಟ್ಟಿಲ್ಲ ಅಥವಾ ಜಾಸ್ತಿ input tax credit ಅನ್ನು ಕೇಳಿದ್ದರು, refund ತೆಗೆದುಕೊಂಡಿದ್ದರು ಈ ರೀತಿ ನಮಗೆ percentage variation ಬಂದಾಗ ಸೆಕ್ಷನ್ 74 ಅಡಿಯಲ್ಲಿ ನಮಗೂ ಅವರಿಗೆ arbitration ಶುರುವಾಗುತ್ತದೆ. ನಾವು ಅವರ ಮೇಲೆ arrears, penalty and interest ಹಾಕುತ್ತೇವೆ. ಅವರು ನಮ್ಮ ವಿರುದ್ಧ ಅದನ್ನು challenge ಮಾಡಿ Tribunal ಗೆ ಹೋಗುತ್ತಾರೆ. ಆಮೇಲೆ ನ್ಯಾಯಾಲಯಕ್ಕೆ ಹೋಗುತ್ತಾರೆ. ಈ ರೀತಿಯಾಗಿ ರಾಜ್ಯದಲ್ಲಿ ನಮಗೂ, ತೆರಿಗೆ ಪಾವತಿದಾರರಿಗೂ ಸುಮಾರು 84,000 ಪ್ರಕರಣಗಳು ಹಾಲಿ ನಡೆಯುತ್ತಿವೆ. ಅದು ಹಂತ ಹಂತವಾಗಿ ನ್ಯಾಯಿಕ ಪ್ರಕರಣಗಳಿವೆ. Interpretation

ನಲ್ಲಿ ಅವರು ನಾನು ಇಷ್ಟೇ ಕಟ್ಟಬೇಕೆಂದು ತಿಳಿದಿರುತ್ತಾರೆ. ನಮ್ಮ interpretation ಪ್ರಕಾರ ಅವರು ಜಾಸ್ತಿ ಕಟ್ಟಬೇಕು. ಆ balance portion ಗೆ ನಾವು ಟ್ಯಾಕ್ಸ್ ಹಾಕುತ್ತೇವೆ, penalty ಯನ್ನೂ ಹಾಕುತ್ತೇವೆ. ಬಡ್ಡಿಯನ್ನೂ ಹಾಕುತ್ತೇವೆ. ಇದು interpretation issues. ವಂಚನೆ ಪ್ರಕರಣಗಳು ಬೇರೆ. ಉದ್ದೇಶಪೂರ್ವಕವಾಗಿ ಕಡಿಮೆ ತೆರಿಗೆ ಕಟ್ಟುವುದು ಬೇರೆ. ಆದರೆ ಎಲ್ಲಿ willful underpayment ಇಲ್ಲ ಅಥವಾ fraud ಇಲ್ಲ ಅಥವಾ fraudulent ಆಗಿ ನಮ್ಮ input tax credit ತೆಗೆದುಕೊಂಡಿರುವಂಥದ್ದು ಇಲ್ಲ, ಅವುಗಳನ್ನು ಹೊರಗಿಟ್ಟಿದೆ. ಅದನ್ನು ಇಲ್ಲಿ ತೆಗೆದುಕೊಂಡು ಬಂದಿಲ್ಲ. ಜಿಎಸ್‌ಟಿ ಕಾನೂನು ಹೊಸದಾಗಿ ಬಂದಾಗ ಅವರು ಒಂದು ರೀತಿಯಾಗಿ interpretation ಮಾಡುತ್ತಿದ್ದರು, ನಾವು ಒಂದು ರೀತಿ interpretation ಮಾಡುತ್ತಿದ್ದೆವು. ಈಗ ಅದೆಲ್ಲಾ ಸಮನ್ವಯವಾಗಿದೆ. ಆರಂಭದಲ್ಲಿ ಅರ್ಥೈಸುವಿಕೆಯಲ್ಲಿ ವ್ಯತ್ಯಾಸಗಳು ಇದ್ದ ಸಂದರ್ಭದಲ್ಲಿ ಬಹಳ ಹೆಚ್ಚಿನ ಪ್ರಕರಣಗಳು ಉದ್ಭವವಾಗಿವೆ. ಅಂಥವು ಇವತ್ತು ತಂದಿರುವ ತಿದ್ದುಪಡಿಗೆ fraud cases ಬಿಟ್ಟು ಸುಮಾರು 84,000 ಕೇಸ್ ಇವೆ. ಅವುಗಳ ಮೊತ್ತವೂ ಬೇರೆಯೇ ಇದೆ. ಆದರೆ ಇದರಲ್ಲಿ ಸುಮಾರು 84,000 ಕೇಸ್‌ಗಳಿವೆ. ಇದರಲ್ಲಿ principal amount, ಬಡ್ಡಿ, penalty ಎಲ್ಲವೂ ಸೇರಿಸಿದರೆ ಸುಮಾರು ರೂ.32,200 ಕೋಟಿಯಾಗುತ್ತದೆ. ಆದರೆ ಅಸಲು, principal tax amount ಸೇರಿದರೆ ರೂ.15,518 ಕೋಟಿ. ಈಗ ಇಷ್ಟೂ ಪ್ರಕರಣಗಳಿಗೆ ನಾವು ಕರಸಮಾಧಾನ ಯೋಜನೆಯನ್ನು ಕೊಡುತ್ತಿದ್ದೇವೆ. ಕರಸಮಾಧಾನ ಎಂದರೆ amnesty. One Time Settlement ಏನೆಂದರೆ ಅವರು principal tax amount ಬಗ್ಗೆ ನಮಗೂ ಅವರಿಗೂ ಇರುವ ವ್ಯಾಜ್ಯದಲ್ಲಿ ನಮ್ಮ interpretation ಪ್ರಕಾರ principal amount ಅನ್ನು ಕಟ್ಟಿದರೆ ಅವರಿಗೆ ನಾವು penalty ಮತ್ತು ಬಡ್ಡಿಯನ್ನು ಬಿಟ್ಟುಕೊಡುತ್ತೇವೆ. ಇದು One Time Settlement. ಈ One Time Settlement ಇವತ್ತು ತಂದಿರುವ ಈ ತಿದ್ದುಪಡಿಯ ಪ್ರಮುಖವಾದ ಅಂಶ.

(ಮುಂದು)

(927) 17-12-2024 4.20 ಕೆಜಿ-ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಭೈರೇಗೌಡ (ಮುಂದು):-**

ಮಾನ್ಯ ಸಭಾಪತಿಯವರೇ. ಎರಡನೆಯದಾಗಿ, ಈಗ ವ್ಯಾಜ್ಯ ಬಂದಾಗ, ಈ ಜಿ.ಎಸ್.ಟಿಗೆ ಒಂದು Appellate Tribunal ಇದೆ. ಈ tribunal ಗೆ ಹೋಗಬೇಕು ಎಂದರೆ, ಅವರು ಅಲ್ಲಿ ಹಣವನ್ನು deposit ಮಾಡಿ ಕೇಸ್‌ನ್ನು ಹಾಕಬೇಕಾಗುತ್ತದೆ. ಅಲ್ಲಿ ಕೆಲವು ಪ್ರಕರಣಗಳಲ್ಲಿ 25 ಕೋಟಿ ರೂಪಾಯಿಗಳನ್ನು deposit ಇಡಬೇಕೆಂದು ನಿಗದಿ ಮಾಡಿದ್ದೇವೆ. ಇನ್ನು ಕೆಲವು ಪ್ರಕರಣಗಳಲ್ಲಿ 50 ಕೋಟಿ ರೂಪಾಯಿಗಳನ್ನು deposit ಇಡಬೇಕೆಂದು ನಿಗದಿ ಮಾಡಿದ್ದೇವೆ. ಇದು ಏನಾಗುತ್ತದೆ ಎಂದರೆ, ಕೆಲವರು ಇಲ್ಲಿ 25 ಕೋಟಿ ರೂಪಾಯಿಗಳು ಹಾಗೂ 50 ಕೋಟಿ ರೂಪಾಯಿಗಳನ್ನು deposit ಇಡಬೇಕು, ಅದರ ಬದಲಿಗೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋದರೆ Writ Petition ನಲ್ಲಿ ಯಾವುದೇ deposit ನ್ನು ಇಡಬೇಕಾಗಿಲ್ಲ. ಹಾಗಾಗಿ, ಅವರು ನೇರವಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿ ಒಂದು ತಡೆಯಾಜ್ಞೆಯನ್ನು ತೆಗೆದುಕೊಂಡರೆ ಮುಗಿಯಿತು. ನಾವು ಏನು ಮಾಡುವುದಕ್ಕೆ

ಆಗುವುದಿಲ್ಲ. ಹಾಗಾಗಿ, tribunal ಗೆ ಹೆಚ್ಚು ಪ್ರಕರಣಗಳು ಬಂದರೆ, tribunal ನಲ್ಲಿ ನಮ್ಮದು speed of disposal ಬಹಳ ಚೆನ್ನಾಗಿ ಇದೆ. ನ್ಯಾಯಾಲಯಕ್ಕಿಂತ ಚೆನ್ನಾಗಿ ಇದೆ. Tribunal ನಲ್ಲಿ ನಮ್ಮ ಅಧಿಕಾರಿಗಳು ಇರುತ್ತಾರೆ. ಅಲ್ಲದೇ, ನಮ್ಮ ಒಂದು ರಕ್ಷಣೆಯೂ ಸಹ ಇರುತ್ತದೆ. ಅಲ್ಲಿ ಬೇಗ ತೀರ್ಮಾನವಾಗುತ್ತದೆ. ಆಮೇಲೆ ತೆರಿಗೆ ಪಾವತಿದಾರರಿಗೂ ಸಹ ಅಲ್ಲಿ ಇಡಬೇಕಾದಂತಹ deposit ನ್ನು ಕಡಿಮೆ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ನಮ್ಮ ಉದ್ದೇಶ ಏನೆಂದರೆ, ಹೆಚ್ಚು ಕೇಸ್‌ಗಳು tribunal ಗೆ ಬರಬೇಕು ಎನ್ನುವುದಾಗಿದೆ. ನೇರವಾಗಿ ನ್ಯಾಯಾಲಯಕ್ಕೆ ಹೋದರೆ, ನ್ಯಾಯಾಲಯದಲ್ಲಿ ಪ್ರಕರಣ ಮುಗಿಯುವಷ್ಟರಲ್ಲಿ ಎಷ್ಟು ವರ್ಷಗಳು ಆಗುತ್ತದೆಯೋ, ಅವರೂ ವಕೀಲರನ್ನು ನೇಮಿಸಿಕೊಳ್ಳಬೇಕು, ನಾವೂ ವಕೀಲರನ್ನು ನೇಮಿಸಕೊಳ್ಳಬೇಕು. ಕೊನೆಗೆ outcome ಏನು ಎಂದು ಕೇಳಿದಾಗ, ನಾವು ಏನ್ನನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಆಗುವುದಿಲ್ಲ. ಹಾಗಾಗಿ, tribunal ಗೆ ಹೆಚ್ಚು ಪ್ರಕರಣಗಳು ಬರಲಿ ಎಂದು ಹಾಗೂ ಅವರು tribunal ಗೆ deposit ಇಡಬೇಕಾದಂತಹ ಹಣವನ್ನು ನಾವು 20 ಕೋಟಿ ರೂಪಾಯಿಗಳಿಗೆ ಇಳಿಕೆ ಮಾಡುತ್ತಿದ್ದೇವೆ. ಈ ಒಂದು ತಿದ್ದುಪಡಿಯನ್ನು ಸಹ ಇದರಲ್ಲಿ ತೆಗೆದುಕೊಂಡು ಬಂದಿದ್ದೇವೆ. ಈಗ ಕೆಲವು ಪ್ರಕರಣಗಳಿಗೆ 25 ಕೋಟಿ ರೂಪಾಯಿಗಳು ಡಿಪಾಸಿಟ್ ಇಡಬೇಕೆಂದು ಇದೆ. ಇನ್ನು ಕೆಲವು ಪ್ರಕರಣಗಳಿಗೆ 50 ಕೋಟಿ ರೂಪಾಯಿಗಳು ಇದೆ. ಈಗ ಈ ಎರಡನ್ನು ಸಹ 20 ಕೋಟಿ ರೂಪಾಯಿಗಳಿಗೆ ಸಮಾನೀಕರಿಸಿ ಅದನ್ನು ನಾವು deposit ಇಡುವುದಕ್ಕೆ ಇದರಲ್ಲಿ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇವೆ. ಇದು ಪ್ರಮುಖವಾದಂತಹ ಅಂಶಗಳು. ಇನ್ನು ಉಳಿದ ಸಣ್ಣ ಪುಟ್ಟ ತಿದ್ದುಪಡಿಗಳು ಸಹ ಇದಕ್ಕೆ ತತ್ಸಬಂಧವಾದ ತಿದ್ದುಪಡಿಗಳು ಸಹ ಸುಮಾರು ಇವೆ. ಈ 3 ಪಾಯಿಂಟ್‌ಗಳನ್ನು incorporate ಮಾಡುವುದಕ್ಕೆ ಸುಮಾರು ಪದಗಳ ಬದಲಾವಣೆಗಳು ಇದರಲ್ಲಿ ಸೇರಿದೆ. ಆದರೆ, ಇದರಲ್ಲಿ ಪ್ರಮುಖವಾದ ಮೂರು ತಿದ್ದುಪಡಿಯ ಅಂಶಗಳು ಇವೆ. ನಮ್ಮ ದೇಶದಲ್ಲಿ ಏಕರೂಪವಾದಂತಹ ವಿಧಾನ ಇರಬೇಕು ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಹಾಗಾಗಿ, ಈ ವಿಧೇಯಕವನ್ನು ಅಂಗೀಕರಿಸಿ ಕೊಡಬೇಕೆಂದು ನಾನು ಮತ್ತೊಮ್ಮೆ ಸದನವನ್ನು ಕೋರುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿ ಪ್ರಶ್ನೆ ಏನೆಂದರೆ, levy of interest shall be 12 percent ಎನ್ನುವಂತಹದ್ದು, ಇದರಲ್ಲಿ ನಮ್ಮ claim. ಆದರೆ, ಇದರಲ್ಲಿ 18% ಹಾಕುತ್ತಿದ್ದಾರೆ. Levy of interest should be 12 percent only. ಬಹಳ ಸಲ ಏನಾಗುತ್ತದೆ ಎಂದರೆ, late filing ಆಗುವಂತಹದ್ದು ಇರುತ್ತದೆ. Regular ಆಗಿ small assessees ಏನಿದ್ದಾರೆ, ಅವರ transactions ಅವರ ವ್ಯವಸ್ಥೆಯನ್ನು ನೋಡುತ್ತಾ ಅದು intime file ಆಗುವಂತಹದ್ದು ಆಗುವುದಿಲ್ಲ. Uniform ಆಗಿ ದೊಡ್ಡ ದೊಡ್ಡ ಕಂಪನಿಗಳಾದ Infosys, TATA, ಅವರೆಲ್ಲರೂ ಹಾಕಿದಂತಹ ಎನ್ನುವ ರೀತಿಯಲ್ಲಿ 18% ಆಗಿರುವಂತಹದ್ದು ಅವರಿಗೆ ಒಂದು ರೀತಿಯಿಂದ harassment ಆಗುತ್ತದೆ. ಅದಕ್ಕೆ ಅದನ್ನು 12% ಮಾಡಿದರೆ, it will be beneficial for them. ಈ harassment ತಪ್ಪುತ್ತದೆ ಎನ್ನುವಂತಹದ್ದು ಒಂದು ವಿಚಾರ. ಇದರಲ್ಲಿ ತಿದ್ದುಪಡಿ ಬೇಕು. ಇದಕ್ಕೆ ವಿಶೇಷವಾದಂತಹ ತೊಂದರೆ ಏನಿಲ್ಲ. ಬಹಳಷ್ಟು small assessees ಯಿಂದ ಹೆಚ್ಚಿಗೆ ಆಗುತ್ತದೆ ಎನ್ನುವುದು ಏನಿಲ್ಲ.

It won't be a heavy loss for the Government by levying their tax. ಇದು ಒಂದು ವಿಚಾರ. ಎರಡನೆಯದ್ದು revise return ಗೆ ಏನಿದೆ, ಅದಕ್ಕೆ ಇದರಲ್ಲಿ ಅವಕಾಶ ಕೊಟ್ಟಿಲ್ಲ. Monthly return ಇರಬಹುದು, yearly return ಇರಬಹುದು, ಅವರಿಗೆ option ಅನ್ನು ಕೊಡಬೇಕು. ಆ tax assessees ಗೆ ಕನಿಷ್ಟ ಪಕ್ಷ 15 ರಿಂದ 20 ದಿವಸಗಳನ್ನು ನೀಡಿ revise return ನೀಡುವುದಕ್ಕೆ ಅವಕಾಶವನ್ನು ಕೊಟ್ಟರೆ, it will be helpful for them. ಕೆಲವು ಸಾರಿ ಏನಾಗುತ್ತದೆ ಎಂದರೆ, goods in transit ಇರುತ್ತದೆ. ನಮ್ಮಿಂದ ಯಾವುದೋ ಹೋಗಿರುತ್ತದೆ. ಅಂತಹ transit ಇದ್ದಂತಹ ಸಂದರ್ಭದಲ್ಲಿ ನಾವು ನಮ್ಮದನ್ನು ಹಾಕಬೇಕಾಗುತ್ತದೆ. ಅದು ನಮ್ಮ ದಾಖಲೆಗಳಲ್ಲಿ reflect ಆಗಿರುತ್ತದೆ. ಅದು ಅವರಿಗೆ ತಲುಪಿಲ್ಲ ಎನ್ನುವ ಕಾರಣಕ್ಕೆ ಅದು ಅವರಲ್ಲಿ reflect ಆಗಿರುವುದಿಲ್ಲ. ಆಗ ನಮಗೆ ತಕ್ಷಣವೇ you have not complied with it ಎಂದು ನೋಟೀಸ್ ಬರುತ್ತದೆ. ಹಾಗಾಗಿ, ಅವರಿಗೆ 15 ರಿಂದ 20 ದಿವಸಗಳಾದರೂ ಸಹ ಕಾಲಮಿತಿಯನ್ನು ಕೊಡಬೇಕು. ಇದು revise return ಆಗುವುದಕ್ಕೆ. ಇದು ಎಲ್ಲಾ ಸಮಯದಲ್ಲಿಯೂ ಸರಿ ಇರುವುದಿಲ್ಲ. ಅದನ್ನು ನೋಡಿಕೊಂಡು ಚೆಕ್ ಮಾಡಿ ಮಾಡಬೇಕೆಂದರೆ, always it is a harassment for the small assessees. ಇದನ್ನು ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ, ಮೇಲಿಂದ ಮೇಲೆ ನೋಟೀಸ್ ಬರುತ್ತದೆ, ಅದಕ್ಕೆ reply ಕೊಡುವುದು ಆಗುತ್ತದೆ. ಅವರು ಮತ್ತೊಂದು cheque ಕೊಡುವುದು ಆಗುತ್ತದೆ. Government mechanism unnecessary waste of time ಆಗುವಂತಹದ್ದು ಮತ್ತು ಇವರದ್ದು ಅಷ್ಟು harassment ಆಗುವಂತಹದ್ದು ಆಗುತ್ತದೆ. ಆಮೇಲೆ third point ವಿಶೇಷ ಏನು, ಈ levy of tax under RCM (Reverse Charge Mechanism) ಇದೆಯಲ್ಲಾ, it is really a botheration for all persons ಇದು ಅವಶ್ಯಕತೆ ಇಲ್ಲ ಎನ್ನುವಂತಹದ್ದು ಆಗಿದೆ. RCM ಅನ್ನು ಏತಕ್ಕಾಗಿ ಸೇರಿಸಿದರೋ ಗೊತ್ತಿಲ್ಲ. ಈ ಷರತ್ತುಗಳು ಹಾಕುವಂತಹದ್ದು ಮೊದಲೇ wrong ಇವೆ. ಇವು ವಿಶೇಷವಾಗಿ harassment ಮಾಡಬೇಕು ಎನ್ನುವಂತಹದ್ದು ಅದು rigid ಅದಂತಹ ಕಾರಣಕ್ಕೆ ಯಾರಿಗಾದರೂ ಅನಿಸಿಬಿಡುತ್ತದೆ. ಈಗ ಅನೇಕ ಪ್ರಕರಣಗಳು filing ಆಗುತ್ತಿವೆ. Multiplication of proceedings ಆಗುವಂತಹದ್ದು ಬಹಳ ಪ್ರಕರಣಗಳಲ್ಲಿ ಅವಕಾಶ ಇದೆ. ಒಂದು ತಿಂಗಳು ಆಗುವುದಿಲ್ಲ. Minimum three to four months ಅದನ್ನು file ಮಾಡುವುದಕ್ಕೆ ಲಿಮಿಟ್‌ನ್ನು ಕೊಡಬೇಕಾಗುತ್ತದೆ. ಆಗ process ಸರಳೀಕೃತವಾಗುತ್ತದೆ ಎನ್ನುವಂತಹದ್ದು ನಮ್ಮ claim ಆಗಿದೆ. RCM ಅವರದ್ದು.

ಮಾನ್ಯ ಸಭಾಪತಿಯವರೇ. 4ನೇ ಪಾಯಿಂಟ್ ಏನೆಂದರೆ, ಈ compliance of law within the time schedule ಎಂದು ಏನು ಹಾಕುತ್ತಿದ್ದಾರಲ್ಲವೇ ಅದು overall ಎಲ್ಲರಿಗೂ harassment ಆಗುತ್ತಿದೆ. ಹಾಗಾಗಿ, ಮಾನ್ಯ ಸಚಿವರು ಇದನ್ನು ಸ್ವಲ್ಪ ಚೆಕ್ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. Common traders ಗಳಿಗೆ businessman ಗಳಿಗೆ, ಅವರೆಲ್ಲರಿಗೂ they are not so expert in submitting all these records as per this law. ಅವರಿಗೆ ಅವಕಾಶ ಕೊಡಬೇಕು. Then the filing will be correct

and regular. ಈ ಎಲ್ಲಾ ತಿದ್ದುಪಡಿಗಳನ್ನು ದಯಮಾಡಿ ಮಾಡಬೇಕೆಂದು ಇದನ್ನು undertake ತೆಗೆದುಕೊಳ್ಳಬೇಕು ಎನ್ನುವುದನ್ನು it is our pressure on the Government.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಜಿಎಸ್‌ಟಿ ವಿಚಾರದಲ್ಲಿ ಬಹಳಷ್ಟು ಅಧಿಕಾರಿಗಳ harassment ಹೆಚ್ಚಿಗೆ ಆಗಿದೆ. ನಾನು Karnataka Jewellery Association ನ ಅಧ್ಯಕ್ಷನಾಗಿದ್ದೇನೆ. ನನಗೆ ಇದರ ಬಗ್ಗೆ ಬಹಳಷ್ಟು ದೂರುಗಳು ಬರುತ್ತವೆ. ನಾನು ಇದರ ಬಗ್ಗೆ ಅಧಿಕಾರಿಗಳಿಗೆ ಪತ್ರವನ್ನು ಬರೆದ್ದೇನೆ. ಅದಕ್ಕೆ ಅವರಿಂದ ಯಾವುದೇ ರಿಪ್ಲೈ ಬಂದಿಲ್ಲ. ಅದು ಒಂದು ಕಡೆ ಇರಲಿ. ಇವತ್ತು GST digitalise ಮಾಡಬೇಕೆಂದು ಮಾನ್ಯ ಸಚಿವರು ಬಹಳ ಹರಸಾಹಸ ಪಟ್ಟು ಅದನ್ನು ಎಲ್ಲಾ ರೀತಿಯಲ್ಲಿಯೂ simplify ಮಾಡಬೇಕೆಂದು ಹೊರಟ್ಟಿದ್ದಾರೆ. ಯಾವುದೇ ಒಬ್ಬ ವ್ಯಾಪಾರಸ್ಥ GST application ಅನ್ನು online ನಲ್ಲಿ upload ಮಾಡಿದ ಮೇಲೆ, ಮುಂದೆ follow up ಮಾಡಿ ಅದಕ್ಕೆ online ನಲ್ಲಿ reply ಬರಬೇಕು. ಇದಕ್ಕೆ ಒಂದು ತಿಂಗಳ ಕಾಲಮಿತಿಯನ್ನು ಇಡಬೇಕು. ಇದಕ್ಕೆ ಒಂದು time bound ಇರುವುದಿಲ್ಲ. ನಾವು ಹಾಕಿದ ಮೇಲೆಯೂ ಸಹ, ಒಂದು ತಿಂಗಳಾದ ಮೇಲೆ ಮತ್ತೆ ಅಧಿಕಾರಿಗಳನ್ನು ಹೋಗಿ ನೋಡಬೇಕಾಗುತ್ತದೆ. ಅದಕ್ಕೆ online ನಲ್ಲಿ reply ಸಿಗುವುದಿಲ್ಲ. ನಾವು ಅಲ್ಲಿಗೆ ಹೋಗಿ ನೋಡಿದ ಮೇಲೆ. ಅದನ್ನು ಕೊಡು, ಇದನ್ನು ಕೊಡು ಎಂದು ಮತ್ತೆ 3 ತಿಂಗಳವರೆಗೂ ಆಟ ಆಡಿಸುತ್ತಾರೆ. ಅವರು registration ಆಗುವುದಿಲ್ಲ.

ಮಾನ್ಯ ಸಭಾಪತಿಯವರೇ, ಆಮೇಲೆ ಮಾನ್ಯ ಸಚಿವರು OTS (One Time Settlement) ಬಗ್ಗೆ ಹೇಳಿದ್ದಾರೆ. ನಾನು OTS ಅನ್ನು ಒಪ್ಪಿಕೊಳ್ಳುತ್ತೇನೆ. ನಾನು ಇಲ್ಲವೆಂದು ಹೇಳುವುದಿಲ್ಲ. ಮತ್ತೆ ಬಡ್ಡಿ ಹೆಚ್ಚಿಗೆ ಹಾಕಿ ಮತ್ತೆ OTS ಮಾಡುವುದು ಎಷ್ಟರ ಮಟ್ಟಿಗೆ ಸರಿ? ಕೊನೆಯ ಪಕ್ಷ bank interest ಹಾಕಲಿ. Bank interest ಗಿಂತ ಹೆಚ್ಚಿಗೆ ಏಕೆ ಹಾಕುತ್ತಾರೆ? 12% ಹಾಕಲಿ. 18% ಏಕೆ ಬೇಕು? ಈ ಸಣ್ಣಪುಟ್ಟ ವ್ಯಾಪಾರಿಗಳು ಎಲ್ಲಿಗೆ ಹೋಗುತ್ತಾರೆ? ಅಲ್ಲಿ ಕೆಲವು ತಾಂತ್ರಿಕ ದೋಷಗಳು ಆಗಿರುತ್ತವೆ. Cut-off date ಇರುತ್ತದೆ. ಆ ದಿನಾಂಕದೊಳಗೆ ಅದು ಏನಾಗುತ್ತದೆ ಎಂದರೆ, ಈ upload ಮಾಡುವಂತಹದ್ದರಲ್ಲಿ ಕೆಲವು ಬೇರೆ ಬೇರೆ ದೋಷಗಳು ಆಗಿರುತ್ತವೆ. ಮಾತನಾಡಿದರೆ, server down ಎಂದು ಹೇಳುತ್ತಾರೆ. ಕೊನೆಗೆ last date 2/3 ದಿವಸಗಳು ಇರುತ್ತದೆ. ತಾವು Income Tax, GST, Professional Tax, ESI, PF, Trade, ಯಾವುದನ್ನೇ ತೆಗೆದುಕೊಳ್ಳಿ. ಯಾವುದೇ ತೆರಿಗೆ ಇರಲಿ, ಅದು ಏನಾಗುತ್ತದೆ ಎಂದರೆ, ಈಗ ಉದಾಹರಣೆಗೆ ಹೇಳಬೇಕೆಂದರೆ, ನಾವು ಮನೆಗಳಲ್ಲಿಯೋ ಅಥವಾ ಬೇರೆ ಬೇರೆ ಎಲ್ಲಾ ಚುಟುವಟಿಕೆಗಳಿಗೆ ಒಂದು ಬೆಂಕಿಪೊಟ್ಟಣವನ್ನು ಇಟ್ಟುಕೊಂಡಿರುತ್ತೇವೆ. ನಾವು ಆ ಬೆಂಕಿಪೊಟ್ಟಣದ ಕಡ್ಡಿಯನ್ನು ಹಚ್ಚಿದಾಗ ಮೊದಲನೇ ಕಡ್ಡಿಯಿಂದ ಹಿಡಿದು ಬಹುಶಃ 20 ರಿಂದ 25 ನೇ ಕಡ್ಡಿಯವರೆಗೂ careless ಆಗಿ ಬಳಕೆ ಮಾಡುತ್ತೇವೆ. ನಾವು ಇನ್ನೇನು ಒಂದೆರಡು ಕಡ್ಡಿ ಇದೆ ಎನ್ನುವಾಗ ಎಚ್ಚರವಹಿಸಿ ಉಳಿದ ಕಡ್ಡಿಗಳನ್ನು ಸರಿಯಾಗಿ ಹಚ್ಚದೇ ಹೋದರೆ, ಬೆಂಕಿಪೊಟ್ಟಣ ಖಾಲಿ ಆಗುತ್ತದೆ ಎಂದು ಎಚ್ಚರ ವಹಿಸುತ್ತೇವೆ.

(ಮುಂದು)

**(928) 17.12.2024 4.30 ಎಂವಿ-ವಿಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಎ.ಶರವಣ (ಮುಂದು):-**

ಹಾಗೆ last date ಬಂದಾಗ, ಅಂದರೆ ಒಂದೆರಡು ದಿವಸ ಇದ್ದಾಗ, ಇಡೀ ರಾಜ್ಯ ಮತ್ತು ರಾಷ್ಟ್ರದಲ್ಲಿ ಇರುವಂತಹ ಎಲ್ಲರೂ ಕೂಡ ಆನ್‌ಲೈನ್‌ನಲ್ಲಿ ಪ್ರಯತ್ನಪಡುತ್ತಾರೆ. ಆಗ ಅದು ಸಿಗುವುದಿಲ್ಲ. ಅದು next day ನಲ್ಲಿ penalty list ಮತ್ತು interest list ನಲ್ಲಿ ಬಂದು ಬಿಟ್ಟಿರುತ್ತದೆ. ಇದು ಅವರಿಗೆ ಗೊತ್ತಿರುತ್ತದೆ. ಅಂದರೆ, ಆಡಿಟರ್‌ಗಳು ಅದನ್ನು ಹೇಗೆ use ಮಾಡುತ್ತಾರೆ ಮತ್ತು ಏನೇನು ಆಗುತ್ತದೆಂದು ಅವರ ಗಮನಕ್ಕೆ ಬಂದಿರುತ್ತದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದುದರಿಂದ, ಇದಕ್ಕೆ ಸ್ವಲ್ಪ ಸರಳೀಕರಣ ಮಾಡಲಿ. ಅದರ interest ಅನ್ನು ಕಡಿಮೆ ಮಾಡಲಿ. ಈಗ OTS ಮಾಡಲಿ, ನಾನು ಅದನ್ನು ಬೇಡವೆಂದು ಹೇಳುವುದಿಲ್ಲ. ಈ OTS ಮಾಡುವುದರಿಂದ, GST ಬಗ್ಗೆ ಯಾರ್ಯಾರು ಕೋರ್ಟ್‌ಗಳಲ್ಲಿ ಬೇರೆ ಬೇರೆ ರೀತಿಯ ವ್ಯಾಜ್ಯಗಳಿವೆ ಅವರೆಲ್ಲರೂ ಕೂಡ ಸ್ವಲ್ಪ ಯೋಚನೆ ಮಾಡುತ್ತಾರೆ. ಅಂದರೆ, ಅವರು ಅದನ್ನು ಮುಗಿಸಿಕೊಳ್ಳೋಣವೆಂದು ಒಂದು ಹಂತಕ್ಕೆ ಬರುತ್ತಾರೆ. ಇದು ಒಂದು ಒಳ್ಳೆಯ ಯೋಜನೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್ ಸಾಹೇಬರು ಹೇಳಿದ ಹಾಗೆ interest ಅನ್ನು reduce ಮಾಡಲಿ. ಇಲಾಖೆಯ ಅಧಿಕಾರಿಗಳು harassment ಮಾಡುವಂಥದ್ದನ್ನು ಕಡಿಮೆ ಮಾಡಲಿ. ನಾನು ಇದರ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಗುರುವಾರ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಕೊಡಬೇಕು. ನಾನು ಅದರ full story ಯನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಈ GST ಯಿಂದ ಒಳ್ಳೆಯದಾಗಬೇಕೆಂದು ಇದನ್ನು ಜಾರಿಗೆ ತಂದರು. ಆದರೆ, ನಮ್ಮ ರಾಜ್ಯದಲ್ಲಿ ಏನಾಗುತ್ತಿದೆ ಎಂದರೆ, ನಿಮ್ಮದು ಏನಾದರೂ ಆಗಬೇಕಾದರೆ ನಮಗೆ ಎಷ್ಟು ಕೊಡುತ್ತೀರಿ ಹೇಳಿ ಎನ್ನುತ್ತಾರೆ. ಅವರು ಹೋಗಿ ವಸೂಲಿ ಮಾಡುತ್ತಾರೆ. ಅವರು ನಾವು ಏನು ಮಾಡುವುದು ನಮಗೆ ಒತ್ತಡ ಇದೆ ಎಂದು ಹೇಳುತ್ತಾರೆ. ನೀವು ಕೊಡಲೇಬೇಕೆಂದು harassment ಮಾಡುತ್ತಾರೆ. ಅವರು ಈ ಕಷ್ಟವನ್ನು ಯಾರಿಗೆ ಹೇಳಿಕೊಳ್ಳಬೇಕು. ಇದಕ್ಕೆ ತಿದ್ದುಪಡಿಯನ್ನು ತರಲಿ. ಆದರೆ, ಅದರ ಕಡೆಗೂ ಸಹ ಗಮನಹರಿಸಬೇಕೆಂದು ಮಾನ್ಯ ಸಚಿವರಿಗೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ GST interpretation ನಿಂದ 32,262/- ಕೋಟಿ ರೂಪಾಯಿಗಳು ಮತ್ತೆ ಅದರಲ್ಲಿ 15,515/- ಕೋಟಿ ರೂಪಾಯಿಗಳು ಎಂದು ಸನ್ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದಕ್ಕೆ One Time Settlement ಗೆ ಎಷ್ಟು time frame ಅನ್ನು ಇಟ್ಟಿದ್ದಾರೆ ಎಂದು ನನಗೆ ಮಾಹಿತಿ ಬೇಕಾಗಿದೆ. ಹಾಗೆಯೇ ಡಿಪಾಸಿಟ್ ಬಗ್ಗೆ Appellate Tribunal ನಲ್ಲಿ ಏನು challenge ಮಾಡಿದ್ದೇವೆ, ಅದರಲ್ಲಿ 25 ಕೋಟಿ ರೂಪಾಯಿಗಳನ್ನು ಕಟ್ಟಬೇಕು ಎಂದಾಗ, 20 ಕೋಟಿ ರೂಪಾಯಿಗಳು ಮತ್ತೆ 50 ಕೋಟಿ ರೂಪಾಯಿಗಳನ್ನು ಕಟ್ಟಬೇಕು ಎಂದಾಗ 20 ಕೋಟಿ ರೂಪಾಯಿಗಳು ಎಂದಿದ್ದಾರೆ. ಈಗ 25 ಕೋಟಿ ರೂಪಾಯಿಗಳನ್ನು ಕಟ್ಟಿದಾಗ ಇನ್ನು ಸ್ವಲ್ಪ rebate ಕೊಡಬಹುದೇ ಎಂದು ನೋಡಬೇಕು. ಅದನ್ನು 15 ಕೋಟಿ ರೂಪಾಯಿಗಳೆಂದು ಮಾಡಬಹುದೇ? ಏಕೆಂದರೆ, 50 ಕೋಟಿ ರೂಪಾಯಿಗಳಿಗೆ proportionate ಆಗಿ, 20 ಕೋಟಿ ರೂಪಾಯಿಗಳು ಎಂದರೆ ಕಡಿಮೆ ಎನಿಸುತ್ತದೆ. ಈಗ 25 ಕೋಟಿ ರೂಪಾಯಿಗಳಿಗೆ 20 ಕೋಟಿ ರೂಪಾಯಿಗಳು ಎಂದಾಗ ಇದು ಜಾಸ್ತಿ ಎನಿಸುತ್ತದೆ. ಹಾಗಾಗಿ, ನಾನು ತಮ್ಮ

ಮೂಲಕ ಸರ್ಕಾರ ಮತ್ತು ಮಾನ್ಯ ಮಂತ್ರಿಗಳ ಗಮನಸೆಳೆಯುತ್ತೇನೆ. ಈ ಮೊತ್ತವನ್ನು ಇನ್ನು ಕಡಿಮೆ ಮಾಡಬಹುದೇ ಎಂಬುದರ ಬಗ್ಗೆ ಯೋಚಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶಕ್ಕಾಗಿ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಏನು One Time Settlement ಅನ್ನು ಈಗ Karasamadhana Scheme ಅನ್ನು ತಂದಿದ್ದೇವೆಂದು ಹೇಳುತ್ತಿದ್ದಾರೆ. ಇದರಿಂದ ನನಗೆ ಏನು ಅನಿಸುತ್ತದೆಂದರೆ, ಈ 32,000/- ಕೋಟಿ ರೂಪಾಯಿಯಷ್ಟು ಬರಬೇಕಾದ ಹಣದಲ್ಲಿ ಶೇಕಡಾ 50ರಷ್ಟನ್ನು dilution ಮಾಡಿ, ಬಂದಷ್ಟು ಬಂದು ಬಿಡಲಿ ಎಂಬ ಕಾರಣಕ್ಕೋಸ್ಕರ settlement ಗಳನ್ನು ಮಾಡಿ, ಹಣ ಕಟ್ಟಿಸಿಕೊಂಡರೆ, ಇದೇ GST ಯವರು ಲಕ್ಷಾಂತರ ಜನ ತೆರಿಗೆದಾರರ ಮೇಲೆ ಅನೇಕ ಕೇಸ್‌ಗಳನ್ನು ಹಾಕಿ, ದಂಡ ಮತ್ತು ಬಡ್ಡಿ ಹಾಕಿ ವಸೂಲಿ ಮಾಡಿರುವಂತಹ ಪ್ರಾಮಾಣಿಕರ ಪರಿಸ್ಥಿತಿ ಏನು? ಅಂದರೆ, ಯಾರು dispute ಮಾಡುತ್ತಾರೆ, ಮತ್ತೆ ಆ dispute ಅನ್ನು ಎಷ್ಟು ದೂರ ಎಳೆದುಕೊಂಡು ಹೋಗುತ್ತಾರೆ, ಅಂತಹವರಿಗೆ ಇದರಿಂದ benefit ಸಿಗುತ್ತದೆ ಎನ್ನುವಂಥದ್ದು, ಈ ವಿಧೇಯಕದ ಮೂಲಕ ತರುತ್ತಿರುವಂಥದ್ದು. 2017 ರಿಂದ ಅನೇಕ ರೀತಿಯಾದಂತಹ ವ್ಯಾಜ್ಯಗಳು ನಡೆದು ಇಲಾಖೆ ಮತ್ತು ಆ ವ್ಯವಹಾರಸ್ಥರ ಮಧ್ಯೆ documentations exchange ಆಗಿ, ಕೊನೆಗೆ ಅವನು ಬೇಸರ ಮಾಡಿಕೊಂಡು ಬಡ್ಡಿ ಮತ್ತು ದಂಡವನ್ನು ಕಟ್ಟಿರುತ್ತಾನೆ.

**ಶ್ರೀ ಎಂ.ಬಿ.ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ GST ಕೇಂದ್ರ ಸರ್ಕಾರದ್ದು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಈಗ ಅವನಿಗೆ ಏನು ಅನಿಸುತ್ತದೆಂದರೆ, ಅವತ್ತು ಕಟ್ಟದೇ ಇದ್ದಿದ್ದರೆ, ಅಷ್ಟು ಹಣ ಏನಾದರೂ ಉಳಿದಿರುವುದು ಎನ್ನುವ ರೀತಿಯಲ್ಲಿ ಅನಿಸುತ್ತದೆ. ಹಾಗಾಗಿ, ಇವರು ಎಲ್ಲೋ ಒಂದು ಕಡೆಗೆ limit fix ಮಾಡಬೇಕು. ಈಗ ಸಣ್ಣ ವ್ಯವಹಾರಸ್ಥರು ಮತ್ತು small traders ಇದ್ದರೆ, ಅವರಿಗೆ ಒಂದು limit fix ಮಾಡಿಸಿ, ಅವರ ಬಳಿ ಮಾಡಿಸಲಿ. ಇನ್ನು ಎರಡನೆಯದು ಏನೆಂದರೆ, input credit ಬಗ್ಗೆ ಹೇಳುವುದಾದರೆ, ಈಗಾಗಲೇ assessment ಗಳನ್ನು ಮಾಡಿ, ಆ assessment ಅನ್ನು final ಮಾಡಿ, input credit ಮೂಲಕ ತಮಗೆ ಏನೂ ಬರುವುದಿಲ್ಲ ಎನ್ನುವಂತಹ ರೀತಿಯಲ್ಲಿ returns ಅನ್ನು file ಮಾಡಿ, ಎಲ್ಲವೂ ಸಹ set right ಆಗಿಬಿಟ್ಟಿರುತ್ತದೆ. ಈಗ ಮತ್ತೆ 2017ರ ನಂತರ input credit ಇರುವಂಥದ್ದನ್ನು allow ಮಾಡುತ್ತೇವೆ ಎನ್ನುವಂಥದ್ದರಿಂದ, ಎಷ್ಟೋ ಜನರು input credit ನಲ್ಲಿ ಬಹಳಷ್ಟು ದೋಖ ಮಾಡಿದ್ದಾರೆ ಎನ್ನುವಂಥದ್ದು ಸರ್ಕಾರದ ಗಮನಕ್ಕೂ ಕೂಡ ಇದೆ. ಈಗ fake invoice ಗಳನ್ನು generate ಮಾಡಿ, ಆ fake invoice ಗಳಲ್ಲಿ ಬರದೇ ಇರುವಂತಹ input credit ಅನ್ನು ತೆಗೆದುಕೊಂಡು, ಅದರ ಮೂಲಕ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳಷ್ಟು ನಷ್ಟವಾಗಿರುವಂಥದ್ದು ಕೂಡ ಇದೆ. ಆ ರೀತಿ ಇರುವಂತಹ ಸಂದರ್ಭದಲ್ಲಿ ಎಲ್ಲೋ ಒಂದು short term period ಗೆ input credit ಗೆ exemption ಕೊಟ್ಟಿದ್ದರೆ ಅದು ಒಂದು ರೀತಿ.

ಈಗ ಪ್ರಾರಂಭದಿಂದ input credit ಅನ್ನು ಕೊಡುತ್ತಿದ್ದೇವೆಂದರೆ, ಎಲ್ಲೋ ಒಂದು ಕಡೆ ನಿಜವಾಗಿಯೂ ಯಾರು ಬಹಳ ಕಟ್ಟುನಿಟ್ಟಿನ ವ್ಯವಹಾರವನ್ನು ಮಾಡಿಕೊಂಡು ಬಂದಿರುತ್ತಾರೆ ಅಂತಹವರಿಗೆ ಹಿನ್ನಡೆ ಆಗುತ್ತದೆ. ಮೂರನೆಯ ವಿಷಯವನ್ನು ತಮ್ಮ ಮೂಲಕ ಸರ್ಕಾರ ಮತ್ತು ಸಚಿವರ ಗಮನಕ್ಕೆ ತರುವಂಥದ್ದು ಏನೆಂದರೆ, ಈ audit assessment ಎಂದು ಮಾಡುತ್ತಾರೆ. ಕರ್ನಾಟಕದ SGST ನಲ್ಲಂತೂ ಎಷ್ಟು ಹಿಂಸೆ ಕೊಡುತ್ತಾರೆ, ಈ audit assessment ನಲ್ಲಿ ಎಂದರೆ, 2017, 2018 ಮತ್ತು 2019 ಸಾಲಿನವುಗಳಿಗೆ ನೋಟೀಸ್‌ಗಳನ್ನು ಕಳುಹಿಸಿಬಿಡುತ್ತಾರೆ. ಅವರು ಆ ನೋಟಿಸ್‌ಗಳನ್ನು ಕಳುಹಿಸಿ, ಆಡಿಟ್ ಪ್ರಕಾರ ನೀವು ಇನ್ನು ಹೆಚ್ಚುವರಿಯಾಗಿ ಎಷ್ಟು ಜಿ.ಎಸ್.ಟಿ.ಯನ್ನು ಕಟ್ಟಬೇಕು ಎನ್ನುವಂತಹ ನೋಟಿಸ್ ಅನ್ನು ಕಳುಹಿಸುತ್ತಾರೆ. ಅದಕ್ಕೆ ಇಷ್ಟು ದಿವಸದ ಒಳಗೆ ಏನಾದರೂ ಉತ್ತರ ನೀಡಿ ಎಂದು ಹೇಳುತ್ತಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಏನಾದರೂ ತಡ ಮಾಡಿ, ಎಲ್ಲಾ ಆಗಿ ಹೋಗಿದೆ ಎಂದು ಹಳೆ ದಾಖಲೆಯನ್ನು ಏನಾದರೂ ಉಳಿಸಿಕೊಳ್ಳದೆ ವಾಪಸ್ಸು ಮಾಡಿದ್ದರೆ, ನೇರವಾಗಿ ಅವರ ಬ್ಯಾಂಕ್ ಖಾತೆಯನ್ನು freeze ಮಾಡಿಬಿಡುತ್ತಾರೆ. ಅಂದರೆ, ನನಗೆ ಏನು ಅನಿಸುತ್ತದೆಂದರೆ, ಎಲ್ಲೋ ಒಂದು ಕಡೆ ಸರ್ಕಾರ ತನ್ನ ಪಾಲಿನ ಆದಾಯವನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೋಸ್ಕರ ಈ ರೀತಿಯಾಗಿ ಕಳೆದ ಮೂರ್ನಾಲ್ಕು ವರ್ಷಗಳ ಹಿಂದಿನ ಅಡಿಟ್‌ಗಳಿಗೆ ಹೋಗಿ, ಸಣ್ಣ-ಸಣ್ಣ ವ್ಯವಹಾರಸ್ಥರಿಗೂ ಕೂಡ audit assessment ನೋಟಿಸ್‌ಗಳನ್ನು ಕೊಡುವಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಮಾನ್ಯ ಸಚಿವರು ಹೇಳಿರುವಂತಹ ಮತ್ತೊಂದು ವಿಷಯವೇನೆಂದರೆ, ಇಲ್ಲಿ ರೂ.50 ಕೋಟಿ ಮತ್ತು ರೂ.20 ಕೋಟಿ ಇದೆ ಎಂದರೆ, ಅಷ್ಟು ದೊಡ್ಡ dispute ಅನ್ನು ಇಟ್ಟುಕೊಂಡಿರುವಂತಹವರು ಯಾರು ಎಂದರೆ, ದೊಡ್ಡ ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು. ಇವರು ಅವರಿಗೆ benefit ಮಾಡಿಕೊಡುವುದಕ್ಕೋಸ್ಕರ, ಅವರು ಕಟ್ಟುವಂತಹ ಡಿಪಾಸಿಟ್ ಅನ್ನು ಹೈಕೋರ್ಟ್‌ಗೆ ಹೋಗಬಾರದು, ಅದನ್ನು ಟ್ರಿಬ್ಯೂನಲ್‌ನಲ್ಲಿಯೇ ಬಂದು ಸೆಟಲ್ ಮಾಡಬೇಕೆಂದು ಅವರಿಗೆ exemption ಕೊಡುತ್ತಾರೆ. ಈಗ ಸಣ್ಣ-ಸಣ್ಣ ವ್ಯವಹಾರಸ್ಥರು ಮತ್ತು traders ಗೆ ಏನು benefit ಕೊಡುತ್ತಿದ್ದಾರೆ? ಇದೆಲ್ಲವೂ ಕೂಡ ದೊಡ್ಡ corporates ಗೆ ಮತ್ತೆ ದೊಡ್ಡ business houses ಗೆ ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ benefit ತರುವಂತಹ ಕೆಲಸವನ್ನು ಈ ವಿಧೇಯಕ ಮೂಲಕ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಈ ವಿಧೇಯಕದ ಮೂಲಕ ಬರುತ್ತಿದೆ. ಹಾಗಾಗಿ, ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಈ GST ಇಲಾಖೆಯವರು ಅದರಲ್ಲೂ ವಿಶೇಷವಾಗಿ SGST Department ನವರಲ್ಲಿ ಯಾರಿಗೆ ಬಹಳ ಬೇಡಿಕೆ ಇದೆ ಎಂದರೆ, ನಾನು ಮುಚ್ಚುಮರೆ ಇಲ್ಲದೆ ಹಾಗೆ ಹೇಳುತ್ತೇನೆ. ಅದರ Vigilance ನಲ್ಲಿ ಇರುವಂತಹವರಿಗೆ ಬಹಳ ಡಿಮ್ಯಾಂಡ್ ಇದೆ. ಬೆಂಗಳೂರಿನ GST Vigilance ಗೆ ಹೋಗಬೇಕು. ಏಕೆಂದರೆ, GST Vigilance ನಲ್ಲಿದ್ದರೆ ಬೇಕಾದಷ್ಟು ರೀತಿಯಲ್ಲಿ ಪ್ರತಿ ದಿವಸ ಯಾರೋ ಒಬ್ಬ ಬಕ್ರಾ ಸಿಗುತ್ತಾನೆ. ಆ ಬಕ್ರಾನನ್ನು ಆ ರಾತ್ರಿಗೆ ಬಲಿ ಕಾ ಬಕ್ರಾ ಮಾಡಿಬಿಟ್ಟರೆ, ಅವತ್ತಿಗೆ ಅವನ ಕೆಲಸ ಆಗುತ್ತದೆ ಎನ್ನುವ ರೀತಿಯಲ್ಲಿ SGST ಯಲ್ಲಿ ಇರುವಂತಹ ಅನೇಕರು, ಸಣ್ಣ-ಸಣ್ಣ ತೆರಿಗೆದಾರರಿಗೆ ತೊಂದರೆಯನ್ನು ಮಾಡುತ್ತಿದ್ದಾರೆ. ನಾನು ಭಾವಿಸಿರುವಂತೆ ಈ ವಿಧೇಯಕ ಸಣ್ಣ ವ್ಯವಹಾರಸ್ಥರ ಪರವಾಗಿ, ಉದ್ಯಮಿದಾರರ ಪರವಾಗಿ ಇಲ್ಲ. ದೊಡ್ಡ ದೊಡ್ಡವರು ಯಾರು default ಮಾಡಿದ್ದಾರಲ್ಲ, ಅವರಿಗೋಸ್ಕರ ತಂದಿರುವಂತಹ ವಿಧೇಯಕ. ಇವರು

ಏಕಾಏಕಿ 15,000/- ಕೋಟಿ ರೂಪಾಯಿಗಳನ್ನು ಬಿಟ್ಟು, ಕೇವಲ ರೂ.15,000/- ಕೋಟಿ ಬಂದರೂ ಪರವಾಗಿಲ್ಲ, ನಾವು OTS ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಇವರು ಈ ರೀತಿ OTS ಮಾಡುವುದಾದರೆ, ಯಾರು ಪ್ರಾಮಾಣಿಕವಾಗಿ ದಂಡ ಮತ್ತು ಬಡ್ಡಿ ಕಟ್ಟಿದ್ದಾರೆ ಅವರ ಹಣವನ್ನು ಸಹ ವಾಪಸ್ಸು ಕೊಡಲಿ. ಇವರಿಗೆ ಕೊಡುತ್ತಿರುವ benefit ಅನ್ನು ಹಿಂದೆ ಕಟ್ಟಿ settlement ಮಾಡಿಕೊಂಡಿರುವಂತಹವರಿಗೂ ಸಹ ದಯವಿಟ್ಟು ವಾಪಸ್ಸು ಕೊಡುವಂತಹ ಕೆಲಸ ಮಾಡಲಿ. ಇದನ್ನು ಮಾಡಿದರೆ ಮಾತ್ರ ಸರ್ಕಾರ ಎಲ್ಲರನ್ನು ಸಹ ಒಂದೇ ತಕಡಿಯಲ್ಲಿ ತೂಗಿದ ಹಾಗೆ ಆಗುತ್ತದೆ. ಇಲ್ಲವಾದರೆ, ಶ್ರೀಮಂತರಿಗೆ ಒಂದು ತಕ್ಕಡಿಯಲ್ಲಿ ತೂಗುತ್ತಿದ್ದಾರೆ. ಪಾಪ ಬಡಪಾಯಿಗಳನ್ನು ಮತ್ತೊಂದು ತಕ್ಕಡಿಯಲ್ಲಿ ಹಾಕಿ ಅವರನ್ನು ಪಾತಾಳಕ್ಕೆ ತಳ್ಳುತ್ತಿದ್ದಾರೆ. ಈ ರೀತಿಯಲ್ಲಿ ಆಗುವಂಥದ್ದು ಸರಿಯಲ್ಲ. ಇದು ಸರಿಯಾದಂತಹ ರೀತಿಯಲ್ಲಿ ಆಗಬೇಕು ಎನ್ನುವುದಾದರೆ, ದಯಮಾಡಿ ಏನು ಈ ರೀತಿಯ ತಾರತಮ್ಯಗಳಿವೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡಬೇಕು. ಮತ್ತೊಂದು ಸಣ್ಣ ಉದಾಹರಣೆಯನ್ನು ಕೊಟ್ಟು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ. ಈಗ suo moto cancellation ಮಾಡುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳ ಬಳಿ ನನ್ನದೂ ಒಂದು ಪ್ರಶ್ನೆ ಇತ್ತು. ಈಗ ಎಷ್ಟು GST Account ಗಳನ್ನು suo moto cancellation ಮಾಡಿದ್ದಾರೆ ಎಂದು. ಅಂದರೆ, ಎಷ್ಟು ಕೇಸ್‌ಗಳನ್ನು ಹಾಕಿದ್ದಾರೆಂದು. ಆದರೆ, ಅದು Starred Question ಆಗಲಿಲ್ಲ. ಈಗ ಯಾರೋ ಒಬ್ಬನಿಗೆ ಜಿ.ಎಸ್.ಟಿ. ಪಾವತಿ ಮಾಡಬೇಕಾಗಿರುವಂತಹವನು ಪಾವತಿ ಮಾಡಿರುವುದಿಲ್ಲ. ಅವನು ಮೂರು ತಿಂಗಳು ಹಣವನ್ನು ಕೊಡುವುದೇ ಇಲ್ಲ. ಅವರು ಮೂರು ತಿಂಗಳು ಕೊಟ್ಟಿಲ್ಲ ಎನ್ನುವಂತಹ ಕಾರಣಕ್ಕೋಸ್ಕರ ಇಲಾಖೆಯವರು ಅವರ registration ಅನ್ನು cancel ಮಾಡಿಬಿಡುತ್ತಾರೆ. ಅವನು ಅಲ್ಲಿಗೆ ಐವತ್ತು ಬಾರಿ ತಿರುಗಾಡಬೇಕು. ಅವನಿಗೆ ದುಡ್ಡೇ ಬಂದಿರುವುದಿಲ್ಲ. ಅದಕ್ಕೆ ಇಲಾಖೆಯವರು ಅದು ನಿಮ್ಮ ಜವಾಬ್ದಾರಿ, ಅದನ್ನು ನೀವು ಫೈಲ್ ಮಾಡಬೇಕೆಂದು ಹೇಳುತ್ತಾರೆ.

(ಮುಂದು)

(929) 17.12.2024 04.40 LL-BNS (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್. ನವೀನ್ (ಮುಂದು)**

Suo moto cancellation ಮಾಡಿ, ಒಬ್ಬ ವ್ಯಕ್ತಿ ವಾಪಸ್ಸು 50 ಬಾರಿ ಪುನಃ ಅದನ್ನು ಆಕ್ಟಿವೇಟ್ ಮಾಡಿಕೊಳ್ಳುವುದಕ್ಕೆ ಆ ಜಿಎಸ್‌ಟಿ ದಾರ ಸಾಕಷ್ಟು ಸುಸ್ತಾಗುತ್ತಾನೆ. ಇದರಿಂದಾಗಿ, ಆತನಿಗೆ ಬಹಳಷ್ಟು ತೊಂದರೆಯಾಗುತ್ತದೆ. ಹಾಗಾಗಿ, ದಯಮಾಡಿ ಕಾರಣ ಇದ್ದರೆ, suo moto cancellation ಅನ್ನು ಮಾಡಬಾರದು, ಅದಕ್ಕೆ ವಿಸ್ತರಣೆ ನೀಡಬೇಕೆಂದು ಈ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸೆಂಟ್ರಲ್ ಜಿಎಸ್‌ಟಿ ಆಕ್ಟ್ ನಲ್ಲಿ ಸ್ಪಿರಿಟ್ ಮೇಲೆ ತೆರಿಗೆ ವಿಧಿಸುವ ಅಧಿಕಾರ ಸೆಂಟ್ರಲ್ ಗವರ್ನಮೆಂಟ್ ಗೆ ಇತ್ತು. ಆದರೆ, ಈಗ ಒಮ್ಮತದ ಆಧಾರದ ಮೇಲೆ ಅದನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದೇ ರೀತಿಯಾಗಿ, ಪ್ರಕರಣ 9 ರ

ತಿದ್ದುಪಡಿಯಲ್ಲಿ "....un-denatured extra neutral alcohol or rectified spirit..." ಎಂದು ಹೇಳುವಂತಹದ್ದರ ಮೇಲೆ ತೆರಿಗೆ ವಿಧಿಸುವಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಬಂದಿರುತ್ತದೆ. ಹಾಗಿದ್ದರೆ, ರಾಜ್ಯ ಸರ್ಕಾರ ಇದರ ಮೇಲೆ ಯಾವ ಜಿಎಸ್‌ಟಿ ದರದ ಮೇಲೆ ತೆರಿಗೆಯನ್ನು ವಿಧಿಸುತ್ತದೆ ಮತ್ತು ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂತಹ ಆದಾಯ ಎಷ್ಟು ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ. ಸುಮಾರು 84,000 ಪ್ರಕರಣಗಳಲ್ಲಿ 32,550 ಕೋಟಿ ರೂಪಾಯಿಗಳಲ್ಲಿ ಪ್ರಿನ್ಸಿಪಲ್ ಅಮೌಂಟ್ ಕಟ್ಟಿದರೆ ನಾವು 15,518 ಕೋಟಿ ರೂಪಾಯಿಗಳಿಗೆ ಕರ ಸಮಾಧಾನ ಸ್ಕೀಮ್ ತರುತ್ತೇವೆಂದು ಹೇಳಿರುತ್ತಾರೆ. ಐ.ಜಿ.ಎಸ್.ಟಿ. ಯಲ್ಲಿರುವ ಪ್ರಕರಣಗಳೆಷ್ಟು ಅಥವಾ ಕೇವಲ ಎಸ್.ಜಿ.ಎಸ್.ಟಿ. ಸಂಬಂಧಪಟ್ಟ ಪ್ರಕರಣಗಳೆಷ್ಟು ಎಂಬುದನ್ನು ಸ್ಪಷ್ಟೀಕರಿಸಬೇಕು.

ಮಾನ್ಯ ಸಚಿವರು, ಜಿಎಸ್‌ಟಿ ಟ್ರಿಬ್ಯೂನಲ್ ಗೆ ಅಪೀಲು ಹೋಗುವವರು ಕಡಿಮೆಯಾಗಿದ್ದು, original jurisdiction ನಲ್ಲಿ ಹೈಕೋರ್ಟ್‌ಗೆ ಹೋಗತಕ್ಕಂತಹ ಅಪೀಲು ಜಾಸ್ತಿಯಾಗಿದೆ. ಅದಕ್ಕೋಸ್ಕರವಾಗಿ ನಾವು fixed amount ನ್ನು ಅಥವಾ ಅಮೌಂಟ್ ಅನ್ನು ಫ್ಲಾಟ್ ಸ್ಲಾಬ್ ಆಗಿ ಮಾಡಿ ಇಪ್ಪತ್ತು ಕೋಟಿ ರೂಪಾಯಿ ಎಂದು ಮಾಡಿದ್ದೇವೆ ಎಂದು ಹೇಳಿರುತ್ತಾರೆ. ಈ ವಿಷಯದಲ್ಲಿ ನಮಗೆ ಸ್ಪಷ್ಟೀಕರಣ ಮಾಡಬೇಕಾಗಿರುವುದೇನೆಂದರೆ, ಇದು value of the suit ಮೇಲೆ ಹೋಗುತ್ತದೆಯೇ ಅಥವಾ ಒಂದು ಫ್ಲಾಟ್‌ರೇಟ್ ಆಗಿರುತ್ತದೆಯೇ ಎಂಬುದನ್ನು ಸದನಕ್ಕೆ ತಿಳಿಸಬೇಕೆಂದು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ವಿಧೇಯಕದ ಸೆಕ್ಷನ್ 122 ರಲ್ಲಿ ದಂಡ ಮತ್ತು ಶಿಕ್ಷೆಗಳು ಎಂದು ನಮೂದು ಮಾಡಿರುತ್ತಾರೆ. ಸಾಮಾನ್ಯವಾಗಿ C.G.S.T., S.G.S.T., I.G.S.T., ನಲ್ಲಿ 25,0000 ರೂಪಾಯಿ ದಂಡ ಎಂದು ಮಾಡಿದ್ದಾರೆ. ಇದರಿಂದಾಗಿ, ಸಣ್ಣ ಸಣ್ಣ ಉದ್ಯೋಗ ಮಾಡುವಂತಹ ಉದ್ಯಮಿಗಳಿಗೆ ಇದೊಂದು ರೀತಿಯ ಹಿಂಸೆಯಾಗಿ ಕಾಣುತ್ತಿದೆ. ಸಣ್ಣ ಸಣ್ಣ ವರ್ತಕರ ಬಳಿ ಹಣ ಇರುವುದಿಲ್ಲ. ಜೊತೆಗೆ, ತಿಳುವಳಿಕೆ ಕೂಡ ಇರುವುದಿಲ್ಲ ಹಾಗೂ ಅವರಿಗೆ ಅವಶ್ಯಕವಾದಂತಹ ಸಿಬ್ಬಂದಿಗಳು ಸಹ ಇರುವುದಿಲ್ಲ. ಏಕೆಂದರೆ, ಅವರು ಒಬ್ಬೊಬ್ಬರು ಇರುತ್ತಾರೆ. GST returns ಸಲ್ಲಿಸುವಾಗ ಸಣ್ಣ ಪುಟ್ಟ ತಪ್ಪುಗಳು ಆಗುತ್ತಿರುತ್ತವೆ. ಅವು ಆಗಲೇಬೇಕು. ಆದರೆ, revised returns ಸಲ್ಲಿಸುವುದಕ್ಕೆ ಸ್ಕೋಪ್ ಕೊಟ್ಟಿರುವುದಿಲ್ಲ. ದಂಡವನ್ನು ಕೂಡ ಸಿಕ್ಕಾಪಟ್ಟೆ ಹಾಕಿರುವಂಥಹದ್ದು ಇದೆ. ಒಟ್ಟಾರೆಯಾಗಿ, ಸಣ್ಣ ಸಣ್ಣ tax payers/assesses ಅವರ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ. ಹಾಗಾಗಿ ದಯಮಾಡಿ, ಅದನ್ನು ತೆಗೆಯುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮೂಲತಃ ಈ ಜಿ.ಎಸ್.ಟಿ. ಕಾನೂನು ಏನಿದೆ, ಇದು ನಮ್ಮ ದೇಶದಲ್ಲಿ ಅಷ್ಟೇ ಅಲ್ಲದೇ, ಪ್ರಪಂಚದಲ್ಲಿಯೂ ಕೂಡ ಒಂದು ವಿಶಿಷ್ಟವಾದಂತಹ ವ್ಯವಸ್ಥೆಯಾಗಿದೆ. ಇದು ಹೈಬ್ರಿಡ್ ಮಾದರಿಯಾಗಿದೆ. ಏನೋ ಒಂದು ಮಾಡಿ ನಾವು ಮಾಡುತ್ತಿದ್ದೇವೆ. ಇದು ಸಂವಿಧಾನದ ಪ್ರಕಾರ ಎಲ್ಲವೂ ಸರಿಯಾಗಿದೆಯೇ ಎಂದು ಕೇಳುತ್ತಾ ಹೋದರೆ, ಅದಕ್ಕೆ ಹೌದು ಇದೆ ಎಂದು ನಾನು ವಾದ ಮಾಡಬಹುದು. ಆದರೆ, ಅದನ್ನು ಇಲ್ಲಿ ಪ್ರಶ್ನೆ ಮಾಡುವವರು ಸಹ ಇದ್ದಾರೆ. ಏನೋ ಕೇಳಿದರೆ ತಾವು

ಏನೋ ಹೇಳುತ್ತಿದ್ದೀರಿ ಎಂದು ಹೇಳಬಹುದು. ಇಲ್ಲಿ ಏನಾಗಿದೆಯೆಂದರೆ, ಕೇಂದ್ರ ಮತ್ತು ರಾಜ್ಯ ಈ ಎರಡೂ ಕೂಡ ತಮ್ಮ ಕಾನೂನು ಮಾಡುವ ಅಧಿಕಾರ ಸಾರ್ವಭೌಮತ್ವವನ್ನು ಲಿಖಿತವಾಗಿ ಅಲ್ಲದೇ, ಅಲಿಖಿತವಾಗಿ ಜಿಎಸ್‌ಟಿ ಕೌನ್ಸಿಲ್ ಅನ್ನುವುದಕ್ಕೆ ವರ್ಗ ಮಾಡಿ ಕೊಟ್ಟಿರುತ್ತೇವೆ. It is an oral contract ಅಷ್ಟೇ. ಹಾಗಾಗಿ, ಕಾನೂನು ಮಾಡುವಂಥದ್ದು ಮತ್ತು ಅದಕ್ಕೆ ತಿದ್ದುಪಡಿ ಮಾಡುವಂತಹ ಅಧಿಕಾರ ವಿಧಾನಮಂಡಲಕ್ಕೆ ಮತ್ತು ಸಂಸತ್ತಿಗೆ ಇದೆ. ಆದರೆ, ಅದನ್ನು ನಾವು ತೆಗೆದುಕೊಂಡಿರುವುದಿಲ್ಲ. ಆದರೆ, ಒಡಂಬಡಿಕೆ ಏನು ಮಾಡಿಕೊಂಡಿದ್ದೇವೆಂದರೆ, ಏನೇ ಬದಲಾವಣೆ ಮಾಡಬೇಕಾದರೂ ಸಹ, ಮೊದಲು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಮಾತನಾಡಿ, ನಾವೆಲ್ಲರೂ ಒಪ್ಪಿಗೆ ಮಾಡಿಕೊಂಡು, ಅದನ್ನು ಅಳವಡಿಸಿಕೊಳ್ಳುತ್ತೇವೆಂದು ಒಡಂಬಡಿಕೆ ಮಾಡಿರುತ್ತಾರೆ. ಇದನ್ನು ಪ್ರಶ್ನೆ ಮಾಡುವವರು ಸಹ ಇದ್ದಾರೆ. ಅಂದರೆ, ನೀವು ಎಲ್ಲಿಯೋ ಒಂದು ಕಡೆ ಸಂಸತ್ತಿನ ಅಥವಾ ವಿಧಾನಮಂಡಲದ ಸಾರ್ವಭೌಮತ್ವವನ್ನು ಜಿಎಸ್‌ಟಿ ಕೌನ್ಸಿಲ್‌ಗೆ ತೆಗೆದುಕೊಂಡಿದ್ದಾರೆಂದು ಪ್ರಶ್ನೆ ಮಾಡುವವರು ಇದ್ದಾರೆ. ಇದು ಪ್ರಪಂಚದಲ್ಲಿ ಎಲ್ಲಿಯೂ ಕೂಡ ಇಂತಹ ಪ್ರಯೋಗ ಆಗಿರುವುದಿಲ್ಲ. ಆದರೆ, ಭಾರತ ದೇಶದಲ್ಲಿ ಮಾತ್ರ ಇಂತಹ ಒಂದು ಪ್ರಯೋಗ ಆಗಿರುವಂಥದ್ದು ಇದೆ. ಇದನ್ನು ತಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೆಲವೊಂದು ವಿಚಾರಗಳನ್ನು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಸೇರಿಸಬೇಕೆಂದು ಹೇಳಿರುತ್ತಾರೆ. ಅದಕ್ಕೆ ನಾನು ಪರೋಕ್ಷವಾಗಿ ಮತ್ತು ಗೌರವಪೂರ್ವಕವಾಗಿ ಹೇಳುವುದೇನೆಂದರೆ, ವಿಧಾನಮಂಡಲದ ಯಾವುದೇ ಹಕ್ಕನ್ನು ಮೊಟಕು ಮಾಡದ ಹಾಗೆ, ಕಾರ್ಯವಿಧಾನ ಏನಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಆದಾಗ್ಯೂ, ಮಾನ್ಯ ಸದಸ್ಯರು ಹೇಳಿರುವುದನ್ನು ಸರ್ಕಾರ ಸಲಹೆ ಎಂದು ಸ್ವೀಕಾರ ಮಾಡಿ, ಮೊದಲು ರಾಜ್ಯ ಸರ್ಕಾರ ಜಿಎಸ್‌ಟಿ ಕೌನ್ಸಿಲ್‌ಗೆ ಪ್ರಸ್ತಾವನೆ ಕಳುಹಿಸಿ, ಆ ಪ್ರಸ್ತಾವನೆ ಚರ್ಚೆ ಆಗಬೇಕು. ನಂತರ, ಇಲ್ಲ ಇದನ್ನು ನಾವು ಆಳವಾಗಿ ನೋಡಬೇಕೆಂದರೆ, ಅಲ್ಲಿ ಒಂದು Law Committee ಇದೆ, Fitment Committee ಇದೆ ಅಥವಾ Group of Ministers ಎಂದು Sub-Committee set up ಆಗುತ್ತದೆ. ಅಲ್ಲಿ ಚರ್ಚೆಯಾಗಿ, ವಾಪಸ್ಸು ಜಿಎಸ್‌ಟಿ ಕೌನ್ಸಿಲ್‌ಗೆ ಬರುತ್ತದೆ. ಅಲ್ಲಿ ಎಲ್ಲರೂ ಸೇರಿ ಇದಕ್ಕೆ ಒಪ್ಪಿಗೆ ನೀಡಬೇಕು. ನಂತರ, ಅಲ್ಲಿ ಒಪ್ಪಿಕೊಂಡ ನಂತರ, ಇಡೀ ದೇಶದಲ್ಲಿ ಎಲ್ಲಾ ರಾಜ್ಯ ಸರ್ಕಾರಗಳು ಜಾರಿ ಮಾಡಬೇಕು. ಇದು ಇರುವಂತಹ ವ್ಯವಸ್ಥೆಯಾಗಿದೆ. ಹಾಗಾಗಿ, ಮಾನ್ಯ ಸದಸ್ಯರು ಹೇಳಿರುವಂತಹ ಕೆಲವು ವಿಷಯಗಳಿಗೆ ನಾನು ಸ್ಪಷ್ಟೀಕರಣ ಮಾಡುತ್ತೇನೆ. ಆದರೆ, ಇನ್ನು ಕೆಲವು ವಿಷಯಗಳನ್ನು ಸಲಹೆಗಳು ಎಂದು ಸ್ವೀಕಾರ ಮಾಡಿ, ಅದನ್ನು ಮುಂದೆ ಏನು ಮಾಡಬಹುದು ಎಂಬುದನ್ನು ನಾವು ಖಂಡಿತವಾಗಿ ಚರ್ಚೆ ಮಾಡುತ್ತೇವೆ. ಉದಾಹರಣೆಗೆ, ಶೇಕಡ 18 ರಷ್ಟು ಜಿಎಸ್‌ಟಿ ಯನ್ನು ಶೇಕಡ 12ಕ್ಕೆ ಇಳಿಸಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿರುತ್ತಾರೆ. ಇಲ್ಲಿಯವರೆಗೆ ನಮಗೆ ಆ ರೀತಿಯ ಪ್ರಸ್ತಾವನೆಗಳು ಬಂದಿರುವುದಿಲ್ಲ. ಹಾಗಾಗಿ, ತಮ್ಮ ಸಲಹೆಗಳನ್ನೇ ಪ್ರಸ್ತಾವನೆಯನ್ನಾಗಿ ಸ್ವೀಕಾರ ಮಾಡುತ್ತೇನೆ. ಈ ಬಗ್ಗೆ ನಾನು ನಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ, ಅದನ್ನು ಜಿಎಸ್‌ಟಿ ಕೌನ್ಸಿಲ್‌ಗೆ proposal move ಮಾಡಬಹುದೇ ಎನ್ನುವಂಥದ್ದನ್ನು ನಾನು ಚರ್ಚೆ ಮಾಡುತ್ತೇನೆ.

**(ಗೊಂದಲ)**

ಎರಡನೆಯದಾಗಿ, ಇನ್ನು ಕೆಲವು ವಸ್ತುಗಳ ಮೇಲೆ ಜಿಎಸ್‌ಟಿ ದುಬಾರಿಯಾಗುತ್ತಿದೆ, ಅವುಗಳನ್ನು ಸರಳೀಕರಣ ಮಾಡಬೇಕೆಂದು ಹೇಳಿರುತ್ತಾರೆ. ಎಲ್ಲಾ ಸರ್ಕಾರಗಳ ಉದ್ದೇಶ ಕೂಡ, ತೆರಿಗೆ ಆಡಳಿತ ಸರಳೀಕರಣ ಆಗಬೇಕೆನ್ನುವುದೇ ನಮ್ಮ ಉದ್ದೇಶವಾಗಿರುತ್ತದೆ. ಆದರೆ, it is a work in progress. ಸರಳೀಕರಣ ಆಗಿಬಿಟ್ಟಿದೆ ಎಂದು ನಾನು ಖಂಡಿತವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಕಾಲದಿಂದ ಕಾಲಕ್ಕೆ ಸಾಕಷ್ಟು ಸರಳೀಕರಣ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ನಾನು ಈ ವಿಷಯ ಹೇಳಿದರೆ ತಮಗೆ ಸಿಟ್ಟು ಬರಬಹುದು. ಆದರೂ ಸಹ ನಾನು ಇದನ್ನು ಹೇಳಬೇಕಾಗುತ್ತದೆ. ಜಿಎಸ್‌ಟಿ ಯಲ್ಲಿ ಎಷ್ಟು ಪ್ರಮಾಣದ ಸೋರಿಕೆಯಾಗುತ್ತಿದೆ ಎಂಬುದನ್ನು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. Evasion ಅಷ್ಟು ಆಗುತ್ತಿದೆ. ಏತಕ್ಕೆ ಅಷ್ಟು evasion ಆಗುತ್ತಿದೆಯೆಂದರೆ, ತುಂಬಾ ಸರಳೀಕರಣ ಮಾಡಿದ್ದೀರಿ, ಅದಕ್ಕಾಗಿ ಇದು evasion ಆಗುತ್ತಿದೆ ಎಂದು ಹೇಳುತ್ತಾರೆ. ಇದೇ ತಿಂಗಳು 21 ನೇ ತಾರೀಖಿನಂದು ಜಿಎಸ್‌ಟಿ ಸಭೆ ಇದ್ದು, ಅದಕ್ಕಾಗಿ ನಾನು ಈ ಸದನದಲ್ಲಿ ಕುಳಿತುಕೊಂಡು ಒಂದು ತಯಾರಿ ಮಾಡುತ್ತಿದ್ದೆನು. ಜಿಎಸ್‌ಟಿ ಸಭೆಗೆ ತಯಾರಿ ಮಾಡಬೇಕಾದರೆ, ಒಂದು ಅಥವಾ ಒಂದೂವರೆ ದಿನ ನಾನು ಕುಳಿತುಕೊಳ್ಳಬೇಕು. ನಮ್ಮ ರಾಜ್ಯದಿಂದ ವ್ಯಾಪಕವಾಗಿ ಅಡಕೆ ಬೇರೆ ರಾಜ್ಯಗಳಿಗೆ ಹೋಗುತ್ತದೆ. ಈ ವಿಷಯದ ಬಗ್ಗೆ ನಾನು ಅಡಕೆ ಬೆಳೆಗಾರರ ಜೊತೆ ಸಹ ಮಾತನಾಡಿರುತ್ತೇನೆ. ಉದಾಹರಣೆಗೆ, ಸುಮಾರು 10 ಲೋಡ್ ಅಡಕೆ ಬೇರೆ ರಾಜ್ಯಗಳಿಗೆ ಹೋದರೆ, ಘೋಷಣೆಯಾಗುತ್ತಿರುವುದು ಕೇವಲ ಒಂದು ಅಥವಾ ಎರಡು ಲೋಡ್ ಅಷ್ಟೇ. ಈ ಬಗ್ಗೆ ನಾನು ನಮ್ಮ ಇಲಾಖೆಯ ಅಧಿಕಾರಿಗಳ ಬಳಿ, "ಏತಕ್ಕೆ ಈ ರೀತಿಯಾಗುತ್ತಿದೆ. ಇದನ್ನು ಏತಕ್ಕೆ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ" ಎಂದು ಪ್ರಶ್ನೆ ಮಾಡಿರುತ್ತೇನೆ.

(ಮುಂದು)

(930) 17.12.2024 4.50 ವೈಎಲ್-ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಬೈರೇಗೌಡ (ಮುಂದು):-**

ಅದಕ್ಕೆ ಅವರು E-Waybill ಬಂದಾಗಿನಿಂದ "ದಾರಿಯಲ್ಲಿ ಅವರನ್ನು ನಿಲ್ಲಿಸಿ ಅವರು ನಮಗೆ E-Waybill ತೋರಿಸಿದರೆ ಸಾಕು ನಾವು ಅವರನ್ನು ಏನು ಪ್ರಶ್ನೆ ಮಾಡುವಂತಿಲ್ಲ" ಎಂದು ಹೇಳುತ್ತಾರೆ. This is the system. ಹಾಗಾಗಿ, ಒಳ್ಳೆಯ ರೀತಿ ತೆರಿಗೆ ಕಟ್ಟಿಕೊಂಡು ವ್ಯವಹಾರ ಮಾಡುವವರು ತುಂಬಾ ಜನರಿದ್ದು, ನಾವು ಎಲ್ಲರನ್ನೂ ಸಹ ಬದ್ನಾಮ್ ಮಾಡುವುದು ಬೇಡ. ಆದರೆ, ಸರಳೀಕರಣ ಮಾಡಿರುವುದನ್ನು ದುರುಪಯೋಗ ಮಾಡಿಕೊಂಡು ಸಾರ್ವಜನಿಕದ ಹಿತಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿರುವವರು ಸಹ ಇದ್ದಾರೆ. ಹಾಗೆಂದು, ಸರಳೀಕರಣ ಮಾಡಬಾರದೆಂದು ಹೇಳುವುದಿಲ್ಲ. ಕಾಲಕಾಲಕ್ಕೆ ಸರಳೀಕರಣ ಮಾಡುವಂಥ ದಿಕ್ಕಿನಲ್ಲಿ ಖಂಡಿತವಾಗಿ ಎಲ್ಲರ ಇಚ್ಛಾಶಕ್ತಿ

ಇದೆ. ಎಷ್ಟೋ ವಿಷಯದಲ್ಲಿ ಆದಾಯದ ಹಿತಕ್ಕೆ ವಿರುದ್ಧವಾಗಿ ಸುಮಾರು ತೀರ್ಮಾನ ಮಾಡಿದ್ದೇವೆ. ಅಂದರೆ, we have taken decisions against revenues to Government.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಅಡಿಕೆ ವಿಚಾರವಾಗಿ E-Waybill ಮೇಲೆ ಮಾತನಾಡಿದ್ದೇನೆ. ನಾವು ಶಿವಮೊಗ್ಗ ಜಿಲ್ಲೆಯವರಾಗಿದ್ದು, ಅಡಿಕೆ ವಿಚಾರ ಬಂದಾಗ ಮಾತನಾಡಲೇ ಬೇಕಾಗುತ್ತದೆ. ಇದು ಅಡಿಕೆ ಬೆಳೆಗಾರರ ಸಮಸ್ಯೆಯಾಗಿಲ್ಲ. ಟ್ರೇಡರ್ಸ್‌ರವರ ಸ್ಥಿತಿ ಯಾವ ರೀತಿ ಇದೆ ಎಂದರೆ, ಟ್ರೇಡರ್ಸ್‌ರವರು ಪ್ರಾಮಾಣಿಕವಾಗಿ ಟ್ರೇಡಿಂಗ್ ಮಾಡಲು ತಯಾರಿದ್ದಾರೆ. ಅಡಿಕೆಯನ್ನು ತೆಗೆದುಕೊಳ್ಳುವ ಖಾನಾಪುರನಲ್ಲಿರುವಂಥ ಎಲ್ಲಾ manufacturers ಗೆ bill ನ ಅವಶ್ಯಕತೆ ಇಲ್ಲ. ಏಕೆಂದರೆ, ಅಂತಿಮವಾಗಿ ಆ ಪ್ಯಾಕೆಟ್ ಮೇಲೆ ಶೇಕಡ 225 ರಷ್ಟು ತೆರಿಗೆಯಾಗುತ್ತದೆ. ಮಾನ್ಯ ಸಚಿವರಾದ ಶ್ರೀ ಕೃಷ್ಣಬೈರೇಗೌಡರವರು ಈ ಸಲ ಜಿ.ಎಸ್.ಟಿ. ಕೌನ್ಸಿಲ್ ಮೀಟಿಂಗ್‌ಗೆ ಹೋಗುತ್ತಿದ್ದು, ಖಾನಾಪುರದಲ್ಲಿರುವಂಥ ಸುಪಾರಿ manufacturing industries ಏನಿದೆ, ಅಲ್ಲಿರುವಂಥ ಕೈಗಾರಿಕೆಯವರನ್ನು ನಾವು ಬಿಗಿ ಮಾಡಲಿಲ್ಲವೆಂದರೆ ಕಷ್ಟ. ಟ್ರೇಡರ್ಸ್‌ರವರು 'without bill' ಕಳುಹಿಸಿದರೆ ಮಾತ್ರ ನಾವು ತೆಗೆದುಕೊಳ್ಳುವುದು' ಎಂದು ಹೇಳುತ್ತಾರೆ. ಆದರೆ, ಬೆಳೆಗಾರರ ಹತ್ತಿರ ನಾವು ಅಡಿಕೆ ತೆಗೆದುಕೊಳ್ಳಬೇಕು. ಟ್ರೇಡಿಂಗ್ ಮಾಡುವಂಥ ನಾವು without bill ಅಡಿಕೆ ಕಳುಹಿಸಬೇಕು. ಒಂದು E-Waybill ಗೆ 6 ದಿನಗಳು ಸಮಯ ನೀಡಲಾಗುತ್ತದೆ. ಇದರಿಂದಾಗಿ ನನ್ನ ಹತ್ತಿರ ಇರುವಂಥ transporter ಗೆ ಒಂದು E-Waybill ನಲ್ಲಿಯೇ ನಾಲ್ಕು ಲೋಡ್ ಅಡಿಕೆ ತೆಗೆದುಕೊಂಡು ಹೋಗು ಎಂದು ಹೇಳುತ್ತೇನೆ. ಈಗಾಗಲೇ ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಬಹಳ ಚೆನ್ನಾಗಿ ರಸ್ತೆಗಳ ಅಭಿವೃದ್ಧಿ ಮಾಡಿದ್ದು, ಎರಡು ದಿನದಲ್ಲಿಯೇ ಸರಕು ತಲುಪುತ್ತದೆ. ಈ ಮೊದಲು ಒಂದು ಲೋಡ್ ತಲುಪಲು ಸುಮಾರು 6 ದಿನಗಳ ಸಮಯ ತಗಲುತ್ತಿತ್ತು. ಅದೇ E-Waybill ನಲ್ಲಿ ದುರುಪಯೋಗ ಪಡೆಸಿಕೊಳ್ಳುತ್ತಿದ್ದಾರೆ. ಹಾಗಾಗಿ, ಖಾನಾಪುರನಲ್ಲಿರುವಂಥ ಕೈಗಾರಿಕೆಗಳನ್ನು ಬಿಗಿ ಮಾಡಬೇಕು.

**ಶ್ರೀ ಕೃಷ್ಣಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ. ಕೌನ್ಸಿಲ್ ಮೀಟಿಂಗ್‌ನಲ್ಲಿ ಈ ವಿಷಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಸಿಗರೇಟ್‌ನಲ್ಲಿಯೂ ಸೋರಿಕೆ ಇದೆ. ಹಾಗಾಗಿ, ಬ್ಯಾಚ್‌ನ್ನು ನಮೂದು ಮಾಡಿ, ಆ ಬ್ಯಾಚ್ ಸೇಲ್ ಆಗಿದ್ದ ಪಕ್ಷದಲ್ಲಿ raw material ಎಲ್ಲಿಂದ ಬಂತು ಎಂಬುದು backend ನಲ್ಲಿ declare ಆಗಬೇಕು, ಹಾಗಾಗಿ ಅದು online ನಲ್ಲಿ entry ಆಗಬೇಕು. ಫ್ಯಾಕ್ಟರಿಯಿಂದ ಎಷ್ಟು ಔಟ್‌ಪುಟ್ ಆಗಿದೆ ಎಂಬುದನ್ನು ಸೆರೆಹಿಡಿಯುವಂಥ ವ್ಯವಸ್ಥೆ ಮಾಡಲಾಗುತ್ತಿದೆ. ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದ ಹಾಗೆ, ನಾನು ಸಹ 'ಉತ್ತರ ಪ್ರದೇಶದಲ್ಲಿ, ಗುಜರಾತ್‌ನಲ್ಲಿಯೇ ಈ ಫ್ಯಾಕ್ಟರಿಗಳಿದ್ದು, ಎಲೆಕ್ಟ್ರಿಸಿಟಿ ಎಷ್ಟು consumption ಆಗುತ್ತಿದೆ ಎಂಬುದನ್ನು

ನೋಡಿ, ಇಷ್ಟು ಯೂನಿಟ್‌ಗೆ ಇಷ್ಟು production ಆಗುತ್ತಿದೆ ಎಂದು ಮಾಡಬಹುದಲ್ಲವೇ?" ಎಂದು ಹೇಳಿದ್ದೆನು. ಅದಕ್ಕೆ ಅವರು "VAT (Value Added Tax) regime ನಲ್ಲಿ ಆ ಅಧಿಕಾರ ಇತ್ತು. 'Value Assessment' ಎನ್ನುವಂಥ provision ಇತ್ತು, ಜಿ.ಎಸ್.ಟಿ. ಬಂದ ಮೇಲೆ ಆ provision ಹೊರಟು ಹೋಗಿದೆ ಸರ್, we cannot make this value assessment now" ಎಂದು ಹೇಳಿದರು. ಅದಕ್ಕೂ ಮೊದಲು ಎಲೆಕ್ಟ್ರಿಸಿಟಿ ಎಷ್ಟು consumption ಆಗಿದೆ, it converts into so many units of production ಎಂದು ಮಾಡಬಹುದಾಗಿತ್ತು. ಈಗ ಅದು ಸಹ ಇಲ್ಲದಂತಾಗಿದೆ. Anyway, ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದ ಹಾಗೆ consumption ನಿಂದ backward ಮಾಡುವಂಥ ಕೆಲಸ ಮಾಡಲಾಗುತ್ತಿದೆ. ಈಗಾಗಲೇ ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದ ಹಾಗೆ ಅವರ ಮಾಹಿತಿಗೆ ತರಬಯಸುವುದೇನೆಂದರೆ, ಗುಟ್ಕಾ ಮೇಲೆ ಶೇಕಡ 200 ರಷ್ಟು ತೆರಿಗೆ ಇಲ್ಲ, ಸುಮಾರು ಶೇಕಡ 60 ರಿಂದ 65 ರಷ್ಟು ತೆರಿಗೆ ವಿಧಿಸಿರಬಹುದು. ಜನರು ಸುಮ್ಮನೆ ಹೇಳುತ್ತಾರೆ. ಬಹುಶಃ ಸುಮಾರು ಶೇಕಡ 59 ರಿಂದ 60 ರಷ್ಟು ತೆರಿಗೆ ವಿಧಿಸಿರಬಹುದು ಅಷ್ಟೇ. ಆದರೆ, ಅಡಿಕೆ ಮೇಲೆ ಶೇಕಡ 5 ರಷ್ಟು ತೆರಿಗೆ ವಿಧಿಸಿದ್ದು, ಅಷ್ಟು ಸಹ ಕಟ್ಟುವುದಿಲ್ಲ. ಅದು ಸಹ lowest tax rate ಇದ್ದರೂ lowest tax ನ್ನು ಸಹ ಕಟ್ಟುವುದಿಲ್ಲ, evasion ಮಾಡಲಾಗುತ್ತದೆ. ಆ ವಿಚಾರ ಬೇಡ ಬಿಡಿ ವಿಷಯಾಂತರವಾಗುತ್ತಿದೆ. ಆದರೆ, ಸಾಂಧರ್ಬಿಕವಾಗಿ ಈ ವಿಷಯವನ್ನು ತಮ್ಮ ಗಮನಕ್ಕೆ ತರಲಾಗಿದೆ.

ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದಂಥ ಅಂಶದ direction ಮೇಲೆ ಮಾತನಾಡಲು ಹೋಗುತ್ತಿದ್ದೆವು. ವಿಶೇಷವಾಗಿ ಸಿಗರೇಟ್, ಗುಟ್ಕಾ ಪ್ರಾಡಕ್ಟ್ಸ್ ಏನಿದೆ, ಇದೆಲ್ಲವನ್ನೂ more scientific method of evaluation ಮಾಡಿ, ಅಲ್ಲಿಂದ reverse mode ನಲ್ಲಿ ಮಾಡಬೇಕಾಗಿದೆ. ಈಗಾಗಲೇ ನಾನು ಹೇಳಿದ ವಿಚಾರವೇನೆಂದರೆ, ಜಿ.ಎಸ್.ಟಿ. structure ಈ ರೀತಿ ಇದೆ. ಹಾಗೆಯೇ ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದ ವಿಷಯವನ್ನು ಸಲಹೆಯಾಗಿ ತೆಗೆದುಕೊಳ್ಳುತ್ತೇನೆ. ಖಂಡಿತವಾಗಿ ನಮ್ಮ ಸರ್ಕಾರದ ಹಾಗೂ GST Council ನ ಉದ್ದೇಶವೇನೆಂದರೆ, ಸರಳೀಕರಣವಾಗಬೇಕು ಎಂಬುದಾಗಿದೆ. ಸರಳೀಕರಣ ಮಾಡಬೇಕೆಂಬ ಸಲುವಾಗಿ ಬರುವಂಥ ಎಷ್ಟೋ ಆದಾಯವನ್ನು ಬಿಟ್ಟಿದ್ದೇವೆ. ಆದಾಯ ಬರುತ್ತದೆ ಎಂದು ಗೊತ್ತಿದ್ದರೂ ಕೂಡಾ `ತೆರಿಗೆ ಪಾವತಿದಾರರಿಗೆ ಅದರಿಂದ ಕಿರಿಕಿರಿ ಜಾಸ್ತಿಯಾಗುತ್ತದೆ' ಎಂಬ ಸಲುವಾಗಿ ಎಷ್ಟೋ ತೀರ್ಮಾನವನ್ನು ವರಮಾನದ ವಿರುದ್ಧವಾಗಿ ತೆಗೆದುಕೊಂಡಿದ್ದೇವೆ. ಹಾಗೆಂದು ಎಲ್ಲವೂ ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. Harassment ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಖಂಡಿತವಾಗಿ ಅದರ ಕಡೆ ಗಮನ ಕೊಡುತ್ತೇವೆ. ಕೆಲವು specific points ಬಗ್ಗೆ ಅವರು ಹೇಳಿದ್ದು, ಈಗಾಗಲೇ interest rate ಬಗ್ಗೆ ಹೇಳಿದ್ದೇನೆ. ನಮ್ಮ assessment ಅನ್ನು revise ಮಾಡಲಿಕ್ಕೆ ಅವಕಾಶ ಇಲ್ಲವೆಂದು ಹೇಳಿದ್ದು,

ಮಾರ್ಚ್ 31 ರಂದು financial year close ಆದರೆ ನವೆಂಬರ್ ತಿಂಗಳವರೆಗೂ ಅದನ್ನು revise ಮಾಡಲು ಅವಕಾಶ ಇದೆ. ಎಷ್ಟು ಸಲ ಬೇಕಾದರೂ revise ಮಾಡಬಹುದು. ಆದರೆ, ನವೆಂಬರ್ ತಿಂಗಳ ಬಳಿಕ ಅವಕಾಶ ಇರುವುದಿಲ್ಲ. End of the last financial year March 31st ಮಾಡಿದ ಮೇಲೆ ಈ ವರ್ಷ ನವೆಂಬರ್ ತಿಂಗಳವರೆಗೂ ನಮ್ಮ assessment/declaration ಅನ್ನು revise ಮಾಡಲು ಅವಕಾಶ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನವೆಂಬರ್ ತಿಂಗಳ ನಂತರ ಮಾಡಲು ಅವಕಾಶ ಇಲ್ಲ.

ಹಾಗೆಯೇ ತುಂಬಾ ಸದಸ್ಯರು ಕರ ಸಮಾಧಾನದ ಬಗ್ಗೆ ಮಾತನಾಡಿದರು. ನೀವು defaulters ಗೆ ಲಾಭ ಮಾಡುಕೊಡುತ್ತಿದ್ದೀರಿ ಎಂದು ನೇರವಾಗಿ ಆ ಪದ ಬಳಸಲಿಲ್ಲವೆಂದರೂ ಕೂಡ ಆ ರೀತಿಯಾದ ಅರ್ಥದಲ್ಲಿ ಹೇಳಿದರು. ನಾನು ಇವರನ್ನು wilful defaulters ಎಂದು ಹೇಳಲು ತಯಾರಿಲ್ಲ. ಏಕೆಂದರೆ, ಇದು transition period ನಲ್ಲಿ ಆಗಿರುವಂಥ ತಪ್ಪಾಗಿದೆ. 2017, 2018, 2019, 2020ನೇ ಸಾಲಿನಲ್ಲಿ ಜಿ.ಎಸ್.ಟಿ. ಕಾನೂನು ಬಂದಾಗ ತುಂಬಾ interpretation issues ಇದ್ದವು. ಅವರಿಗೂ ಸಹ I.T.C (Input Tax Credit) ಕ್ಲೈಂ ಮಾಡಬಹುದೇ, ಇಲ್ಲವೇ ಎಂಬುದರ ಸ್ಪಷ್ಟತೆ ಇರಲಿಲ್ಲ. ಕೆಲವು ಸಮಯದಲ್ಲಿ ನಮಗೂ ಸಹ ಅದರ ಸ್ಪಷ್ಟತೆ ಇರಲಿಲ್ಲ. ಇನ್ನು ಕೆಲವು ನಾವು ಅವರು ನ್ಯಾಯಾಲಯದ ಮೊರೆ ಹೋಗಿ ವ್ಯಾಜ್ಯ ಮಾಡಿಕೊಂಡು ಕೊನೆಗೆ ಸ್ಪಷ್ಟೀಕರಣ ಸಿಕ್ಕಿತ್ತು. ಹಾಗಾಗಿ, transition period ನಲ್ಲಿ ಕೆಲವರು ತಪ್ಪಿತಸ್ಥರಾಗಿರಬಹುದು. ಆದರೆ, ಎಲ್ಲರೂ ತಪ್ಪಿತಸ್ಥರು ಎಂದು ಕರೆಯುವುದು ಸರಿಯಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಜೊತೆಗೆ ಇವರಿಗೆ ನಾವು penalty interest waive ಮಾಡುತ್ತಿದ್ದೇವೆ ವಿನಃ ಅಸಲನ್ನು waive ಮಾಡುತ್ತಿಲ್ಲ. ನಮ್ಮ ಹಾಗೂ ಅವರ ಮಧ್ಯೆ ಎಷ್ಟು ವ್ಯಾಜ್ಯ ಇತ್ತು, ಅಷ್ಟು ಹಣವನ್ನು ಕಟ್ಟಲೇಬೇಕು. ಆ ರೀತಿಯಾಗಿ ಇವರಿಗೆ ನಾವು ದುರ್ಲಾಭ ಮಾಡಿಕೊಡುತ್ತಿಲ್ಲ ಅಥವಾ ದುರ್ಲಾಭದ ಉದ್ದೇಶವು ಇಲ್ಲ. ಮಧ್ಯದಲ್ಲಿ ಒಂದಷ್ಟು ಜನ ಸೇರಿಕೊಳ್ಳುತ್ತಾರೆ. ಸ್ವಾಭಾವಿಕವಾಗಿ ಶೇಕಡ 100 ರಲ್ಲಿ ಎಲ್ಲಾ ರೀತಿಯ ಪ್ರಕರಣಗಳು, ಎಲ್ಲಾ ತರಹದ ಜನರು ಇರುತ್ತಾರೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, ಕೆಲವು ವಸ್ತುಗಳ ಮೇಲೆ ಶೇಕಡ 50 ರಷ್ಟು ತೆರಿಗೆ ಇರುವುದನ್ನು ಶೇಕಡ 20 ಕ್ಕೆ ಇಳಿಕೆ ಮಾಡಲಾಗಿದೆ. ಹಾಗೆಯೇ ಕೆಲವು ವಸ್ತುಗಳ ಮೇಲೆ ಶೇಕಡ 25 ರಷ್ಟು ತೆರಿಗೆ ಇರುವುದನ್ನು ಶೇಕಡ 20 ಕ್ಕೆ ಇಳಿಕೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಅದನ್ನು ತೆರಿಗೆದಾರರಿಂದ ಬಂದಿರುವಂಥ ಸಲಹೆ ಆಧಾರದ ಮೇಲೆ ಮಾಡಲಾಗಿದೆ. This was a part of our trade facilitation in consultation with the tax payers. ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದ ಹಾಗೆ ಮುಂದಿನ ದಿನಗಳಲ್ಲಿ ಆ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಇನ್ನು fake invoices ಬಗ್ಗೆ ಮಾತನಾಡಿದ್ದು ನಿಜ. ಸರಳೀಕರಣ ಮಾಡಬೇಕೆಂದು

ಹೇಳುತ್ತಾರೆ. ಏಕೆ fake invoice ಮಾಡಿ, input tax credit fraud ಆಗಿದೆ ಎಂದರೆ, ಎಲ್ಲವನ್ನೂ ಸರಳೀಕರಣ ಮಾಡಿರುವುದರಿಂದ ಆಗಿರುವುದು. ೩ಬಿ ಫಾರಂ ಇದ್ದು, ೩ಬಿ ಅನ್ನು ಅಪ್‌ಲೋಡ್ ಮಾಡಿದರೆ ಅವರಿಗೆ ನಾವು input tax credit refund ಅನ್ನು ಕೊಡಲೇಬೇಕು. ನಾನು ಇಷ್ಟು ವ್ಯವಹಾರ ಮಾಡಿದ್ದೇನೆ ಎಂದು ಆತ ಹೇಳಿದರೆ, ಅದು ಆನ್‌ಲೈನ್‌ನಲ್ಲಿ ಮ್ಯಾಚ್ ಆಗುತ್ತದೆ. ಫಾರಂ-1 ಮತ್ತು ಫಾರಂ-೩ಬಿ ಅವೆರಡೂ ಸಹ ಮ್ಯಾಚ್ ಆದ ಪಕ್ಷದಲ್ಲಿ ಅವರಿಗೆ input tax credit refund ಸಿಗುತ್ತದೆ. ಅದಕ್ಕೆ ಬೇಕಾದ ರೀತಿ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಂಡು ಮಾಡುತ್ತಿದ್ದಾರೆ. ಕರ್ನಾಟಕದಲ್ಲಿಯೇ ಸುಮಾರು 2,437 ಕೋಟಿ ರೂಪಾಯಿಗಳಷ್ಟು ದುರುಪಯೋಗವಾಗಿರುವ ಬಗ್ಗೆ ಕೇಸ್‌ಗಳನ್ನು ಹುಡುಕಿ ಬುಕ್ ಮಾಡಲಾಗಿದೆ. ಹುಡುಕಿರುವುದರಿಂದ ಅಷ್ಟು ಸಿಕ್ಕಿದೆ. ಗೊತ್ತಿಲ್ಲದೇ ತೆಗೆದುಕೊಂಡಿರುವವರು ಇನ್ನು ಹೆಚ್ಚಿನ ಮಂದಿ ಇದ್ದಾರೆ. ಈಗ ನಾವು ಸಹ ಹುಷಾರಾಗುತ್ತಿದ್ದು, ಈ fraud ಅನ್ನು ಹೇಗೆ ತಡೆಗಟ್ಟುವುದು ಎಂಬುದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ fake invoice ನಡೆಯುತ್ತಿದೆ. ನಮ್ಮ ದೇಶದಲ್ಲಿ ಯಾವ ರೀತಿ ಇದೆ ಎಂದರೆ, ನಾವು ಚಾಪೆ ಕೆಳಗೆ ನುಗ್ಗಿದರೆ, ಅವರು ರಂಗೋಲಿ ಕೆಳಗೆ ನುಗ್ಗುತ್ತಾರೆ. ಅಂತಹ ವ್ಯವಸ್ಥೆ ಇದೆ. ಹಾಗೆಂದು ಎಲ್ಲರನ್ನೂ ನೆಗೆಟಿವ್ ಆಗಿ ನೋಡಲು ಸಾಧ್ಯವಿಲ್ಲ. ಒಳ್ಳೆಯವರು ಇರುತ್ತಾರೆ, ಕೆಟ್ಟವರು ಇರುತ್ತಾರೆ. ಅವರವರಿಗೆ ತಕ್ಕ ಹಾಗೆ ಬದಲಾವಣೆ ಮಾಡಬೇಕಾಗುತ್ತದೆ. (ಮುಂದು)

(931) 17.12.2024 (5.00) ಎಸ್‌ಕೆ-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಭೈರೇಗೌಡ (ಮುಂದು):-**

ಕೊನೆಯ ದಿನ ಯಾವ ದಿನಾಂಕ ಎಂದು ಕೇಳುತ್ತಿದ್ದಾರೆ. ಕರ ಸಮಾಧಾನ ಯೋಜನೆ ಅನುಕೂಲವನ್ನು ಪಡೆದುಕೊಳ್ಳುವುದಕ್ಕೆ ಮಾರ್ಚ್ ೩1ನೇ ತಾರೀಖಿನಂದು ಎಂದು ನಿಗದಿ ಮಾಡಿದ್ದೇವೆ. ಇದರಲ್ಲಿ SGST (State Goods and Services Tax) ಇದೆ ಮತ್ತು IGST (Integrated Goods & Services Tax) ಕೂಡ ಇದೆ. ಇದರಲ್ಲಿ breakup ಇದೆ, ಅದರಲ್ಲಿ ಸ್ವಲ್ಪ ವರ್ಷವಾರು ಇದೆ. ಅದನ್ನು ಸಮ್ಮಿಶ್ರ ಮಾಡಿ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ITR (Income Tax Returns) ನ system ನಲ್ಲಿ overload ಆಗಿ, ಇದೆಲ್ಲಾ ಹಿಂದೆ ಸಮಸ್ಯೆಯಾಗಿದ್ದು, ನಿಜ. ಕೆಲವು disputes arise ಆಗಿ ITR upload ಮಾಡುವುದಕ್ಕಾಗಲಿಲ್ಲ ಎಂದು ತಾವು ಮತ್ತು ಮಾನ್ಯ ಪೂಜಾರ್‌ರವರ ಹೇಳಿರುವುದು ಅದು ಕೂಡ ನಿಜ. ಈ ಕರ ಸಮಾಧಾನದಿಂದ ಅವರದು ಕೂಡ ಸುಮಾರು settle ಆಗುತ್ತದೆ. ಆದರೆ ಈಗ ITR system stabilize ಆಗಿದೆ. ಈಗ ಹೊಸದಾಗಿರುವ ತಂದಿರುವ ತಿದ್ದುಪಡಿಯಲ್ಲಿ ಈ harassment ಅನ್ನು ತಡೆಯುವುದಕ್ಕೆ 13 trade facilitation measures ಅನ್ನು ಕೂಡ ಇದರಲ್ಲಿ ಸೇರಿಸಿಕೊಂಡಿದ್ದೇವೆ. ಇದನ್ನು simplification ಮಾಡಿದ್ದೇವೆ ಹಾಗೂ ಇನ್ನೂ simplify ಮಾಡುತ್ತಿದ್ದೇವೆ. ಅದು ಮಾಡುತ್ತಾ, ಮಾಡುತ್ತಾ, ಕೊನೆಗೆ

ನಮ್ಮ ಆದಾಯಕ್ಕೆ ಕುತ್ತಾಗುವಂತಹದ್ದು ಇದೆ. ಆದರೂ ಕೂಡ long-term ನಲ್ಲಿ simpler tax administration ಇದ್ದರೆ, business ಚೆನ್ನಾಗಿ ಬೆಳೆದು ಹೆಚ್ಚಿನ ಆದಾಯ ಬರುತ್ತದೆ ಎನ್ನುವುದು theory. ನಾನು ಕೂಡ ಆರಂಭದಲ್ಲಿ ಇದರ ಬಗ್ಗೆ ಗಟ್ಟಿಯಾಗಿ ಹೇಳುತ್ತಿದ್ದೆ. ಈಗ ಒಂದು ಆರು-ಏಳು ವರ್ಷ ಆದ ಮೇಲೆ ಸ್ವಲ್ಪ ಮೆತ್ತಗೆ ಹೇಳುತ್ತಿದ್ದೇನೆ. ಏಕೆಂದರೆ, ನಮ್ಮ ನಿರೀಕ್ಷೆಗೆ ತಕ್ಕಂತೆ ಅನುಭವ ಆಗುತ್ತಿಲ್ಲ. ನಾವು ಏನೇನು ಸರಳೀಕರಣ ಮಾಡಿದರೆ, ಸಾರ್ವಜನಿಕ ಹಿತಕ್ಕೆ ಅನುಕೂಲವಾಗುವುದಕ್ಕಿಂತ ದುರುಪಯೋಗ ಮಾಡುವಂತಹದ್ದು; ಅಂದರೆ ಎರಡು ತಕ್ಕಡಿ ತೂಗಿದಾಗ, ದುರುಪಯೋಗದ ತಕ್ಕಡಿ ಜಾಸ್ತಿ ಇದೆ. ಆದರೂ ಕೂಡ ದೇಶದ ಹಿತದೃಷ್ಟಿಯಿಂದ ಸರಳೀಕರಣದ ದಿಕ್ಕಿನಲ್ಲಿ ನಾವು ಹೋಗಲೇ ಬೇಕು. ಅದನ್ನು ಖಂಡಿತವಾಗಿಯೂ ಮಾಡುತ್ತೇವೆ ಎಂಬ ಮಾತನ್ನು ಹೇಳಿ, ಈ ವಿಧೇಯಕಕ್ಕೆ ತಂದಿರುವ ತಿದ್ದುಪಡಿಗಳಿಗೆ ಅನುಮೋದನೆ ಕೊಡಬೇಕು ಎಂದು ಹೇಳಿ ಮತ್ತೊಮ್ಮೆ ನಾನು ಸದನವನ್ನು ಕೋರುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಕೇಶವ್ ಪ್ರಸಾದ್‌ರವರೇ, ತಾವು ಮಾತನಾಡಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು):-** Spirits ಬಗ್ಗೆ ತಾವು ಹೇಳಿ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಸಂವಿಧಾನದ ಪ್ರಕಾರ, with respect to Spirits meant for human consumption, the Constitution has assigned that domain to the State Governments. Spirits not meant for human consumption are used in industrial production, and the Central Excise duty could be levied on that in the pre-GST regime. ಆದರೆ ಕೇಂದ್ರ ಸರ್ಕಾರದವರು ಈ ವಿಷಯವನ್ನು ಸ್ಪಷ್ಟೀಕರಣ ಮಾಡಿ, ರಾಜ್ಯಗಳಿಗೆ ಬಿಟ್ಟುಕೊಡುವುದಕ್ಕೆ ಜಿ.ಎಸ್.ಟಿ. ತಂದಾಗ ಒಪ್ಪಿರಲಿಲ್ಲ. ಅದಕ್ಕೆ ಅವರು ಏನು ಮಾಡಿದರು ಎಂದರೆ, ಇದು Constitutional interpretation issues, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಬಹಳ ದಶಕಗಳಿಂದ ವಾದ ವಿವಾದಗಳು ನಡೆದುಕೊಂಡು ಬಂದಿತ್ತು. ಜಿ.ಎಸ್.ಟಿ.ಗೆ ಕಾನೂನು ಮಾಡಿದಾಗ, ಸರ್ಕಾರದವರು ಮಾತನಾಡಿಕೊಂಡರು. But the Centre was not ready to give up its claim. ಅದಕ್ಕೆ ಅವರು ಏನು ಹೇಳಿದರು ಎಂದರೆ ಜಿ.ಎಸ್.ಟಿ., ಕಾನೂನಿನಲ್ಲಿ ಇದನ್ನು ಸೇರಿಸಿ ಬಿಡೋಣ. Let us have a gentleman's agreement that GST will not be levied on it. Because the Centre was not willing to give up its claim. ಆಗ ಇದಕ್ಕೂ ನಿಮಗೂ ಸಂಬಂಧವಿಲ್ಲ ಸ್ವಾಮಿ. ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಾಗಿದೆ ಎಂದು ಆಗಲೂ ಕೂಡ ನಾನು ಬಹಳ ವಾದ ಮಾಡಿದೆ. ಅವರು ಅಹಾ, ಊಹು ಹಾಗೇ ಅಂತಾ ಹೇಳಿ, ಈ ತರಹ ಅಗ್ರಿಮೆಂಟ್ ಮಾಡಿಕೊಂಡು ಇಲ್ಲಿಯವರೆಗೂ ಬಂತು. ಆದಾದ ಮೇಲೆ Bihar ನ ಒಂದು case ನಲ್ಲಿ ಒಂದು ತೀರ್ಪು ಕೂಡ ಬಂತು. ಇದೆಲ್ಲ ಆದ ಮೇಲೆ ಕೇಂದ್ರದ ಮೇಲೆ ನಾವು ಒತ್ತಡ ತಂದ ಮೇಲೆ, the Centre has agreed that anything related to human consumption ಅನ್ನು ನಾವು ಜಿ.ಎಸ್.ಟಿ. ಯಿಂದ ಹೊರಗಡೆ ಇಡೋಣ, ಅದು ಹೊರಗೆ ಇಟ್ಟರೆ, ರಾಜ್ಯದ ಸ್ವಾಯತ್ತ ಅಧಿಕಾರ ಆಗುತ್ತದೆ. ಇದರಲ್ಲಿ ಹಣಕಾಸಿನ ಲಾಭ ನಷ್ಟ ಏನೂ ಇಲ್ಲ. ಏಕೆಂದರೆ, by an agreement ಇದರ ಮೇಲೆ ನಾವು ಇಷ್ಟು ದಿನ ಜಿ.ಎಸ್.ಟಿ.

ಹಾಕುತ್ತಿರಲಿಲ್ಲ. ಅದು State excise ನ ಮುಖಾಂತರ ನಮಗೆ ರೆವಿನ್ಯೂ ಬರುತ್ತಿತ್ತು. ಅದು ಎಲ್ಲೋ ಒಂದು ಕಡೆ ಜಿ.ಎಸ್.ಟಿ. ಕಾನೂನಿನಲ್ಲಿ enter ಆಗುವುದಕ್ಕೆ ಒಂದು ಪ್ರಾವಿಷನ್ ಇತ್ತು. ಆ ಪ್ರಾವಿಷನ್ ಅನ್ನು ಈಗ ನಾವು ತೆಗೆದು ಹಾಕುತ್ತಿದ್ದೇವೆ. GST cannot be levied on alcoholic liquor for human consumption.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಹಾಗಾದರೆ, ತಾವು ಅದಕ್ಕೆ ತೆರಿಗೆ ತೆಗೆದು ಹಾಕುವುದಿಲ್ಲವೇ?

**ಶ್ರೀ ಕೃಷ್ಣಭೈರೇಗೌಡ:-** ನಮ್ಮದು Excise duty ಇದೆ. ಅದರಲ್ಲಿ cover ಆಗಿದೆ. State Excise duty ಏನು ಹಾಕುತ್ತಿದ್ದೇವೆ. ಅದರಲ್ಲಿ covered ಇದೆ. ಆದರೆ ಜಿ.ಎಸ್.ಟಿ. ಕಾನೂನನ್ನು ಕೂಡ ಒಂದು backdoor entry ಇತ್ತು. ಈಗ ಅದನ್ನು ತೆಗೆದು ಹಾಕುತ್ತಿದ್ದೇವೆ. We had always asserted that this was a state domain. ಜಿ.ಎಸ್.ಟಿ.ಗೆ ಬರಬಾರದು. ಏಕೆಂದರೆ, ಜಿ.ಎಸ್.ಟಿ. ಎಂದರೆ, the Centre also has a say in this matter. ಅದು ಬರಬಾರದು ಎಂದು ನಾವು ಏನೊಂದು ವಾದ ಮಾಡಿಕೊಂಡು ಬಂದಿದ್ದೇವೆ. ಆ ವಾದದ ಹಿನ್ನಲೆಯಲ್ಲಿ ಇವತ್ತು ತಿದ್ದುಪಡಿಯಲ್ಲಿ ಆ ಜಿ.ಎಸ್.ಟಿ. ಯಿಂದ ಅದನ್ನು ಹೊರಗಡೆ ಇಡುತ್ತಿದ್ದೇವೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಚಿವರೇ, revised IT returns ಎಂದು ತಾವು ಹೇಳಿದ್ದಿರಲ್ಲ, ಅಲ್ಲಿ ಆದಾಯ ತೆರಿಗೆಯಲ್ಲಿ ಮೊದಲಿನಿಂದ incorporate ಆಗಿ ಬಿಟ್ಟಿದೆ. ಇದು ಸರಳೀಕರಣ ಇದೆ. ಅದರಲ್ಲಿ ತೊಂದರೆ ಇಲ್ಲ. ಇನ್ನೂ 15-20 ದಿವಸ ಇದಕ್ಕೊಂದು ಅದರಲ್ಲಿ ಸೇರಿಸಿ, ಇದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಕೃಷ್ಣಭೈರೇಗೌಡ:-** ಇದರ ಬಗ್ಗೆ ವಿಚಾರ ಮಾಡುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ GST Council ಸಭೆಗೆ ಹೋಗುತ್ತೇವೆ. ಅದಕ್ಕೆ ಸುಮಾರು ಒಂದೂವರೆ ದಿನಗಳ ಕಾಲ ಸಭೆಗೆ ಸಿದ್ಧತೆಯನ್ನು ಮಾಡಿಕೊಂಡಿದೇವೆ ಎಂಬುದರ ಬಗ್ಗೆ ಮಾನ್ಯ ಸಚಿವರು ಹೇಳಿರುವುದು ನಮಗೆ ತುಂಬಾ ಸಂತೋಷ. ರಾಜ್ಯ ಮತ್ತು ಕೇಂದ್ರ ಮಧ್ಯದಲ್ಲಿ ರಾಜ್ಯದ ಷೇರನ್ನು ಜಾಸ್ತಿ ಮಾಡುವಂತಹ ನಿಟ್ಟಿನಲ್ಲಿ ನಮಗೂ ಅವಕಾಶ ಕೊಟ್ಟರೆ ಅಂದರೆ, ವಿರೋಧ ಪಕ್ಷದ ಆಸಕ್ತಿ ಇರುವಂತಹ ಸದಸ್ಯರಿಗೂ ಅವಕಾಶ ಕೊಟ್ಟರೆ ಅವರ ಜೊತೆಯಲ್ಲಿ ಒಂದು ಗಂಟೆ ಅಥವಾ ಎರಡು ಗಂಟೆ ಕಾಲ ಸಮಯವನ್ನು ಕಳೆದರೆ, ನಮ್ಮಲ್ಲಿರವಂತಹ ಸಲಹೆಗಳು ಏನು ತೆಗೆದುಕೊಳ್ಳುತ್ತಿದ್ದಾರೋ, ಅದನ್ನು exchange ಮಾಡಿಕೊಂಡು, ಇನ್ನೊಂದಿಷ್ಟು ಷೇರನ್ನು ಕೇಂದ್ರದಿಂದ ಜಾಸ್ತಿ ತರುವಂತಹ ನಿಟ್ಟಿನಲ್ಲಿ loopholes ಗಳನ್ನು ಬಲಗೊಳಿಸುವಂತಹ ನಿಟ್ಟಿನಲ್ಲಿ ನಮ್ಮದು ಕೂಡ ಕಿರು ಕಾಣಿಕೆ ಕೊಡಬಹುದೇನೋ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಯಾರೇ ಆಗಲಿ ರಾಜ್ಯದ ಹಿತಕ್ಕೆ ಕೈ ಜೋಡಿಸುತ್ತೇವೆ ಎಂದರೆ, ಸರ್ವಸಮ್ಮತವಾಗಿ ನಾವು ಸ್ವಾಗತ ಮಾಡುತ್ತೇವೆ.

**ಡಾ|| ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ನಡೆದಂತಹ ಅಹಿತಕರ ಘಟನೆಗಳ ಬಗ್ಗೆ ಉಲ್ಲೇಖ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಈ ವಿಷಯವಲ್ಲ. ವಿಧೇಯಕ ಮುಗಿಸಲಿ. ತಾವು ಕುಳಿತುಕೊಳ್ಳಿ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಸರಕು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 38 ರವರೆಗೆ**

**ಸಭಾಪತಿಯವರು:- "ಖಂಡ 2 ರಿಂದ 38 ರವರೆಗೆ ಈ ವಿಧೇಕಯದ ಅಂಗವಾಗಿರುತ್ತದೆ"**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಖಂಡ 2 ರಿಂದ 38 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**<u>ಖಂಡ-1 ಇತ್ಯಾದಿ</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಡಾ॥ ಎಂ. ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಡಾ॥ ಎಂ. ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯವಾದಂತಹ ರಾಯಚೂರು ವಿಶ್ವವಿದ್ಯಾಲಯದ ಹೆಸರನ್ನು "ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ" ಎಂದು ಮರು ನಾಮಕರಣ ಮಾಡಬೇಕೆಂದು ಹೇಳಿ ಇವತ್ತು ವಿಧೇಯಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಈ ಭಾಗದಲ್ಲಿ ಸುಮಾರು ಎರಡು ಜಿಲ್ಲೆಗಳಲ್ಲಿ ಮತ್ತು ವಿಧಾನಸಭಾ ಕ್ಷೇತ್ರಗಳ ಪೈಕಿ ಐದು ವಿಧಾನಸಭಾ ಕ್ಷೇತ್ರಗಳು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವಂತಹದ್ದು. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿರುವಂತಹ ಜನಾಂಗದವರು ಇದ್ದಾರೆ. ಆ ಭಾಗದ ಜನ ಪ್ರತಿನಿಧಿಗಳ ಬೇಡಿಕೆಯಾಗಿದೆ. ಅದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಂದು ಈ ವಿಶ್ವವಿದ್ಯಾಲಯಕ್ಕೆ ಹೆಸರನ್ನು ಬದಲಾಯಿಸುತ್ತೇವೆಂದು ಹೇಳಿ, "ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ" ಎಂಬ ಹೆಸರನ್ನು ಘೋಷಣೆ ಮಾಡುತ್ತೇವೆಂದು ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಿರುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ತಿಳಿಸಿದರು. ಆ ಒಂದು ಭಾಗವಾಗಿ ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದೇನೆ. ಈ ವಿಧೇಯಕವನ್ನು ಮಾನ್ಯ ಸದಸ್ಯರು ಇದರ ಒಂದು ಹೆಸರನ್ನು ಮಾರ್ಪಾಡು ಮಾಡುವುದಕ್ಕೆ ಸಹಕರಿಸಬೇಕು. ವಿಶ್ವವಿದ್ಯಾಲಯಗಳಿಗೆ ಹೆಸರನ್ನು ಬದಲಾಯಿಸುವುದಕ್ಕೆ ಮಾನ್ಯ ಸದಸ್ಯರು ಸಹಮತಿಯನ್ನು ಕೊಡಬೇಕೆಂದು ಹೇಳಿ, ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

(ಮುಂದು)

(932) 17.12.2024, 5.10, TCH-KS (ಉಪ ಸಭಾಪತಿಯವರ ಉಪಸ್ಥಿತಿ)

**ಡಾ.ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು ತಂದಿರುವಂತಹ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ಸ್ವಾಗತ ಮಾಡುತ್ತೇನೆ. ರಾಯಚೂರು ವಿಶ್ವವಿದ್ಯಾಲಯವನ್ನು "ಆದಿ ಕವಿ ಶ್ರೀ ಮಹರ್ಶಿ ವಾಲ್ಮೀಕಿ ವಿಶ್ವವಿದ್ಯಾನಿಲಯ" ಎಂದು ಘೋಷಣೆ ಮಾಡುತ್ತಿರುವುದು ನಮ್ಮ ರಾಜ್ಯಕ್ಕೆ ಶ್ರೀ ಮಹರ್ಷಿ ವಾಲ್ಮೀಕಿಯವರಿಗೆ ಕೊಟ್ಟಂತಹ ಗೌರವ ಎಂದು ಹೇಳುತ್ತೇನೆ. ಏಕೆಂದರೆ, ಶ್ರೀ ಮಹರ್ಷಿ ವಾಲ್ಮೀಕಿಯವರು ಇಡೀ ದೇಶದಲ್ಲಿಯೇ ಮತ್ತು ಜಗತ್ತಿನಲ್ಲಿಯೇ ಪ್ರಸಿದ್ಧವಾಗಿರತಕ್ಕಂಥ ರಾಮಾಯಣವನ್ನು ಬರೆದಿದ್ದಾರೆ. ಅವರು "ಹಿಂದುಳಿದ ವರ್ಗಗಳ ಪ್ರತಿಬಿಂಭ" ಎಂದು ನಾವೆಲ್ಲರೂ ಹೆಮ್ಮೆಯಿಂದ ಹೇಳುತ್ತೇವೆ. ಇಂತಹ ಸಂದರ್ಭದಲ್ಲಿಯೇ 3 ವಿಷಯಗಳನ್ನು ಮಾನ್ಯ ಸಚಿವರ

ಗಮನಕ್ಕೆ ತರಲು ಪ್ರಯತ್ನಿಸುತ್ತೇನೆ. ಅದರ ಬಗ್ಗೆ ನಿರ್ಧಾರ ಮಾಡುವ ಕುರಿತು ನಾನು ಅವರ ವಿವೇಚನೆಗೆ ಬಿಡುತ್ತೇನೆ. ಮೊದಲನೆಯದಾಗಿ, ದಾಸರಲ್ಲಿಯೇ ಶ್ರೇಷ್ಠ ದಾಸರು ಎಂದು ಹೆಸರು ಪಡೆದಂತಹ ಕನಕ ದಾಸರು, ಶರಣರಲ್ಲಿಯೇ ನಿಜ ಶರಣ ಎಂದು 12ನೇ ಶತಮಾನದಲ್ಲಿ ಬಸವಣ್ಣನವರಿಂದ ಹೆಸರು ಪಡೆದಂತಹ ನಿಜಶರಣ ಅಂಬಿಗರ ಚೌಡಯ್ಯನವರು ಹಾಗೂ ದೀನ-ದಲಿತರಿಗೆ ಶಿಕ್ಷಣ, ಮಂದಿರಗಳು, ಮಠಗಳನ್ನು ಮತ್ತು ಅನ್ನದಾಸೋಹ ಮಾಡುವುದರ ಮುಖಾಂತರ ಶಿಕ್ಷಣ ನೀಡಿದಂತಹ ಶ್ರೀ ನಾರಾಯಣ ಗುರು ಇವರುಗಳು ಕೂಡ ಮಹಾಪುರುಷರು. ಇವರೆಲ್ಲಾ ಕರ್ನಾಟಕ ಮತ್ತು ನಮ್ಮ ದೇಶದಲ್ಲಿಯೇ ಇದ್ದಂತವರು. ಹಾಗಾಗಿ, ಮಹಾ ಪುರುಷರಾದ ಕನಕದಾಸರ ಹೆಸರಿನಲ್ಲಿ, ಅಂಬಿಗರ ಚೌಡಯ್ಯನವರ ಹೆಸರಿನಲ್ಲಿ ಹಾಗೂ ಶ್ರೀ ನಾರಾಯಣ ಗುರು ರವರ ಹೆಸರಿನಲ್ಲಿ ವಿಶ್ವವಿದ್ಯಾಲಯಗಳಿಗೆ ತಾವು ಮರು ನಾಮಕರಣ ಮಾಡಬೇಕೆಂದು ತಮ್ಮಲ್ಲಿ ಕೋರುತ್ತೇನೆ. ಏಕೆಂದರೆ ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳಿಗೆ ಏನೂ ಕೊರತೆ ಇಲ್ಲ. ಕರ್ನಾಟಕದಲ್ಲಿ ಸಾಕಷ್ಟು ವಿಶ್ವವಿದ್ಯಾನಿಲಯಗಳು ಹೊಸದಾಗಿ ಪ್ರಾರಂಭವಾಗಿರುತ್ತವೆ. ಎರಡನೆಯದಾಗಿ, ಶ್ರೀ ಮಹರ್ಷಿ ವಾಲ್ಮೀಕಿಯವರ ಹೆಸರಿನಲ್ಲಿ ರಾಯಚೂರು ವಿಶ್ವವಿದ್ಯಾನಿಲಯ ಮರು ನಾಮಕರಣಗೊಳ್ಳುತ್ತಿರುವುದು ಹೆಮ್ಮೆಯ ವಿಷಯ.

**(ಈ ಹಂತದಲ್ಲಿ ವೈಸ್ ಚೇರ್ಮನ್ ರವರಾದ ಶ್ರೀ ಮಂಜುನಾಥ್ ಭಂಡಾರಿಯವರು ಸಭಾಪೀಠವನ್ನು ಅಲಂಕರಿಸಿದರು)**

ರಾಯಚೂರು ಎಂದರೆ, ಕೇವಲ ಹಿಂದುಳಿದ ಭಾಗದಲ್ಲಿರತಕ್ಕಂಥ ಒಂದು ಜಿಲ್ಲೆಯಾಗಿದೆ. ಈ ಭಾಗದಲ್ಲಿ ಅತ್ಯಂತ ಹಿಂದುಳಿದ ವರ್ಗದವರು ಮತ್ತು ಗ್ರಾಮೀಣ ಪ್ರದೇಶದ ಮಕ್ಕಳು ಕೂಡ ಇವತ್ತಿನ ದಿವಸ ಈ ವಿಶ್ವವಿದ್ಯಾನಿಲಯಕ್ಕೆ ಓದಲು ಬರುತ್ತಾರೆ. ಕೇವಲ ಅವರ ಹೆಸರು ಇಟ್ಟರೆ ಮಾತ್ರ ಶ್ರೀ ಮಹರ್ಷಿ ವಾಲ್ಮೀಕಿಯವರಿಗೆ ಗೌರವ ಕೊಟ್ಟಂತಾಗುವುದಿಲ್ಲ. ಅದರೊಂದಿಗೆ ಮುಂದಿನ ದಿನಗಳಲ್ಲಿ ಕರೆಯಲ್ಪಡತಕ್ಕಂಥ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯಕ್ಕೆ ತಾವು ಖಾಲಿ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಬೇಕೆಂದು ಹಾಗೂ ಅದಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ನಾನು ಕೋರಿಕೊಳ್ಳುತ್ತೇನೆ. ಏಕೆಂದರೆ ಘನತೆವೆತ್ತ ರಾಜ್ಯಪಾಲರು ಈಗಾಗಲೇ ಹೇಳಿದ್ದಾರೆ. ಬಹುಶಃ ಅದರ ಆದೇಶ ಕೂಡ ಮಾನ್ಯ ಸಚಿವರಿಗೆ ಬಂದಿರಬಹುದು, ಅದು ಅವರಿಗೂ ಕೂಡ ಗೊತ್ತಿರಬಹುದು. KKRDB (Kalyana Karnataka Region Development Board) ಗೆ ಕೊಡತಕ್ಕಂಥ ಅನುದಾನದಲ್ಲಿ ಶೇಕಡ 10 ರಷ್ಟನ್ನು ಆ ಭಾಗದಲ್ಲಿ ಬರತಕ್ಕಂಥ ವಿಶ್ವವಿದ್ಯಾಲಯಗಳಿಗೆ ಅನುದಾನ ಕೊಡಬೇಕೆಂದು ಈಗಾಗಲೇ ಘನತೆವೆತ್ತ ರಾಜ್ಯಪಾಲರು ಹೇಳಿದ್ದಾರೆ. ಅವರು ಈ ವಿಶ್ವವಿದ್ಯಾಲಯಕ್ಕೆ ಚಾನ್ಸಲರ್ ಆಗಿರುತ್ತಾರೆ. ಆ ಒಂದು ವಿಷಯವನ್ನು ಕೂಡ ಬಳಸಿಕೊಂಡು ಆ ಭಾಗದಲ್ಲಿರತಕ್ಕಂಥ ವಿಶ್ವವಿದ್ಯಾಲಯಗಳಿಗೆ ಅನುದಾನವನ್ನು ಕೊಡಬೇಕೆಂದು ನಾನು ಎರಡನೇ ವಿಷಯವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಇನ್ನು ಕೊನೆಯದಾಗಿ ಹೇಳುವುದಾರೆ, ರಾಯಚೂರು ವಿಶ್ವವಿದ್ಯಾನಿಲಯವನ್ನು ನಾವು 'Mother University' ಎಂದು ಕರೆಯುತ್ತೇವೆ. ಗುಲಬರ್ಗಾ ವಿಶ್ವವಿದ್ಯಾಲಯವನ್ನು 'ಕಲಬುರಗಿ ವಿಶ್ವವಿದ್ಯಾಲಯ' ಎಂದು ಕರೆಯುತ್ತೇವೆ. ಇವತ್ತಿನ ದಿವಸ ಈ ವಿಶ್ವವಿದ್ಯಾಲಯ ಇಂತಹ ದುಸ್ಥಿತಿಗೆ ಬಂದು ನಿಂತಿದೆ. ಮಾನ್ಯ ಸಭಾಪತಿಯವರೇ,

ನಾನು ಒಂದೇ ಒಂದು ಉದಾಹರಣೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಭಾಗದ ಸಚಿವರು ಕೂಡ ಇಲ್ಲೇ ಇದ್ದಾರೆ. ಕೇವಲ ಅಲ್ಲಿ 260 sanctioned teaching posts ಇವೆ. ಈ 260 sanctioned teaching posts ನಲ್ಲಿ ಸದ್ಯಕ್ಕೆ ಕೇವಲ 32 ಶಿಕ್ಷಕರು ಮಾತ್ರ ಕೆಲಸ ಮಾಡುತ್ತಿದ್ದಾರೆ. ಅಂದರೆ ಕೇವಲ ಶೇ.10 ರಿಂದ ಶೇ.15ರಷ್ಟು ಶಿಕ್ಷಕರು ಮಾತ್ರ ಇದ್ದಾರೆ. ಉಳಿದವರೆಲ್ಲರೂ ಕೂಡ Guest Facultyಗಳು. ಹಾಗಾಗಿ, ಖಾಲಿ ಇರುವ ಬೋಧಕರ ಹುದ್ದೆಗಳನ್ನು ತುಂಬಬೇಕು ಎನ್ನತಕ್ಕಂಥ ಒಂದು ಮನವರಿಕೆಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಏಕೆಂದರೆ, ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ವಿಶ್ವವಿದ್ಯಾಲಯಗಳನ್ನು ತೆಗೆದುಕೊಂಡರೆ ಸಾಕಷ್ಟು ವಿಶ್ವವಿದ್ಯಾಲಯಗಳಲ್ಲಿ ಶೇ.66ರಷ್ಟು ಹುದ್ದೆಗಳು ಖಾಲಿ ಇವೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಅದಕ್ಕೆ ಹೆಚ್ಚು ಗಮನಹರಿಸಬೇಕು. ನಾನು ಮತ್ತೊಮ್ಮೆ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಧನ್ಯವಾದಗಳು.

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ತಿದ್ದುಪಡಿ ವಿಧೇಯಕ, 2024ನ್ನು ಸ್ವಾಗತಿಸುತ್ತೇನೆ. 'ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯ ವಿಶ್ವವಿದ್ಯಾನಿಲಯ' ಎಂದು ಮರು ನಾಮಕರಣ ಮಾಡುತ್ತಿರುವುದು ತುಂಬಾ ಸಂತೋಷದ ವಿಷಯ. ನಾನು ಕೂಡ ಬೆಂಗಳೂರು ಸೆಂಟ್ರಲ್ ಯೂನಿವರ್ಸಿಟಿಯ ಸದಸ್ಯನಾಗಿ ಹೆಚ್ಚಿನ ಸಭೆಗಳಲ್ಲಿ ಭಾಗವಹಿಸಿದ್ದೇನೆ. ಈ ವಿಶ್ವವಿದ್ಯಾನಿಲಯವನ್ನು ಉನ್ನತೀಕರಿಸತಕ್ಕಂಥದ್ದು ಮತ್ತು ತುಂಬಾ ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ. ಇದು ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಬರುವಂತಹ ಒಂದು ವಿಶ್ವವಿದ್ಯಾನಿಲಯ ಆಗಿರುವುದರಿಂದ ಇದಕ್ಕೆ ವಿಶೇಷವಾಗಿ ಆಸಕ್ತಿಯನ್ನು ವಹಿಸಬೇಕು. ಆ ವಿಶ್ವವಿದ್ಯಾನಿಲಯಕ್ಕೆ ಹೆಸರನ್ನಿಡುತ್ತಿರುವುದು ತುಂಬಾ ಸಂತೋಷ. ಅಲ್ಲಿಗೆ ಅನುದಾನ ಕೊಡಬೇಕು. ಆ ಅನುದಾನದ ಸದ್ಬಳಕೆಯ ಬಗ್ಗೆ ಮೇಲ್ಪಂಕ್ತಿಯನ್ನು ಹಾಕಬೇಕೆಂದು ನಾನು ತನ್ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ. ಹಾಗೆಯೇ ಅಲ್ಲಿ ಶ್ರೀ ಮಹರ್ಷಿ ವಾಲ್ಮೀಕಿಯವರ ಅಧ್ಯಯನ ಪೀಠವು ಕೂಡ ಆಗಬೇಕು. ಶ್ರೀ ಮಹರ್ಷಿ ವಾಲ್ಮೀಕಿಯವರ ಅಧ್ಯಯನ ಪೀಠ ಆದಾಗ ಮಾತ್ರ ರಾಮಾಯಣದ ಬಗ್ಗೆ ವಿಶೇಷವಾಗಿ ಅಧ್ಯಯನವಾಗುತ್ತದೆ. ಹನುಮಂತನ ಬಗ್ಗೆ ವಿಶೇಷವಾಗಿ ಅಧ್ಯಯನವಾಗುತ್ತದೆ. ಹಾಗೆಯೇ ಕರ್ನಾಟಕಕ್ಕೂ ಮತ್ತು ರಾಮಾಯಣಕ್ಕೂ ವಿಶೇಷವಾದಂತಹ ಸಂಬಂಧ ಇರುವುದರಿಂದ, ಈ ಒಂದು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿಯವರ ಅಧ್ಯಯನಕ್ಕೆ ಗಮನ ಕೊಟ್ಟಾಗ ಭಾರತೀಯ ಪುನರುತ್ಥಾನದ ಎಲ್ಲಾ ಸಂಗತಿಗಳು ಮೇಲೆ ಬರುತ್ತದೆ. ವಸ್ತುನಿಷ್ಠವಾಗಿ ನಾವು ಇದನ್ನು ಮತ್ತೊಮ್ಮೆ ನೋಡುವುದಕ್ಕೆ ದಾರಿ ಮಾಡಿಕೊಡುತ್ತದೆಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024ನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ.

**ವೈಸ್ ಚೇರ್ಮನ್:–** ಶ್ರೀಮತಿ ಹೇಮಲತಾ ನಾಯಕ್ ರವರೇ, ಒಂದು ನಿಮಿಷ. ಆ ವಿಶ್ವವಿದ್ಯಾಲಯಕ್ಕೆ ಹೆಸರು ಮಾತ್ರ ಬದಲಾವಣೆ ಮಾಡುತ್ತಿದ್ದಾರೆ. ಹಾಗಾಗಿ, ಅದಕ್ಕೆ ಮಾತ್ರ ಸೀಮಿತವಾಗಿ ಮಾತನಾಡಿ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ' ಎಂದು ಮರುನಾಮಕರಣ ಮಾಡುವಂಥದ್ದು ನಿಜವಾಗಲೂ ಸರ್ಕಾರದಿಂದ ಮತ್ತು ಮಾನ್ಯ ಸಚಿವರಿಂದ ಉತ್ತಮವಾದ ಕೆಲಸವಾಗಿದೆ. ಆದರೆ, ಈಗಾಗಲೇ ಹಂಪಿಯಲ್ಲಿ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ ಪ್ರಾರಂಭವಾಗಿದೆ. ಆದರೆ ಅಲ್ಲಿಯೂ ಕೂಡ ಯಾವುದೇ ರೀತಿ implement ಆಗಿಲ್ಲ. ಅದೇರೀತಿ ಈ ವಿಶ್ವವಿದ್ಯಾನಿಲಯ ಆಗಬಾರದು. ಏಕೆಂದರೆ, ನಿಜವಾಗಲು ಕೂಡ ಸಾಕಷ್ಟು ವಿಶ್ವವಿದ್ಯಾಲಯಗಳು ನಾಯಿಕೊಡೆಗಳಂತೆ ಬೆಳೆದಿವೆ. ಇದಕ್ಕೆ ಅವರ ಹೆಸರಿಡುವುದರ ಜೊತೆಗೆ ಅದಕ್ಕೋಸ್ಕರ KKRDB ಯಿಂದ ಒಂದಷ್ಟು ಹಣವನ್ನು ತೆಗೆದಿಟ್ಟು, ಅಲ್ಲಿರತಕ್ಕಂಥ ಉತ್ತಮವಾದ ಕೆಲಸ ಮಾಡಬೇಕಾಗಿದೆ. ಏಕೆಂದರೆ, ರಾಯಚೂರು, ಕಲಬುರಗಿ ಹಿಂದುಳಿದಿರತಕ್ಕಂಥ ಪ್ರದೇಶಗಳಾಗಿವೆ. ಈ ಒಂದು ಪ್ರದೇಶದಲ್ಲಿ ಈ ವಿಶ್ವವಿದ್ಯಾಲಯಕ್ಕೆ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡುತ್ತಿರುವುದಕ್ಕೆ ನಾನು ಸ್ವಾಗತ ಕೋರುತ್ತೇನೆ. ಅಲ್ಲೂ ಕೂಡ ಇದು ಅಷ್ಟಕ್ಕೇ ಸೀಮಿತ ಆಗಬಾರದು. ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ರವರು ಹೇಳಿದಂತೆ, ನಿಜವಾಗಲೂ ಅಲ್ಲಿ ಶ್ರೀ ಮಹರ್ಷಿ ವಾಲ್ಮೀಕಿಯವರ ಒಂದು ಅಧ್ಯಯನ ಪೀಠ ಆಗುವಂತಹ ಕೆಲಸ ಆಗಬೇಕು. ಈ ವಿಶ್ವವಿದ್ಯಾನಿಲಯಕ್ಕೆ ಮರುನಾಮಕರಣ ಮಾಡುತ್ತಿರುವುದು ಬಹಳ ಸಂತೋಷ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಡಾ.ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾಗಿರತಕ್ಕಂಥ ಡಾ.ತಳವಾರ್ ಸಾಬಣ್ಣನವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಕನಕದಾಸರು, ಅಂಬಿಗರ ಚೌಡಯ್ಯ ಮತ್ತು ನಾರಾಯಣ್ ಗುರು ರವರ ಹೆಸರುಗಳನ್ನು ಪರಿಗಣಿಸಬೇಕೆಂದು ಹೇಳಿದ್ದಾರೆ. ಖಂಡಿತವಾಗಿಯು ಕೂಡ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಯಾವ ರೀತಿ ಪರಿಗಣಿಸಬೇಕು ಎನ್ನುತಕ್ಕಂಥದ್ದರ ಬಗ್ಗೆ ನಾವು ಮತ್ತು ಸರ್ಕಾರ ಚಿಂತನೆ ಮಾಡುತ್ತೇವೆ. ಮತ್ತೆ ಈಗಾಗಲೇ ವಿಶ್ವವಿದ್ಯಾಲಯಗಳ ಪರಿಸ್ಥಿತಿಗಳ ಬಗ್ಗೆ ಹೇಳಿದ್ದಾರೆ. ಅಲ್ಲಿನ teaching faculties ವಿಚಾರದ ಬಗ್ಗೆ ಹೇಳಿದರು. ರಾಯಚೂರು ವಿಶ್ವವಿದ್ಯಾಲನಿಲಯದ Assistant Professor ನ ನೇಮಕಾತಿ ವಿಚಾರದ ಬಗ್ಗೆ ಹೇಳುವುದಾದರೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಈಗಾಗಲೇ ಪರೀಕ್ಷೆಗಳಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಇದು ಬೇರ್ಪಟ್ಟಂಥ ಸಂದರ್ಭದಲ್ಲಿ opt-in ಮಾಡಿಕೊಂಡಾಗ ಅಲ್ಲಿಂದ, ಇಲ್ಲಿಗೆ ಬಹಳಷ್ಟು ಶಿಕ್ಷಕರು ಬರಲಿಲ್ಲ.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠಾಸೀನರಾದರು)**

ಈಗ ಆ ಒಂದು ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಸರ್ಕಾರದ ಹಂತದಲ್ಲೂ ಕೂಡ ನಾವು ನಮ್ಮ ಇಲಾಖೆಯಲ್ಲಿ ಸಂಪೂರ್ಣವಾಗಿ ವಿಶ್ವವಿದ್ಯಾಲಯಗಳು ಇರಬಹುದು ಅಥವಾ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಹಂತ ಹಂತವಾಗಿ ತುಂಬುವುದಕ್ಕೆ ಈಗಾಗಲೇ ಹಣಕಾಸು ಇಲಾಖೆಗೆ ಪ್ರಸ್ತಾವನೆಯನ್ನು ಕೊಟ್ಟಿದ್ದು, ಅವರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮುಂದಿನ ದಿನಗಳಲ್ಲಿ ಆದಷ್ಟು ಶೀಘ್ರವಾಗಿ ನಾವು ಅದನ್ನು ತಮ್ಮ ಗಮನಕ್ಕೆ ತರುತ್ತೇವೆ ಮತ್ತು ಪ್ರಕ್ರಿಯೆಗಳನ್ನು ಪ್ರಾರಂಭ ಮಾಡುವುದಕ್ಕೆ ನಮ್ಮ ಸರ್ಕಾರ

ಬದ್ಧವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ರಾಯಚೂರು ವಿಶ್ವವಿದ್ಯಾಲಯದಲ್ಲಿ Genome Research Center ಮಾಡುವುದಕ್ಕೆ ಈಗಾಗಲೇ ಅನುಮೋದನೆ ಆಗಿದೆ.

**(ಮುಂದು)**

(933)17.12.2024/5.20/ಎಂ.ಎಂ-ಎಂ.ಡಿ (ಉಪಸಭಾಪತಿಯವರ ಉಪಸ್ಥಿತಿ)

**ಡಾ.ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು) (ಮುಂದು):-**

ಅದರ ಕೆಲಸ ಕೂಡ ಪ್ರಾರಂಭವಾಗಿದೆ. ನಾವು ಅದರ ಶಿಲಾನ್ಯಾಸ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಆಗಲಿಲ್ಲ ಆದರೆ ಕೆಲಸ ಪ್ರಾರಂಭವಾಗಿದೆ. ನಾವು ಅಲ್ಲಿಗೆ ಹೋಗಿ ಅಲ್ಲಿನ ಕೆಲಸವನ್ನು ಪರಿಶೀಲನೆ ಮಾಡುವಂಥದ್ದನ್ನು ಮಾಡುತ್ತೇವೆ. ರಾಜ್ಯಪಾಲರ ವಿಚಾರವನ್ನು ಹೇಳಿದರು. ಶೇ.10 ಕೊಡಬೇಕು ಎನ್ನುವಂತಹದ್ದು. KKRDB (Kalyana Karnataka Regional Development Board) ಯಲ್ಲಿ ಶೇ.5ಕ್ಕೆ ಅನುಮೋದನೆಯಾಗಿರುವುದು ಬಹುಶಃ ತಮ್ಮ ಗಮನದಲ್ಲಿದೆ. ಆದರೆ ಅಲ್ಲಿ ಏನು ಕೆಲಸವಾಗಬೇಕು, ಯಾವುದಕ್ಕೆ ಅದನ್ನು ಬಳಸಿಕೊಳ್ಳಬೇಕು ಎಂಬುದು ನಮ್ಮ ಗಮನದಲ್ಲಿಲ್ಲ. ನೇರವಾಗಿ ಅದನ್ನು ರಾಜ್ಯಪಾಲರು ನಿರ್ಣಯ ಮಾಡುತ್ತಾರೆ. ಅದೇನೆಂಬ ಮಾಹಿತಿಯನ್ನು ನಾವು ಪಡೆದುಕೊಳ್ಳುತ್ತೇವೆ. ನಮಗೆ ಅದರ ಮಾಹಿತಿ ಇಲ್ಲ. ಏಕೆಂದರೆ, ನಾಳೆ ಏನಾದರೂ ಹೆಚ್ಚು ಕಡಿಮೆಯಾದಾಗ ಉತ್ತರ ಕೊಡುವವನು ನಾನಾಗುತ್ತೇನೆ. ಹೆಚ್ಚುವರಿ ಅನುದಾನ ಕೊಡಬೇಕೆನ್ನುವುದು ಎಲ್ಲಾ ವಿಶ್ವವಿದ್ಯಾಲಯಗಳ ಪರಿಸ್ಥಿತಿಯಾಗಿದೆ. ಮಾನ್ಯ ಸದಸ್ಯರಾದ ಹೇಮಲತಾ ನಾಯಕ್‌ರವರು ಹೇಳುವಂತಹದ್ದು;

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೇ, ಪದವಿ ಮುಗಿದು ಮೂರು ತಿಂಗಳಾದರೂ ಕೂಡ ಅಂಕಪಟ್ಟಿ ಬರದಿರುವುದರಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಅಥವಾ ಉದ್ಯೋಗಕ್ಕೆ ಹೋಗುವುದಕ್ಕೆ ಬಹಳ ತೊಂದರೆಯಾಗಿದೆ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಡಾ.ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈಗ ವಿಶ್ವವಿದ್ಯಾಲಯಗಳಿಗೆ ಬಲ ತುಂಬುವ ಬಗ್ಗೆ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಪುಟದ ಉಪಸಮಿತಿಯನ್ನು ರಚನೆ ಮಾಡಿದ್ದಾರೆ. ಎಲ್ಲಾ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಯಾವ ರೀತಿ ವಿಶ್ವವಿದ್ಯಾಲಯಗಳನ್ನು ಬಲಗೊಳಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು. ವಿಶ್ವವಿದ್ಯಾಲಯಗಳು ನಾಯಿಕೊಡೆಗಳಂತೆ ಎದ್ದಿವೆ ಎಂದು ತಾವೇ ಹೇಳಿದಿರಿ. ಅದಕ್ಕೆ ಏನು ಕಾರಣ, ಅದಕ್ಕೇನು ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವುದು;

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಏನಾಗಿದೆ . . . .

**ಡಾ.ಎಂ.ಸಿ. ಸುಧಾಕರ್:-** ನಾನು ಅದಕ್ಕೆ ಹೇಳುತ್ತೇನೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ . . .

**ಉಪ ಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣನವರೇ, ಹೇಮಲತಾ ನಾಯಕ್‌ರವರೇ, ಇಬ್ಬರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡಲಿ. ಅದರಲ್ಲಿ ಏನಾದರೂ ಇದ್ದರೆ ಆಮೇಲೆ ಮಾತನಾಡಿ.

**ಡಾ.ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದಾದ ಮೇಲೆ UUCMS (Unified University and College Management System) ಬಗ್ಗೆ ಹೇಳುತ್ತೇನೆ. ಅಧ್ಯಯನ ಪೀಠದ ಬಗ್ಗೆ ಕೇಳಿದ್ದಾರೆ. ಈಗಾಗಲೇ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಪೀಠ ಇದೆ. ಹಿಂದೆ ಇದೇ ಸದನದಲ್ಲಿ ಅಧ್ಯಯನ ಪೀಠಗಳ ಪರಿಸ್ಥಿತಿಗಳ ಬಗ್ಗೆ ಚರ್ಚೆಯಾಗಿತ್ತು. ಸದನ ಮುಗಿದ ನಂತರ ಎಲ್ಲಾ ಅಧ್ಯಯನ ಪೀಠಗಳ ವಸ್ತುಸ್ಥಿತಿ ಏನು, ಅದು ಯಾವ ರೀತಿ ನಡೆಯುತ್ತಿದೆ ಎಂದು ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲ್ಬರ್ಗ ವಿಚಾರದಲ್ಲಿ ನಮ್ಮ ತಿಪ್ಪಣ್ಣ ಕಮಕನೂರವರು ಪ್ರಶ್ನೆ ಮಾಡಿದ್ದರು. ಇವೆಲ್ಲದರ ಬಗ್ಗೆ ಗಮನ ಕೊಡುತ್ತಿದ್ದೇವೆ. ಇದರ ಬಗ್ಗೆ ಕೂಡ ನಾವು ವಿಶ್ವವಿದ್ಯಾಲಯಗಳನ್ನು ಯಾವ ರೀತಿ ಬಲಗೊಳಿಸಬೇಕು ಎನ್ನುವುದರ ಬಗ್ಗೆ ಮತ್ತು ವಿಶ್ವವಿದ್ಯಾಲಯಗಳ ಕಾಯಿದೆ ತಿದ್ದುಪಡಿಯನ್ನು ಸಮಗ್ರವಾಗಿ ತರುವ ಪ್ರಯತ್ನ ಮುಂದಿನ ದಿನಗಳಲ್ಲಿ ಸದನದ ಮುಂದೆ ತರುತ್ತೇವೆ. ತಾವು ಏನು UUCMS ಬಗ್ಗೆ ಹೇಳಿದಿರಿ; ಹಿಂದಿನ ಸರ್ಕಾರದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ UUCMS ಎನ್ನುವಂತಹ ಸರ್ಕಾರದ portal ನ್ನು ತಂದಿದ್ದರು. ಸುಮಾರು 10 modules ರಲ್ಲಿ ಏಳನ್ನು ಮಾಡಿದ್ದೇವೆ. ಅಂಕಪಟ್ಟಿಗಳ ವಿಚಾರದಲ್ಲಿ ಕೆಲವರು ವಿಶ್ವವಿದ್ಯಾಲಯಗಳಲ್ಲಿ ಗೊಂದಲವನ್ನು ಸೃಷ್ಟಿ ಮಾಡುತ್ತಿದ್ದಾರೆ. ಅಂಕಪಟ್ಟಿಗಳ ವಿಚಾರದಲ್ಲಿ NAD (National Academic Depositor) ಅದನ್ನು upload ಮಾಡುವುದು. ಇವತ್ತು ಏನು Digital Technology ಇದೆ, ಯಾವುದೇ ಉದ್ಯೋಗವನ್ನು call for ಮಾಡಿದ ಸಂದರ್ಭದಲ್ಲಿ document verification ಮಾಡುವ ಸಂದರ್ಭದಲ್ಲಿ ಅಂಕಪಟ್ಟಿಗಳ ವಿಚಾರದಲ್ಲಿ fake marks card ಬರುವುದು ಇವೆಲ್ಲಾ ವಿಚಾರಗಳ ಬಗ್ಗೆ ಬಹಳಷ್ಟು ಗೊಂದಲವಿದೆ. ಆದ್ದರಿಂದ NAD ಬಂದಿರುವುದರಿಂದ ಇದರಲ್ಲಿ ಅಪ್‌ಲೋಡ್ ಮಾಡಬಹುದೆಂದು ಯು.ಜಿ.ಸಿ. ಕೂಡ ಒಪ್ಪಿಕೊಂಡಿದೆ. ಇದರ ಬಗ್ಗೆ ನಾವು ಬಹಳಷ್ಟು ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಯಾರಿಗೆ hard copy ಬೇಕು, ಯಾರು ವಿದೇಶಗಳಿಗೆ ಹೋಗಬೇಕು ಅಥವಾ ಯಾವುದಾದರೂ ಸಂಸ್ಥೆಯಲ್ಲಿ ಉದ್ಯೋಗ ಬಯಸಿದಂತಹ ಸಂದರ್ಭದಲ್ಲಿ ಉದ್ಯೋಗ ಕೊಡುವಂತಹವರು ಏನಾದರೂ ತಮಗೆ ಮೂಲ ಅಂಕಪಟ್ಟಿ ಬೇಕೆಂದು ಕೇಳಿದಂತಹ ಸಂದರ್ಭದಲ್ಲಿ ಅವರಿಗೆ ಮಾತ್ರ ಕಡಿಮೆ ದರದಲ್ಲಿ minimum security features ನಲ್ಲಿ ಅವರಿಗೆ ಅಂಕಪಟ್ಟಿ ಕೊಡಬೇಕೆಂದು ಹೇಳಿದ್ದೇವೆ. ಆದರೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಎಲ್ಲರಿಗೂ ಕೊಡಬೇಕು ಎಂಬ ಬೇರೆ ರೀತಿಯ ಆಲೋಚನೆಗಳಿವೆ. ಬಹಳಷ್ಟು ಜನರು ತಮ್ಮಲ್ಲಿ security features ಇದೆಯೆಂದು ನಮ್ಮ ಬಳಿಯೂ ಬಂದರು. ಎಷ್ಟೇ security features ಇರಲಿ ಅದಕ್ಕೆ 100 ರಿಂದ 150 ರೂಪಾಯಿಗಳನ್ನು ಹೇಳುವಂತಹದ್ದು, ಅದಕ್ಕೆ ಬಡ ವಿದ್ಯಾರ್ಥಿಗಳಿಂದ ಹೆಚ್ಚು ಹಣವನ್ನು ವಸೂಲಿ ಮಾಡುವುದು ಇವೆಲ್ಲಕ್ಕೂ ಕಡಿವಾಣ ಹಾಕುವ ದೃಷ್ಟಿಯಲ್ಲಿ UUCMS ನಲ್ಲಿ ಮಾಡುತ್ತಿದ್ದೇವೆ. ನಾನು ಹಾವೇರಿಯಲ್ಲಿ ಜನಪದ ವಿಶ್ವವಿದ್ಯಾಲಯದ ಘಟಿಕೋತ್ಸವದ ಭಾಷಣದಲ್ಲಿ ಈ ರೀತಿ ಗೊಂದಲವನ್ನು ಸೃಷ್ಟಿ ಮಾಡುತ್ತಿದ್ದಾರೆಂದು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಆದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ NAD – Digi Locker is more authentic ನಿಮಗೆ ಗೊತ್ತಿದೆ. ಯಾರೇ ಆಗಲಿ ಅದರ ಬಗ್ಗೆ ಸಂಶಯ ಪಡುವ ಹಾಗಿಲ್ಲ. ಯಾರಾದರೂ ಅದನ್ನು ಪ್ರಿಂಟ್ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಕ್ಲಾರಿಟಿ ಬರುತ್ತಿಲ್ಲ ಎಂದು ಒಂದು ಸಮಸ್ಯೆ ಬರುತ್ತಿದೆ. ಅದರ ಕಡೆ ಗಮನ ಕೊಡುವುದಕ್ಕೆ ಇವತ್ತು ನಾವು ಪ್ರಯತ್ನ ಮಾಡುತ್ತಿದ್ದೇವೆ. UUCMS ನಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಅಡ್ಮಿಷನ್

ಇರಬಹುದು, ಶುಲ್ಕ ಪಾವತಿ ಇರಬಹುದು ಸಮಗ್ರ ಮಾಹಿತಿ ಸಿಗುತ್ತದೆ. ಸರ್ವರ್‌ನಿಂದ ಸ್ವಲ್ಪ ಸಮಸ್ಯೆಯಾಗುತ್ತಿದೆ. ಮೊನ್ನೆ ದಿವಸ ಸರ್ವರ್ overload ಆಗಿದ್ದರಿಂದ ಸ್ವಲ್ಪ ತೊಂದರೆಯಾಯಿತು, ನಾವು ಸರ್ವರ್ ಅನ್ನು ಇ-ಗವರ್ನೆನ್ಸ್‌ನಿಂದ ಪ್ರತ್ಯೇಕ ಸರ್ವರ್ ಬಳಸುತ್ತಿದ್ದೇವೆ. ನಮ್ಮದೇ KEA (Karnataka Examinations Authority) and UUCMS ಗೆ ಪ್ರತ್ಯೇಕ ಸರ್ವರನ್ನು ಬಳಸುವುದಕ್ಕೆ ಏನಾದರೂ ಸಾಧ್ಯತೆ ಇದೆಯೇ ಎನ್ನುವ ಬಗ್ಗೆ ಕೂಡ ಪರಿಶೀಲನೆ ಮಾಡುತ್ತಿದ್ದೇವೆ. ಈ ಸಮಗ್ರ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕು. ಇದರಲ್ಲಿ ನ್ಯೂನತೆಗಳು ಹಾಗೂ ಸಮಸ್ಯೆಗಳು ಬರುತ್ತಿರುತ್ತದೆ. ಇಷ್ಟು ಹೊತ್ತು transition period ಬಗ್ಗೆ ಮಾತನಾಡಿದೆವು. Income Tax filing ವಿಚಾರದಲ್ಲಿ ದೊಡ್ಡ ದೊಡ್ಡ ಸಂಸ್ಥೆಗಳೇ ಆ ಸಾಫ್ಟ್‌ವೇರನ್ನು ತಯಾರು ಮಾಡಿವೆ. ಅದರಲ್ಲಿಯೇ ಬಹಳಷ್ಟು ಸಮಸ್ಯೆಗಳಿತ್ತು. ಸಮಯ ಕೂಡ ಹಿಡಿಯಿತು. ಇಲ್ಲೂ ಅಷ್ಟೇ ಇದು ಸರ್ಕಾರದ ಸ್ವಾಮ್ಯದಲ್ಲಿ ಬಹಳ ಕಡಿಮೆ ಹಣದಿಂದ ಆಗಿರುವಂತಹ ಪೋರ್ಟಲ್ ಇದು. ಇದರಲ್ಲಿ ನಿರಂತರವಾಗಿ ಬರುವಂತಹ ಸಮಸ್ಯೆಗಳನ್ನು ಅಟೆಂಡ್ ಮಾಡುತ್ತಿದ್ದೇವೆ. ಸದನ ಮುಗಿದ ಮೇಲೆ ಯಾರು technical staff, ಕಾಲೇಜುಗಳಲ್ಲಿರಬಹುದು, ವಿಶ್ವವಿದ್ಯಾಲಯಗಳಲ್ಲಿರಬಹುದು ಅವರೆಲ್ಲರನ್ನೂ ಕರೆದು ಮತ್ತೊಂದು ಸಲ ಚರ್ಚೆ ಮಾಡಿ ಅವರಿಗೆ ಇನ್ನಷ್ಟು ಪರಿಣಾಮಕಾರಿಯಾಗಿ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸುವಂತಹ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಆದ್ದರಿಂದ ತಾವು ಹೇಳಿರುವಂತಹ ಎಲ್ಲಾ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಸುಧಾರಣೆ ತರುವುದು ಹಾಗೂ ವಿಶ್ವವಿದ್ಯಾಲಯಗಳಿಗೆ ಕಳೆದು ಹೋಗಿರುವ ಗೌರವವನ್ನು ಮತ್ತೆ ಸ್ಥಾಪನೆ ಮಾಡುವಂತಹ ನಿಟ್ಟಿನಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇಷ್ಟು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಗೊಂದಲ ಸೃಷ್ಟಿಯಾಗಿದೆ. ಇದರಿಂದ ವಿದಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಈಗಾಗಲೇ ಘನತೆವೆತ್ತ ರಾಜ್ಯಪಾಲರು ಹೇಳಿದ್ದಾರೆ;

**ಉಪ ಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣನವರೇ, ಇದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದಲ್ಲಿ ರಾಯಚೂರು ವಿಶ್ವವಿದ್ಯಾನಿಲಯ ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ಎಂಬ ಪದಗಳನ್ನು ಪ್ರತಿಯೋಜಿಸುವ ವಿಧೇಯಕ. ವಿಷಯ ಇರುವುದು ಇದು. ಅದಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ಮಾತನಾಡಬೇಕು.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಸಂಬಂಧಪಟ್ಟಂತೆ ಮಾತ್ರ. ಬೇರೇನಿಲ್ಲ.

**ಉಪ ಸಭಾಪತಿಯವರು:-** ಬೇರೆ ರೀತಿ ಮಾತನಾಡುವುದಕ್ಕೆ ಈ ಬಿಲ್‌ನಲ್ಲಿ ಅವಕಾಶವಿಲ್ಲ. ಈ ಬಿಲ್‌ಗೆ ಸಂಬಂಧಪಟ್ಟಂತಹ ವಿಚಾರವನ್ನು ಮಾತ್ರ ಮಾತನಾಡಬೇಕು. ಬೇರೆ ಯಾವುದನ್ನೂ divert ಮಾಡಬೇಡಿ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಆಯಿತು, ಒಂದೇ ನಿಮಿಷ. ನಾನು ಈಗಾಗಲೇ ಹೇಳಿದ್ದೆ. KKRDB (Kalyana Karnataka Regional Development Board) ಗೆ ತಮ್ಮ ಸರ್ಕಾರ 5,000/- ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಅದರಲ್ಲಿ ಶೇ. 10ರಷ್ಟು ಕೊಡಬೇಕೆಂದು ಘನತೆವೆತ್ತ ರಾಜ್ಯಪಾಲರು

ಹೇಳಿದ್ದಾರೆ. ತಾವು ಅದೇ ಸ್ವರೂಪದಲ್ಲಿ ಕೊಟ್ಟರೆ ಅಲ್ಲಿರುವಂತಹ 5-6 ವಿಶ್ವವಿದ್ಯಾಲಯಗಳಿಗೆ 100 ಕೋಟಿ ರೂಪಾಯಿಗಳಷ್ಟು ಸಿಗುತ್ತದೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಅದನ್ನು ಸಂಬಂಧಪಟ್ಟ ಸಚಿವರು ಕೊಡುವುದಕ್ಕಾಗುವುದಿಲ್ಲ. ಅದನ್ನು KKRDB ರವರು ಕೊಡಬೇಕು.

**ಡಾ: ತಳವಾರ್ ಸಾಬಣ್ಣ:-** ಸ್ವಲ್ಪ ಅವರು ಆಸಕ್ತಿ ತೋರಿಸಿದರೆ,

**ಶ್ರೀ ಎನ್.ಎಸ್. ಬೋಸರಾಜು:-** ನಾವು ಸಹ ರಾಜ್ಯಪಾಲರ ಬಳಿಗೆ ಹೋಗಿದ್ದೆವು. ರಾಜ್ಯಪಾಲರು ಸೂಚನೆ ಮಾಡಿರುವುದು KKRDB ನವರಿಗೆ. KKRDB ಸದಸ್ಯರಲ್ಲ. ಇದರ ಬಗ್ಗೆ KKRDB ರವರು ನಿರ್ಧಾರ ತೆಗೆದುಕೊಳ್ಳಬೇಕು. ಇವರಿಗೇನೂ ಸಂಬಂಧವಿಲ್ಲ.

**ಡಾ: ತಳವಾರ್ ಸಾಬಣ್ಣ:-** ಅದನ್ನು ತಾವು ಆಸಕ್ತಿ ಮಾಡಿದರೆ ಅದು ದೊಡ್ಡ ವಿಷಯವಲ್ಲ.

**ಶ್ರೀ ಎನ್.ಎಸ್. ಬೋಸರಾಜು:-** ನೀವು ಇವರಿಗೆ ರಾಜ್ಯಸರ್ಕಾರದಿಂದ ಕೊಡಿ ಎಂದು ಕೇಳಬೇಕು. ನಾವೇತಕ್ಕೆ KKRDB ನವರಿಗೆ ಕೊಡಬೇಕು?

**(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರು clarification ಕೇಳಿದ್ದಾರೆ. Clarify ಮಾಡಿ ಅಷ್ಟೇ.

**ಶ್ರೀ ಎನ್.ಎಸ್. ಬೋಸರಾಜು:-** ನಿಮ್ಮ ಕಳಕಳಿ ನಮಗೆ ಅರ್ಥವಾಗಿದೆ. ನಾವು ಅವರಿಗೆ ಒತ್ತಾಯ ಮಾಡಬೇಕಾಗಿತ್ತು, ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕೊಟ್ಟ ಹಾಗೆ ನಮ್ಮ ರಾಯಚೂರು ವಿಶ್ವವಿದ್ಯಾಲಯಕ್ಕೆ, ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ, ಕಲ್ಯಾಣ ಕರ್ನಾಟಕದ ವಿಶ್ವವಿದ್ಯಾಲಯಕ್ಕೂ ಕೊಡಬೇಕೆಂದು ಡಿಮಾಂಡ್ ಮಾಡಬೇಕು. KKRDB ಗೆ ಕೊಟ್ಟಿರುವ ಹಣವನ್ನು ನಾವೇತಕ್ಕೆ ಅವರಿಗೆ ಕೊಡಬೇಕು?

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, KKRDB ಅದೇ ಭಾಗದ್ದಲ್ಲವೇ? ಉನ್ನತ ಶಿಕ್ಷಣ ಇಲಾಖೆ . . .

**ಉಪ ಸಭಾಪತಿಯವರು:-** ಆಯಿತು ಕುಳಿತುಕೊಳ್ಳಿ.

**ಡಾ.ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ಆಗಲೇ ಬಹಳ ಸ್ಪಷ್ಟವಾಗಿ ಹೇಳಿದೆ. ಶೇ.5ರಷ್ಟು ಕೊಡಬೇಕೆಂದು ತೀರ್ಮಾನವಾಗಿದೆಯೆಂದು ನನಗೆ ಮಾಹಿತಿ ಇದೆ. ಆದರೆ ಯಾವ ಉದ್ದೇಶಕ್ಕೆ ಎಂಬ ಮಾಹಿತಿ ನನ್ನ ಹತ್ತಿರ ಇಲ್ಲ. ಯಾವ್ಯಾವುದಕ್ಕೆ ಎಂದು ರಾಜ್ಯಪಾಲರೇ ನೇರವಾಗಿ ತೀರ್ಮಾನ ಮಾಡಿದ್ದಾರೆ. ಬಹುಶಃ ಇಡೀ ದೇಶದಲ್ಲಿ ಪ್ರಪ್ರಥಮವಾಗಿ ರಾಜ್ಯಪಾಲರಿಗೆ financial powers ಕೊಟ್ಟಿರುವುದು KKRDB ಇಂದ ಎಂದು ನನಗೆ ಆಶ್ಚರ್ಯವಾಗುತ್ತಿದೆ. ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ ಸದನದಲ್ಲಿ ಉತ್ತರ ಕೊಡುವಂತಹವನು ನಾನು. ಅದು ಪ್ರತ್ಯೇಕವಾದಂತಹ ವಿಚಾರ. UUCMS ಬಗ್ಗೆ ಒಂದು ಮಾತು ಹೇಳಿ ಮುಗಿಸುತ್ತೇನೆ. ಇದು ಎಲ್ಲಾ ವಿಶ್ವವಿದ್ಯಾಲಯಗಳು ಈ ರೀತಿಯ ಪ್ರಯತ್ನಗಳನ್ನು ಮಾಡಿ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವಂತಹದ್ದು. ಏಕಸ್ವಾಮ್ಯದಲ್ಲಿ

common platform ಇಡೀ ವ್ಯವಸ್ಥೆಯನ್ನು ಪರೀಕ್ಷೆಗಳಿಂದ ಹಿಡಿದು ಎಲ್ಲಾ ಮಾನಿಟರ್ ಮಾಡುವುದಕ್ಕೆ ಅವಕಾಶ ಇರುವುದರಿಂದ ಸುಮಾರು 250 ಕೋಟಿಗಿಂತ ಹೆಚ್ಚು ಹಣ ಉಳಿತಾಯವಾಗುವಂತಹ ಕೆಲಸ ಆಗಿದೆ. ಆದ್ದರಿಂದ ತಾವು ಹೇಳುತ್ತಿರುವ ಸಮಸ್ಯೆಗಳು ಖಂಡಿತವಾಗಿಯೂ ನಮ್ಮ ಗಮನದಲ್ಲಿದೆ. ಒಂದೊಂದನ್ನೂ ಪರಿಹಾರ ಮಾಡುವಂತಹ ಕೆಲಸ ಮಾಡುತ್ತಿದ್ದೇವೆ. ಆದಷ್ಟು ಇದನ್ನು ವಿದ್ಯಾರ್ಥಿಸ್ನೇಹಿ ರೂಪದಲ್ಲಿ ಮಾಡುವಂತಹ ಕೆಲಸ ಮಾಡುತ್ತೇವೆ.

(ಮುಂದು)

(934) 17.12.2024 5.30 ಹೆಚ್‌ವಿ. ಎಂಡಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಡಾ॥ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.”

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಈ) ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನ ಪ್ರಸ್ತಾವ**

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು 30 ಖಾಸಗಿ ವಿಶ್ವವಿದ್ಯಾಲಯಗಳು ಇವೆ. ಅವುಗಳಲ್ಲಿ ಎರಡು ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ, 2011-12ನೇ ಸಾಲಿನಲ್ಲಿ ಆದಂತಹ ಅಲಯನ್ಸ್ ಮತ್ತು ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯಗಳಲ್ಲಿ ರಾಜ್ಯಪಾಲರ ಒಬ್ಬ ಪ್ರತಿನಿಧಿಯನ್ನು ರಾಜ್ಯ ಸರ್ಕಾರದ ಮುಖಾಂತರ ನೇಮಕ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದರು. ಉಳಿದಂತೆ ಎಲ್ಲ ವಿಶ್ವವಿದ್ಯಾಲಯಗಳಿಗೆ ರಾಜ್ಯ ಸರ್ಕಾರದ ಒಬ್ಬ ತಜ್ಞರು ಪ್ರತಿನಿಧಿಯಾಗಿರುವುದಕ್ಕೆ ಅವಕಾಶವಿತ್ತು. ಆದರೆ, ಚಾಣಕ್ಯ ವಿಶ್ವವಿದ್ಯಾನಿಲಯಕ್ಕೆ ರಾಜ್ಯ ಸರ್ಕಾರದ ಪ್ರತಿನಿಧಿ ಇರಲಿಲ್ಲ. ಅದನ್ನು ಸೇರ್ಪಡೆ ಮಾಡುವುದಕ್ಕಾಗಿ ಈ ತಿದ್ದುಪಡಿಯನ್ನು ತರಲಾಗಿದೆ. ಇದಕ್ಕೆ ಸದನವು ತನ್ನ ಅಂಗೀಕಾರವನ್ನು ನೀಡಬೇಕೆನ್ನುವುದು ನನ್ನ ಕೋರಿಕೆಯಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ನೋಡಿದಾಗ, ಎಲ್ಲ ಸರ್ಕಾರಗಳಲ್ಲಿ ನಡೆಯುತ್ತಿರುವಂತೆ ಈ ಸರ್ಕಾರದಲ್ಲಿಯೂ ನಡೆಯುತ್ತಿದೆ ಎಂದು ನನಗನ್ನಿಸಿದೆ. ಇದೊಂದು ಅಕ್ರಮವನ್ನು ಸಕ್ರಮ ಮಾಡುವಂತಹ ವಿಧೇಯಕವೆನ್ನುವುದು ನನ್ನ ಅನಿಸಿಕೆಯಾಗಿದೆ. ಈ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವುದಕ್ಕಾಗಿ ಸುಮಾರು 106 ಎಕರೆ ಜಾಗವನ್ನು ಕೆ.ಐ.ಎ.ಡಿ.ಬಿ., ವತಿಯಿಂದ ಸುಮಾರು 50 ಕೋಟಿ ರೂಪಾಯಿಗಳಿಗೆ ನೀಡಲಾಗಿದೆ. ಕೆ.ಐ.ಎ.ಡಿ.ಬಿ., ಎನ್ನುವುದು ಒಂದು ಶಾಸನಬದ್ಧವಾಗಿರುವ ಸಂಸ್ಥೆಯಾಗಿದೆ. ಸರ್ಕಾರದ ನಿರ್ದೇಶನದ ಮೇರೆಗೆ ಆ ಜಾಗವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೇ, ಈಗ ಜಾಗವನ್ನು ಕೊಟ್ಟಾಗಿದೆ. ಆ ಜಾಗ ಸಾಮಾನ್ಯ ಸ್ಥಿತಿಯಲ್ಲಿ ಮಂಜೂರಾತಿ ಆಗಿದ್ದರೆ, ಯಾರು ಪ್ರಶ್ನೆ ಮಾಡುತ್ತಿರಲಿಲ್ಲ. ಒಂದು ವಿಚಿತ್ರವಾದ ರೀತಿಯಲ್ಲಿ ಇದನ್ನು ಮಂಜೂರು ಮಾಡಿದ್ದಾಗಲೇ ಪ್ರಶ್ನೆ ಉದ್ಭವವಾಯಿತು. ಮೊನ್ನೆ ಸದನದಲ್ಲಿ ರೈತರಿಗೆ ನೋಟೀಸ್ ಕೊಟ್ಟು ಅವರ ಜಾಗಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ವಕ್ಫ್ ವಿಚಾರದ ಮೇಲೆ ಚರ್ಚೆ ಮಾಡುತ್ತಾ, ಸದನದ ಕಾಲವನ್ನು ಹರಣ ಮಾಡಿದ್ದೆವು. ದೇವನಹಳ್ಳಿಯಲ್ಲಿ ಒಂದು ಎಕರೆಗೆ 2.90 ಕೋಟಿ ರೂಪಾಯಿಗಳಷ್ಟು ಸರ್ಕಾರದ ದರವಿದೆ. ಅದರಂತೆ 106 ಎಕರೆಗೆ ಸುಮಾರು 205 ಕೋಟಿ ರೂಪಾಯಿಗಳಿಗೂ ಹೆಚ್ಚಾಗಿರುತ್ತದೆ. ಆದರೇ, ಅಲ್ಲಿನ ರೈತರಿಗೆ ಕೇವಲ 75 ಲಕ್ಷ ರೂಪಾಯಿಗಳನ್ನು ನೀಡಲಾಗಿದೆ. ರೈತರ ಜಮೀನನ್ನು

ತೆಗೆದುಕೊಂಡು ಯಾವುದೇ ಸಂಘಸಂಸ್ಥೆಗಳಿಗೆ ರೈತರ ಪ್ರಾತಿನಿಧ್ಯವಿಲ್ಲದೆ; ಸರ್ಕಾರದ ಪ್ರತಿನಿಧಿಯನ್ನು ನೇಮಕ ಮಾಡುವುದರಲ್ಲಿ ನನಗೆ ಯಾವುದೇ ಅರ್ಥ ಕಾಣುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಕೆ.ಐ.ಎ.ಡಿ.ಬಿ. ವತಿಯಿಂದ 99 ವರ್ಷಗಳಿಗೆ ಸಂಘಸಂಸ್ಥೆಗಳಿಗೆ ಲೀಸ್ ಕೊಡುವುದಕ್ಕೆ ಅವಕಾಶವಿದೆ. ಅದರಂತೆ ಸರ್ಕಾರ ಈ ಜಾಗವನ್ನು 99 ವರ್ಷಗಳಿಗೆ ಕರಾರಿನ ಮೇಲೆ ನೀಡಿರುತ್ತದೆ. ಅನಂತರ ಸದರಿ ಪ್ರಸ್ತಾವನೆಗಳ ನಿಯಮಗಳನ್ನು ಮೀರಿ 99 ವರ್ಷಗಳ ಗುತ್ತಿಗೆಗೆ ಬದಲಾಗಿ 10 ವರ್ಷ ಗುತ್ತಿಗೆ ಕಂ ಮಾರಾಟ ಪತ್ರವನ್ನಾಗಿ ಕಾರ್ಯಗತಗೊಳಿಸುವ ಕುರಿತು ಅಂದಿನ ಸಚಿವ ಸಂಪುಟ ನಿರ್ಧಾರ ಮಾಡಿರುತ್ತದೆ. ರೈತರಿಗೆ ಅವರೇ ಖುದ್ದಾಗಿ ಭೂಮಿಯನ್ನು ಮಾರಾಟ ಮಾಡುವುದಕ್ಕೆ ಬಿಡದೇ ಇವರೇ ಯಾವುದೋ ಸಂಸ್ಥೆಯನ್ನು ಮಾಡುತ್ತೇವೆಂದು 99 ವರ್ಷ ಲೀಸ್‌ಗೆ ಕೊಟ್ಟು ಅದನ್ನು 10 ವರ್ಷಗಳಾದ ನಂತರ ಅವರಿಗೇ ಮಾರಾಟ ಮಾಡುವುದು ಎಂದರೇ, ರೈತರ ಪಾಡೇನಾಗಬೇಕು? ರೈತರಿಗೆ ಎಷ್ಟು ಮೊತ್ತದ ಪರಿಹಾರವನ್ನು ನೀಡಿರಬಹುದು? ಈ ವಿಚಾರ ಮಾನ್ಯ ಉನ್ನತ ಶಿಕ್ಷಣ ಸಚಿವರ ವ್ಯಾಪ್ತಿಗೆ ಬರದಿದ್ದರೂ ಸಹ; ಇಲ್ಲಿ ನಡೆದಿರುವಂತಹ ಅಕ್ರಮವನ್ನು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ.

ಸದರಿ ಸಂಸ್ಥೆಯವರು ಸಾಮಾಜಿಕ ಸೇವೆಯ ಉದ್ದೇಶಕ್ಕಾಗಿ ಜಮೀನನ್ನು ಲೀಸ್‌ಗೆ ಪಡೆದಿರುತ್ತಾರೆ. ಅದೇ ನೆಲಗಟ್ಟಿನಲ್ಲಿ ಲೀಸ್‌ಡೀಡ್‌ಗೆ ಬದಲಾಗಿ ಸೇಲ್ ಡೀಡ್ ಆಗಿ ಪರಿವರ್ತಿಸಿ ಕೈಗಾರಿಕಾ ನಿಯಮಗಳನ್ನು ಬದಲಿಸಿ ಶೈಕ್ಷಣಿಕ ಉದ್ದೇಶಗಳಿಗೆ ಮಾರ್ಪಡಿಸುವಂತೆ ಕೋರಿರುತ್ತಾರೆ. ಅದರಂತೆ ಅಂದಿನ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸದರಿ ಕೆ.ಐ.ಎ.ಡಿ.ಬಿ., ಮಂಜೂರಾತಿ ಜಮೀನಿಗೆ 99 ವರ್ಷದ ಗುತ್ತಿಗೆಗೆ ಬದಲಾಗಿ 10 ವರ್ಷದ ಗುತ್ತಿಗೆ ಕಂ ಮಾರಾಟಪತ್ರವಾಗಿ ಪರಿವರ್ತಿಸಿ ಸಚಿವ ಸಂಪುಟ ಒಪ್ಪಿಗೆಯನ್ನು ನೀಡಿರುತ್ತದೆ. ಈ ಎಲ್ಲ ಅಂಶಗಳು ಇದ್ದಾಗಲೂ ಸಹ ಆತುರವಾಗಿ ಕೆ.ಐ.ಎ.ಡಿ.ಬಿ., ಭೂಮಿಯನ್ನು 99 ವರ್ಷದ ಗುತ್ತಿಗೆಗೆ ಬದಲಾಗಿ 10 ವರ್ಷದ ಗುತ್ತಿಗೆ ಕಂ ಮಾರಾಟಪತ್ರವಾಗಿ ಪರಿವರ್ತಿಸಿ ಕಾರ್ಯಗತಗೊಳಿಸಿರುವುದು ಅಂದಿನ ಸರ್ಕಾರ ಕಾನೂನು ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅದಕ್ಕಾಗಿಯೇ ನಾನು ಇದರಲ್ಲಿ ಅಕ್ರಮವಾಗಿದೆಯೆಂದು ಹೇಳುತ್ತಿದ್ದೇನೆ. ಈ ಕುರಿತಂತೆ ಸರ್ಕಾರದ ಮಟ್ಟದಲ್ಲಿ ಚರ್ಚೆ ಮತ್ತು ಪರಾಮರ್ಶೆಯ ಅಗತ್ಯವಿದ್ದು, ನಿಯಮಾವಳಿಗಳಂತೆ ಉದ್ದೇಶಿತ ಕಾರ್ಯಗಳಿಗೆ ಬಳಸುವ ನಿಟ್ಟಿನಲ್ಲಿ ಕ್ರಮಕೈಗೊಂಡು; ಸರ್ಕಾರ ಒಳ್ಳೆಯ ಉದ್ದೇಶಕ್ಕೆ ವಶಪಡಿಸಿಕೊಂಡಿರುವ ಜಮೀನನ್ನು ಖಾಸಗಿ ವ್ಯಕ್ತಿಗಳು ಶೈಕ್ಷಣಿಕ ಉದ್ದೇಶದ ಹೆಸರಿನಲ್ಲಿ ಬೇರೆ ಉದ್ದೇಶಕ್ಕೆ ಬಳಸಿಕೊಂಡು ದುರುಪಯೋಗ ಪಡಿಸಿಕೊಳ್ಳುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರವು ಕಠಿಣ ಕ್ರಮ ಕೈಗೊಳ್ಳುವ ಅಗತ್ಯವಿದೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು 1200 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 20 ಎಕರೆಯಲ್ಲಿ ಈಗಾಗಲೇ ಈ ವಿಶ್ವವಿದ್ಯಾಲಯವನ್ನು ಕಟ್ಟಲಾಗಿದೆ. ಈ ಸಂಸ್ಥೆಯ ಧ್ಯೇಯ ಉದ್ದೇಶವೇನು ಎನ್ನುವುದು ಗೊತ್ತಿಲ್ಲ. ವಿಶ್ವವಿದ್ಯಾಲಯವೆಂದು ಹೇಳುತ್ತಾರೆ, ಅದನ್ನು Center for Education and social studies ಎಂದು ಕರೆಯುತ್ತಾರೆ. ಎನ್.ಇ.ಪಿ., ನಿಯಮಾವಳಿಗಳ ಅನುಸಾರವಾಗಿ ಕಾರ್ಯನಿರ್ವಹಿಸುವುದಾಗಿ ತಿಳಿಸಿದ್ದು, ವಿದೇಶಿ

ವಿಶ್ವವಿದ್ಯಾಲಯದೊಂದಿಗೆ Memorandum of Understanding (MoU) ಮಾಡಿಕೊಂಡು ಶೈಕ್ಷಣಿಕ ಸಂಶೋಧನೆ ಮತ್ತು ಅಭಿವೃದ್ಧಿ ಸಂಶೋಧನಾ ಕೇಂದ್ರಕ್ಕೆ ದೇಣಿಗೆಯನ್ನು ಪಡೆಯಲು ಉದ್ದೇಶಿಸಿದ್ದು ಸದರಿ ಜಮೀನನ್ನು ಗುತ್ತಿಗೆ ಪಡೆಯುವುದಾಗಿ ತಿಳಿಸಿತ್ತು. ಆ ಸಂಸ್ಥೆ ಯಾರದು? ಅದನ್ನು ಕಟ್ಟುವುದಕ್ಕೆ ವೆಚ್ಚ ಮಾಡಿರುವ 1,200 ಕೋಟಿ ರೂಪಾಯಿಗಳು ಅವರಿಗೆ ಎಲ್ಲಿಂದ ಬಂತು? 100 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿರುವವರಿಗೆ ಇ.ಡಿ., ಸಿ.ಬಿ.ಐ., ಎಲ್ಲವೂ ದಾಳಿ ಇಡುತ್ತದೆ. 1,200 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರುವವರ ಮೇಲೆ ಏತಕ್ಕೋಸ್ಕರ ಇ.ಡಿ., ಸಿ.ಬಿ.ಐ., ದಾಳಿ ಆಗಿಲ್ಲ? ಆ ಭಾಗದಲ್ಲಿ ಮತ್ತು ಈ ಭಾಗದಲ್ಲಿ ವಿಶ್ವವಿದ್ಯಾಲಯಗಳನ್ನು ಮಾಡಿದವರು ಇದ್ದಾರೆ. ಒಂದು ವಿಶ್ವವಿದ್ಯಾಲಯವನ್ನು ಮಾಡುವುದಕ್ಕೆ ನಮ್ಮ ರೈತರ ನೂರಾರು ಎಕರೆ ಜಮೀನು ಏತಕ್ಕೋಸ್ಕರ ಪಡೆದುಕೊಳ್ಳಬೇಕು? ಎಷ್ಟು ಎಕರೆಯ ಅವಶ್ಯಕತೆ ಇದೆ ಅಷ್ಟು ಜಾಗವನ್ನು ಮಾತ್ರ ತೆಗೆದುಕೊಳ್ಳಬೇಕಾಗಿತ್ತು. ಈಗ ಎಷ್ಟು ಎಕರೆಯಲ್ಲಿ ವಿಶ್ವವಿದ್ಯಾಲಯವನ್ನು ಕಟ್ಟಲಾಗಿದೆ ಅಷ್ಟು ಜಾಗವನ್ನು ಹೊರತುಪಡಿಸಿ ಉಳಿದಿರುವ ಜಾಗವನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕಾಗಿದೆ. ಸರ್ಕಾರ ಇದಕ್ಕೊಂದು ತಜ್ಞರ ಸಮಿತಿಯನ್ನು ರಚನೆ ಮಾಡಲಿ. ಸರ್ಕಾರದ ಸೌಲಭ್ಯಗಳನ್ನು ತೆಗೆದುಕೊಂಡಿರುವ ಈ ಸಂಸ್ಥೆಯನ್ನು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ತರಬೇಕೆನ್ನುವುದು ನನ್ನ ಒತ್ತಾಯವಾಗಿದೆ.

(ಮುಂದು)

(935) 17.12.2024 5.40 ಪಿಕೆ:ಎಕೆ

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದುವರೆದಿದೆ)**

ಮಾನ್ಯ ಸಭಾಪತಿಗಳೆ, ಬೆಂಗಳೂರು ವಿಶ್ವವಿದ್ಯಾಲಯ ನಡೆಸಲಿ. ರೈತರ ಮಕ್ಕಳಿಗೆ, ಬಡವರ ಮಕ್ಕಳಿಗೆ ಶಿಕ್ಷಣ ಸೌಲಭ್ಯ ದೊರಕಲಿ. ಎಲ್ಲಿ ಹೋದರೂ ಡೊನೇಷನ್‌ನ ಕಾಟ ಇರುತ್ತದೆ; ನಿಗದಿಪಡಿಸುವ ಫೀ ಮೊತ್ತವನ್ನಂತೂ ಕೊಡಲು ಸಾಧ್ಯವೇ ಇಲ್ಲ. ನೀವು ಇಂತಹ ಒಂದು ಫೈವ್ ಸ್ಟಾರ್ ಸಂಘಟನೆಗಳನ್ನು ಮಾಡಿ ಬಡವರಿಗೆ ಬರೆ ಎಳೆಯುವಂತಹ ಕೆಲಸ ಮಾಡುವುದು ಸರಿಯಾದುದಲ್ಲ. ಮಾನ್ಯ ಮಂತ್ರಿಗಳೇ, ಈ ಒಂದು ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು, ಪುನಃ ನೀವು ಸರ್ಕಾರಕ್ಕೆ ಹೋಗಿ, ಆಗಿರುವ ಅಕ್ರಮಗಳನ್ನು ಸರಿ ಮಾಡಿಸಿಕೊಂಡು ಬರುವುದು ಒಳ್ಳೆಯದು ಅನಿಸುತ್ತದೆ. ನಾನು ನಿಮ್ಮ ಅಜ್ಜನವರನ್ನು ನೋಡಿದ್ದೇವೆ; ನಿಮ್ಮ ತಂದೆಯವರ ಜೊತೆ ಕೆಲಸ ಮಾಡಿದ್ದೇವೆ. ಈಗ ನೀವೂ ಕೂಡ ಅವರಷ್ಟೇ ಸರಳ ವ್ಯಕ್ತಿಯಾಗಿ ಒಂದು ಒಳ್ಳೆಯ ಕೆಲಸ ಮಾಡುತ್ತೀರಾ ಎನ್ನುವ ನಂಬಿಕೆ ಮೇಲೆ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ಈ ಒಂದು ಸಂಸ್ಥೆ ರೈತರ ಭೂಮಿಯನ್ನು ಜಬರ್ದಸ್ತಿಯಾಗಿ ತೆಗೆದುಕೊಂಡಿದೆ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಯಾವ ಕೆಐಎಡಿಬಿ ಇದಕ್ಕೆ ಅವಕಾಶ ಕೊಟ್ಟರೋ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಅವರು 'no profit no loss basis' ಎಂದು ಹೇಳಿದರು. ರೂ.600 ಕೋಟಿ ಮಾರುಕಟ್ಟೆ ಬೆಲೆ ಹೊಂದಿರುವ ಜಾಗವನ್ನು ರೂ.50 ಕೋಟಿಗೆ ಕೊಟ್ಟಿದ್ದೀರಿ. ಅದು ಯಾರ ದುಡ್ಡು? ಆ ದುಡ್ಡು ರೈತರಿಗೆ ಹೋಗಬೇಕು. ಅಕ್ರಮವನ್ನು ಸಕ್ರಮ ಮಾಡುವುದಕ್ಕೆ ಹೊರಟ್ಟಿದ್ದೀರಿ. ಇದರ ಬಗ್ಗೆ ನನ್ನದೇ ಆದ ಪ್ರತಿಭಟನೆ ಇದೆ. ನನ್ನ ಅನಿಸಿಕೆಗಳನ್ನು ಅರ್ಥ ಮಾಡಿಕೊಂಡು ಮುಂದವರೆದರೆ ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಬೇರೆಲ್ಲಾ ವಿಶ್ವವಿದ್ಯಾಲಯಗಳಲ್ಲಿ ಜನ ಪ್ರತಿನಿಧಿಗಳು ಇರುವಂತೆ ಈ ವಿಶ್ವವಿದ್ಯಾಲಯದಲ್ಲೂ ಜನ ಪ್ರತಿನಿಧಿ ಇರಬೇಕು ಎಂದು ಈ ವಿಧೇಯಕದಲ್ಲಿ ತಂದಿದ್ದಾರೆ. ಹಿರಿಯ ಸದಸ್ಯರಾಗಿರುವ ಮಾನ್ಯ ಹರಿಪ್ರಸಾದ್‌ರವರು ಆಧಾರ ಇಲ್ಲದ ಕೆಲವು ಆರೋಪಗಳನ್ನು ಮಾಡಿದ್ದಾರೆ. ರೂ.1,200 ಕೋಟಿ ಇನ್ವೆಸ್ಟ್‌ಮೆಂಟ್ ಎಲ್ಲಿಂದ ಬಂತು ಎಂದು ಕೇಳಿದರು. ಅದಕ್ಕೆ ನಿಯಮಗಳು ಬೇರೆಯೇ ಇವೆ. ಸರ್ಕಾರ ಆ ರೀತಿ ಆದಾಯದ ಮೂಲವನ್ನು ಪತ್ತೆ ಹಚ್ಚಬೇಕು ಎನ್ನುವುದಾದರೆ, ಇದನ್ನು ದೃಢಪಡಿಸಿಕೊಳ್ಳುವುದಕ್ಕೆ ಸಂಬಂಧಪಟ್ಟ ಸಂಸ್ಥೆಗಳೇ ಇವೆ. ಅದರ ಮೂಲಕ ತನಿಖೆ ನಡೆಸಬಹುದು. ಒಂದು ಸದುದ್ದೇಶದ, ಸಾರ್ವಜನಿಕ ಹಿತಾಸಕ್ತಿಯ ಸಂಸ್ಥೆಯ ಬಗ್ಗೆ ಆಧಾರದವಿಲ್ಲದೇ ಆರೋಪ ಮಾಡಿರುವಂಥದ್ದು ಸರಿಯಲ್ಲ; ಅದನ್ನು ಕಡತದಿಂದ ತೆಗೆಸಬೇಕು ಎನ್ನುವುದು ನನ್ನ ವಿನಂತಿ ಆಗಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ, ರೂ. 60 ಕೋಟಿಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಅದು ಸರ್ಕಾರ ತೆಗೆದುಕೊಂಡ ನಿರ್ಣಯವಾಗಿದೆ. ಸಾಕಷ್ಟು ಸಂದರ್ಭದಲ್ಲಿ ಆ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಭೂತ ಸೌಕರ್ಯಗಳ ಸಚಿವರಿಗೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಅದು ಚುಕ್ಕೆ ಗುರುತಿನ ಪ್ರಶ್ನೆಯಾಗಿತ್ತು. ಆದರೆ ಮಾನ್ಯ ಎಸ್.ಎಂ.ಕೃಷ್ಣರವರ ನಿಧನದಿಂದ ಸದನ ಮುಂದೆ ಹೋಗಿದ್ದರಿಂದ ಅದರ ಚರ್ಚೆಗೆ ಅವಕಾಶವಾಗಲಿಲ್ಲ. ಅದರ ಉತ್ತರವನ್ನು ಸದನದಲ್ಲಿ ಮಂಡಿಸಿದ್ದಾರೆ. ಕೈಗಾರಿಕೆ ನಡೆಸುವ ಸಲುವಾಗಿ, 3667 ಎಕರೆಯಲ್ಲಿ 2000 ಎಕರೆಯನ್ನು ತಲಾ ಒಂದು ಎಕರೆಗೆ ರೂ. 1,27,000ದಂತೆ ಮತ್ತು 1667 ಎಕರೆಯನ್ನು ತಲಾ ಒಂದು ಎಕರೆಗೆ ರೂ. 1,50,000 ದಂತೆ ಕೊಟ್ಟಿದ್ದಾರೆ. ಇದು ಸರ್ಕಾರ ತೆಗೆದುಕೊಂಡಿರುವ ನಿರ್ಣಯವಾಗಿದೆ. ಇದು ಇಂಡಸ್ಟ್ರಿಯಲ್ಲ. ಇದು ಶಿಕ್ಷಣ ಸಂಸ್ಥೆಯಾಗಿದೆ. ಲಾಭದ ಉದ್ದೇಶದಿಂದ ಕಟ್ಟಿರುವ ವಿಶ್ವವಿದ್ಯಾಲಯವಲ್ಲ. ಒಂದು ಸರ್ಕಾರ ತೆಗೆದುಕೊಂಡಿರುವ ನಿರ್ಣಯ ಇದಾಗಿದೆ. ಇಲ್ಲೇನಾದರೂ ಅಕ್ರಮವಾಗಿದೆ ಎಂದು ಮಾನ್ಯ ಸದಸ್ಯರ ಭಾವನೆ ಇದ್ದರೆ ಲೋಕಾಯುಕ್ತಕ್ಕೆ ದೂರು ಕೊಡಬಹುದು, ನಿರ್ದಿಷ್ಟವಾದ ಕೇಸನ್ನು ನ್ಯಾಯಾಲಯದಲ್ಲೂ ದಾಖಲಿಸುವುದಕ್ಕೆ ಅವಕಾಶ ಇದೆ. ತಮ್ಮ ಹಿರಿತನವನ್ನು, ಅನುಭವವನ್ನು ನಾಡು ಕಟ್ಟುವ ಕಾರ್ಯಕ್ಕೆ ಸದುಪಯೋಗಪಡಿಸಿಕೊಳ್ಳಬೇಕೆ ಹೊರತು ಆರೋಪ ಮಾಡುವುದು ಎಷ್ಟರಮಟ್ಟಿಗೆ ಸರಿ? ಯಾವುದಾದರೂ ಒಂದು ತನಿಖಾ ಸಂಸ್ಥೆ ಈ ವಿಶ್ವವಿದ್ಯಾಲಯದಲ್ಲಿ ಅಕ್ರಮ ತನಿಖೆ ನಡೆದಿದೆ ಎನ್ನುವ ವರದಿ ಕೊಟ್ಟಿದ್ದರೆ ಆಗ ನಾವು ಆ ತನಿಖಾ ವರದಿಯನ್ನು ಇಟ್ಟುಕೊಂಡು ಆರೋಪ ಮಾಡಬಹುದು. ನ್ಯಾಯಾಲಯ ಆ ರೀತಿ ಏನಾದರೂ ತೀರ್ಪು ಕೊಟಿದ್ದರೆ, ನ್ಯಾಯಲಯದಿಂದ ಇಂತಹ ಒಂದು ತೀರ್ಪು ಬಂದಿದೆ, ಆದರೆ ಸರ್ಕಾರ ಅದಕ್ಕೆ ಸಹಾಯ ಮಾಡುತ್ತಿದೆ ಎಂದು ಆರೋಪ ಮಾಡಬಹುದು. ಇದು ಚಾಣಕ್ಯ ವಿಶ್ವವಿದ್ಯಾಲಯವಾಗಿದೆ. ಚಾಣಕ್ಯ ಒಬ್ಬ ಅರ್ಥಶಾಸ್ತ್ರಜ್ಞ, ರಾಜನೀತಿಜ್ಞ. ಭಾರತದ ಪುನರುತ್ಥಾನಕ್ಕೆ ಯೋಗದಾನ ಕೊಟ್ಟಿದ್ದಾರೆ. ವಿಶ್ವವಿದ್ಯಾಲಯ ಎಂದರೆ ಅದೇ ಉಳಿದದ್ದೆಲ್ಲವನ್ನೂ ಹೇಳುತ್ತದೆ. ನಾನೂ ಕೂಡ ಉನ್ನತ ಶಿಕ್ಷಣ ಸಚಿವನಾಗಿ ಕೆಲಸ ಮಾಡಿದ್ದೆ. ನಾವು ವಿಶ್ವವಿದ್ಯಾಲಯಕ್ಕೆ ಅನುಮತಿ ಕೊಡುತ್ತೇವೆ. ಯಾವುದೇ ಕೋರ್ಸುಗಳನ್ನು ಪ್ರಾರಂಭಿಸಲು ಯುಜಿಸಿ ಮತ್ತು ಎಐಸಿಟಿಇ ಯಿಂದ ಅನುಮತಿ ತೆಗೆದುಕೊಳ್ಳಬೇಕು. ಮೆಡಿಕಲ್ ವಿಷಯಕ್ಕೆ ಸಂಬಂಧಪಟ್ಟಂತೆ Medical Council of India ಅವರ ಅನುಮತಿ ಪಡೆದುಕೊಳ್ಳಬೇಕು. ಅವರುಗಳು ಅನುಮತಿ

ಕೊಡಬೇಕಾದರೂ ಸಹ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆ ನಿಯಮಗಳನ್ನು ಮೀರಿ ಕೊಡುವುದಕ್ಕೆ ಬರುವುದಿಲ್ಲ. ವಿದೇಶಿ ವಿಶ್ವವಿದ್ಯಾಲಯದ ಜೊತೆಗೆ ಸಂಯೋಜನೆ ಮಾಡಿಕೊಳ್ಳುವುದಕ್ಕೆ ನಿಯಮಗಳಿವೆ. ಆ ನಿಯಮಗಳನ್ನು ಮೀರಿ ಸಂಯೋಜನೆ ಮಾಡಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ಅವುಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಇದೆ. ನಾವು ಸೈದ್ಧಾಂತಿಕವಾಗಿ ಬೇರೆ ಬೇರೆ ಆಗಿದ್ದರೂ ರಾಷ್ಟ್ರೀಯವಾಗಿ ನಾವು ಭಾರತದವರು ಅಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಭಾರತದ ಹಿತಾಸಕ್ತಿಗೆ ವಿರುದ್ಧವಾದವರು ಎಂದು ಹೇಳುವುದಕ್ಕೆ ಆಗುವುದಿಲ್ಲ. ಸೈದ್ಧಾಂತಿಕವಾಗಿ ಬೇರೆಯಾಗಿದ್ದರೆ ಎನ್ನುವ ಕಾರಣಕ್ಕೆ ಅವರು ಒಳ್ಳೆಯದನ್ನು ಮಾಡುತ್ತಿದ್ದರೂ ಅದನ್ನು ವಿರೋಧ ಮಾಡಬೇಕು ಎನ್ನುವ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು. ಎಲ್ಲಾ ವಿಶ್ವವಿದ್ಯಾಲಯಗಳಿಗೆ ಜನ ಪ್ರತಿನಿಧಿಗಳು ಇದ್ದಾರೆ ಎನ್ನುವ ಕಾರಣಕ್ಕೆ ಈ ವಿಶ್ವವಿದ್ಯಾಲಯಕ್ಕೂ ಜನ ಪ್ರತಿನಿಧಿಯನ್ನು ನೇಮಿಸುತ್ತೇವೆ ಎಂದು ಹೇಳಿರುವುದು ತಪ್ಪು ಎಂದು ನನಗನ್ನಿಸುತ್ತಿಲ್ಲ. ಹಾಗಾಗಿ ಇದಕ್ಕೆ ನಮ್ಮ ಆಕ್ಷೇಪಣೆ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ನಾನು ಮಂತ್ರಿಗಳಿಗೆ ಈ ಪ್ರಶ್ನೆ ಕೇಳಿದೆ.

**ಉಪ ಸಭಾಪತಿಯವರು:-** ನೀವು ಮಂತ್ರಿಗಳಿಗೆ ಹೇಳಿದಿರಿ. ಅದೇರೀತಿ ಮಾನ್ಯ ಸದಸ್ಯರೂ ಕೂಡ ಮಂತ್ರಿಗಳ ಗಮನಕ್ಕೆ ವಿಷಯವನ್ನು ತರುತ್ತಿದ್ದಾರೆ. ಈ ಕುರಿತು ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ಜನ ಸಾಮಾನ್ಯರಿಗೆ ಸಂಬಂಧಪಟ್ಟಂತೆ ಒಂದು ವಿಧೇಯಕ ಬಂದಾಗ ಆ ಕುರಿತು ಚರ್ಚೆ ಮಾಡುವ ಹಕ್ಕು ನಮಗಿದೆ. ನಾನು ನನ್ನ ಮಾತುಗಳನ್ನು ಮಂತ್ರಿಗಳಿಗೆ, ಸರ್ಕಾರಕ್ಕೆ ಹೇಳಿದೆ. ನಾನು ವಿರೋಧ ಪಕ್ಷದವರಿಗೆ ಹೇಳಲಿಲ್ಲ. ಅವರು ಉತ್ತರ ಕೊಡುವ ಹಾಗಿದ್ದರೆ ಕೊಡಲಿ. ನನಗೆ ತಿಳಿದಿರುವ ವಿಚಾರವನ್ನು ಹೇಳುವುದಕ್ಕೆ ನನಗೂ ಅವಕಾಶ ಕೊಡಿ ಎಂದಷ್ಟೇ ಹೇಳುತ್ತಿದ್ದೇನೆ.

**ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶಿತರು)-** ಮಾನ್ಯ ಸಭಾಪತಿಗಳೆ, ನಾನು ಈ ಹಿಂದೆ ಸದನದಲ್ಲಿ ಮಂಡಿಸಿದ ವಿಧೇಯಕಕ್ಕೆ ಸಂಬಂಧಪಟ್ಟಂತೆ 3 ಮುಖ್ಯ ವಿಷಯಗಳನ್ನು ಸನ್ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದೆ. ಆ ಸಂದರ್ಭದಲ್ಲಿ, ಕೇವಲ ವಿಧೇಯಕಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ ಎಂದು ಮಾನ್ಯ ಸಭಾನಾಯಕರು ನನ್ನ ಬಾಯನ್ನು ಮುಚ್ಚಿಸಿದ್ದರು. ಈಗ ನಮ್ಮ ಹಿರಿಯ ಸದಸ್ಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಸಂಪೂರ್ಣವಾಗಿ ಮೇನ್ ರೋಡ್ ಬಿಟ್ಟು ಸರ್ವಿಸ್ ರೋಡ್‌ಗೆ ಹೋಗಿ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಆದರೂ ನಾನು ಅವರಿಗೆ ಗೌರವ ಕೊಡುತ್ತೇನೆ. ನಾನು ಈ ಸಂದರ್ಭದಲ್ಲಿ ಎರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. 106 ಎಕರೆ ಕೆಐಎಡಿಬಿ ಯಿಂದ ಜಮೀನು ಖರೀದಿ ಮಾಡಿದ್ದರು. ಅಂದರೆ, ಕೆಐಎಡಿಬಿ ಅವರು ಆಗಲೇ ರೈತರಿಂದ ಜಮೀನನ್ನು ಸ್ವಾಧೀನ ಮಾಡಿಕೊಂಡು, ಪರಿವರ್ತನೆ ಮಾಡಿ ಮಾರಾಟ ಮಾಡಿರುತ್ತಾರೆ. ರೈತರಿಗೆ ನಷ್ಟವಾಯಿತು ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಸಂಘ-ಸಂಸ್ಥೆಗಳು ಬೆಳೆಯುವ ಕಾರಣಕ್ಕಾಗಿ 99 ವರ್ಷಗಳಿಗಾಗಿ ಲೀಸ್‌ಗೆ ಕೊಡುವುದು ಆಗಿರಬಹುದು ಅಥವಾ ಬೇರೆ ಯಾವುದಾದರೂ ನಿಯಮಗಳ ಅನುಸಾರ ಅದಕ್ಕೆ ಸಂಬಂಧಪಟ್ಟಂತೆ ಸಾಂಕೇತಿಕವಾಗಿ ಒಂದು ರೂಪಾಯಿ ಪಡೆದುಕೊಂಡು ಜಮೀನನ್ನು ಕೊಟ್ಟಿರುವ ಉದಾಹರಣೆಗಳು ರಾಜ್ಯದಲ್ಲೂ ಇವೆ; ರಾಷ್ಟ್ರದಲ್ಲೂ ಇವೆ ಎನ್ನುವುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಈ ವಿಶ್ವವಿದ್ಯಾಲಯದ

ಉದ್ದೇಶವೇನು ಎಂದು ಕೇಳಿದರು. ಹೆಸರೇ "ಚಾಣಕ್ಯ". 2300 ವರ್ಷಗಳ ಹಿಂದೆ ಅವರು ಭಾರತದ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದಂಥವರು. ಈ ದೇಶದ ಐತಿಹಾಸಿಕ, ಪಾರಂಪಾರಿಕ ಚರಿತ್ರೆಯನ್ನು ಎತ್ತಿ ಹಿಡಿಯವುದು ಮತ್ತು ನಮ್ಮ ಸಮಾಜದಲ್ಲಿರುವ ಈ ವ್ಯವಸ್ಥೆಯನ್ನು ಮುಂದಿನ ಪೀಳಗೆಗೆ ತಿಳಿಸುವ ಉದ್ದೇಶವೇ ಈ ವಿಶ್ವವಿದ್ಯಾಲಯದ್ದಾಗಿದೆ. ಈ ವಿಶ್ವವಿದ್ಯಾಲಯಕ್ಕೆ ರೂ. 1,200 ಕೋಟಿ ಏನು ವೆಚ್ಚ ಮಾಡಿದ್ದರೋ ಅದನ್ನು ಅಧಿಕೃತವಾಗಿಯೇ ಮಾಡಿರುತ್ತಾರೆ. ಆ ಕುರಿತ ವಿವರ ಬೇಕಾದರೆ ಅದನ್ನು ಬೇರೆ ರೂಪದಲ್ಲಿ ಕೇಳಬಹುದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ವಿಧೇಯಕದ ಸೆಕ್ಷನ್ 26ರಲ್ಲಿ, ಆಡಳಿತ ಮಂಡಳಿಯ ರಚನೆಯ ಬಗ್ಗೆ ಉಲ್ಲೇಖ ಇದೆ. "(ix) ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ಆಡಳಿತವನ್ನು ಒಳಗೊಂಡಂತೆ ವ್ಯವಸ್ಥಾಪನೆ ಅಥವಾ ಹಣಕಾಸು ಅಥವಾ ಯಾವುದೇ ಇತರೆ ವಿಶೇಷ ಕ್ಷೇತ್ರದಿಂದ ಒಬ್ಬ ತಜ್ಞರು" ಇವರನ್ನು ಸೇರಿಸತಕ್ಕದ್ದು ಎಂದಿದೆ.

(ಮುಂದು)

(936) 17-12-2024 5.50 ಡಿಎಸ್-ಎಕೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಅದು ಪ್ರಸ್ತಾವಿತ ಸೇರ್ಪಡೆ ಇರುವಂಥದ್ದು. ಅದೇ ರೀತಿ ವಿಧೇಯಕದಲ್ಲಿ ಸೆಕ್ಷನ್ 26(3) ರಲ್ಲಿ, "ಆಡಳಿತ ಮಂಡಳಿಯ ಸದಸ್ಯರ ಪದಾವಧಿ, ಸರ್ಕಾರದಿಂದ ನಾಮನಿರ್ದೇಶಿತರಾದ ಇಬ್ಬರ ಸದಸ್ಯರನ್ನು ಹೊರತುಪಡಿಸಿ, ಸದಸ್ಯರ ನೇಮಕಾತಿ, ನವೀಕರಣ ಮತ್ತು ತೆಗೆದುಹಾಕುವುದು ಮುಂತಾದವುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು" ಎಂದು ಇದೆ. ಸೆಕ್ಷನ್ 26(iv) ರಲ್ಲಿ, "ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ" ಎಂದು ಇದೆ. ಅವರನ್ನು ಹೊರತುಪಡಿಸಿ ಇಬ್ಬರೋ, ಅವರನ್ನು ಸೇರಿಕೊಂಡು ಮೂರು ಜನ ಇದ್ದಾರೆಯೋ ಅಥವಾ ಅವರು ಸೇರಿದ ಹಾಗೆ ಇಬ್ಬರೋ ಎನ್ನುವುದನ್ನು ಸ್ಪಷ್ಟೀಕರಿಸಬೇಕು. ಕಾರಣವೇನೆಂದರೆ, ಆಡಳಿತ ಮಂಡಳಿಯಲ್ಲಿ ಸರ್ಕಾರದ ಪ್ರತಿನಿಧಿಗಳನ್ನು ಏಕೆ ಕಡಿಮೆ ಮಾಡುತ್ತಿದ್ದಾರೆ? ಏಕೆಂದರೆ, ಬಹಳಷ್ಟು ಸಲ ಸರ್ಕಾರದಿಂದ ಪ್ರತಿನಿಧಿಯನ್ನು ಕಳುಹಿಸುತ್ತೀರೋ ಅವರು ಅಟೆಂಡ್ ಆಗುವುದಿಲ್ಲ. 2-3 ಜನರು ಇದ್ದರೆ, ಯಾರಾದರೂ ಅಟೆಂಡ್ ಆಗಿ ಸರ್ಕಾರದ ನಿಲುವನ್ನು ಪ್ರತಿಪಾದನೆ ಮಾಡುತ್ತಾರೆ. ಆದ್ದರಿಂದ ಮಾನ್ಯ ಸಚಿವರೇನು ಕೈಬಿಡಬೇಕೆಂದು ಹೇಳುತ್ತಿದ್ದಾರೆ ಅದನ್ನು ಸ್ಪಷ್ಟ ಮಾಡಬೇಕು. ಇಬ್ಬರನ್ನು ತೆಗೆಯಬೇಕೆಂದು ಇದೆ. ಅಂದರೆ, ಮೇಲೆ ಹೇಳಿದ ನಾಮನಿರ್ದೇಶಿತರನ್ನು ಹೊರತುಪಡಿಸಿ ಇಬ್ಬರು ಜನರೇ ಅಥವಾ ಅದನ್ನು ಸೇರಿಕೊಂಡು ನಾಮನಿರ್ದೇಶಿತರು ಎಂಬುದನ್ನು ಹೇಳಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಅವರು ತಿದ್ದುಪಡಿ ಮಾಡಿರುವಂತಹ ಉದ್ದೇಶವೇನೆಂದರೆ, "ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಆಡಳಿತವನ್ನು ಒಳಗೊಂಡಂತೆ ವ್ಯವಸ್ಥಾಪನೆ ಅಥವಾ ಹಣಕಾಸು ಅಥವಾ ಯಾವುದೇ ಇತರೆ ವಿಶೇಷ ಕ್ಷೇತ್ರದಿಂದ ಒಬ್ಬ ತಜ್ಞರು" ಎಂದು ವಿಧೇಯಕದಲ್ಲಿ ಹೇಳಿದ್ದಾರೆ. ಈ ವಿಧೇಯಕದ ಉದ್ದೇಶ ಮತ್ತು

ಕಾರಣಗಳನ್ನು ನೋಡಿದಾಗ, ಆಡಳಿತ ಮಂಡಳಿಗೆ ನಾಮನಿರ್ದೇಶನ ಮಾಡುವುದು. ಈ ವಿಧೇಯಕವನ್ನು ನೋಡಿದಾಗ ನಮಗೇನು ಅರ್ಥವಾಗುತ್ತಿಲ್ಲ. ಈಗ ಅವರು ಹೇಳಿದಂತೆ ಹಣಕಾಸು ಮಂಡಳಿ ಇದೆಯೇ? ಅದರಲ್ಲಿ ವ್ಯವಸ್ಥೆ ಏನಿದೆ ಅಥವಾ ಯಾವುದೇ ವಿಶ್ವವಿದ್ಯಾಲಯದಲ್ಲಿ Chancellor, Co-Chancellor, Academic Council, Senate, Syndicate, ಇವೆಲ್ಲಾ ಇರುತ್ತದೆ. ಆದರೆ, ಈ ವಿಶ್ವವಿದ್ಯಾಲಯದಲ್ಲಿ ಏನಿದೆ? ಕೇವಲ ಒಬ್ಬರನ್ನು ತರುತ್ತೇವೆಂದು ಹೇಳಿದ್ದಾರೆ. ಇದನ್ನು ಯಾವ ಉದ್ದೇಶಕ್ಕಾಗಿ ತರುತ್ತಿದ್ದಾರೆ? ಈ ವಿಶ್ವವಿದ್ಯಾಲಯಕ್ಕೆ ಸರ್ಕಾರ ಸ್ಥಳ ಕೊಟ್ಟಂತಹ ಸಂದರ್ಭದಲ್ಲಿ ಇದೇ ಸದನದಲ್ಲಿ ಕೊಡಬೇಕು, ಕೊಡಬಾರದು ಎಂದು ದೊಡ್ಡ ಮಟ್ಟದಲ್ಲಿ ಚರ್ಚೆಯಾಯಿತು. ನಾವು ಅವತ್ತು ಕೂಡ ರೈತರಿಂದ ಜಮೀನನ್ನು ತೆಗೆದುಕೊಂಡು ಇಷ್ಟು ದೊಡ್ಡ ಮೊತ್ತದ ಸ್ಥಳವನ್ನು ಕೊಡುತ್ತಿರುವಂಥದ್ದಕ್ಕೆ ಸರ್ಕಾರದ stake ಏನು ಎಂದು ಕೇಳಿದ್ದೆವು. Now, this is nothing but a Private University. ಇದು Private University ಆಗಿದೆ. ಈ ವಿಶ್ವವಿದ್ಯಾಲಯವನ್ನು ಮಾಡುವುದಕ್ಕೆ ನಮ್ಮ ಬೆಂಬಲ ಇದೆ, ನಾವು ಇಲ್ಲ ಎಂದು ಹೇಳುವುದಿಲ್ಲ. ಆದರೆ, ಇದರ ವ್ಯವಸ್ಥೆ ಹೇಗಿದೆ ಎಂಬುದನ್ನು ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕಕ್ಕೆ ಬೆಂಬಲ ಸೂಚಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ರೈತರಿಂದ ಮೊದಲೇ ತೆಗೆದುಕೊಂಡು ಆಮೇಲೆ ಹಂಚಿಕೆ ಮಾಡಿದ್ದಾರೆ ಎಂದು ಈಗಾಗಲೇ ಚರ್ಚೆಯಾಗಿದೆ. ಅಲ್ಲೇ ಪಕ್ಕದಲ್ಲಿರುವಂತಹ ಸಾಫ್ಟ್‌ವೇರ್ ಪಾರ್ಕ್, ಹಾರ್ಡ್‌ವೇರ್ ಪಾರ್ಕ್,....

**ಉಪ ಸಭಾಪತಿಯವರು:-** ನಾನು ತಮಗೆ ಹೇಳುವುದೇನೆಂದರೆ, ವಿಧೇಯಕದಲ್ಲಿರುವಂತಹ ವಿಚಾರಗಳನ್ನು ಚರ್ಚೆ ಮಾಡಬೇಕು. ಅದನ್ನು ಬಿಟ್ಟು ಬೇರೆ ಮಾತನಾಡಬಾರದು. ಈಗ ನಾನು ಕಾರ್ಯದರ್ಶಿಯವರನ್ನು ಕರೆದು ಕ್ಲಾರಿಫೈ ಮಾಡಿಕೊಂಡಿದ್ದೇನೆ. ಬೇರೆ ವಿಚಾರವನ್ನು ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಈಗ ಏನು ವಿಧೇಯಕವನ್ನು ತಂದಿದ್ದಾರೆ, ಅಲ್ಲಿ ನೇಮಕ ಮಾಡುವಂಥದ್ದು ಇಬ್ಬರ ಬದಲಿಗೆ ಒಬ್ಬರನ್ನು ಮಾಡುವಂಥದ್ದು, ಇದಕ್ಕೆ ಮಾತ್ರ ಸಂಬಂಧಪಟ್ಟ ಹಾಗೆ ಮಾತನಾಡಬೇಕು. ಎಲ್ಲೋ ಜಾಗ ತೆಗೆದುಕೊಂಡರು, ರೈತರಿಂದ ಜಾಗ ತೆಗೆದುಕೊಂಡರು ಎಂದು ಹೇಳಿದರೆ ಇದು ಯಾವುದು ಕಡತಕ್ಕೆ ಹೋಗಲಾರದು. ಅದು ಈ ವಿಧೇಯಕದಲ್ಲಿ ಬರುವುದಿಲ್ಲ. ಇದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಮಾತ್ರ ಮಾತನಾಡಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕೆಲವು ಮಾಹಿತಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಈ ರೀತಿಯ ಬಹಳಷ್ಟು ವಿಶ್ವವಿದ್ಯಾಲಯಗಳಿಗೆ ನೂರು ಎಕರೆ ಜಾಗವನ್ನು ಕೊಟ್ಟಿದ್ದಾರೆಯೇ? ನಮ್ಮ ರಾಜ್ಯದಲ್ಲಿ ಸಾಕಷ್ಟು ಸಂಸ್ಥೆಗಳಿವೆ. ಜೆ.ಎಸ್.ಎಸ್. ಸಂಸ್ಥೆ, ತುಮಕೂರಿನಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳಿವೆ, ರಾಮಯ್ಯ ಇನ್‌ಸ್ಟಿಟ್ಯೂಟ್ ಇದೆ, ಇಂತಹ ಸಂಸ್ಥೆಗಳಿಗೆ, ವಿಶ್ವವಿದ್ಯಾಲಯಗಳಿಗೆ ನೂರು ಎಕರೆ ಜಾಗವನ್ನು ಕೊಟ್ಟಿದ್ದಾರೆಯೇ ಎಂಬುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕು. ಒಂದು ವಿಶ್ವವಿದ್ಯಾಲಯಕ್ಕೆ ನೂರು ಎಕರೆ ಜಾಗ ಬೇಕಾಗುತ್ತದೆಯೇ? ಆ ವಿಶ್ವವಿದ್ಯಾಲಯದಲ್ಲಿ ಯಾವ್ಯಾವ ಅಕಾಡೆಮಿಕ್ ಕೋರ್ಸ್‌ಗಳಿವೆ, ಎಷ್ಟು ಕಟ್ಟಡ ಕಟ್ಟಿದ್ದಾರೆ,

ಎಷ್ಟು ಎಕರೆಯಲ್ಲಿ ಕಟ್ಟಡವನ್ನು ಕಟ್ಟಿದ್ದಾರೆ? ಅವರು ೨೦ ಎಕರೆ ಜಾಗವನ್ನು ಉಪಯೋಗ ಮಾಡಿಕೊಂಡಿದ್ದರೆ, ಇನ್ನು ೮೦ ಎಕರೆ ಸಿಗುತ್ತದೆ. ಅದನ್ನು ತೆಗೆದುಕೊಂಡು ಬೇರೆ ಶಿಕ್ಷಣ ಸಂಸ್ಥೆಗಳಿಗೂ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ವಿಧೇಯಕದಲ್ಲಿ ಜಾಗ ತೆಗೆದುಕೊಂಡಿರುವ ಬಗ್ಗೆ ಮಾನ್ಯ ಸಚಿವರು ಪ್ರಸ್ತಾಪ ಮಾಡಿಲ್ಲ. ಈಗ ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಿದರು. ವಿಧೇಯಕದಲ್ಲಿ ಏನಿದೆ ಅದಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿದರು. ಈಗ ಸದನದ ಟ್ರ್ಯಾಕ್‌ನ್ನೇ ಬದಲಾವಣೆ ಮಾಡುತ್ತಿದ್ದೇವೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಬೇರೆ ವಿಚಾರಗಳನ್ನು ಮಾತನಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಪೀಠದಲ್ಲಿ ಕುಳಿತಿದ್ದೀರಿ, ತಾವು ಅವಕಾಶ ಕೊಡಬೇಡಿ. ಅದು ಬೇರೆ ಪ್ರಶ್ನೆ. ಇದು ಯಾವ್ಯಾವ ರೀತಿ ಚರ್ಚೆಯಾಗಿದೆ ಎನ್ನುವುದನ್ನು ನಾನು ಇಲ್ಲಿ ಹೇಳುವುಕ್ಕೆ ಇಚ್ಛೆಪಡುವುದಿಲ್ಲ.

**ಉಪ ಸಭಾಪತಿಯವರು:–** ಅದನ್ನು ಬಿಟ್ಟು, ಈಗ ಇರುವ ವಿಚಾರದ ಬಗ್ಗೆ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಆಡಳಿತ ಮಂಡಳಿಗೆ ತಜ್ಞರನ್ನು ನೇಮಕ ಮಾಡುವಂಥದ್ದು ಇದೆ.

**ಉಪ ಸಭಾಪತಿಯವರು:–** ತಾವು ಅದರ ಬಗ್ಗೆ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಆಡಳಿತ ಮಂಡಳಿಗೆ ನೇಮಕ ಮಾಡುವಾಗ ಇವೆಲ್ಲಾ ನೋಡಬೇಕೆಂದು ಹೇಳುತ್ತಿದ್ದೇನೆ. ಸರ್ಕಾರ ಎಂದ ಮೇಲೆ ಇವೆಲ್ಲಾ ನೋಡಬೇಕಾಗುತ್ತದೆ. ಇದು ಯಾವುದೋ ಖಾಸಗಿ ಸ್ವತ್ತಲ್ಲ.

**ಉಪ ಸಭಾಪತಿಯವರು:–** ಆ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಮತ್ತೊಂದು ದಿವಸ ಸಮಯವನ್ನು ನಿಗದಿ ಮಾಡೋಣ. ತಾವು ನೋಟೀಸ್ ಕೊಟ್ಟು ಅವಕಾಶವನ್ನು ಕೇಳಿ. ಈ ವಿಧೇಯಕದಲ್ಲಿ ಅದನ್ನು ಕೇಳುವುದಕ್ಕೆ ಅವಕಾಶಗಳಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನೀವು ಆ ವಿಶ್ವವಿದ್ಯಾಲಯದ ಪರ ವಹಿಸುತ್ತಿರವ ಹಾಗೆ ಕಾಣುತ್ತಿದ್ದೀರಿ.

**ಉಪ ಸಭಾಪತಿಯವರು:–** ಪರ ಪ್ರಶ್ನೆಯಲ್ಲ. ಇದು ನನ್ನ ಕೆಲಸ. ನೀವು ಪೀಠಕ್ಕೆ ಆರೋಪಗಳನ್ನು ಮಾಡುವ ಹಾಗಿಲ್ಲ. ಈ ಪೀಠ ಏನು ಹೇಳುತ್ತದೆ ಎಂದರೆ, ವಿಧೇಯಕದಲ್ಲಿರುವುದನ್ನು ಮೊದಲು ಓದಿಕೊಳ್ಳಿ. ನೀವು ಹಿರಿಯ ಸದಸ್ಯರಿದ್ದೀರಿ, ರಾಜ್ಯಸಭಾವನ್ನು ಪ್ರತಿನಿಧಿಸಿದಂಥವರು. ನೀವು ಮಾತನಾಡುವಂತಹ ಮಾತೇ? ಆ ರೀತಿ ಮಾತನಾಡಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್:–** ನೀವು ಹೇಳುವ ರೀತಿಯಲ್ಲಿ ಹೇಳಿದ್ದೀರಾ?

**ಉಪ ಸಭಾಪತಿಯವರು:–** ಇರುವಂತಹ ವಿಚಾರಗಳನ್ನು ನಾನು ಹೇಳುವುದು ನನ್ನ ಧರ್ಮ. ಅದು ನನ್ನ ಪೀಠದ ಕೆಲಸ. ಅದನ್ನು ಬಿಟ್ಟು ನೀವು ಡೈವರ್ಟ್ ಮಾಡಿರುವ ವಿಚಾರಗಳನ್ನು ಕೇಳುವುದಕ್ಕಾಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನನಗೆ ಕೇಳುವ ಹಕ್ಕು ಇದೆ, ನಾನು ಕೇಳುತ್ತೇನೆ.

**ಉಪ ಸಭಾಪತಿಯವರು:-** ಎಲ್ಲಾ ಹಕ್ಕುಗಳು ಎಲ್ಲರಿಗೂ ಇದೆ. ಇದು ಇದಕ್ಕೆ ಸಂಬಂಧಪಟ್ಟ ವಿಚಾರ. ಮಾನ್ಯ ಸಚಿವರೇ, ಮಾನ್ಯ ಸಭಾನಾಯಕರೇ, ತಾವು ಅರ್ಥ ಮಾಡಿಕೊಳ್ಳಿ. ತಮ್ಮ ಸದಸ್ಯರಿಗೆ ಹೇಳಿ. ವಿಧೇಯಕದಲ್ಲಿರುವ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಮಾತ್ರ ಈ ಸದನ ಅವಕಾಶ ಕೊಡುತ್ತದೆ. ಅದು ಬಿಟ್ಟು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅಧಿಕಾರವಿದೆ ಎಂದು ನಿಮ್ಮ ವಿವೇಚನೆಯಲ್ಲಿ ಮಾತನಾಡುವುದಕ್ಕೆ ಅವಕಾಶಗಳಿಲ್ಲ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಎಲ್ಲರೂ ಹಾಗೆ ಮಾತನಾಡಬೇಕು.

**ಉಪ ಸಭಾಪತಿಯವರು:-** ಇದು ಸದನದಲ್ಲಿರುವಂತಹ ಪ್ರತಿಯೊಬ್ಬ ಸದಸ್ಯರಿಗೂ ಅನ್ವಯಿಸುತ್ತದೆ.

**ಡಾ|| ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಸದಸ್ಯತ್ವವನ್ನು ಮಾಡುವಂಥದ್ದರ ಬಗ್ಗೆ ಮಾತ್ರ ಮಾತನಾಡಬೇಕು.

**ಉಪ ಸಭಾಪತಿಯವರು:-** ಈಗ ಇರುವಂತಹ ಚರ್ಚೆ ಅಷ್ಟೇ. Track change ಆಗಬಾರದು. ಜಮೀನು ಬಗ್ಗೆ ಮಾತನಾಡಬೇಕೆಂದರೆ ಸಮಯವನ್ನು ಕೇಳಿ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡೋಣ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ತಮ್ಮ ಸದಸ್ಯರುಗಳಿಗೆ ಹೇಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾಮಿನೇಶನ್‌ಗೆ ಅವಕಾಶ ಕೊಡಬೇಕು ಎಂದು ಹೇಳಿರುವಂತಹ ವಿಷಯದಲ್ಲಿ ನಾಮಿನೇಟ್ ಮಾಡಬೇಕಾದರೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಲ್ಲಿರುವಂತಹ ಪರಿಸರವನ್ನು ಗಮನಿಸಬೇಕು ಎಂಬ ವಿಷಯವನ್ನು ನಮ್ಮ ಸನ್ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಹಣದ ಪ್ರಶ್ನೆ ಬರುವುದಿಲ್ಲ. 1200 ಕೋಟಿ ರೂಪಾಯಿ ಎಲ್ಲಿಂದ ಬಂತು ಎನ್ನುವ ಪ್ರಶ್ನೆ ಇದರಲ್ಲಿ ಇದೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, 600 ಕೋಟಿ ರೂಪಾಯಿ ಅದು ಎಲ್ಲಿಂದ ಬಂದಿದೆ? ರೈತರಿಗೆ ಅನ್ಯಾಯವಾಗಿದೆ. ಬೇಕಾದರೆ ಅದನ್ನು prove ಮಾಡುತ್ತೇನೆ. ಸರ್ಕಾರ ಇದಕ್ಕೆ accountable ಇದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾನಾಯಕರೇ, ತಾವು ತಮ್ಮ ಸದಸ್ಯರಿಗೆ ಹೇಳಬೇಕು. ತಾವು ಕೂಡ ಅವರ ಪರವಾಗಿ ನಿಂತು ಮಾತನಾಡಿದರೆ ಹೇಗೆ? ತಾವು ಅವರಿಗೆ ಕನ್ವಿನ್ಸ್ ಮಾಡಬೇಕು. ಇಲ್ಲಿ ಹಣದ ಪ್ರಶ್ನೆ ಇಲ್ಲ, ಜಮೀನಿನ ಪ್ರಶ್ನೆ ಇಲ್ಲ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದು ನನಗೆ ಅರ್ಥವಾಯಿತು. ರಾಯಚೂರು ವಿಶ್ವವಿದ್ಯಾಲಯದ ಬಗ್ಗೆ ಮಾತನಾಡುವಾಗ ವಾಲ್ಮೀಕಿ ಬಗ್ಗೆಯೂ ಬಂತು, ಗುಲ್ಬರ್ಗಾ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡಿದರು, ಕೊಪ್ಪಳ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡಿದರು,

ಅದಕ್ಕೆ ಶೇಕಡ 10 ರಷ್ಟು ರಾಜ್ಯಪಾಲರಿಗೆ ಕೊಟ್ಟಿದ್ದಾರೆ ಎಂದು ಮಾತನಾಡಿದರು. ಸಂದರ್ಭ ಬಂದಾಗ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಅದೇ ರೀತಿ ಅವರು ವ್ಯಕ್ತಪಡಿಸಿದ್ದಾರೆ. ಅವರು ಎಲ್ಲಾ ವಿಷಯಗಳ ಬಗ್ಗೆ ಮಾತನಾಡಿಲ್ಲವೇ?

**ಡಾ|| ಎಂ.ಸಿ.ಸುಧಾಕರ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಹಿರಿಯ ಸದಸ್ಯರು, ಆತ್ಮೀಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ವಿಚಾರವನ್ನು ಹೇಳಿದ್ದಾರೆ. ಇದು ಇದಕ್ಕೆ ಸಂಬಂಧವಿಲ್ಲದಿದ್ದರೂ ಕೂಡ ಅದನ್ನು ನಮ್ಮ ಇಲಾಖೆಯಿಂದ ಮಂಜೂರು ಮಾಡಿರುವಂಥದ್ದಲ್ಲ. ಕೆ.ಐ.ಎ.ಡಿ.ಬಿ. ಮುಖಾಂತರ ಆಗಿರುವಂಥದ್ದು. ಅವತ್ತಿನ ಸಂಪುಟದಲ್ಲಿ ಆಗಿರುವಂಥದ್ದು. ಈಗ ಇದರ ಬಗ್ಗೆ ಬಹಳಷ್ಟು ದೂರುಗಳು ಬಂದಿರುವಂಥದ್ದು ಇದೆ. ಅದರ ಬಗ್ಗೆ ಕೆ.ಐ.ಎ.ಡಿ.ಬಿ. ಯವರು ಅವರದ್ದೇಯಾದಂತಹ ಷರತ್ತಿನ ಮೇಲೆ ಹಂಚಿಕೆ ಮಾಡಿದ್ದಾರೆ. ಆ ಜಮೀನು ಉಪಯೋಗವಾಗಿದೆಯೇ, ಅದಕ್ಕೆ ಎಷ್ಟು ಸೀಮಿತವಾಗಿ ಸಮಯ, ಮತ್ತೊಂದು ಕೊಟ್ಟಿದ್ದಾರೆ ಎಂದು ನಾವು ಕೆ.ಐ.ಎ.ಡಿ.ಬಿ. ಯವರಿಗೆ ಕೇಳುತ್ತೇವೆ. ಅವರಿಂದ ಮಾಹಿತಿಯನ್ನು ಪಡೆದುಕೊಳ್ಳುವಂತಹದ್ದನ್ನು ಮಾಡುತ್ತೇವೆ. ಇದು ಕೆ.ಐ.ಎ.ಡಿ.ಬಿ. ಯವರ ಕರ್ತವ್ಯ. ಇಲ್ಲಿ ಅದರ ಬಗ್ಗೆ ನಾನು ಹೆಚ್ಚಾಗಿ ಚರ್ಚೆ ಮಾಡುವುದಿಲ್ಲ ಎಂದು ನಾನು ಗೌರವಾನ್ವಿತ ಹಿರಿಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. Board of Governors ನಲ್ಲಿ ಮಾನ್ಯ ತಿಪ್ಪೇಸ್ವಾಮಿಯವರು ಹೇಳಿದ ಹಾಗೆ ಇಬ್ಬರು ಎನ್ನುವುದು ತಪ್ಪಾಗಿ ಆಗಿತ್ತು, ಹಿಂದೆ ಪ್ರತಿನಿಧಿಯನ್ನು ಕೊಟ್ಟಿರಲಿಲ್ಲ.

(ಮುಂದು)

(937) 17/12/2024 6:00 ಎಸ್‌ಪಿಆರ್/ಆರ್‌ಎನ್ (ಉಪಸಭಾಪತಿಯವರ ಉಪಸ್ಥಿತಿ)

**ಡಾ|| ಎಂ.ಸಿ.ಸುಧಾಕರ್(ಮುಂದು):-**

ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಎಲ್ಲಾ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಇದ್ದೇ ಇರುತ್ತಾರೆ. ಇದು ತಪ್ಪಾಗಿ ಎರಡು ಎಂದು ಇತ್ತು. ಇದು ಸರ್ಕಾರದ ಪ್ರತಿನಿಧಿ ಎಂಬುದಾಗಿ ಇರಲಿಲ್ಲ. ಇವತ್ತಿನ ದಿವಸ ಸರ್ಕಾರದ ಪ್ರತಿನಿಧಿಯಾಗಿ ಹೋದ ಸಂದರ್ಭದಲ್ಲಿ ಸರ್ಕಾರದ ಹಿತವನ್ನು ಕಾಪಾಡುವಂತಹ ಮತ್ತು ಅಲ್ಲಿನ ಆಗುಹೋಗುಗಳ ಬಗ್ಗೆ ಒಬ್ಬ ತಜ್ಞರು ಹೋದ ಸಂದರ್ಭದಲ್ಲಿ ಅಲ್ಲಿ ಬೇರೆ ರೀತಿಯಲ್ಲಿ ಏನಾದರೂ ಶಿಕ್ಷಣಕ್ಕೆ ಸಂಬಂಧಪಟ್ಟಿದ್ದನ್ನು ಹೊರತುಪಡಿಸಿ, ಏನಾದರೂ ಆದಲ್ಲಿ ಅದನ್ನು ಸರ್ಕಾರದ ವತಿಯಿಂದ ಎಚ್ಚರಿಕೆ ಕೊಡುವ ಕ್ರಮಗಳಾಗುತ್ತದೆ. ಇದರಿಂದಾಗಿ ಸರ್ಕಾರಿ ಪ್ರತಿನಿಧಿ ಇರುವುದು ಬಹಳ ಸೂಕ್ತವಾದುದು. ನಿರಂತರವಾಗಿ ಈ ಎಲ್ಲಾ ವಿಶ್ವವಿದ್ಯಾಲಯಗಳ ಮೇಲುಸ್ತುವಾರಿಯನ್ನು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಮುಖಾಂತರ ಆಗಿಂದಾಗ್ಗೆ ತಪಾಸಣೆ ಮಾಡಿ, ವರದಿ ನೀಡುವ ಬಗ್ಗೆ ತಂಡವೊಂದನ್ನು ಕಳುಹಿಸಿಕೊಡಲಾಗುತ್ತದೆ. ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸಮಿತಿಯೊಂದನ್ನು ಕಳುಹಿಸುವ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಆದ್ದರಿಂದ ಕೇವಲ ಸರ್ಕಾರದ ಪ್ರತಿನಿಧಿಯನ್ನು ನೀಡಿ, ಅಲ್ಲಿ ಸರ್ಕಾರದ ಹಿಡಿತವಿರಬೇಕು ಎನ್ನುವ ಮತ್ತು ಅಲ್ಲಿಯ ಆಗುಹೋಗುಗಳ ಬಗ್ಗೆ ನಿರಂತರವಾಗಿ ಗಮನಹರಿಸುವ ದೃಷ್ಟಿಯಲ್ಲಿ ಮಾಡಿದ್ದೇವೆ. ಇದನ್ನು ಬಿಟ್ಟು

ಇಲ್ಲಿ ಬೇರೆ ಯಾವುದೇ ಉದ್ದೇಶಗಳಿಲ್ಲ ಎನ್ನುವ ಅಂಶವನ್ನು ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ತಿಳಿಯಬಯಸುತ್ತೇನೆ. ಆದ್ದರಿಂದ ಈ ವಿಧೇಯಕವನ್ನು ಅಂಗೀಕರಿಸಿ ಕೊಡುವಂತೆ ಎಲ್ಲರಲ್ಲಿ ವಿನಂತಿಸುತ್ತೇನೆ.

ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಜಮೀನು ನೀಡಿರುವ ಬಗ್ಗೆ ಹಿರಿಯ ಸದಸ್ಯರಾದ ಶ್ರೀ ನಸೀರ್ ಅಹ್ಮದ್ ರವರು ಪ್ರಸ್ತಾಪಿಸಿದ್ದು, ಈ ಸಂಬಂಧಿತ ಮಾಹಿತಿಯನ್ನು ತರಿಸಿಕೊಡುತ್ತೇನೆ. ವಿಧೇಯಕದಲ್ಲಿನ ವಿಷಯಕ್ಕೆ ಸಂಬಂಧಪಟ್ಟ ಮಾಹಿತಿಯು ಮಾತ್ರವೇ ಈಗ ನನ್ನ ಬಳಿ ಲಭ್ಯವಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ಎಷ್ಟು ಜನ ಸದಸ್ಯರಿದ್ದಾರೆ ಎನ್ನುವ ಬಗ್ಗೆ ಸಚಿವರು ತಿಳಿಸಬೇಕು.

**ಶ್ರೀ ಸಿ.ಟಿ.ರವಿ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರವು ಇದರಲ್ಲಿ ವಿಶೇಷ ತಜ್ಞರು ಎಂಬುದಾಗಿ ನಮೂದಿಸಿದ್ದು, ಇದರ ನಿರ್ದಿಷ್ಟವಾದ ವ್ಯಾಖ್ಯಾನವನ್ನು ತಿಳಿಸಬೇಕು. ಇವರು ಶೈಕ್ಷಣಿಕ ತಜ್ಞರೇ ಎಂಬುದನ್ನೂ ಸಹ ಸ್ಪಷ್ಟಪಡಿಸಬೇಕು. ನಾಳಿನ ದಿನಗಳಲ್ಲಿ ಚಾರ್ಲ್ಸ್ ಒಬಿರಾಯ್ ತರಹದವರೂ ಸಹ ವಿಶೇಷ ತಜ್ಞರಾಗಿ ಬಿಡಬಹುದು. ಇಲ್ಲಿ ನಿರ್ದಿಷ್ಟವಾದ ಒಂದು ವ್ಯಾಖ್ಯಾನ ಬೇಕಲ್ಲವೇ? ಇದರಲ್ಲಿ ಶೈಕ್ಷಣಿಕವಾದ ವಿಶೇಷ ತಜ್ಞರು ಎಂಬುದನ್ನು ಸರ್ಕಾರವು ಸ್ಪಷ್ಟಪಡಿಸಬೇಕು; ಇಲ್ಲವೆಂದಾದಲ್ಲಿ ಗೊಂದಲಗಳುಂಟಾಗುತ್ತವೆ.

**ಡಾ॥ ಎಂ.ಸಿ.ಸುಧಾಕರ್(ಉನ್ನತ ಶಿಕ್ಷಣ ಮಂತ್ರಿ):-** ಮಾನ್ಯ ಸಭಾಪತಿಯವರೆ, ಈ ವಿಧೇಯಕದ ಸೆಕ್ಷನ್ 26(ಎ) ರಲ್ಲಿ ಆಂಗ್ಲ ಭಾಷೆಯಲ್ಲಿರುವುದನ್ನು ಹೇಳುತ್ತೇನೆ; ... *"(ix) One expert from the field of management or finance or any other specialization, including administration to be nominated by the State Government."* ಇದು ಶಿಕ್ಷಣ ಕ್ಷೇತ್ರದಲ್ಲಿ ಆರ್ಥಿಕವಾಗಿ ತಜ್ಞರಿರತಕ್ಕಂತದ್ದು; ಏಕೆಂದರೆ, ಯಾರನ್ನು ಬೇಕಾದರೂ ನಾಮನಿರ್ದೇಶನ ಮಾಡುವಂತಿಲ್ಲ. They should contribute towards the improvement of education of that university. ಎಲ್ಲಾ ಖಾಸಗಿ ವಿಶ್ವವಿದ್ಯಾಲಯಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿದ್ದು, ಇವರ ಜೊತೆಗೆ ತಜ್ಞರೊಬ್ಬರಿರುತ್ತಾರೆ.

**ಪರ್ಯಾಲೋಚನಾ ಪ್ರಸ್ತಾವ**

**ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024 ರ ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024 ರ ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ॥ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024 ರ ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024 ರ ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024 ರ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ಕೊರೆದ ಬಾವಿಗಳು ವಿಫಲವಾಗಿರುವ ಸಂದರ್ಭದಲ್ಲಿ ಅನೇಕ ಪ್ರದೇಶಗಳಲ್ಲಿ ಮಕ್ಕಳು ಕೊರೆದ ಬಾವಿಗಳಲ್ಲಿ ಬಿದ್ದ ಸಂದರ್ಭಗಳನ್ನು ಗಮನಿಸಿ, ಸರ್ವೋಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ: 362/2009 ರಲ್ಲಿ ದಿನಾಂಕ 11/02/2010 ಹಾಗೂ 06/08/2010 ಗಳಂದು ನೀಡಿದ ತೀರ್ಪಿನನ್ವಯ, ವಿಫಲಗೊಳ್ಳುವ ಬಾವಿಗಳನ್ನು ಮುಚ್ಚಿಸಲು ಜಾರಿ ಮಾಡಲಾದ ಮಾರ್ಗಸೂಚಿಗಳನ್ನು ಸದರಿ ತಿದ್ದುಪಡಿ ವಿಧೇಯಕದಲ್ಲಿ ಅಳವಡಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ರಾಜ್ಯದ ಅಂತರ್ಜಲ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿ ಕೊಳವೆ ಬಾವಿಗಳನ್ನು ಮುಚ್ಚಿಸಲು ಇರುವ ಸಮಸ್ಯೆಗಳು ಹಾಗೂ ಇಂತಹ ಅವಘಡಗಳಿಗೆ ಕಾರಣರಾಗಿರುವವರ ವಿರುದ್ಧ ಕಾನೂನಿನ್ವಯ ಕ್ರಮ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಇದರಿಂದಾಗಿ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಎಸ್.ಆರ್.ಬನ್ನೂರ್ ಮಠ್ ರವರ ಅಧ್ಯಕ್ಷತೆಯ ಕರ್ನಾಟಕ ಕಾನೂನು ಆಯೋಗವು ತನ್ನ 60 ನೇ ವರದಿಯಲ್ಲಿ ಕರ್ನಾಟಕ ಅಂತರ್ಜಲ ಕಾನೂನಿಗೆ ತಿದ್ದುಪಡಿಯನ್ನು ಶಿಫಾರಸ್ಸು ಮಾಡಿರುತ್ತಾರೆ. ಆಯೋಗದ ಶಿಫಾರಸ್ಸಿನನ್ವಯ, ನಿಯಮ 11ಎ ರಡಿ ಕೊಳವೆ ಬಾವಿಗಳನ್ನು ಕೊರೆಯಲು ಇಚ್ಛಿಸುವವರು ಸ್ಥಳೀಯ ಪ್ರದೇಶಗಳ ಪ್ರಾಧಿಕಾರಕ್ಕೆ ಅಂದರೆ ಗ್ರಾಮ ಪಂಚಾಯಿತಿ, ಮುನಿಸಿಪಾಲಿಟಿ ಅಥವಾ ಬಿ.ಬಿ.ಎಂ.ಬಿ. ಯಾವುದೇ ಪ್ರಾಧಿಕಾರವಿರಬಹುದು, ಇವರಿಂದ 15 ದಿನಗಳ ಮುಂಚಿತವಾಗಿ ಅನುಮತಿಯನ್ನು ಪಡೆದುಕೊಳ್ಳಬೇಕು. ಅಧ್ಯಾ IIIಎ ಅಡಿ ಸ್ಥಗಿತಗೊಂಡಿರುವ ಕೊಳವೆ ಬಾವಿಗಳನ್ನು ಮುಚ್ಚುವ ಜವಾಬ್ದಾರಿಗಳನ್ನು ಬಾವಿ ಕೊರೆಯುವ ಸಂಸ್ಥೆ ಮತ್ತು ಅನುಷ್ಠಾನಗೊಳಿಸುವ ಸಂಸ್ಥೆಗಳು ನಿರ್ವಹಿಸಲು ಆಯೋಗವು ಶಿಫಾರಸ್ಸು ಮಾಡಿರುತ್ತದೆ. ಈ ಎಲ್ಲಾ ಕಾರಣಗಳಾಗಿ ಪ್ರಸ್ತುತ ವಿಧೇಯಕವನ್ನು

ಮಂಡಿಸಲಾಗಿದೆ. ಕೊಳವೆ ಬಾವಿಗಳನ್ನು ಯಾರು ಕೊರೆಯುತ್ತಿದ್ದಾರೆಯೋ, ಅವರುಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ಈ ತಿದ್ದುಪಡಿಯನ್ನು ಮಾಡಲಾಗಿದ್ದು, ಇದನ್ನು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಸರ್ಕಾರವು ಇಲ್ಲಿಯವರೆಗೆ ಈ ವಿಷಯದ ಬಗ್ಗೆ ಸಾಕಷ್ಟು ಬೇರೆ ಬೇರೆ ಆದೇಶಗಳನ್ನು ಮಾಡಿದೆ. ಕೊಳವೆ ಬಾವಿಗಳು ಎಂದರೆ ಕುಡಿಯುವ ನೀರಿಗಾಗಿ ಕೊರೆಯುವ ಕೊಳವೆ ಬಾವಿಗಳು ಮಾತ್ರವೇ ಅಥವಾ ಗ್ರಾಮೀಣ ಭಾಗಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಕೊರೆಯುವ ಕೊಳವೆ ಬಾವಿಗಳು ಇದರ ವ್ಯಾಪ್ತಿಗೊಳಪಡುತ್ತವೆಯೇ ಎಂಬ ಅಂಶದ ಬಗ್ಗೆ ನಾನು ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ಕೊಳವೆ ಬಾವಿಗಳು ಕೊರೆಯುವ 15 ದಿನಗಳ ಮುಂಚಿತವಾಗಿ ಅರ್ಜಿ ಸಲ್ಲಿಸಿ, ಸ್ಥಳೀಯ ಸಂಸ್ಥೆಗಳಿಂದ ಅನುಮತಿಯನ್ನು ಪಡೆಯಬೇಕೆಂದು ಸಚಿವರು ವಿವರಣೆ ನೀಡಿದ್ದಾರೆ. ಸರ್ಕಾರದ ಮುಖಾಂತರ ಕೊಳವೆ ಬಾವಿಗಳನ್ನು ಕೊರೆಸುವುದಾದರೆ, 15 ದಿನಗಳು ಅಥವಾ ಒಂದು ತಿಂಗಳ ಮೊದಲೇ ಸರ್ಕಾರಿ ಅಧಿಕಾರಿಗಳ ಮುಖಾಂತರ ಏನು ಏಜೆನ್ಸಿಯವರನ್ನು ಹೇಳಿದ್ದೀರಿ ಅವರಿಗೆ ಸಲ್ಲಿಸಿ, ಅವಶ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಸರ್ಕಾರದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗಳ ನಡುವೆ ಬಹಳ ಬೇಗ ಕ್ರಮಗಳಾಗುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ರೈತರ ಬೆಳೆಗಳು ಒಣಗಿ ಹೋಗುತ್ತಿರುತ್ತವೆ. ನಿಷ್ಕ್ರಿಯಗೊಂಡ ಕೊಳವೆ ಬಾವಿಗಳ ಬಗ್ಗೆ ಈ ವಿಧೇಯಕದಲ್ಲಿ ಬಹಳ ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ. ಅಂದರೆ ಒಣಗಿಹೋದ ಬೋರ್‌ವೆಲ್‌ಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ. ಇದನ್ನು ಸರಳೀರಕಣಗೊಳಿಸುವ ಉದ್ದೇಶದಿಂದ ತಿದ್ದುಪಡಿ ಮಾಡಿದ್ದರೆ ಚೆನ್ನಾಗಿ ಇರುತ್ತಿತ್ತು. ಸರ್ಕಾರವು ಕೊಳವೆ ಬಾವಿಗಳನ್ನು ಕೊರೆಸುವ 15 ದಿನಗಳ ಮುಂಚಿತವಾಗಿ ಅನುಮತಿಯನ್ನು ಪಡೆದುಕೊಳ್ಳಬೇಕು ಎಂಬ ಷರತ್ತನ್ನು ಅಳವಡಿಸಿದೆ. ಅಂದರೆ, ಸಮಸ್ಯೆ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಈಗ ಯಾರೋ ಒಬ್ಬ ಅಧಿಕಾರಿಯು ಕೊಳವೆ ಬಾರಿಯನ್ನು ಕೊರೆಸಲು ಅನುಮತಿಯನ್ನು ನೀಡಿರುತ್ತಾರೆ. ಕೊಳವೆ ಬಾವಿ ಕೊರೆಸುವ ಸಂದರ್ಭದಲ್ಲಿ ನೀರು ಸಿಗದೇ ಇದ್ದರೆ, ಅದು ನಿಷ್ಕ್ರಿಯಗೊಳ್ಳುತ್ತದೆ. ಆಗ ಇದು ಪ್ರಸ್ತುತ ವಿಧೇಯಕದಲ್ಲಿನ ಅಂಶಕ್ಕೆ ಸರಿಯಾಗುತ್ತದೆ.

(ಮುಂದು)

(938) 17-12-2024/6-10/bkp-rn

**ಶ್ರೀ ಗೋವಿಂದರಾಜು(ಮುಂದು):-**

ಒಂದು ವೇಳೆ ಎರಡು ವರ್ಷ, ಮೂರು ವರ್ಷ, ಐದು ವರ್ಷ, ಹತ್ತು ವರ್ಷ ಹಾಗೆಯೇ ಬಿಟ್ಟರೆ, ಆ ಬೋರ್‌ವೆಲ್‌ನಲ್ಲಿ ನೀರು ಒಣಗಿ ಹೋಗುತ್ತದೆ. ಆಗ ನೀವು ಯಾರನ್ನು ಕೇಳುತ್ತೀರಿ? ಇದಕ್ಕೆ ಒಬ್ಬ ಅಧಿಕಾರಿ ಅನುಮತಿಯನ್ನು ಕೊಟ್ಟಿರುತ್ತಾರೆ. 10-15 ವರ್ಷಗಳ ನಂತರ ಬೋರ್‌ವೆಲ್‌ನಲ್ಲಿ ನೀರು ಒಣಗಿ ಹೋಗಿರುತ್ತದೆ. ಬೋರ್‌ವೆಲ್‌ನಲ್ಲಿ ನೀರು ಒಣಗಿ ಹೋದಾಗ ಅದಕ್ಕೆ ಸರಿಯಾದ ಉಪ ಕ್ರಮಗಳನ್ನು ನೀವು ಈ ಬಿಲ್‌ನಲ್ಲಿ ಹೇಳಿದ ರೀತಿಯಲ್ಲಿ ಏನು ಹೇಳಿದ್ದೀರಿ ಎಂದರೆ, 24 ಗಂಟೆಗಳ ಅವಧಿಯಲ್ಲಿ ಎಂದು ಹೇಳಿ ನೀವು ಸಮಯವನ್ನೂ ಸಹ ಹಾಕಿದ್ದೀರಿ. ನೀವು ಹೇಳಿದಂತಹ ವಿಚಾರ ಈ ಬಿಲ್‌ನಲ್ಲಿ ಆ ಕೊಳವೆಬಾವಿ ಕೊರೆಸುವಂತಹ ಸಮಯದಲ್ಲಿ ಏನಾದರೂ ಅದರಲ್ಲಿ ನೀರು ಸಿಗದೇ ಆ ಬೋರ್‌ವೆಲ್ ನಿಷ್ಕ್ರಿಯ ಎಂದಾದರೆ ನೀವು ಹೇಳಿದಂತಹ ಷರತ್ತುಗಳು ಎಲ್ಲದಕ್ಕೂ ಅನ್ವಯಿಸುತ್ತದೆ. 24 ಗಂಟೆ ಒಳಗಡೆ ಇರುವಂತಹ ಸಮಯದಲ್ಲಿ ಮತ್ತು ನಂತರ ಕೊಳವೆಬಾವಿಗಳು ಒಣಗಿದರೆ ಅಂದರೆ 24 ಗಂಟೆ ಒಳಗಡೆ ಅದಕ್ಕೆ ನೀವು ಒಳಗಡೆ ಸುರಂಗ ಬಿದ್ದಿದ್ದರೆ ಅದನ್ನು ಬೊಂಬುಗಳಿಂದ ಮುಚ್ಚಬೇಕು, ಮತ್ತೆ, ಈ ಅನುಪಯುಕ್ತ ಮಣ್ಣನ್ನು ಹಾಕಿ ಭರ್ತಿ ಮಾಡಬೇಕು, ಅದರ ಸುತ್ತಲೂ ಎರಡು ಅಡಿಗಗಳಷ್ಟು ಎತ್ತರದ ದಿಬ್ಬವನ್ನು ಕಟ್ಟಬೇಕೆಂದು ನೀವು ಹೇಳುತ್ತೀರಿ. ಆದರೆ, ಕೆಲವು ವರ್ಷಗಳ ನಂತರ ಆ ಬೋರ್‌ವೆಲ್ ನೀರು ಒಣಗಿ ಹೋದಾಗ ನೀವು ಹೇಳುವಂತಹ ಷರತ್ತುಗಳು ಯಾವುದೂ ಸಹ ಅನ್ವಯಿಸುವುದಿಲ್ಲ. ಇದರಿಂದ ನಿಮ್ಮ ಮೂಲ ಉದ್ದೇಶ ಸಫಲವಾಗುವುದಿಲ್ಲ. ನಾನು ನೀವು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇನೆ. ನಿಷ್ಕ್ರಿಯಗೊಂಡಂತಹ ಬೋರ್‌ವೆಲ್‌ಗಳಲ್ಲಿ ಮಕ್ಕಳು ಬಿದ್ದು ಸಾಕಷ್ಟು ಅನಾಹುತ ಆಗುತ್ತಿದ್ದು, ಅದನ್ನು ತಪ್ಪಿಸಬೇಕೆಂಬುದು ನಿಮ್ಮ ಉದ್ದೇಶ ಆಗಿದೆ. ಅದಕ್ಕೆ ಸೀಮಿತವಾಗಿ ನೀವು ಅದನ್ನು ಹೇಳಬೇಕಾಗಿದೆ. ಇಷ್ಟೆಲ್ಲಾ ಷರತ್ತುಗಳನ್ನು ಹಾಕುವುದು ತಪ್ಪಲ್ಲ. ಆದರೆ, ನೀವು ಎಲ್ಲಾ ಹೇಳುವಂತಹದ್ದು, ಸರ್ಕಾರಿ ಅಧಿಕಾರಿಗಳು, ಕುಡಿಯುವ ನೀರಿನ ಉದ್ದೇಶಕ್ಕೋ ಅಥವಾ ಸರ್ಕಾರದ ಉಪಯೋಗಕ್ಕೆ ಕೊರೆಸುವಂತಹ ಬೋರ್‌ವೆಲ್‌ಗಳಾದರೆ, ಈ ಎಲ್ಲಾ ಷರತ್ತುಗಳನ್ನು ನೀವು ಹೇಳಬಹುದು. ಅದರೆ, ರೈತರ ವಿಚಾರದಲ್ಲಿ ನೀವು ರೈತರಿಗೆ ಈ ಷರತ್ತುಗಳನ್ನು ಹಾಕಿದರೆ ರೈತ ಕೊಳವೆಬಾವಿ ಕೊರೆಸುವ 15 ದಿವಸಗಳ ಮೊದಲೇ ಎಲ್ಲಿ ಪತ್ರವನ್ನು ಕೊಡಲಿಕ್ಕೆ ಆಗುತ್ತದೆ? 15 ದಿವಸಗಳ ಮೊದಲೇ ಪತ್ರ ಕೊಡಬೇಕೆಂದರೆ ಬೇಸಿಗೆ ಸಮಯದಲ್ಲಿ ನೀರಿಗೆ ಅಭಾವ ಬರುವುದು ಸರ್ವೇ ಸಾಮಾನ್ಯವಾದ ವಿಷಯ, ಈಗ ಬೋರ್‌ವೆಲ್‌ಗೆ ಹಣ ಕಟ್ಟಿ 15 ದಿವಸಗಳು ಕಳೆದರೂ ಬೋರ್‌ವೆಲ್ ಕೊರೆಯಲಿಕ್ಕೆ ಏಜೆನ್ಸಿಯವರು ಬರುವುದಿಲ್ಲ. ಈ ವಿಚಾರದಲ್ಲಿ ನಮ್ಮದೇ ಅನುಭವ ಹೇಳಬೇಕೆಂದರೆ ಇದ್ದಕ್ಕಿದ್ದಂತೆ ಬೋರ್‌ವೆಲ್‌ನಲ್ಲಿ ನೀರು ಒಣಗಿ ಹೋಗುತ್ತದೆ. ಆಗ 15 ದಿವಸಗಳ ಮೊದಲೇ ಬೋರ್‌ವೆಲ್ ಕೊರೆಯಲು ಅನುಮತಿಗೆ ಅಪ್ಲೈ ಮಾಡಿಕೊಳ್ಳದೇ ನೇರವಾಗಿ ಬೋರ್‌ವೆಲ್ ಕೊರೆಸುವಂತಿಲ್ಲ ಎಂದು ಹೇಳಿ, ಪೊಲೀಸ್‌ನವರೋ ನಿಮ್ಮ ಇಲಾಖೆಯವರೋ ಹೋಗಿ ರೈತರ ಮೇಲೆ FIR ಮಾಡಿದರೆ ಆಗ ರೈತ ಎಲ್ಲಿ ಹೋಗಬೇಕು? ಅದಕ್ಕೋಸ್ಕರ ನೀವು ಈ ಬಿಲ್‌ನಲ್ಲಿ ಏನು ತಂದಿದ್ದೀರಿ, ರೈತರಿಗೆ ಸಮಸ್ಯೆಯಾಗದ ರೀತಿಯಲ್ಲಿ ಅದಕ್ಕೆ ಒಂದು ಪ್ರತ್ಯೇಕವಾದಂತಹ ನೀತಿ ನಿಯಮವನ್ನು ರೂಪಿಸಬೇಕು. ಅದಲ್ಲದೆ, ಇವತ್ತು ನೀವು ಏನು ಷರತ್ತುಗಳನ್ನು ಹಾಕಿದ್ದೀರಿ, ಅದರಲ್ಲಿ 2 ಅಡಿಗೆ 2 ಅಡಿ ದಿಬ್ಬವನ್ನು ಕಟ್ಟಿ ಎಂದು ನೀವು ಹೇಳುತ್ತಿದ್ದೀರಿ. ಒಳಗಡೆ ಬೋರ್ ಕೊರೆಸಬೇಕಾದರೆ ಎಲ್ಲೋ

ಒಂದು point of place ನಲ್ಲಿ ಒಳಗಡೆ ಎಲ್ಲಾ ಮಣ್ಣು open ಆಗಿ ಮತ್ತು ಗುಡ್ಡ ಕುಸಿಯುವಂತಹ ಅವಕಾಶ ಇದೆ ಎನ್ನುವುದು ನಿಮ್ಮ ವಾದವಾಗಿದೆ. ಹೀಗಾಗಿ, ಬರಿ 2 ಅಡಿಗೆ 2 ಅಡಿ ದಿಬ್ಬವನ್ನು ಕಟ್ಟಿದ ಮಾತ್ರಕ್ಕೆ ನಿಮ್ಮ ಸಮಸ್ಯೆ ಪರಿಹಾರವಾಗುವುದಿಲ್ಲ. ಅದಕ್ಕೆ ಯಾರಾದರೊಬ್ಬ ಪೂರ್ಣ ಪ್ರಮಾಣದ ತಜ್ಞರ ಹತ್ತಿರ ನೀವು ಇದನ್ನೆಲ್ಲಾ ಚರ್ಚೆ ಮಾಡಿ ಈ ಒಂದು ವಿಧೇಯಕವನ್ನು ನೀವು ತಂದರೆ ಒಳ್ಳೆಯದು. ನೀವು ಹಾಕಿರುವಂತಹ ಷರತ್ತುಗಳು ಬಹಳ ಜಾಸ್ತಿ ಇದೆ. ಇದರಿಂದ ರೈತರಿಗೆ ಅಧಿಕಾರಿಗಳಿಂದ ಕಿರುಕುಳ ಹೆಚ್ಚಾಗುವುದರ ಜೊತೆಗೆ ಅವರ ಒಂದು ಜೀವನಕ್ಕೂ ಕೂಡ ನೀವು ಕೊಳ್ಳಿ ಇಟ್ಟಾಂತಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಆದ್ದರಿಂದ, ಮತ್ತೊಂದು ಬಾರಿ ಈ ಬಗ್ಗೆ ಸಮಗ್ರವಾಗಿ ಪರ್ಯಾಲೋಚನೆ ಮಾಡಿ ಯಾರಾದರೂ ತಜ್ಞರ ಹತ್ತಿರ ಒಂದು ಬಾರಿ ಚರ್ಚೆ ಮಾಡಿ ಇದಕ್ಕೆ ನೀತಿನಿಯಮವನ್ನು ರೂಪಿಸುವುದು ಒಳ್ಳೆಯದು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ಇತ್ತೀಚೆಗೆ ಒಂದು ಜಾಗದಲ್ಲಿ ಬೋರ್‌ವೆಲ್ ಕೊರೆಸಬೇಕೆಂದಾಗ ಅರ್ಜಿಯನ್ನು ಕಳುಹಿಸಿದರು. ಆ ಅರ್ಜಿಗೆ ಸಂಬಂಧಪಟ್ಟಂತೆ 20 ಷರತ್ತುಗಳಿವೆ. ಆ 20 ಷರತ್ತುಗಳನ್ನು ಪೂರೈಸಬೇಕೆಂದು ಇದೆ. ಅರ್ಜಿಯ ಜೊತೆಗೆ ಆಧಾರ್ ಕಾರ್ಡ್, ಓನರ್‌ಶಿಫ್ ಕಾರ್ಡ್, ಆರ್‌ಟಿಸಿ, ಸೈಟ್ ರಿಜಿಸ್ಟ್ರೇಷನ್ ಪ್ರತಿ, ಆ ಸೈಟ್‌ನ ಅಪ್ರೂವಲ್ ಪ್ಲಾನ್ ಅಂಡ್ ಟ್ಯಾಲಿ, ಅಂದರೆ SUDA ದಿಂದ ಏನು ಅಪ್ರೂವಲ್ ಬಂದಿದೆ, ಅಂದರೆ, ಅನುಮೋದನೆಗೊಂಡ ಟ್ಯಾಲಿಯನ್ನು ಕೇಳುತ್ತಾರೆ. ಮತ್ತೆ Rain Water Harvesting Plan, Recharge Proposal Balance Sheet ಇದ್ದರೆ ಸ್ಥಳೀಯ ಸಂಸ್ಥೆಗಳ ಪ್ರಾಧಿಕಾರದಿಂದ ಅನುಮತಿಯನ್ನು ತೆಗೆದುಕೊಳ್ಳಬೇಕು. ಈ ರೀತಿಯದ್ದನ್ನು ನೋಡಿದರೆ ಯಾರೂ ಸಹ ಬೋರ್‌ವೆಲ್‌ಗಳನ್ನು ಕೊರೆಸಲಿಕ್ಕೆ ಆಗುವುದಿಲ್ಲ. ಇಲ್ಲಿ ಇರುವಂತಹ ಎಲ್ಲಾ ಮಂತ್ರಿಗಳು ಮತ್ತು ಸದಸ್ಯರುಗಳೆಲ್ಲರ ಮನೆಗಳಲ್ಲಿಯೂ ಬೋರ್‌ವೆಲ್‌ಗಳಿವೆ. ನೀವು ಹೇಳುವುದೇನೆಂದರೆ 250 ರಿಂದ 500 ಮೀಟರ್ ದೂರದ ಒಳಗಡೆ ಬೋರ್ ಕೊರೆಯುವಂತಿಲ್ಲವೆಂದು ಹೇಳಿದ್ದೀರಿ. ಈ ರೀತಿಯಲ್ಲಿ ಇದ್ದರೆ ಹೇಗೆ ಆಗುತ್ತದೆ? ಇದಕ್ಕೆ ಇಷ್ಟೊಂದು ಕಠಿಣವಾದ ನಿಯಮಗಳು ಇದ್ದರೆ ಬೋರ್‌ವೆಲ್ ಅನ್ನು ಯಾರೂ ಸಹ ಕೊರೆಸಲಿಕ್ಕೆ ಆಗುವುದಿಲ್ಲ. ಈ ರೀತಿಯಾದಾಗ ರೈತರ ಸಮಸ್ಯೆಗಳು ಹೆಚ್ಚಾಗುತ್ತವೆ. ಷರತ್ತುಗಳ ಪಟ್ಟಿಯನ್ನು ನೋಡಿದರೆ ಬಹುತೇಕ 20 ಷರತ್ತುಗಳನ್ನು ನೀವು ಹಾಕಿದ್ದೀರಿ. ಆದ್ದರಿಂದ, ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚು ಗಮನಹರಿಸಬೇಕೆಂದು ಮತ್ತು ಇದರ ಪ್ರಕ್ರಿಯೆಯನ್ನು ಸುಲಭ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರ ತಂದಿರುವಂತಹ ಕರ್ನಾಟಕ ಅಂತರ್ಜಲ ಅಭಿವೃದ್ಧಿ ನಿರ್ವಹಣೆಯ ಬಿಲ್ ಏನಿದೆ, ಇದರ ಬಗ್ಗೆ ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಈ ಬಿಲ್ ಅನ್ನು ವಾಪಸ್ಸು ಪಡೆಯಬೇಕೆಂದು ಹೇಳುತ್ತೇನೆ. ಇದರಲ್ಲಿ 6 ತಿಂಗಳ ಸೆರೆವಾಸ ಎಂದು ಹೇಳಲಾಗಿದೆ. 6 ತಿಂಗಳು

ಸಾದಾ ಸೆರೆವಾಸ ಮತ್ತು ದಂಡ ಎಂದು ಹೇಳಲಾಗಿದೆ. ನಾನು ಬರದ ನಾಡು ಜಿಲ್ಲೆಯಾದ ಚಿತ್ರದುರ್ಗ ಜಿಲ್ಲೆಯಿಂದ ಬಂದವನಾಗಿದ್ದು, ಆ ಭಾಗದ ರೈತರ ಪರವಾಗಿ ನಾನು ಮಾತನಾಡುತ್ತೇನೆ. ಅಲ್ಲಿ ಯಾವತ್ತು ನೀರು ನಿಲ್ಲುತ್ತದೆ ಎಂದು ಹೇಳಲಿಕ್ಕೆ ಹೋದರೆ, ರೈತನಿಗೆ ಹಿಂದಿನ ದಿವಸ ನೀರು ಇದ್ದರೆ, ನಾಳೆ ಬೆಳಗ್ಗೆ ಅಲ್ಲಿಗೆ ಹೋಗಿ ಮೋಟರ್ ಆನ್ ಮಾಡಿದರೆ ನೀರು ಬರುವುದಿಲ್ಲ. ಅಲ್ಲಿ ಪಕ್ಕದಲ್ಲಿ ಯಾರೋ ಬೋರ್‌ವೆಲ್ ಕೊರೆಸುತ್ತಿರುತ್ತಾನೆ. ಅವರ ಕೈಕಾಲು ಹಿಡಿದುಕೊಂಡು ಬಂದು ಬೋರ್‌ವೆಲ್ ಕೊರೆಸಿಕೊಳ್ಳಬೇಕು. ಇಲ್ಲವೆಂದರೆ ಅವನ ಬೆಳೆ ಎಲ್ಲವೂ 3 ತಿಂಗಳಲ್ಲಿ ಒಣಗಿ ಹೋಗುತ್ತದೆ. ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ರೈತರು ಇವತ್ತು ಬೆಳೆಗಳನ್ನು, ತೋಟಗಳನ್ನು ಕಾಪಾಡಿಕೊಂಡು ಬರುವಂತಹದ್ದು ಇದೆ. ಇಂತಹ ಪರಿಸ್ಥಿತಿಯಲ್ಲಿ ರೈತರು 15 ದಿವಸಗಳ ಮುಂಚಿತವಾಗಿ Panchayath Development Officer ಹತ್ತಿರ ಪತ್ರವನ್ನು ತೆಗೆದುಕೊಂಡು ಬರಬೇಕು. ಆದರೆ, ಆಗ PDO 15 ದಿವಸಗಳ ಕಾಲ ಕೈಗೆ ಸಿಗುವುದಿಲ್ಲ. 15 ದಿವಸಗಳ ಕಾಲ ಪಿಡಿಓ ಕೈಗೆ ಸಿಗಲಿಲ್ಲವೆಂದರೆ ಪಿಡಿಓ ಎಲ್ಲೆಲ್ಲಿ ಹೋಗುತ್ತಾರೆಂದು ನೋಡಿಕೊಂಡು ಸುತ್ತಾಡಿಕೊಂಡು ಬರುವುದಕ್ಕೆ ಆಗುತ್ತದೆಯೇ? ಇದು impractical ಆಗಿರುತ್ತದೆ. ಇಲ್ಲಿ ಉದ್ದೇಶ ಇರುವಂತಹದ್ದು, ಯಾವುದು ವಿಫಲವಾಗಿರುವಂತಹ ಕೊಳವೆ ಬಾವಿಗಳಲ್ಲಿ ಪ್ರಾಣ ಹಾನಿಯಾಗಬಾರದು ಎನ್ನುವಂತಹ ಸರ್ಕಾರದ ಕಾಳಜಿಯನ್ನು ನಾನು appreciate ಮಾಡುತ್ತೇನೆ. ಆದರೆ, ಅದಕ್ಕೆ ಬೇರೆ ರೀತಿಯಾದಂತಹ ನಿಯಮಗಳನ್ನು ಮಾಡಬೇಕು. ಯಾರು ಏಜೆನ್ಸಿ ಬೋರ್‌ವೆಲ್ ಕೊರೆಯುತ್ತಾರೆ, ಬೋರ್‌ವೆಲ್ ವಿಫಲವಾದರೆ ತಕ್ಷಣ ಅದನ್ನು ಮುಚ್ಚಿ ಅದರ ವರದಿಯನ್ನು ಕೊಡಬೇಕೆಂದು ಹೇಳುವಂತಹದ್ದು ಇರಬೇಕೇ ವಿನಃ ಇಲ್ಲಿ ರೈತ ಕೊಳವೆ ಬಾವಿಯನ್ನು ಕೊರೆಸುವುದೇ ತಪ್ಪು, ಅವನು ಅನುಮತಿಯನ್ನು ತೆಗೆದುಕೊಳ್ಳಲಿಲ್ಲ, ಅವನಿಗೆ 3 ತಿಂಗಳು, 6 ತಿಂಗಳು ಸೆರೆವಾಸ, ಆ ಏಜೆನ್ಸಿಗೆ 1 ವರ್ಷ ಸೆರೆವಾಸ ಎಂದು ಹೇಳಿದರೆ, ಇದು ಒಂದು ರೀತಿಯಲ್ಲಿ ಹೇಗೆ ಆಗಿದೆ ಎಂದರೆ ಪ್ರಕರಣಗಳಲ್ಲಿ ಈ ರೀತಿಯಲ್ಲಿ ಯಾವುದೋ ಒಂದು ಪ್ರಕರಣದಲ್ಲಿ ಪ್ರಾಣಹಾನಿ ಆಯಿತು ಎನ್ನುವುದಕ್ಕೋಸ್ಕರ ಇಡೀ ನಮ್ಮ ರಾಜ್ಯದ ರೈತರಿಗೆ ಶಿಕ್ಷೆ ಕೊಟ್ಟಂತಾಗುತ್ತದೆ. ಹೀಗಾಗಿ, ಇದು impractical ಆಗಿ ಇರುವಂತಹ ಬಿಲ್ ಅನ್ನು ಸರ್ಕಾರ ತಂದಿದೆ. ಇದರಲ್ಲಿ ನೀವು 15 ದಿವಸಗಳ ಮುಂಚೆ ಎಂದು ಏನು ಮಾಡಿದ್ದೀರಿ, ಆ ರೀತಿ ಮಾಡದೇ ಮುಂಚಿತವಾಗಿ ಎಂದು ಮಾಡಿ. ಬೋರ್‌ವೆಲ್ ಕೊರೆಸಿದ ಮೇಲೆ ಅವರು ನಾವು ಬೋರ್‌ವೆಲ್ ಕೊರೆಸಿದ್ದೇವೆ ಎನ್ನುವಂತಹ ಮಾಹಿತಿಯನ್ನು ಕೊಟ್ಟು, ಅದಕ್ಕೆ ಬೇಕಾದಂತಹ ದಾಖಲೆ/ ರಸೀದಿಯನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಅಧಿಕೃತವಾಗಿ ಮಾಡಬಹುದಾಗಿದೆ. ನಾನು ನಮ್ಮ ಬಯಲುಸೀಮೆಯ ರೈತರ ಪರವಾಗಿ ವಿನಂತಿ ಮಾಡುವುದೇನೆಂದರೆ, ಈ ರೀತಿಯಲ್ಲಿ ನೀವು ಷರತ್ತುಗಳನ್ನು ಹಾಕಿದರೆ ರೈತರು ಅಧಿಕಾರಿಗಳ ಕೈಕಾಲು ಹಿಡಿಯುವಂತಹ ಪರಿಸ್ಥಿತಿ ಬರುತ್ತದೆ. ಈ ವರ್ಷ ಮಳೆ ಚೆನ್ನಾಗಿ ಆಗಿದ್ದು, ತೊಂದರೆ ಇರುವುದಿಲ್ಲ. ಮುಂದಿನ ವರ್ಷ ಬರಗಾಲ ಬಂದರೆ ರೈತರು PDO ಗಳ ಕೈಕಾಲು ಹಿಡಿಯುವಂತಹ ಪರಿಸ್ಥಿತಿಗೆ ನೀವು ತೆಗೆದುಕೊಂಡು ಹೋಗುತ್ತಿದ್ದೀರಿ, ದಯಮಾಡಿ, ಈ ಬಿಲ್ ಅನ್ನು ವಾಪಸ್ಸು ಪಡೆಯಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಯಾವುದಾದರೊಂದು ನಿರ್ಧಿಷ್ಟವಾದಂತಹ Rules and Regulations ಅನ್ನು frame ಮಾಡತಕ್ಕಂತಹ ಅವಶ್ಯಕತೆಯಂತು ಇದೆ. ಏಕೆಂದರೆ, ಈಗ ಮಕ್ಕಳು ಬೋರ್‌ವೆಲ್‌ನೊಳಗೆ ಬಿದ್ದಿರುವ ನೂರಾರು ಪ್ರಕರಣಗಳು ಇತ್ತೀಚೆಗೆ ವರದಿಯಾಗಿದ್ದು, ಆ ಬೋರ್‌ವೆಲ್‌ನಲ್ಲಿ ಬಿದ್ದಂತಹ ಮಕ್ಕಳ ರಕ್ಷಣೆಗಾಗಿ ಇಡೀದಿನ ಕಾರ್ಯಾಚರಣೆ ನಡೆಸಿರುವುದನ್ನು ನಾವೆಲ್ಲರೂ ನೋಡಿಯೇ ಇರುತ್ತೇವೆ. ಹೀಗಾಗಿ, ಅನಾಹುತವನ್ನು ತಡೆಯುವುದಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದು ಸೂಕ್ತವಾಗಿರುತ್ತದೆ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಶ್ರೀಯುತ ನವೀನ್ ರವರು ಹೇಳಿದ ರೀತಿಯಲ್ಲಿ ಪ್ರಾಕ್ಟಿಕಲ್ ಆಗಿರುವಂತಹ ಅಂಶಗಳು ಎಂದರೆ, ಈಗ ಒಂದು ಬೋರ್‌ವೆಲ್‌ನಿಂದ ಇನ್ನೊಂದು ಬೋರ್‌ವೆಲ್‌ಗೆ 500 ಮೀಟರ್ ಅಂತರ ಇರಬೇಕೆಂದು ಇದೆ. ಅಂತರ್ಜಲದ ಸದ್ಬಳಕೆಯಿಂದ ಅದು ಸೂಕ್ತವಾಗಿರುತ್ತದೆ. ಆದರೆ, ಅದನ್ನು ನಾವು ಅನುಷ್ಠಾನಕ್ಕೆ ತರಲಿಕ್ಕೆ ಸಾಧ್ಯವಾಗಿದೆಯೇ? ಈಗ 30' x 40' ಅಳತೆಯ ಸೈಟ್ ಇರುವಂತಹವರು ಅಕ್ಕಪಕ್ಕದಲ್ಲಿ ಇರುವಂತಹ ಇಬ್ಬರು ಸಹ ಬೋರ್‌ವೆಲ್‌ಗಳನ್ನು ಕೊರೆಸಿರುತ್ತಾರೆ. ಇಡೀ ಬಡಾವಣೆಯ ಎಲ್ಲರ ಮನೆಯಲ್ಲೂ ಬೋರ್‌ವೆಲ್‌ಗಳಿವೆ. ಈ ಲೆಕ್ಕದಲ್ಲಿ ನಮ್ಮದು 500 ಮೀಟರ್‌ಗಳ ಅಂತರದ regulation ಇದ್ದರೂ ಸಹ ಅದು ಅನುಷ್ಠಾನದಲ್ಲಿ ವೈಫಲ್ಯವಾಗಿದೆ. ಇದು ಸಹ ಅದೇ ರೀತಿಯಲ್ಲಿ ಆಗುತ್ತದೆ. ಅದಕ್ಕೆ ನನಗೆ ಅನಿಸುವುದೇನೆಂದರೆ ಅನಾಹುತ ಆಗದಂತೆ ತಡೆಯಲಿಕ್ಕೆ ಬೇಕಾದಂತಹ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಂಡು ಅನಾಹುತವಾದಲ್ಲಿ ಇದಕ್ಕಿಂತ ಹೆಚ್ಚಿನ ಕಠಿಣ ಶಿಕ್ಷೆಯನ್ನು ನಿಮಗೆ ಕೊಡುತ್ತೇವೆಂದು ಹೇಳಿ, ಆ ಒಂದು ಜವಾಬ್ದಾರಿಯನ್ನು ಅವರಿಗೆ ವಹಿಸಿ. ಅನಾಹುತವಾದಲ್ಲಿ ಈಗ ಏನು ನೀವು 6 ತಿಂಗಳ ಸಾದಾ ಸಜೆ ಮತ್ತು 5,000 ರೂಪಾಯಿಗಳ ದಂಡ ಎಂದು ಏನಿದೆ, ಅದನ್ನು ನೀವು 5 ಲಕ್ಷ ರೂಪಾಯಿಗಳು ಎಂದು ಮಾಡಿ. ಈ ರೀತಿಯಲ್ಲಿ ಎಚ್ಚರಿಕೆ ಕೊಡುವಂತೆ ಮಾಡಿ. ಬೋರ್‌ವೆಲ್ ಏಜೆನ್ಸಿಯವರಿಗೆ ಈ ಜವಾಬ್ದಾರಿಯನ್ನು ಕೊಡಿ. ಆಗ ಮಾತ್ರ ಇದನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, 500 ಮೀಟರ್ ಅಂತರದಲ್ಲಿ ಬೋರ್‌ವೆಲ್ ಕೊರೆಯಬಾರದು ಎಂದು ಹಳೆಯ ಬಿಲ್‌ನಲ್ಲಿಯೇ ಇದೆ,

**(ಮುಂದು)**

**(939) 17.12.2024 06.20 ಎಸ್‌ವಿ-ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಟಿ.ರವಿ (ಮುಂದು):-**

ಈ ಬಿಲ್‌ನಲ್ಲಿ ಮುನ್ನೆಚ್ಚರಿಕೆ ಕ್ರಮ ವಹಿಸುವುದು, ಬೇಲಿ ಹಾಕುವುದು, ದಿಬ್ಬ ಕಟ್ಟುವುದು, ಮುಚ್ಚುವುದು – ತಪ್ಪಿದ್ದಲ್ಲಿ ಎಂದು ಇದೆ. ಹಾಗಾಗಿ ವಾಸ್ತವ ಸಂಗತಿಗಳನ್ನು ಯೋಚನೆ ಮಾಡಬೇಕು. ನೀವು ಸದುದ್ದೇಶದಿಂದಲೇ ಮಾಡಿದ್ದೀರಿ. ಆದರೆ ವಾಸ್ತವಿಕ ಸಂಗತಿಗಳನ್ನು ಯೋಚನೆ ಮಾಡಿ ಸ್ವಲ್ಪ ಮಾರ್ಪಾಡುಗಳೊಂದಿಗೆ ತರಬೇಕೆನ್ನುವುದು ನನ್ನ ವಿನಂತಿ. ಅನಾಹುತವಾದರೆ ಕಠಿಣ ಶಿಕ್ಷೆಯನ್ನು ವಿಧಿಸುವ ಕ್ರಮ ಕೈಗೊಳ್ಳಬೇಕು.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಿಲ್‌ನಲ್ಲಿರುವ ಅಂಶವನ್ನು ಓದುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್ ಅವರೆ, ನೀವು quote ಮಾಡಿ. ಏಕೆಂದರೆ ಎಲ್ಲರ ಬಳಿಯೂ ಬಿಲ್ ಪ್ರತಿ ಇದೆ. Specific ಆಗಿ ಯಾವ ಅಂಶ ಹೇಳಿ.

**ಶ್ರೀ ಎನ್.ರವಿಕುಮಾರ್:-** ಅದೇನಿದೆಯೋ ಅದನ್ನೇ ಓದುತ್ತೇನೆ.

> 21ಎ. ಕೊರೆಯುವ ಏಜೆನ್ಸಿ, ಅನುಷ್ಠಾನ ಏಜೆನ್ಸಿ ಮತ್ತು ಭೂ ಮಾಲೀಕನ ಕರ್ತವ್ಯಗಳು:- ಕೊರೆಬಾವಿ ಅಥವಾ ಕೊಳವೆ ಬಾವಿ ಕೊರೆಸುವುದನ್ನು ಪೂರ್ಣಗೊಳಿಸಿದ ನಂತರ ತಕ್ಷಣ, ಕೊರೆಯುವ ಏಜೆನ್ಸಿ ಅಥವಾ ಅನುಷ್ಠಾನ ಏಜೆನ್ಸಿಯು ಕೊರೆ ಬಾವಿ ಅಥವಾ ಕೊಳವೆ ಬಾವಿಯನ್ನು ಮಾರಣಾಂತಿಕ ಆಕಸ್ಮಿಕಗಳನ್ನು ತಡೆಯಲು ಸುರಕ್ಷತಾ ಕ್ರಮವಾಗಿ ಬೋಲ್ಟು ಮತ್ತು ನಟ್ಟುಗಳೊಂದಿಗೆ ಸ್ಟೀಲು ಮುಚ್ಚಳದ ಮೂಲಕ ಅಥವಾ ಥ್ರೆಡ್ ಮಾಡಲಾದ ಮುಚ್ಚಳದ ಮೂಲಕ ಯುಕ್ತವಾಗಿ ಮುಚ್ಚತಕ್ಕದ್ದು.

ಈ ಅಂಶದ ಬಗ್ಗೆ ನನ್ನ ಸಲಹೆ ಏನೆಂದರೆ ಬೋರ್‌ವೆಲ್ ಹಾಕುವವರು ಯಾರಿದ್ದಾರೆ, ಅವರಿಗೆ ಮಾಡಿಬಿಟ್ಟರೆ ಒಳ್ಳೆಯದು. ಅಕಸ್ಮಾತ್ ನೀರು ಬೀಳದಿದ್ದರೆ ಮುಚ್ಚಳಕ್ಕೆ ಬೇಕಾದುದನ್ನು ಅವರು ಮಾಡಿಬಿಡುತ್ತಾರೆ. ಬೇಕಾದರೆ ಅದಕ್ಕೆ ಎಷ್ಟು ಛಾರ್ಜ್ ಆಗುತ್ತದೆಯೋ ಅದನ್ನು ನೋಡಲಿ. ಬೋರ್‌ವೆಲ್ ಹಾಕಿಸುವವರಿಗೆ ಇದರ ಹೊರೆ ಬೀಳಬಾರದು. ಬೋರ್ ಹಾಕುವ ಏಜೆನ್ಸಿಗೆ ಈ ಕೆಲಸವನ್ನು ಕೊಡಬೇಕು. ರೈತರಿಗೆ ಈಗಾಗಲೇ ಸಾಕಷ್ಟು ಹೊರೆ ಬಿದ್ದಿದೆ. ಒಂದು ಅಂಶವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಉದಾಹರಣೆಗೆ ವಿದ್ಯುತ್ ಸಂಪರ್ಕ ಪಡೆಯಲು ಮುಂಚೆ ರೂ.25,000 ಖರ್ಚಾಗುತ್ತಿತ್ತು. ಈ ಸರ್ಕಾರದಲ್ಲಿ ರೂ.2.5 ಲಕ್ಷ ಖರ್ಚು ಆಗುತ್ತಿದೆ. ಇನ್ನು ಇದನ್ನು ಸೇರಿಸಿ ಬಿಟ್ಟರೆ ರೈತರಾಗುವುದೇ ಬೇಡ ಎನ್ನುವ ಪರಿಸ್ಥಿತಿಗೆ ಬರುತ್ತಾರೆ. ರೂ.2.5 ಲಕ್ಷ ಮಾಡಿರುವುದೂ ಸೇರಿದಂತೆ ರೈತರಿಗೆ ಹೊರೆ ಮಾಡತಕ್ಕಂಥದ್ದೇನಿದೆ, ಅದಕ್ಕಾಗಿ ಈ ಬಿಲ್ ಅನ್ನು ಮರುಪರಿಶೀಲನೆ ಮಾಡಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಚಿವರೆ, ಯಾರು ಬೋರ್‌ವೆಲ್ ಕೊರೆಯುತ್ತಾರೆಯೋ ಆ ಏಜೆನ್ಸಿಯ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸಬೇಕು. 21 ಎ ನಲ್ಲಿ ಏನು ಹೇಳಲಾಗಿದೆಯೆಂದರೆ "ಭೂಮಿಯ ಅಥವಾ ಆವರಣಗಳ ಮಾಲೀಕ ಮತ್ತು ಅನುಷ್ಠಾನ ಏಜೆನ್ಸಿಯು 24 ಗಂಟೆಯೊಳಗೆ ವಿಫಲಗೊಂಡು ಅಥವಾ ಬಿಟ್ಟುಬಿಡಲಾದ ಅಥವಾ ಅಪೂರ್ಣವಾಗಿ ಕೊರೆಯಲಾದ ಕೊಳವೆಬಾವಿ ಎಂದು ಹೇಳುತ್ತಾರೆ. Why are you taking the responsibility with the owner? ಮಾನ್ಯ ನವೀನ್ ಅವರು, ಮಾನ್ಯ ರವಿಕುಮಾರ್ ಅವರು ಅದನ್ನೇ ಹೇಳಿದ್ದಾರೆ. Responsibility ಯಾರು ಕೊರೆಯುತ್ತಾರೆಯೋ ಅವರಿಗೆ fix ಮಾಡಿ. ನೀವು ಅದನ್ನು ಯಾರು ಮಾಲೀಕರಿರುತ್ತಾರೆಯೋ ಅಥವಾ ಯಾರ ಜಾಗ ಇರುತ್ತದೆಯೋ ಅವರಿಗೂ ಹೇಳುತ್ತೀರಿ. ಕೊರೆಯುವವರು ಕೊರೆದಾದ ಕೂಡಲೇ ಅವರ instrument ತೆಗೆದುಕೊಂಡು ಹೊರಟು ಹೋಗುತ್ತಾರೆ. ಹೋದ

ಮೇಲೆ ಏನಾದರೂ ಅನಾಹುತವಾದರೆ ಮೊದಲು ಸಿಗುವುದು ಯಾರು? ಅಲ್ಲಿನ ರೈತ ಅಥವಾ ಜಮೀನಿನ ಮಾಲಿಕ. ಅವರ ಮೇಲೆ responsibility ಯನ್ನು fix ಮಾಡಿರುವುದನ್ನು ತೆಗೆಯಬೇಕು.

ಎರಡನೆಯದಾಗಿ punishment ಎಷ್ಟು ಎಂದರೆ 6 ತಿಂಗಳು ಅಥವಾ ರೂ.10,000; 3 ತಿಂಗಳು ಅಥವಾ ರೂ.5,000. That is all bailable offence. ನೀವು ಪೊಲೀಸ್ ಠಾಣೆಗೆ ಹೋದರೆ ಅಲ್ಲಿಯೂ ಬಿಡುತ್ತಾರೆ. ನ್ಯಾಯಾಲಯಕ್ಕೆ ಹೋದರೆ ಜಾಮೀನು ದೊರೆಯುತ್ತದೆ. ಅವನು ಜೈಲಿಗೆ ಹೋಗುವುದಿಲ್ಲ.ಜೀವಹಾನಿಯಾಗುವುದನ್ನು ತಪ್ಪಿಸಬೇಕು ಎಂದು ಮಾಡುವಾಗ ಜಾಗರೂಕತೆಯಿಂದ ಇರಬೇಕು. ಈ ಸಲಹೆ ನನ್ನದು.

ನೆಲಮಟ್ಟದಲ್ಲಿ ಬೋರ್‌ವೆಲ್ ಕೊರೆದು ಬಿಟ್ಟುಬಿಡುತ್ತಾರೆ. ಸ್ಟೀಲ್ ಬೋಲ್ಟ್, ನಟ್ ಹಾಕಿ ಮುಚ್ಚಬೇಕೆಂದು ಬಿಲ್‌ನಲ್ಲಿ ತರುತ್ತೀರಿ. ಇದನ್ನು ಎತ್ತರಕ್ಕೆ ಏಕೆ ಕೊಂಡೊಯ್ಯಬಾರದು ಎಂದು ನಾನು ಕೇಳಬಯಸುತ್ತೇನೆ. Why don't you keep the pipe above the ground level? 6 ಅಡಿ ಎತ್ತರಕ್ಕೆ ಏಕೆ ಕೊಂಡೊಯ್ಯಬಾರದು? ನೀವು ಪೈಪ್ ಹಾಕುತ್ತೀರಿ. ಕೇಸಿಂಗ್ ಪೈಪ್ ಅನ್ನು ನೆಲದಲ್ಲಿ ಹಾಕುವುದಕ್ಕಿಂತ ಎತ್ತರದಲ್ಲಿ ಹಾಕಿ. It will solve your problem.

**ಶ್ರೀ ಸಿ.ಟಿ.ರವಿ:-** ಕೇಸಿಂಗ್ ಪೈಪ್ ತೆಗೆಯುತ್ತಾರೆ. ಅಲ್ಲಿಂದ ಅನಾಹುತವಾಗುತ್ತದೆ. ಅರ್ಧ ಅಡಿಗೆ ಯಾರೂ ಬೀಳುವುದಿಲ್ಲ. ಕೇಸಿಂಗ್ ಪೈಪ್ ತೆಗೆದಾಗ ಅಲ್ಲಿ ಆಳವಾದ ಗುಂಡಿ ಬೀಳುತ್ತದೆ. ನೀರು ಸಿಗಲಿಲ್ಲ ಎಂದ ತಕ್ಷಣ ಕೇಸಿಂಗ್ ಪೈಪ್ ತೆಗೆದುಕೊಂಡು ಹೋಗುತ್ತಾರೆ.

**ಉಪ ಸಭಾಪತಿಯವರು:-** ಅವರು ಹೇಳುತ್ತಿರುವುದು, in case ನೀರು ಸಿಗದಿದ್ದಾಗ ಕೇಸಿಂಗ್ ಪೈಪನ್ನು remove ಮಾಡುತ್ತಾರೆ. ಆ hole ಅನ್ನು ಹಾಗೆಯೇ ಬಿಟ್ಟುಬಿಡುತ್ತಾರೆ. ಆಗ ಈ ರೀತಿಯ incident ಗಳಾಗುತ್ತವೆ.

**ಶ್ರೀ ಐವನ್ ಡಿ'ಸೋಜಾ:-** ಇದಕ್ಕೆ punishment ಕೂಡ ಬಹಳ ಕಡಿಮೆಯಾಯಿತು. You should fix the responsibility to the agency and impose severe punishment. ಒಂದು ಜೀವ ಹೋಗುವ ಮಟ್ಟಕ್ಕೆ ಹೋಗುವುದಾದರೆ ಕೊಡುವಂತಹ ಶಿಕ್ಷೆಯಲ್ಲಿ ರೂ.500, ರೂ.1000, 3 ತಿಂಗಳು – ಇದೆಲ್ಲಾ ಲಾಟರಿ ಟಿಕೆಟ್ ತೆಗೆದಂತಾಗುತ್ತದೆ. You have to impose stringent punishment ಎನ್ನುವುದು ನನ್ನ ಬೇಡಿಕೆಯಾಗಿದೆ.

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಈ ವಿಧೇಯಕದ 2(1)(ಎ) ನಲ್ಲಿ ಎಲ್ಲವನ್ನೂ ಹೇಳಿದ್ದಾರೆ. ಕೊರೆಯುವ ಏಜೆನ್ಸಿ ಮತ್ತು ಅನುಷ್ಠಾನ ಏಜೆನ್ಸಿಯವರ responsibility ಎಂದು ಹೇಳಿದ್ದಾರೆ. ಆದರೆ ಭೂ ಮಾಲೀಕನ ಕರ್ತವ್ಯ inform ಮಾಡುವುದು. Local Bodies ಗಳಿಗೆ inform ಮಾಡುವುದು. ಆದರೆ ಮಿಕ್ಕ ಎಲ್ಲಾ ಜವಾಬ್ದಾರಿಯೂ ಕೂಡ ಕೊರೆಯುವ ಏಜೆನ್ಸಿಗಳದ್ದೇ responsibility ಆಗಬೇಕು. ಭೂ ಮಾಲೀಕನ ಮೇಲೆ ಆ responsibility ಹಾಕಬಾರದು. ಏಕೆಂದರೆ technically ಆ ಕೆಲಸವನ್ನು ಮಾಡುವವನು ಏಜೆನ್ಸಿಯವನು. ಇಲ್ಲಿ ಭೂ ಮಾಲಿಕನ ಮೇಲೆ ಯಾವುದೇ ಜವಾಬ್ದಾರಿ ಇರಬಾರದು. Inform ಮಾಡಲಿಲ್ಲ ಎಂದರೆ ಮಾತ್ರ ಅವನು ಜವಾಬ್ದಾರನಾಗುತ್ತಾನೆ. ಅವನು inform ಮಾಡಿದ ತಕ್ಷಣ ಅಧಿಕಾರಿಗಳು ಬಂದು ಏಜೆನ್ಸಿಯವನು ಈ ನಿಯಮದ ಪ್ರಕಾರ ಎಲ್ಲವನ್ನೂ ಮಾಡಿ ಹೋಗಿದ್ದಾನೆಯೇ ಎಂಬುದನ್ನು ನೋಡುವಲ್ಲಿ ಅಧಿಕಾರಿಗಳು

ಜವಾಬ್ದಾರರಾಗುತ್ತಾರೆ. ಇದರಲ್ಲಿ ಮಾಲೀಕನನ್ನು ಹೊರತುಪಡಿಸಬೇಕು. ಜೊತೆಗೆ ಅನಾಹುತಗಳಾಗುವ ಸಂದರ್ಭದಲ್ಲಿ ಅನಾಹುತಕ್ಕೊಳಗಾದಂತಹ ಕುಟುಂಬಕ್ಕೆ ಪರಿಹಾರವನ್ನು ಕಟ್ಟಿಕೊಡುವವರು ಯಾರು? ಏಜೆನ್ಸಿಯವರ ಮೇಲೆ ಹೊಣೆ ವಹಿಸಬೇಕಾಗುತ್ತದೆ. ಏಕೆಂದರೆ ಅವರು ಎಲ್ಲವನ್ನೂ ಮಾಡಿ ಮುಚ್ಚಿ ಹೋಗದೆ ಅನಾಹುತವಾದರೆ ಏಜೆನ್ಸಿಯವರೇ ಬಾಧ್ಯರಾಗುತ್ತಾರೆ ಎನ್ನುವುದು ನನ್ನ ಅನಿಸಿಕೆ. ಅದರ ಕಡೆ ಗಮನ ಹರಿಸಬೇಕು. ಭೂ ಮಾಲೀಕರಿಗೆ ಇದರಿಂದ ವಿನಾಯಿತಿ ಕೊಡಬೇಕು.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ನನ್ನದೂ ಒಂದು ಸಲಹೆ. ಈ ವಿಧೇಯಕದಲ್ಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡ ನಂತರ ಬೋರ್‌ವೆಲ್ ಅನ್ನು ಕೊರೆಯಬೇಕು ಎಂದು ಪದ ಪ್ರಯೋಗ ಮಾಡಬೇಕು. ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ನೀವು ತೆಗೆದುಕೊಳ್ಳುವ ಕ್ರಮಗಳಿಗೆ ಎಲ್ಲರೂ ಬದ್ಧರಾಗಲೇಬೇಕು. ಆದ್ದರಿಂದ "ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ತೆಗೆದುಕೊಂಡ ನಂತರ ಬೋರ್‌ವೆಲ್ ಅನ್ನು ಕೊರೆಯಬೇಕು" ಎಂದು ಸೇರಿಸಬೇಕು.

**ಶ್ರೀಮತಿ ಉಮಾಶ್ರೀ:-** ನಿರ್ಲಕ್ಷ್ಯ ಮಾಡಿ ಅನಾಹುತವಾದರೆ ಯಾರು ಹೊಣೆ? ಮಾಲೀಕನ ಮೇಲೆ ಬರಬಾರದು. ಸರ್ಕಾರವೇ ಪ್ರತಿಯೊಂದಕ್ಕೂ ಹೊಣೆಯಾಗುತ್ತಿರುತ್ತದೆ. ಏಜೆನ್ಸಿಗೆ responsibility fix ಮಾಡಿ.

**ಉಪ ಸಭಾಪತಿಯವರು:-** ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡರೆ ಪರಿಹಾರವನ್ನು ಕೊಡುವ ಪ್ರಮೇಯ ಬರುವುದಿಲ್ಲ. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದರೆ ಕಾನೂನು ರೀತ್ಯಾ ಅವರು ಯಾರಿರುತ್ತಾರೆಯೋ ಅವರ ಮೇಲೆ ಕ್ರಮವಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಕ್ಕಳು ಬೋರ್‌ವೆಲ್‌ನಲ್ಲಿ ಬಿದ್ದು ಸಮಸ್ಯೆಗಳು ಉದ್ಭವವಾಗಿರುವುದು ಈ ಕೇಸಿಂಗ್ ಪೈಪ್ ತೆಗೆದಿರುವು ಕಡೆ ಮಾತ್ರ. ಕೇಸಿಂಗ್ ಪೈಪ್ ಇರುವ ಕಡೆ ಮಕ್ಕಳು ಬೋರ್‌ವೆಲ್ ಒಳಗೆ ಬಿದ್ದಿಲ್ಲ. ಕೇಸಿಂಗ್ ಪೈಪ್ ಅನ್ನು ಎತ್ತರಕ್ಕೆ ಮಾಡಿದರೆ ಮಕ್ಕಳು ಬೀಳುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ನೀರು ಇಲ್ಲದಿರುವಂತಹ ಸಂದರ್ಭದಲ್ಲಿ ಕೇಸಿಂಗ್ ಪೈಪ್ ತೆಗೆದು ಬಿಡುತ್ತಾರೆ. ಕೇಸಿಂಗ್ ಪೈಪ್ ತೆಗೆಯುವವನು ರೈತ ಅಲ್ಲ. ಆ ಏಜೆನ್ಸಿಯವನೇ ಬಂದು ತೆಗೆಯುತ್ತಾನೆ. ಕೇಸಿಂಗ್ ಪೈಪ್ ತೆಗೆಯಬಾರದು. ಒಂದು ಸಮಯ ತೆಗೆದರೆ ಅದರೊಳಗೆ ಪೂರ್ತಿ ಮಣ್ಣು ತುಂಬಿ ಇನ್ನು ಅದು ಆಳ ಬೀಳುವುದಿಲ್ಲ ಎನ್ನುವುದು ಖಾತ್ರಿಯಾದ ಮೇಲೆ ಅದನ್ನು ತೆಗೆಯಬೇಕು. ಇಲ್ಲವಾದರೆ ತೆಗೆಯಬಾರದು.

**ಉಪ ಸಭಾಪತಿಯವರು:-** ಒಂದು ಅಂಶವೇನೆಂದರೆ ಏಜೆನ್ಸಿಯವನು ಕೇಸಿಂಗ್ ಪೈಪ್ ಅನ್ನು ತೆಗೆಯುವುದಿಲ್ಲ. ಏಕೆಂದರೆ ನೀರು ಬರದಿದ್ದ ಸಮಯದಲ್ಲಿ ಆ ಕೇಸಿಂಗ್ ಪೈಪ್ ದುಡ್ಡನ್ನು ಅವನ ಮೇಲೆ ಹೊರಿಸುತ್ತಾರೆ. ಹಾಗಾಗಿ ಅದನ್ನು ತೆಗೆದರೆ ಆ ದುಡ್ಡು ಬರುತ್ತದೆ ಎನ್ನುವ ಉದ್ದೇಶದಿಂದ ತೆಗೆಸುತ್ತಾನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ರೈತ ತೆಗೆಯುವುದಕ್ಕಾಗುವುದಿಲ್ಲ, ತೆಗೆಸುತ್ತಾನೆ. ಯಾರು ತೆಗೆಯುತ್ತಾರೆಯೋ ಅವರು ಮಣ್ಣು ತುಂಬಿ ಖಾತ್ರಿ ಪಡಿಸಿಕೊಂಡರೆ ಈ ಸಮಸ್ಯೆಯಾಗುವುದಿಲ್ಲ. ಬೋರ್‌ವೆಲ್

ತೆಗೆಯುವಾಗ ಪ್ರತಿಯೊಂದಕ್ಕೂ ಅಧಿಕಾರಿಗಳ ಬಳಗೆ ಹೋಗಬೇಕೆಂದಾಗ ಅದರ ಪರಿಸ್ಥಿತಿ ಏನಿದೆ ಎಂಬುದು ರೈತನಿಗೆ ಗೊತ್ತಿದೆ.

(ಮುಂದು)

(940) 17.12.2024 6.30 ಕೆಜಿ ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ಮುಂದು):-**

ರೈತರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ಹೇಳಿದಂತೆ, ಅಧಿಕಾರಿಗಳ ಕಾಲಿಗೆ ಬೀಳಬೇಕಾಗುತ್ತದೆ. ಅದಕ್ಕೆ ಮಾನ್ಯ ಸಚಿವರು ಅದನ್ನು ಸಡಿಲಗೊಳಿಸಬೇಕು. ಅದಾದ ಮೇಲೆ, 5000 ರೂಪಾಯಿಗಳ ಜುಲ್ಮಾನೆಯನ್ನು ಹಾಕುತ್ತಾರೆ. ಈ ಜುಲ್ಮಾನೆಯನ್ನು 10,000 ರೂಪಾಯಿಗಳು, 20,000 ರೂಪಾಯಿಗಳು ಅಥವಾ 50,000 ರೂಪಾಯಿಗಳನ್ನು ಮಾಡಿ ಅದು ಪ್ರಶ್ನೆ ಆಗುವುದಿಲ್ಲ. ಆದರೆ, ಸೆರೆವಾಸ ಬೇಡ ಅನಿಸುತ್ತದೆ. ಇದನ್ನು ಮಾನ್ಯ ಸಚಿವರು ಸ್ವಲ್ಪ ಯೋಚನೆ ಮಾಡಬೇಕು.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಒಳಗೊಂಡಂತೆ, ಸದನದ ಎಲ್ಲಾ ಮಾನ್ಯ ಸದಸ್ಯರು ಅವರವರ ಅಭಿಪ್ರಾಯಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ, ನಾವು ಕ್ಯಾಬಿನೇಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುವ ಕಾಲಕ್ಕೆ ಯಾವುದೇ ಕಾರಣಕ್ಕೂ ಬಾವಿಯನ್ನು ಕೊರೆಸಿದ ವ್ಯಕ್ತಿಯನ್ನು ಜವಾಬ್ದಾರರನ್ನಾಗಿ ಮಾಡಬಾರದು ಎನ್ನುವುದು ಇತ್ತು. ಅಂದರೆ, ಯಾವುದೇ ರೈತರು ಇರಲಿ, private borewell ನವರು ಯಾರೇ ಇರಲಿ, ಅವರನ್ನು ಯಾವುದೇ ಕಾರಣಕ್ಕೂ ಜವಾಬ್ದಾರರನ್ನಾಗಿ ಮಾಡಬಾರದು ಎಂದು clear ಆಗಿ Cabinet Note ನ ಮೇಲೆ ಚರ್ಚೆ ಮಾಡಿ ಮಾಡಿದ್ದೇವೆ. ಮುಂದುವರೆದಂತೆ, ಮಾನ್ಯ ಸದಸ್ಯರಾದಂತಹ ಸಿ.ಟಿ.ರವಿಯವರು ರಾಜ್ಯದ ಅನೇಕ ಭಾಗಗಳಲ್ಲಿ ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಕಳೆದ 2-3 ದಿವಸಗಳಿಂದ ಮಕ್ಕಳು ಕೊಳವೆ ಬಾವಿಗೆ ಬೀಳುವಂತಹದ್ದು ಆಗಿದೆ ಎಂದು ಹೇಳಿದರು. ಇದು ದೇಶದಲ್ಲಿ ಸರ್ವೆ ಸಾಮಾನ್ಯವಾಗಿದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದವರು ಸಹ advice ಮಾಡಿದ್ದಾರೆ. ನಮ್ಮ Law Commission Chairman ರವರಿಂದ ಬಂದಿರುವಂತಹದ್ದು ಇದು. ಅದಕ್ಕೆ ಇದರಲ್ಲಿ clear ಆಗಿ insert ಮಾಡಿದ್ದಾರೆ. ಈಗ ಮಾನ್ಯ ಸದಸ್ಯರಾದ ಶ್ರೀಮತಿ ಉಮಾಶ್ರೀಯವರು ಹೇಳಿದ್ದಾರೆ. ಅದೇರೀತಿ ಇತರೆ ಸದಸ್ಯರು ಸಹ ಹೇಳಿದ್ದಾರೆ. ಈ ವಿಧೇಯಕದಲ್ಲಿ *"6.* ***Insertion of New chapters IIIA and IIIB:-*** *After section 21 of the Principal Act, the following new chapters shall be inserted.."* ಎಂದಿದೆ. ಇದರಲ್ಲಿ drilling agency and implementing agency ಮಾತ್ರ ನಾವು ಯಾರಿಗೆ ಜವಾಬ್ದಾರಿ ಕೊಡುತ್ತಿದ್ದೇವೆ. Drilling agency and implementing agency ಗಳಿಗೆ ಮಾತ್ರ ನಾವು ಇವತ್ತು ಅಳವಡಿಸಿರುವಂತಹ ವಿಷಯಗಳು ಅನ್ವಯವಾಗುತ್ತವೆ. ಇದಕ್ಕೆ ಯಾವುದೇ ಕಛೇರಿಯಲ್ಲಿ ಅನುಮತಿಯನ್ನು ತೆಗೆದುಕೊಳ್ಳಬೇಕೆಂದು ಇಲ್ಲ. ಗ್ರಾಮ ಪಂಚಾಯಿತಿಯವರಿಗೆ ಮಾಹಿತಿ ಕೊಡಬೇಕು. ತಾಲ್ಲೂಕ್ ಪಂಚಾಯಿತಿಯವರಿಗೆ ಹಾಗೂ ಜಿಲ್ಲಾ ಪಂಚಾಯಿತಿಯವರಿಗೆ ಮಾಹಿತಿ ಕೊಡಬೇಕು. ಆ ಏರಿಯಾದದಲ್ಲಿ ಇರುವಂತಹ local bodies ಗೆ

ಮಾಹಿತಿ ಕೊಡಬೇಕು. ಆದರೆ, ಅವರ ಕಡೆಯಿಂದ ಅನುಮತಿಯನ್ನು ತೆಗೆದುಕೊಳ್ಳಬೇಕೆಂದು ಎಲ್ಲೂ ಇಲ್ಲ. ಇದರಲ್ಲಿ ಮಾಹಿತಿ ಕೊಡಬೇಕು ಎನ್ನುವ ವಿಚಾರ ಮಾತ್ರ ಇದೆ. ಇದು ಒಂದು ವಿಚಾರ. ಹಾಗಾಗಿ, drilling agency and implementing agency ಯವರು ತರಬೇಕು. ಈಗ ಪಂಚಾಯಿತಿ ಕಡೆಯಿಂದ ಕೊಳವೆ ಬಾವಿಯನ್ನು ಕೊರೆಸುತ್ತೇವೆ. ನಮ್ಮ ಇಲಾಖೆಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಯನ್ನು ಕೊರೆಸುತ್ತೇವೆ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕೊಳವೆ ಬಾವಿಯನ್ನು ಕೊರೆಸುತ್ತೇವೆ. ಆಗ ಏಜೆನ್ಸಿಯವರಾಗಲಿ ಅಥವಾ ರೈತರು ಆಗಲಿ ಮಾಹಿತಿಯನ್ನು ಕೊಡಬೇಕು ಅಷ್ಟೇ. ಆದರೆ, official permission ಅನ್ನು ತೆಗೆದುಕೊಳ್ಳಬೇಕು ಎಂಬುದು ಎಲ್ಲಿಯೂ ಇಲ್ಲ. ಇದು ಬಹಳ clear ಇದೆ. ಇದು ಶಿಕ್ಷೆಯಾಗಲಿ ಅಥವಾ ಇನ್ನೊಂದು ಆಗಲಿ, ನಮ್ಮ ಉದ್ದೇಶ ಏನೆಂದರೆ, ಈ ರೀತಿಯ ಅವಘಡಗಳು ಆಗದಂತೆ ಯಾರು drilling agency and implementing agency ಇರುತ್ತಾರೆ, ಅವರು ಇದನ್ನು ಪಾಲಿಸಬೇಕು ಎಂಬುದು ಉದ್ದೇಶವಾಗಿದೆ. ಈ ವಿಷಯದ ಮೇಲೆ ನಿನ್ನೆ ದಿವಸ ಕೆಳಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅಲ್ಲಿನ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್.ಅಶೋಕ್‌ರವರು ಇದನ್ನು ಬಹಳ ಸ್ವಾಗತ ಮಾಡಿದ್ದಾರೆ. ಇವರ ಜೊತೆಗೆ Deputy Leader ರವರು ಹಾಗೂ ಇತರೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಇದರ ಬಗ್ಗೆ ಮಾತನಾಡಿದ ಸದಸ್ಯರೆಲ್ಲರೂ ಸಹ ಬಹಳ ಕಡಿಮೆ ದಂಡ 10,000 ರೂಪಾಯಿಗಳನ್ನು ಇಟ್ಟಿದ್ದು, ಅದನ್ನು ಅವರು ಕೊಟ್ಟು ಹೋಗುತ್ತಾರೆಂದು ಹೇಳಿದರು. ನೂರಾರು ಕೋಟಿ ರೂಪಾಯಿಗಳನ್ನು drilling agency ರವರು ಗಳಿಸುತ್ತಿದ್ದಾರೆ. ಅದಕ್ಕೆ ಇದನ್ನು ಹೆಚ್ಚಿಗೆ ಮಾಡಬೇಕು. ಅವರಿಗೆ ಭಯ ಇರಬೇಕೆಂದು, ಅವರಿಗೆ ಜವಾಬ್ದಾರಿ ಇರಬೇಕೆಂದು ಹಾಗೂ ಶಿಕ್ಷೆ ಹೆಚ್ಚಿಗೆ ಇರುವುದರಿಂದ ಭಯಪಟ್ಟು ಅವರು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಾರೆಂಬ ಮಾತನ್ನು ಹೇಳಿದರು. ಹಾಗಾಗಿ, ತಾವು ಹೇಳಿರುವಂತಹ ವಿಷಯಗಳನ್ನು ಯಾರಿಗೂ ತೊಂದರೆಯಾಗದಂತಹ ರೀತಿಯಲ್ಲಿ ಆ rules ಅನ್ನು frame ಮಾಡುವ ಕಾಲಕ್ಕೆ ಅವೆಲ್ಲವನ್ನು frame ಮಾಡುತೇವೆ. ಹಾಗಾಗಿ, ದಯವಿಟ್ಟು ಇದು ನಮ್ಮ ದೇಶದ ಮಕ್ಕಳ ಹಿತದೃಷ್ಟಿಯಿಂದ ಈ ವಿಧೇಯಕವನ್ನು ಅನುಮೋದನೆ ಮಾಡಿಕೊಡಬೇಕೆಂದು, ಕೋರುತ್ತೇನೆ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಲ್ಲಿ application ಅನ್ನು ಕೊಟ್ಟಾಗ ಸಿಕ್ಕಾಪಟ್ಟೆ ತೊಂದರೆ ಮಾಡುತ್ತಾರೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇಲ್ಲಿ application ಅನ್ನು ಕೊಡುವಂತಹ ಅವಶ್ಯಕತೆ ಇರುವುದಿಲ್ಲ. ಅವರಿಗೆ ಮಾಹಿತಿಯನ್ನು ಕೊಡಬೇಕು ಅಷ್ಟೇ. ಅವರು list ನಲ್ಲಿ ಬರೆದುಕೊಳ್ಳುತ್ತಾರೆ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ನಮಗೆ ಒಂದು ನೋಟೀಸ್ ಕಳುಹಿಸಿದ್ದಾರೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕದಲ್ಲಿ ತಿಳಿಸತಕ್ಕದ್ದು ಎಂದು ತಿಳಿಸಿದ್ದಾರೆ. ಆದರೆ, ಇದರಲ್ಲಿ ಅನುಮತಿ ತೆಗೆದುಕೊಳ್ಳಬೇಕೆಂದು ಎಲ್ಲೂ ಇಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿರವರೇ, inform to local bodies ಎಂದು ಅದರಲ್ಲಿ ಬಹಳ clear ಆಗಿ ಹೇಳಿದ್ದಾರೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ಎಲ್ಲವನ್ನು ಸರ್ಕಾರ ಮಾಡುತ್ತಿರುತ್ತದೆ. ಆದ್ದರಿಂದ, ಕೊಳವೆ ಬಾವಿಯನ್ನು ಕೊರೆಯುವವರಿಗೆ ಅದೊಂದು ಭಯ ಇರಲಿ. ಅವರ ಕೈಯಿಂದ ಪರಿಹಾರ ಕಟ್ಟಿಕೊಡಬೇಕು ಎನ್ನುವ ಭಯ ಇರಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಅವರು ಇಷ್ಟನ್ನು ಮಾಡಬೇಕು ಅಲ್ಲವೇ;

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀಮತಿ ಉಮಾಶ್ರೀಯವರೇ, ಅದನ್ನು ಸೇರಿಸಿಕೊಳ್ಳಿ ಎನ್ನುವಂತಹ ಒಂದು ಮಾತನ್ನು ಹೇಳಿ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 11 ರವರೆಗೆ**

**ಉಪ ಸಭಾಪತಿಯವರು:– "ಖಂಡ 2 ರಿಂದ 11 ರವರೆಗೆ ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 11 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು ಹಾಗೂ ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ 2024ರ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉಪ ಸಭಾಪತಿಯವರು:-** ಈಗ ಸದನವನ್ನು ಡಿಸೆಂಬರ್, 2024 ರ ಬುಧವಾರ ಬೆಳಗ್ಗೆ 10 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 36 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 18ನೇ ಡಿಸೆಂಬರ್ ಮಾಹೆ 2024 ರಂದು ಬೆಳಗ್ಗೆ 10 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**